ಬಿಸಿಲ

ಜುಲೈ 1998 ರೂ. 10

ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಮಾಸಪತ್ರಿಕೆ



ನೀವೆಷ್ಟು ಗಂಡಸರು?

ಉದ್ಯೋಗ ಹುಡುಕುವ ಬಗೆ

2ನೇ ವರ್ಷದ ವಿಶೇಷ

ಪುನರ್ಜನ್ಮ ಇದೆಯೇ?

ಮುಂದಿನ ಸಂಚಿಕೆಯೊಂದಿಗೆ

ವಿಶೇಷ ಉಚಿತ ಪುಸ್ತಕ

ವಿವಿಧ ವಿದ್ಯಾವಕಾಶಗಳ ಬಗ್ಗೆ ಮಾಹಿತಿ ಕೋರಿ 'ಮಾರ್ಗದರ್ಶಿ' ವಿಭಾಗಕ್ಕೆ ಬಂದಿರುವ ಪ್ರಶ್ನೆಗಳ ಸಂಖ್ಯೆ ಎಷ್ಟಿದೆಯೆಂದರೆ ಇನ್ನೂ ಹತ್ತು ವರ್ಷ ಕಳೆದರೂ ಈ ಕಡತ ಕರಗಲಾರದು. ಈ ಮಧ್ಯೆ ಸಕಾಲಕ್ಕೆ ಸರಿಯಾದ ಮಾಹಿತಿ ಸಿಗದ ಅನೇಕ ಓದುಗರು ನಿರಾಶರಾಗುವ, ದಾರಿ ತಪ್ಪುವ ಸಂಭವವಿದೆ. ಹಾಗಾಗಿ ಈ ಸಮಸ್ಯೆಯ ನಿವಾರಣೆ ಗೋಸ್ಕರವೇ ಬರುವ ಆಗಸ್ಟ್ ಸಂಚಿಕೆಯೊಂದಿಗೆ ಮಾರ್ಗದರ್ಶಿ ವಿಭಾಗದ ವಿಶೇಷ ಪ್ರತ್ಯೇಕ ಪುಸ್ತಕವನ್ನು ಉಚಿತವಾಗಿ ನೀಡಿ ಬಾಕಿ ಉಳಿದಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸಲು 'ಬದುಕು' ಮುಂದಾಗಿದೆ.

ಮಾರ್ಗದರ್ಶಿ ವಿಭಾಗದ ವಿಶೇಷ ಪುರವಣಿ ಹೊರತರುವ ಬಗ್ಗೆ ಪ್ರಕಟಿಸಿದ ನಂತರ ಈ ಕುರಿತ ಪ್ರಶ್ನೆಗಳ ಮಹಾಪೂರವೇ ಹರಿದುಬರುತ್ತಿದೆ. ಇವುಗಳನ್ನೆಲ್ಲ ವಿಂಗಡಿಸಿ ಉತ್ತರಿಸುವ ಕಾರ್ಯದಲ್ಲಿ ತುಸು ವಿಳಂಬವಾಗಿರುವುದರಿಂದ ಉಚಿತ ಪುಸ್ತಕವನ್ನು ಜುಲೈ ಬದಲು ಆಗಸ್ಟ್ ಸಂಚಿಕೆಯೊಂದಿಗೆ ನೀಡಲು ತೀರ್ಮಾನಿಸಿದ್ದೇವೆ.

– ಸಂಪಾದಕ

ಆಗಸ್ಟ್ ಸಂಚಿಕೆ ಕಾಯ್ದಿರಿಸಲು ಮರೆಯಬೇಡಿ!

ಜುಲೈ 1998 ಸಂಪುಟ 2 ಸಂಚಿಕೆ 1

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಅರವಿಂದ ನಾವಡ, ರವಿಶಂಕರ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ಹೆಚ್.ಎಂ.ಪಿ. ಆರಾಧ್ಯ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಹರಿಹರನ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು-560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross,I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattar ahalli, Old Madras Road, Bangalore - 49 Editor : Chandrakanta Vaddu

ಸಮಯದ ಸೂತ್ರ

ಕಾಲ ಉರುಳಿದಂತೆ ಬದುಕು ಚಲಿಸುತ್ತದೆ. ಬದುಕು ಚಲಿಸಿದಂತೆ ಮನುಷ್ಯ ಬೆಳೆಯಬೇಕು. ಹೀಗೆ ಕಾಲನ ವೇಗ ಹಾಗೂ ಬದುಕಿನ ಗತಿ ನಡುವೆ ಸಾಂಗತ್ಯ ಸಾಧಿಸಿದಾಗ ಮಾತ್ರ ಮನುಷ್ಯನ ಜೀವನ ಸಾರ್ಥಕಗೊಳ್ಳಲು ಸಾಧ್ಯ. ಆದರೆ ಅನೇಕರು ಪ್ರಕೃತಿಯ ಈ ಮರ್ಮವನ್ನೇ ಅರಿಯದೆ ತಮ್ಮ ಜೀವನ ಶಾಶ್ವತವೆಂದು ಭಾವಿಸುತ್ತಾರೆ. ಕಳೆಯಲು ತಮ್ಮ ಬಳಿ ವೇಳೆಯ ಕಣಜವೇ ಇದೆಯೆಂಬಂತೆ ಕಾಲಹರಣ ಮಾಡುತ್ತಾರೆ.

ಆದರೆ ಜೀವಿತದ ಯಾವುದೋ ಒಂದು ಘಟ್ಟದಲ್ಲಿ ಥಟ್ಟನೆ ಪ್ರಜ್ಞೆಗೆ ನಿಲುಕುವ ಈ ಸತ್ಯ ಸಮಯ ಅಕ್ಷಯವಲ್ಲ ಎಂಬುದನ್ನು ತಿವಿದು ಹೇಳುತ್ತದೆ. ಅಷ್ಟೊತ್ತಿಗೆ ಆ ಮನುಷ್ಯ ಎಷ್ಟು ಕಳೆದುಕೊಂಡಿದ್ದಾನೆ ಹಾಗೂ ಆತನ ಬೊಗಸೆಯಲ್ಲಿ ಇನ್ನೆಷ್ಟು ಸಮಯ ಉಳಿದಿದೆ ಯೆಂಬುದು ಬಹುಮುಖ್ಯ. ಏಕೆಂದರೆ ಬದುಕನ್ನು ಮತ್ತೊಮ್ಮೆ ಮೊದಲಿನಿಂದ ಪ್ರಾರಂಭಿಸುವ ಅವಕಾಶ ಯಾರಿಗೂ ಇಲ್ಲ! ಇರುವ ಸಮಯವನ್ನು ವ್ಯಕ್ತಿಯೊಬ್ಬ ಎಷ್ಟು ದಕ್ಷತೆಯಿಂದ ಬಳಸಿಕೊಳ್ಳುತ್ತಾನೆ ಎಂಬುದರ ಮೇಲೆ ಆತನ ಯಶಸ್ಸು ನಿರ್ಧಾರವಾಗುತ್ತದೆ. ಪ್ರತಿ ದಿನ ಬೆಳಿಗ್ಗೆ ಏಳು ಗಂಟೆಗೆ ಏಳುವ ಮನುಷ್ಯ ಐದು ಗಂಟೆಗೆ ಏಳುವುದನ್ನು ರೂಢಿಸಿಕೊಂಡರೆ ದಿನಂಪ್ರತಿ ಎರಡು ತಾಸುಗಳಂತೆ ವರ್ಷಕ್ಕೆ ಒಂದು ತಿಂಗಳು ಹೆಚ್ಚುವರಿ ಸಮಯ ಸಿಗುತ್ತದೆ. ಹೀಗೆಯೇ ನಮ್ಮ ದಿನಚರಿಯನ್ನು ಜಾಣ್ಮೆಯಿಂದ ನಿಭಾಯಿಸಿ ವ್ಯರ್ಥವಾಗಿ ಕಳೆಯುವ ಸಮಯ ಉಳಿಸಿದರೆ ಜೀವಿತದ ಅವಧಿಯನ್ನು ಸುಮಾರು ಇಪ್ಪತ್ತು ವರ್ಷ ಹೆಚ್ಚಿಸಿಕೊಳ್ಳಬಹುದು. ನಿಮ್ಮ ಕೈಯಲ್ಲೇ ಇರುವ ಆಯುಷ್ಯ ವೃದ್ಧಿಯ ಈ ತಂತ್ರವನ್ನು ನೀವು ಏಕೆ ಅಳವಡಿಸಿಕೊಳ್ಳಬಾರದು?

ಈ ಮಧ್ಯೆ **ಬದುಕು** ಸದ್ದಿಲ್ಲದೇ ಎರಡನೇ ವರ್ಷದಲ್ಲಿ ಕಾಲಿರಿಸಿದೆ. ಅಬ್ಬರದ ಯುಗದಲ್ಲಿ ನೀವೆಲ್ಲ ಈ ನಿರಾಡಂಬರ ಸುಂದರಿಯನ್ನು ಗುರುತಿಸಿ ತಬ್ಬಿಕೊಂಡಿದ್ದೀರಿ. ಬಣ್ಣದ ಹೊಳಪಿಗಿಂತ ಬದುಕಿನ ಒಳಿತು ಮುಖ್ಯವೆಂಬುದು ಸಾಬೀತಾಗಿದೆ. ಎರಡನೇ ವರ್ಷದ ಸಂದರ್ಭದಲ್ಲಿ ಬದಲಾದ **ಬದುಕು** ನಿಮಗೆ ಇನ್ನಷ್ಟು ಮುದ ನೀಡುತ್ತದೆಂದು ಆಶಿಸುತ್ತೇವೆ.

– ಸಂಪಾದಕ

ಸರಸ ವಾರ್ತೆ

ಹೆಚ್ಚುಕಾಲ ನಿದ್ರಿಸದ ಮಕ್ಕಳಿಗೆ ಭವಿಷ್ಯದಲ್ಲಿ ರಾಜಯೋಗವಂತೆ, ಅಂದರೆ ಅಂತಾ ಮಕ್ಕಳು ಹೆಚ್ಚು ಬುದ್ಧಿವಂತರು ಹಾಗೂ ಅವರ ವಯಸ್ಕ ಜೀವನ ಹೆಚ್ಚು ಸಫಲಕಾರಿಯಾಗಿರುತ್ತೆ ಅಂತ ಆಸ್ಟ್ರೇಲಿಯಾದ ವೈದ್ಯರೊಬ್ಬರ ಸಂಶೋಧನೆಯಿಂದ ತಿಳಿದು ಬಂದಂತ ಸಿಹಿಸುದ್ದಿ.

ಮಲಗಲಿಚ್ಛಿಸದ ಮಕ್ಕಳನ್ನೂ ಬಲಪ್ರಯೋಗದಿಂದ ಮಲಗಿಸೋ ಪ್ರಯತ್ನ ಮಾಡ್ತಿದ್ದ ಅಮ್ಮಂದಿರು ಇನ್ಮೇಲೆ ಮಲಗಿರೋ ಮಕ್ಕಳನ್ನು ಚಿವುಟ ಏಳಿಸೋದಿಕ್ಕೆ ಶುರು ಮಾಡಬಹುದಲ್ವೇ!

●

ಹಿರಿಯರೇ ಹಾದಿ ತಪ್ಪಿದರೆ ಕಿರಿಯರ ಗತಿ ಅಧೋಗತಿ ತಾನೇ? ಈ ಮಾತಿಗೆ ಗೋಕಾಕದ ತವಗ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಘಟನೆಯೇ ಸಾಕ್ಷಿ. ಅಲ್ಲಿನ ಶಾಲೆಯ ೭ನೇ ಕ್ಲಾಸಿನಲ್ಲಿ ಈ ಬಾರಿ ಪರೀಕ್ಷೆ ಬರೆದ ೫೩ ವಿದ್ಯಾರ್ಥಿಗಳಲ್ಲಿ ಪಾಸಾಗಿದ್ದು ೧೧ ಮಂದಿ. ಫೇಲಾಗಿದ್ದು ೪೨ ಮಂದಿ. ಫೇಲಿಗೆ ಕಾರಣ, ಶಾಲಾ ದಿನಗಳಲ್ಲಿ ಶಿಕ್ಷಕರು ಚಕ್ಕರ್ ಹೊಡೆದು ಪಾಠ ಮಾಡಲಿಲ್ಲವೆನ್ನೋದು ಗ್ರಾಮಸ್ಥರು ಸುಮ್ನೆ ಬಿಡ್ತಾರಾ, ಶಿಕ್ಷಕರನ್ನು ರೂಂನಲ್ಲಿ ಕೂಡಿಹಾಕಿ ಶಿಕ್ಷಣ ನೀಡೋ ಶಿಕ್ಷಕರಿಗೆ ಶಿಕ್ಷೆ ನೀಡಿಬಿಟ್ಟರಂತೆ.

ಗುರುವೇ ನಮಃ ಅಂತ ಹೇಳ್ತಿದ್ದು ಆ ಕಾಲ
ಗುರುವೇನು ಮಹಾ ಅನ್ನೋದು ಈಗಿನ
ಕಾಲ ಅಂತ ಹೇಳ್ತೀರಾ!

●

ಇತ್ತೀಚೆಗೆ ಸುಖದಾಂಪತ್ಯಕ್ಕೊಂದು ತರಬೇತಿ ನಡೆಯಿತು. ೧೦೦ ಜನ ನವವಿವಾಹಿತ ಜೋಡಿಗಳು ಪಾಲ್ಗೊಂಡರು. ಸತಿಪತಿಗಳು ಪರಸ್ಪರ ಅರಿತುಕೊಂಡು ಆದರ್ಶದಂಪತಿಗಳಾಗೋದು ಹೇಗೆ? ಅನ್ನೋ ರಹಸ್ಯಾನ ಆ ತರಬೇತಿಯಲ್ಲಿ ಜಗಜ್ಜಾಹೀರುಮಾಡಿದ್ರಂತೆ ಕೊನೆಯಲ್ಲಿ ಭಾಗವಹಿಸಿದವರೆಲ್ಲಾ ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ ಅಂತ ಕೂಡಿಹಾಡಿದ್ರಂತೆ.

ಈ ಸುದ್ದಿ ಕೇಳಿದ್ಮೇಲೆ ಸುಖದಾಂಪತ್ಯ ಅರಸಿ ದಂ ಕಳೆದುಕೊಂಡಿದ್ದ ವಿಚ್ಛೇಧಿತ ದಂ-ಪತಿಗಳು ಮತ್ತೊಂದು ಪ್ರಯತ್ನಕ್ಕೆ ಕೈಹಚ್ಚಿದ್ದಾರಂತೆ. ಇಷ್ಟಕ್ಕೂ ಇದೆಲ್ಲಾ ನಡೆದದ್ದು ದೂರದ ಅಮೇರಿಕಾದಲ್ಲಲ್ಲ; ಹತ್ತಿರದ ತೀರ್ಥಹಳ್ಳಿಯಲ್ಲಿ.

●

ಲಖನೌದಲ್ಲಿ ಹಸುಗಳ ಕಾಲೋನಿ ಪ್ರಾರಂಭವಾಗ್ತಿದೆಯಂತೆ, ನಗರದ ಸ್ವಚ್ಛತೆ ಕಾಪಾಡಲು ನಗರದಿಂದ ದೂರದಲ್ಲಿ ಈ ಹಸುಗಳ ಕಾಲೋನಿಯ ನಿರ್ಮಾಣ ಯೋಜನೆ ಯೆನ್ನೋದು ಸರಕಾರದ ವಿವರಣೆ.

ಆದರೆ ಈ ನಿರ್ಧಾರದಿಂದ ದನಗಾಹಿಗಳು ಬೇಸರ ಪಟ್ಟಿದ್ದರೂ ದನಗಳಿಗೇನೂ ಬೇಸರವಿಲ್ಲವಂತೆ. ಈ ಹಾಳು ಜನರಿಂದ ಕಲುಷಿತಗೊಂಡ ನೀರು, ಗಾಳಿ, ಆಹಾರವನ್ನು ಸೇವಿಸೋದು ತಪ್ಪಿ ಇನ್ಮೇಲಾದರೂ ಕೊನೇ ಪಕ್ಷ ಶುದ್ಧಗಾಳಿ, ನೀರಾದ್ರೂ ಸಿಗುತ್ತಲ್ಲಾ ಅನ್ನೋ ಕಾರಣದಿಂದ ನಾಗರೀಕರ ನಗರವನ್ನು ತ್ಯಜಿಸಲು ಸಂತೋಷದಿಂದ ತಮ್ಮ ಕೋಡುಗಳನ್ನು ಅಲ್ಲಾಡಿಸುವುದರ ಮೂಲಕ ಸಮ್ಮತಿ ಸೂಚಿಸಿದ್ದಾವಂತೆ.

●

ಗದಗಿನ ಒಂದು ಹಳ್ಳಿಯಲ್ಲಿ ಸುಮಾರು ೬೦ ವರ್ಷಗಳಿಂದ ಒಂದೂ ಚಹಾ ಅಂಗಡಿಯೇ ಇಲ್ಲವಂತೆ. ಹಾಗಾದರೆ ಅಲ್ಲಿನವರು ಅದೆಂಥ ಜನರಯ್ಯಾ ಚಹಾಕುಡಿಯದೋರು ಅನ್ನೋ ಅಭಿಪ್ರಾಯವೇ?

ಹಾಗೇನಿಲ್ಲ, ೬೦ ವರ್ಷಗಳ ಹಿಂದೆ ಅಲ್ಲಿನ ಚಹಾಅಂಗಡಿಯವನ ಬಳಿ ಒಬ್ಬ ರೈತ ಸಾಲ ತೆಗೆದುಕೊಂಡಿದ್ದನಂತೆ. ಕೆಲವು ದಿನ ಕಳೆದ ಮೇಲೆ ಸಾಲವನ್ನು ವಾಪಾಸ್ ಕೇಳಿದಾಗ ರೈತ ಇನ್ನೂ ಕೆಲವು ದಿನಗಳ ಅವಕಾಶ ಕೇಳಿದನಂತೆ. ಅದಕ್ಕೊಪ್ಪದ ಚಹಾ ಅಂಗಡಿ ಮಾಲೀಕ ಸಾಲ ಹಿಂದಿರುಗಿಸದೇ ಮುಂದೆ ಒಂದೆಜ್ಜೆಯನ್ನು ಇಡಬಾರದು ಅಂದನಂತೆ. ಊರಿನ ಪಟೇಲ ರೈತನ ಪರ ಜಾಮೀನು ನೀಡಿದರೂ ಬಿಕ್ಕಟ್ಟು ಬಗೆಹರಿಯದಿದ್ದಾಗ ಪಟೇಲನೇ ಅವನ ಸಾಲ ತೀರಿಸಬೇಕಾಯ್ತಂತೆ.

ಅಂದಿನಿಂದ ಇಂದಿನವರೆಗೂ ಈ ಚಹಾ ಅಂಗಡಿಯವರ ಸಹವಾಸ ಬೇಡ ಅಂತಾ ತೀರ್ಮಾನಿಸಿದ್ದಾರೆ ಊರವರು. ಚಹಾ ಅಂಗಡಿಯಿಲ್ಲದಿದ್ರೇನೋ ಬಿಡಿ. ಸಾರಾಯಿ ಅಂಗಡಿಯಾದ್ರೂ ಇದೆಯೆಲ್ಲಾ ಅನ್ನೋ ಸಮಾಧಾನ ಹಲವರಿಗೆ.

●

ಇಳಿ ವಯಸ್ಸಿನಲ್ಲೂ ಹದಿಹರೆಯದವರಂತೆ ವರ್ತಿಸೋ ಚಿರಯೌವನಾಸಕ್ತರಿಗೆ ನವಸ್ಫೂರ್ತಿ ನೀಡುವ ವಿಚಾರ.

ಅಮೇರಿಕಾದಲ್ಲಿ 'ವಯಾಗ್ರಾ' ಹೆಸರಿನ ಹೊಸ ನೀಲಿ ಮಾತ್ರೆಗಳು ಮಾರಾಟಕ್ಕೆ ಲಭ್ಯವಿದೆಯಂತೆ. ಹದಿಹರೆಯದವರ ಮೇಲೆ ಈ ಮಾತ್ರೆ ಪರಿಣಾಮ ಬೀರದು, ಇದು ಕೇವಲ ೫೦ರ ಹಿರಿಯರಲ್ಲಿ ಮಾತ್ರ ಉತ್ತಮ ಪರಿಣಾಮ ನೀಡುತ್ತದೆ ಎನ್ನುವುದು ಮಾತ್ರೆಯನ್ನು ಬಿಡುಗಡೆ ಮಾಡಿರೋ ಕಂಪನಿಗಳ ಅಂಬೋಣ. ಈ ಮಾತ್ರೆ ಪಡೆದುಕೊಳ್ಳಲು ವೈದ್ಯರ ಚೀಟಿ ಅವಶ್ಯಕವಂತೆ.

ಈಗ ಈ ಮಾತ್ರೆಗೆ ಪ್ರಪಂಚದ ಮೂಲೆ ಮೂಲೆಯಿಂದಲೂ ಪ್ರವಾಹೋಪಾದಿಯಲ್ಲಿ ಬೇಡಿಕೆ



ಬರುತ್ತಿದೆಯಂತೆ. ಈ ಮಾತ್ರೆ ಲೈಂಗಿಕ ಪ್ರಚೋದನೆ ಮಾಡದಿದ್ರೂ, ಇದರ ಬೆಲೆ ಗ್ರಾಹಕರ ಬಿ.ಪಿ. ರೈಸ್ ಮಾಡೋದಂತೂ ನಿಜ. ನಿಮಗೂ ಬೆಲೆ ತಿಳ್ಕೊಳ್ಳೋ ಕುತೂಹಲವೇ? ಎದೆ ಗಟ್ಟಿ ಮಾಡ್ಕೊಳ್ಳಿ! ಮಾತ್ರೆಗೆ ೧೦ ಡಾಲರ್, ಅಂದ್ರೆ ಅಂದಾಜು ೪೦೦ ರೂಪಾಯಿ!! ಚೀಟಿ ಬರೆದುಕೊಡೋ ವೈದ್ಯರ ಫೀಸು ಎಷ್ಟು ಗೊತ್ತೇ? ಕೇವಲ ೫೦ ಡಾಲರ್. ಆರ್ಥಿಕವಾಗಿ ದುರ್ಬಲವಾಗಿರೋ ಲೈಂಗಿಕಾಸಕ್ತರಿಗೆ ಪರ್ಯಾಯ ವ್ಯವಸ್ಥೆ ಆರಂಭವಾಗಿದೆಯಂತೆ. ಅಂದರೆ ನಕಲಿ ಮಾತ್ರೆಗಳು ಮಾರುಕಟ್ಟೆಗೆ ಬಂದಿವೆ. ನಕಲಿನೋ, ಅಸಲಿನೋ, ಚಿರಯೌವ್ವನ ಬಯಸಿದವರೆಲ್ಲಾ ಹೊಸ ಉತ್ಸಾಹದಲ್ಲಿ ಕುಣಿಯೋಕೆ ಶುರುಮಾಡಿದ್ದಾರಂತೆ.

ವಾತ್ಸಾಯನನ ತವರಿನ ವ್ಯಾಪ್ರಿಗಳು ಈ ಅಮೇರಿಕಾದ "ವಯಾಗ್ರ"ಕ್ಕೆ ಪ್ರತಿಯಾಗಿ "ಅತ್ಯುಫ್ರ"ದ ಸಂಶೋಧನೆಯಲ್ಲಿ ತೊಡಗಬಹುದೆ?

ಒಳನೋಟ







ಸ್ಥಿರ ಶೀರ್ಷಿಕೆಗಳು

ವಿದ್ಯೆ - ಉದ್ಯೋಗ

ಹೊಸ ಅಂಕಣ

ಟಪಾಲು

ಆಕಸ್ಮಿಕ

ನಾನು ಒಂದು ದಿನ ಬಿಜಾಪುರ ಶಹರಕ್ಕೆ ಹೋಗಿದ್ದೆ. ಒಂದು ಪುಸ್ತಕದ ಅಂಗಡಿಯಲ್ಲಿ ಆಕಸ್ಮಿಕವಾಗಿ 'ಬದುಕು' ಕಣ್ಣಿಗೆ ಬಿತ್ತು. ಇಂತಹ ಒಳ್ಳೆಯ ಪತ್ರಿಕೆ ಬಗ್ಗೆ ಮೊದಲೇ ಗೊತ್ತಾಗದ್ದಕ್ಕೆ ಆಶ್ಚರ್ಯವಾಯ್ತು.

-ಗಜಾನಂದ ಬನ್‌ಸೋಡೆ, ಇಂಡಿ

ಮನೆ ಯಾವಾಗ ?

''ಬದುಕು'' ಓದುಗರಿಗೆ 'ಮನೆ' ಉಚಿತವಾಗಿ ದೊರೆಯುವುದೆಂದು ಪ್ರಕಟಿಸಿದ್ದೀರಿ. ನಮಗೆ 'ಮನೆ' ದೊರೆಯುವುದು ಯಾವಾಗ?

- ಪಿ.ಎಚ್. ದಯಾನಂದ, ಹೊನ್ನಾವರ.

ಹೊಸ ಚಂದಾದಾರ

ನಾನು 'ಬದುಕು' ಮಾಸಪತ್ರಿಕೆಯ ಹೊಸ ಚಂದಾದಾರ. ಇದು ಈ ಸುಡು ಬಿಸಿಲಿನಲ್ಲಿಯೂ ಬದುಕುವುದನ್ನು ಕಲಿಸಿಕೊಡುತ್ತಿದೆ. ಒಡಲಾಳದಲ್ಲಿ ವೈವಿಧ್ಯಮ ಯ ವಿಷಯಗಳಿವೆ.

-ಕುಪೇಂದ್ರ ಎಸ್. ವಠಾರ್, ಯಾದಗಿರಿ.

ಅರ್ಥ ಅಪಾರ್ಥ

ಜೂನ್ ಸಂಚಿಕೆಯಲ್ಲಿ ಪ್ರಕಟವಾದ 'ಬೇಕಾಗಿದ್ದಾರೆ' ಜಾಹೀರಾತಿನಲ್ಲಿ ಡಿ.ಟಿ.ಪಿ. ಆಪರೇಟರ್‌ಗಳಿಗೆ ಕನ್ನಡ ಡಿ.ಟಿ.ಪಿ. ಸಾಫ್ಟವೇರ್ ಶ್ರೀಲಿಪಿ ಗೊತ್ತಿರಬೇಕೆಂದು ತಿಳಿಸಿದ್ದೀರಿ. ಇಲ್ಲಿ ಶೀಘ್ರಲಿಪಿ ಹೋಗಿ ಶ್ರೀಲಿಪಿ ಆಗಿದೆಯಲ್ಲವೇ? ಇದು ಕೂಡಾ 'ಅರ್ಥ-ಅಪಾರ್ಥ'ದಲ್ಲಿ ಸೇರಲು ಯೋಗ್ಯವಲ್ಲವೇ?

- ನಾಗರಾಜ ಚಕ್ರಮನಿ, ಮುದ್ದೇಬಿಹಾಳ.

[ಶ್ರೀಲಿಪಿ ಎಂಬುದೇ ಸರಿ. ಇದು ಒಂದು ಡಿ.ಟಿ.ಪಿ. ಸಾಫ್ಟವೇರ್ ಹೆಸರು. -ಸಂ]

ಕಪ್ಪು ಚುಕ್ಕೆ ಅಲ್ಲ

ಮೇ 1998ರ 'ಬಿಸಿಲ ಬದುಕು' ಸಂಚಿಕೆಯ 'ಟಪಾಲು' ವಿಭಾಗಕ್ಕೆ ಮ.ಶಿ. ನಿಂಬರಗಿಯವರು ಬರೆದ ಪತ್ರದಲ್ಲಿ, ಸರ್ ಎಂ.ವಿ.ಯವರ ಕುರಿತಾಗಿ ಬರೆದ 'ಸಮಯಪ್ರಜ್ಞೆ' ಎಂಬ ಬರಹವು ಯುಗಾದಿ ವಿಶೇಷಾಂಕಕ್ಕೆ ಕಪ್ಪು ಚುಕ್ಕೆ ಇಟ್ಟಂತೆ ಎಂದು ಅಭಿಪ್ರಾಯ ಪಟ್ಟಿರುವುದು ಸಮಂಜಸವೆನಿಸಲಾರದು. ನನಗೆ ತಿಳಿದಂತೆ ಅದು ಎಂ.ವಿಯವರ ಜೀವನಕ್ಕೆ ಸಂಬಂಧಿಸಿದ ಘಟನೆಯೇ ಆಗಿದೆ. ಅಲ್ಲದೇ ಈ ಘಟನೆ ಕುರಿತಾದ ಬರಹವು 'ಕಸ್ತೂರಿ' ಹಾಗೂ 'ಬಿಸಿಲ ಬದುಕು' ಈ ಎರಡು ಪತ್ರಿಕೆಗಳಲ್ಲಿ ಒಂದೇ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿರುವುದರಿಂದ ಒಬ್ಬರ ಬರಹವನ್ನು ಮತ್ತೊಬ್ಬರು ತಿರುಚಿ ಬರೆದಿದ್ದಾರೆ ಎಂದು ಭಾವಿಸುವುದು ಸಮಂಜಸವಾಗಲಾರದು. ಅಷ್ಟಕ್ಕೂ ಮಿಗಿಲಾಗಿ ಮಹಾನ್ ವ್ಯಕ್ತಿಗಳ ಜೀವನ ಕುರಿತು ಹೇಳುವಾಗ ಕಾಲ ಕ್ರಮದಲ್ಲಿ ಎಷ್ಟೋ ಮಾರ್ಪಾಡುಗಳು ಉಂಟಾಗಿರುವ ಸಂಭಾವ್ಯಗಳೇ ಹೆಚ್ಚು. ಹೀಗಿರುವಾಗ ಇಲ್ಲಿ ನಾವು ಆ ಘಟನೆಯ ಹಿನ್ನೆಲೆಯಲ್ಲಿಯ ನೀತಿ, ತಾತ್ಪರ್ಯಗಳನ್ನು ಗಮನಿಸಬೇಕಾದದ್ದು ಮುಖ್ಯ.

-ಪ್ರಕಾಶ, ಸಿರಗುಪ್ಪ

ರಸದೂಟ

ಹೊಸದಾಗಿ ಪತ್ರಿಕಾ ಪ್ರಪಂಚಕ್ಕೆ ಕಾಲಿಟ್ಟಿರುವ ಈ ಮಾಸ ಪತ್ರಿಕೆ ಜ್ಞಾನದಾಹಿಗಳಿಗೆ ರಸದೂಟವಾಗಿ ಮೂಡಿಬಂದಿದೆ.

-ಎಸ್.ವಿ. ರಂಗನಾಥ ಶರ್ಮ, ಗುಬ್ಬಿ.

ತನ್ನತನ

ಪರಿಸ್ಥಿತಿಯೊಂದಿಗೆ 'ರಾಜಿ' ಮಾಡಿಕೊಳ್ಳದೆ 'ತನ್ನತನ' ಉಳಿಸಿಕೊಂಡು ಯಶಸ್ವಿಯಾಗಿ ಒಂದನೆಯ ವರ್ಷ ಪೂರೈಸಿ ಎರಡನೇ ವರ್ಷಕ್ಕೆ ಕಾಲಿಡುತ್ತಿರುವ 'ಬದುಕು' ಮಾಸ ಪತ್ರಿಕೆಗೆ ಶುಭ ಹಾರೈಕೆಗಳು.

-ಕೆ.ಎಂ. ಕೊಟ್ರಮ್ಮ, ಪುನಬಗಟ್ಟ.

-ಕೆ.ಆರ್. ಪಂಚಣ್ಣ, ನೇರ್ಲಿಗೆ.

ಮಸಾಲೆ ಯುಗ

ನಾನು ನಿಮ್ಮ ಖಾಯಂ ಓದುಗ. 'ಬದುಕು' ಮೂಲಕ ನನ್ನ ಬದುಕಿಗೆ ಒಂದು ನೆಲೆ ಹುಡುಕುತ್ತಿದ್ದೇನೆ. ಇಂದಿನ ಮಸಾಲೆ ಯುಗದಲ್ಲಿ ಇಷ್ಟು ಚೊಕ್ಕ, ಸುಂದರ, ವೈವಿಧ್ಯಮಯ ಪತ್ರಿಕೆ ನೀಡುತ್ತಿರುವುದು ಸ್ವಾಗತಾರ್ಹ.

-ಶ್ರೀನಲ ಪ್ರಕಾಶ್, ಶ್ರೀ ರಾಮನಹಳ್ಳಿ.

ಉಪಯೋಗವೇನು?

ನೀವು ಪ್ರಕಟಿಸುತ್ತಿರುವ 'ಅರ್ಥ - ಅಪಾರ್ಥ' ವಿಭಾಗದ ಉದ್ದೇಶವೇನು? ಇದರಿಂದಾಗುವ ಉಪಯೋಗವೇನು?

- ಎಂ. ವೀರೇಶ್, ಹೊಸಪೇಟೆ.

ಪದಬಂಧ

ಜೂನ್ ಸಂಚಿಕೆಯ ಪದಬಂಧ-6 ತಪ್ಪಾಗಿ ಮುದ್ರಿತವಾಗಿದೆ. ನೀಡಿದ ವಿವರಗಳಿಗೂ ಖಾನೆಗಳಿಗೂ ಸಂಬಂಧವೇ ಇಲ್ಲವಲ್ಲ?

-ಶ್ರೀನಿವಾಸ, ಗುಲಬರ್ಗಾ.

[ಈ ಬಗ್ಗೆ ನೂರಾರು ಜಾಗೃತ ಓದುಗರು ಗಮನ ಸೆಳೆದಿದ್ದಾರೆ. ಈ ಬಾರಿ ತಪ್ಪು ಸರಿಪಡಿಸಿದ್ದೇವೆ. - ಸಂ]

ಕಳಂಕ ಬೇಡ

''ಗುಳಿಗೆ ನುಂಗುವ ಮುನ್ನ ಒಂದು ಗಳಿಗೆ ಯೋಚಿಸಿ'' ಲೇಖನ ಚೆನ್ನಾಗಿ ಮೂಡಿಬಂದಿದೆ. ನನ್ನ ಗೆಳೆಯನೊಬ್ಬ ಗುಳಿಗೆ ನುಂಗುವುದನ್ನೇ ಚಟ ಮಾಡಿಕೊಂಡಿದ್ದ. ಇಂತಹ ಸಾವಿರಾರು ಜನರಿಗೆ ಲೇಖನದಿಂದ ತಿಳುವಳಿಕೆ ಮೂಡುವಂತಾಗಿದೆ. ಜೂನ್ ಸಂಚಿಕೆಯಲ್ಲಿ ಮುದ್ರಣ ದೋಷಗಳಿಗೆ ಮಿತಿಯೇ ಇಲ್ಲದಂತಾಗಿದೆ. ಕನ್ನಡದಲ್ಲಿ ತುಂಬಾ ಶ್ರೀಮಂತವಾಗಿ ಮೂಡಿ ಬರುತ್ತಿರುವ ಈ ಪತ್ರಿಕೆಯ ಹೆಸರಿಗೆ ಕಳಂಕ ಬರದಂತೆ ನೋಡಿಕೊಳ್ಳಿ.

-ಗುರುಪಾದ ಕೊಳ್ಳಿ, ರಾಮಾಪುರ.

ಚಿರಂಜೀವಿ ಬೇಕು

'ಬದುಕು' ಅಭಿಮಾನಿಯಾಗಿ ಕೇಳಿಕೊಳ್ಳುವುದೇನೆಂದರೆ ಮುಖಪುಟದಲ್ಲಿ ಚಿತ್ರನಟ ಚಿರಂಜೀವಿ ಭಾವಚಿತ್ರ ಪ್ರಕಟಿಸಿರಿ.

- ಕೆ. ವರಗಪ್ಪ, ಶ್ರೀಧರ ಗಡ್ಡೆ

ಪರೀಕ್ಷೆಯ ಅವಧಿ

ಜೂನ್ ಸಂಚಿಕೆಯ ಪುಟ 44ರಲ್ಲಿ ಕೆ.ಎ.ಎಸ್ ಪರೀಕ್ಷೆಯ ಸಾಮಾನ್ಯ ಜ್ಞಾನ ಪತ್ರಿಕೆಗೆ ಉತ್ತರಿಸಲು 3 ಗಂಟೆ ಕಾಲವಿರುತ್ತದೆಂದು ಬರೆದಿದ್ದೀರಿ. ಆದರೆ ಕೆಲವರು 2 ಗಂಟೆ ಮಾತ್ರ ಕಾಲಾವಕಾಶವಿರುತ್ತದೆ ಎಂದು ಹೇಳುತ್ತಾರೆ. ದಯವಿಟ್ಟು ಇದರ ಬಗ್ಗೆ ಸರಿಯಾದ ಮಾಹಿತಿ ಕೊಡಿ.

-ಬಿ.ಕೆ. ಬಾಲರೆಡ್ಡಿ, ಬೆಂಗಳೂರು.

[2 ಗಂಟೆ ಕಾಲಾವಕಾಶ ಸರಿ - ಸಂ]

ರಾಯರ ಕುದುರೆ

'ಬದುಕು' ಚೆನ್ನಾಗಿ ಮೂಡಿಬರುತ್ತಿದೆ. ಆದರೆ ''ಬರುಬರುತ್ತಾ ರಾಯರ ಕುದುರೆ ಕತ್ತೆ ಆಯ್ತು'' ಅಂದ ಹಾಗೆ ತುಂಬಾ ಮುದ್ರಣ ದೋಷಗಳು ಕಂಡು ಬರುತ್ತಿವೆ. ಹೀಗಾಗದಂತೆ ನೋಡಿಕೊಳ್ಳುವಿರೆಂದು ನಂಬಿರುವೆ.

-ಎಚ್.ಜಿ. ನಟರಾಜ, ಕೊಪ್ಪ.

ಪತ್ರಿಕೆಯಲ್ಲಿ ಇತ್ತೀಚೆಗೆ ಮಾಹಿತಿ ಕಡಿಮೆಯಾಗಿ ಮನರಂಜನೆ ಜಾಸ್ತಿಯಾಗಿದೆ. ಅರ್ಥ-ಅಪಾರ್ಥ, ಕೋಚೆ ಚಿಂತನ, ಚೌಚೌ, ನಗೆಬರಹ, ವ್ಯಂಗ್ಯಚಿತ್ರ, ಆಪ್ತ ಸಮಾಲೋಚನೆ, ಮುನ್ನುಡಿಯಿಂದ, ಕ್ವಿಜ್, ಅಡುಗೆ ಮನೆ, ಕಿಲಕಿಲ, ಹನಿಗವನ, ಜಾಹೀರಾತು ಇವುಗಳನ್ನು ದಯಮಾಡಿ ತೆಗೆದುಹಾಕಿ.

-ಹನುಮಂತ ಬಡಿಗೇರ, ಗುಳೇದಗುಡ್ಡ

ಪುಟ ಹೆಚ್ಚಿಸಲಾಗದೆ?

'ಬದುಕು' ಮಾಸ ಪತ್ರಿಕೆಯ ಪುಟಗಳನ್ನು ಹೆಚ್ಚಿಸಲು ಸಾಧ್ಯವಾಗದೇ? ಏಕೆಂದರೆ ಇನ್ನಷ್ಟು ಪುಟಗಳಲ್ಲಿ ಮತ್ತಷ್ಟು ಓದುವ ಸಾಮಗ್ರಿ ಹೊತ್ತು ತರಬಹುದು.

-ಪಿ.ಎಲ್. ಪುಷ್ಪಾ, ಗುಳೇದ ಗುಡ್ಡ.

ಮುಕ್ತ ಅಭಿಪ್ರಾಯ

ನಾನು ಬದುಕಿಗೆ ಆರಂಭದಿಂದಲೇ ಚಂದಾದಾರಳಾಗಿದ್ದು ಈಗ ಚಂದಾ ನವೀಕರಿಸಲು ಡಿ.ಡಿ. ಮೂಲಕ ಹಣ ಕಳಿಸುತ್ತಿದ್ದೇನೆ. 'ಬದುಕು' ಮಾಸ ಪತ್ರಿಕೆ ಬಹಳ ಉಪಯುಕ್ತವಾಗಿದೆ ಎಂಬುದು ನನ್ನ ಮುಕ್ತ ಅನಿಸಿಕೆ. ಇದು ಪ್ರತಿ ತಿಂಗಳು ಮನೆಗೇ ಬರುವುದರಿಂದ ಇನ್ನೂ ಅನುಕೂಲವಾಗಿದೆ. ಆದಕ್ಕಾಗಿಯೇ ಚಂದಾ ಮುಂದುವರಿಸುತ್ತಿದ್ದೇನೆ.

-ಕಮಲಾದೇವಿ ಮರಿಗೇರಿ, ಧಾರವಾಡ.

ನಿಮ್ಮ ಪ್ರಕಾಶನದ 'ಕೆ.ಎ.ಎಸ್. ಮಾರ್ಗದರ್ಶಿ ಪುಸ್ತಕ ಕೊಂಡುಕೊಂಡಿದ್ದೇನೆ. ಉಪಯುಕ್ತವಾಗಿದೆ.

- ಸುನಂದಾ ಹೆಗಡೆ, ಶಿರಸಿ

ಅರ್ಥ - ಅಪಾರ್ಥ

ವಾರಂಗಲ್ ಜಿಲ್ಲೆಯ ಉದೋನೂರ್ ಗ್ರಾಮದಲ್ಲಿ ಗುತ್ತಿಗೆದಾರರೊಬ್ಬರನ್ನು **ಗಂಡಿಟ್ಟು** ಕೊಂದಿದ್ದಾರೆ.

[*ಸಂಜೆ ವಾಣಿ*, 27-5-98] **- ಎಂ. ವೀರೇಶ್,** ಹೊಸಪೇಟೆ.

ಕುಲಷಿತ ನೀರು ಕುಡಿದು 30 ಜನರಿಗೆ ವಾಂತಿ ಭೇದಿ.

[*ಜನತಾ ವಾಣಿ*, 8-5-98] **- ಕೆ. ಚಂದ್ರಮೌಳಿ,** ಹರಪನಹಳ್ಳಿ

ಟೆಸ್ಟ್‌ನಲ್ಲಿ 100 ಕ್ಯಾಚ್‌ಗಳನ್ನು ಮಾಡಿದ ವಿಶ್ವದ 13ನೇ ಆಟಗಾರರಾಗಿರುವ **ಮಜರುದ್ದೀನ್** ಭಾರತದ 3ನೇ ಆಟಗಾರರಾಗಿದ್ದಾರೆ.

[*ಕನ್ನಡ ಜನ ಅಂತರಂಗ*, 28-3-98] **-ರೇಣುಕಾ,** ಹೊನ್ನಾವರ.

ಸಮಗ್ರ ಕೃಷಿ ಮಾಹಿತಿ **ಒಗಸುವ** 'ಕೃಷಿ ಮಾಹಿತಿ ಜಾಲ' ಆರಂಭ.

[*ಕನ್ನಡ ಪ್ರಭ, 20-6-98*] **-ಟಿ.ಕೆ. ಗಂಗಾಧರ ಗೌಡ,** ಮಂಡ್ಯ.

ನಿಮ್ಮ ಖರೀದಿಯೊಂದಿಗೆ ಈ ಜಾಹೀರಾತನ್ನೂ ಕತ್ತರಿಸಿ ತಂದಲ್ಲಿ ರೂ. 200 ಬೆಲೆಬಾಳುವ 1 ತಾಮ್ರದ ಅಡಿಯುಳ್ಳ ಸ್ಟೀಲ್ ಕಡಾಯಿ ಉಚಿತವಾಗಿ **ಹಡೆಯಬಹುದು.**

[*ನವೋದಯ, 16-6-98*] **- ರಮಾಕಾಂತ ಕಮತಗಿ,** ರೋಣ.

ಸೇಲಂ ಮತ್ತು ಹೈದರಾಬಾದ್‌ಗಳಲ್ಲಿ ನಡೆದ ಫಿಡೆ ರೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗಮನ ಸೆಳೆದ ಈ ಬಾಲಕ **1998ರ ಜುಲೈ** ತಿಂಗಳ ಅವಧಿಯಲ್ಲಿ 2150 ಇ.ಎಲ್.ಓ. ಪಾಯಿಂಟ್ ಪಡೆದ.

[*ಸಂಯುಕ್ತ ಕರ್ನಾಟಕ*, ಕ್ರೀಡಾಲೋಕ, 16-5-98]

- ಮಹೇಶ್ವರಿ ಎಸ್. ಪಾಟೀಲ, ಬೆಳಗಾವಿ.

ನೀವು ಓದುವ ದಿನಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು. -ಸಂ.

ನೀವೆಷ್ಟು ಗಂಡಸರು?

ಜಗತ್ತಿನಲ್ಲಿ ಪರಿಪೂರ್ಣ ಹೆಂಗಸು ಅಥವಾ ಗಂಡಸು ಇಲ್ಲವೇ ಇಲ್ಲ! ಹೆಂಗಸರಲ್ಲಿ ಗಂಡಿನ ಒಳಜನನಾಂಗಗಳ ಅಲ್ಪ ಭಾಗವಿದ್ದರೆ ಗಂಡಸರಲ್ಲಿ ಸ್ತ್ರೀರಸದೂತಗಳಿರುತ್ತವೆ. ಪುರುಷರ 'ಅಹಂ'ನ್ನು ಜಖಂ ಮಾಡುವಂತಹ ನಗ್ನ ಸತ್ಯಗಳು ಇಲ್ಲಿವೆ!

■ ಡಾ. ಸುನಂದಾ ಕುಲಕರ್ಣಿ




ಗಂಡಾದ ಹೆಣ್ಣು

ನಮ್ಮ ಪೌರಾಣಿಕ ಕಲ್ಪನೆಯಲ್ಲಿ ಹೆಚ್ಚು ವಿಚಿತ್ರದ್ದೆಂದರೆ ''ಅರ್ಧನಾರೀಶ್ವರ'' ''ಶಿವನಲ್ಲಿ ಪಾರ್ವತಿ'' ''ಪಾರ್ವತಿಯಲ್ಲಿ ಶಿವ'' ನೆನ್ನುವ ಕಲ್ಪನೆಯ ಅರ್ಥ ಗಂಡು ಹೆಣ್ಣು ಸಮಸಮವೆಂದೇ? ಗಂಡಿನಲ್ಲಿ ಹೆಣ್ಣು ಹೆಣ್ಣಿನಲ್ಲಿ ಗಂಡು ಎನ್ನುವ ಅಖಚಿತತೆಯಿಂದ ಕೂಡಿದ ವಿಚಿತ್ರ ಸ್ಥಿತಿಯೇ?

ಮಹಾಭಾರತದಲ್ಲಿ ಬರುವ ಮೇಲಿನ ಸ್ಥಿತಿಗೆ ಹೋಲಿಕೆ ಬರುವಂತಹ ಮತ್ತೊಂದು ಪಾತ್ರ ಶಿಖಂಡಿಯದು. ಈ ಶಿಖಂಡಿ ಏನು? ಏಕೆ?

ಆಧುನಿಕ ಪ್ರಪಂಚದ ಯುವಜನಾಂಗದ ನಾಡಿಮಿಡಿತವನ್ನೇ ಏರುಪೇರು ಮಾಡುವ ಇನ್ನೊಂದು ರೂಪವೇ ಅಮೇರಿಕಾದ ಪಾಪ್ ಗಾಯಕ ಮೈಕಲ್ ಜಾಕ್ಸನ್. ಇವನು ನೋಡಲು ಹೆಣ್ಣಂತೆ ಕಂಡುಬಂದರೂ ಅವನು ಗಂಡೆಂದು ಕರೆಸಿಕೊಳ್ಳುತ್ತಾನಲ್ಲವೇ? ಹಾಗಿದ್ದರೆ ಇವೆಲ್ಲಾ ಏನು?

ತಮಗರಿವಿಲ್ಲದೇ ದೇಹದಲ್ಲಿ ಆಗುವ ಕೆಲವೊಂದು ಅಸಹಜ ದೊಡ್ಡ ಚಂಡ ಮಾರುತವನ್ನೆಬ್ಬಿಸುತ್ತವೆ. ಬಾಳಿನ ಆಸೆ ಆಕಾಂಕ್ಷೆಗಳು ತರಗೆಲೆಗಳಂತೆ ಆ ಮಾರುತಕ್ಕೆ ಸಿಕ್ಕು ಚೆಲ್ಲಾಪಿಲ್ಲಿಯಾಗಿ ದಿಕ್ಕೆಟ್ಟು ಓಡುತ್ತವೆ. ಕೆಲವರು ಬುದ್ಧಿಭ್ರಮಣೆಗೊಳಗಾಗುತ್ತಾರೆ. ಇನ್ನೂ ಕೆಲವರು ತಮ್ಮ ಅಸಹಜ ಜೀವನಕ್ಕೆ ಪೂರ್ಣವಿರಾಮವನ್ನು ಘೋಷಿಸಿಕೊಳ್ಳುತ್ತಾರೆ.



ಅಡ್ರಿನಲ್ ಗ್ರಂಥಿಯಿಂದ ಹೆಣ್ಣು ಗಂಡಾದದ್ದು

ಸೃಷ್ಟಿಯ ಕ್ರಿಯೆಯಲ್ಲಿ ಮನುಷ್ಯ ಮೊದಲು ಮಾಂಸದ ಮುದ್ದೆ. ನಂತರ ಆ ಮಾಂಸದ ಮುದ್ದೆಗೆ ಗಂಡು/ಹೆಣ್ಣಿನ ಅಂಶಗಳ ವಿಲೇವಾರಿ. ಈ ವಿಲೇವಾರಿ ಕ್ರಿಯೆಯಲ್ಲಿ ಎಲ್ಲವೂ ಸುಸೂತ್ರವಾಗಿ ನಡೆದಲ್ಲಿ ಮಾತ್ರ ಗಂಡು ಅಥವಾ ಪರಿಪೂರ್ಣ ಹೆಣ್ಣು ಶಿಶುವಿನ ಜನನವಾದೀತು. ಕೊಂಚವಾದರೂ ಭಂಗವಾಯಿತೆಂದರೆ, ಇತ್ತ ಗಂಡೂ ಅಲ್ಲದ ಅತ್ತ ಹೆಣ್ಣು ಅಲ್ಲದ ವಿಚಿತ್ರ ವಿಭಿನ್ನ ಸ್ಥಿತಿ. ಅವನೇ/ಅವಳೇ/ಅದೇ ''ನಪುಸಂಕ''.

ಕೆಲವೊಮ್ಮೆ ಗಂಡಿನಂತೆ ಬೆಳೆದು ಹೆಣ್ಣಾಗಿದ್ದು, ಹೆಣ್ಣಿನಂತೆ ವರ್ತಿಸುತ್ತ ಮೂಲತಃ ಗಂಡಾಗಿದ್ದಲ್ಲಿ ಅವರನ್ನು ಏನೆಂದು ಪರಿಗಣಿಸುವುದೆಂಬ ಜಿಜ್ಞಾಸೆ ಉಂಟಾಗುತ್ತದಲ್ಲವೇ?

ಲಿಂಗ ನಿರ್ಧಾರದ ರೀತಿ

ಲಿಂಗವೆಂದರೆ ಮನುಷ್ಯನಾಗಲಿ ಪ್ರಾಣಿಯಾಗಲಿ ದ್ವಿವಿಧವಾಗಿ ತೋರಿಸಿಕೊಳ್ಳುವ ಒಂದು ನೈಸರ್ಗಿಕ ಚಮತ್ಕಾರ.

ಆದರೆ ನಾವು ಲಿಂಗವನ್ನು ಸಾಮಾನ್ಯವಾಗಿ ನಿರ್ಧರಿಸುತ್ತಿರುವುದು ಬಾಹ್ಯ ಜನನಾಂಗದ ಮೂಲಕ. ಇದು ಈ ಮೇಲಿನ ವೈಪರೀತ್ಯ ಸ್ಥಿತಿಗೆ ಕಾರಣ. ಯಾಕೆಂದರೆ ನಾವು ಲಿಂಗವನ್ನು ನಿರ್ಧರಿಸಬೇಕಾದ್ದು ಬಾಹ್ಯಜನನಾಂಗ, ಅಂತರ ಜನನಾಂಗ, ಜನನಗ್ರಂಥಿ ಲಿಂಗ, ರಸದೂತಗಳು ಹಾಗೂ ಕ್ರೋಮೋಸೋಮುಗಳನ್ನು ಪರೀಕ್ಷಿಸಿ. ವೈಜ್ಞಾನಿಕ ರೀತಿಯ ಮೂಲಕ. ಈ ಬಾಹ್ಯ ಜನನಾಂಗ ಹಾಗೂ ಅಂತರ ಜನನಾಂಗಗಳಲ್ಲಿ ಸಾಮ್ಯ ಕಂಡು ಬರದಿದ್ದಾಗ ನಾವು ಅವರನ್ನು ಪರೀಕ್ಷೆಗೊಳಪಡಿಸಿ ನಿರ್ಧರಿಸಬೇಕಾಗುತ್ತದೆ. ಆಗ ಮಗುವಿನ ಮೆದುಳಿನ ಮೇಲೂ ಪರಿಣಾಮವಾಗುತ್ತದೆ. ಕಾರಣ ಮಗುವಿನ ತಲೆಯಲ್ಲಿರುವ ಪಿಟ್ಯುಟರಿ ಗ್ರಂಥಿಯು ದ್ವಿವಿಧ ಲಿಂಗದವರಲ್ಲಿಯೂ ಬೇರೆಯೇ ರೀತಿಯಲ್ಲಿ ರಸದೂತಗಳನ್ನು ಸ್ರವಿಸುತ್ತಿರುತ್ತದೆ. ಈ ರಸದೂತಗಳೇ ಮಗುವಿನ ಪ್ರೌಢಾವಸ್ಥೆಯಲ್ಲಿ ಹಾವ-ಭಾವಗಳನ್ನು ನಿರ್ಧರಿಸುವುದು.

ಗಂಡೋ? ಹೆಣ್ಣೋ?

ಭ್ರೂಣದ ಬೆಳವಣಿಗೆಯಲ್ಲಿ ಬಾಹ್ಯ ಜನನಾಂಗದ ಮೂಲಕ ಗಂಡೋ ಹೆಣ್ಣೋ ಎಂದು ನಿರ್ಧಾರವಾಗುತ್ತದೆ. ಅದು ಹೇಗೆಂದರೆ ಪುಂಬೀಜ ವೃಷಣದಲ್ಲಿ ಉದ್ಭವಿಸಿ ಸ್ತ್ರೀಯ ಅಂಡಾಶಯದಿಂದ ಬಂದ ಅಂಡದ ಜೊತೆಗೆ ಸೇರಿಕೊಳ್ಳುತ್ತದೆ. ಈ ಅಂಡವು ಮುಂದಿನ ಮುಟ್ಟಿಗಿಂತ 14ನೇ ದಿನ ಬಿಡುಗಡೆಗೊಳ್ಳುತ್ತದೆ. ಇದು ಡಿಂಭನಾಳದಲ್ಲಿ ಪುಂಬೀಜದ ಜೊತೆಗೆ ಮಿಳಿತಗೊಂಡು ಭ್ರೂಣವಾಗಿ ಪರಿವರ್ತಿತ ವಾಗುತ್ತದೆ. ಈ ಭ್ರೂಣವು ಡಿಂಭನಾಳದಿಂದ ಹೊರಬಂದು ಗರ್ಭಾಶಯದ ಒಳಪೊದರಿನಲ್ಲಿ ಅಂಟಿಕೊಂಡು ಅಲ್ಲಿಯೇ ಮಗುವಿನ ರೂಪವನ್ನು ಪಡೆಯುತ್ತಾ ಬೆಳವಣಿಗೆಯಾಗುತ್ತದೆ. ಈ ಭ್ರೂಣ ದ ಬೆಳವಣಿಗೆಯಲ್ಲಿ ಗಂಡು ಹೆಣ್ಣೆಂಬುದು ನಿರ್ಧಾರವಾಗುತ್ತದೆ.

ಭ್ರೂಣದ ಬೆಳವಣಿಗೆ

ಈ ಪುಂಬೀಜಕ್ಕೆ ಒಂದು ತಲೆ, ಕುತ್ತಿಗೆ ಹಾಗೂ ಬಾಲವಿರುತ್ತದೆ. ಅದರ ತಲೆಯಲ್ಲಿ ಪ್ರಜನನದ ವಸ್ತುಗಳಿದ್ದು ಬಾಲದ ಸಹಾಯದಿಂದ ಸ್ತ್ರೀ ಜನನಾಂಗದಲ್ಲಿ ಚಲಿಸುತ್ತಿರುತ್ತದೆ. ಆ ಪುಂಬೀಜದ ತಲೆಯಲ್ಲಿನ ಕೋಶದಲ್ಲಿ 22 ಜೊತೆ (44) ಕ್ರೋಮೋಸೋಮುಗಳು ಜೊತೆಗೆ 1 ಜೊತೆ ಲಿಂಗದ ಕ್ರೋಮೋಸೋಮುಗಳು (XY) ಇರುತ್ತವೆ. ಅಲ್ಲಿಗೆ ಒಟ್ಟು 46 ಕ್ರೋಮೋಸೋಮುಗಳು. ಪ್ರಜನನದ ಸಮಯ ದಲ್ಲಿ ಅವು ಸರಿಯಾಗಿ ಭಾಗಿಸಲ್ಪಟ್ಟು 23 ಆಗುತ್ತದೆ. ಈಗ ಪುಂಬೀಜದಲ್ಲಿ 22 ಜೊತೆ ಸ್ವಕ್ರೋಮೋಸೋಮುಗಳು ಹಾಗೂ ಒಂದು ಲಿಂಗದ ಕ್ರೋಮೋಸೋಮುಗಳಿರುತ್ತವೆ. ಈ ಲಿಂಗದ ಕ್ರೋಮೋಸೋಮು X ಅಥವಾ Y ಆಗಿರುತ್ತದೆ. ಪ್ರತಿಯೊಂದು ಪುಂಬೀಜದಲ್ಲಿ 22+X ಅಥವಾ 22+Y ಇರಬಹುದು.



ಟರ್ನರ್ ದೋಷ

ಈ ತರಹ ಸ್ತ್ರೀಯ ಅಂಡಾಶಯದಿಂದ ಬಂದ ಅಂಡದಲ್ಲಿಯೂ ಸಹ 22+X ಮಾತ್ರವಿದ್ದು ಪುರುಷನಿಂದ ಬಂದ 22X ದರ ಜೊತೆಗೆ ಮಿಳಿತವಾದಾಗ (44+X) ಹೆಣ್ಣೆಂದು 22Y (44XY) ಎಂದಾಗ ಗಂಡೆಂದು ನಿರ್ಧಾರವಾಗುತ್ತದೆ. ಗಂಡಿನಿಂದ ಬರುವ "Y' ಕ್ರೋಮೋಸೋಮು ಗಂಡು ಮಗುವಿನ ಹುಟ್ಟಿಗೆ ಕಾರಣವಾಗುತ್ತದೆ.

ಋತು ಚಕ್ರ

ಪಿಟ್ಯುಟರಿ ಗ್ರಂಥಿಯ ಸ್ರವಿಸುವಿಕೆಯಿಂದ ಸ್ತ್ರೀಯರಲ್ಲಿ ಅಂಡಗಳು ತಯಾರಾಗುತ್ತವೆ. FSH (Folride Stimulating Harmone)ನಿಂದ ತಯಾರಾದರೂ ಅವು ಹೊರಬರಲು LH (Lalenising Harmone)ನ ಸಹಾಯ ಬೇಕು. ಹೆಣ್ಣಿನಲ್ಲಿ ರುವ ಈಸ್ಟ್ರೋಜನ ಹಾಗೂ ಪ್ರೋಜೆಸ್ಟಿರಾನಗಳು ಗರ್ಭಾಶಯವನ್ನು ದೊಡ್ಡದು ಮಾಡಿ, ಯೋನಿ ಯನ್ನು ಹಸಿಯಾಗಿಡುತ್ತದೆ. ಎದೆ, ಗರ್ಭ ಕಂಠವನ್ನು ಬೆಳೆಸುತ್ತದೆ. ಜೈವಿಕ ಅಲಾರ್ಮ್ ತಲೆ ಯಲ್ಲಿರುವುದರಿಂದ ಕಾಲಕ್ರಮವಾಗಿ ಅಂಡಾ ಶಯದಿಂದ ಸ್ತ್ರೀರಸದೂತ (ಈಸ್ಟ್ರೋಜನ್) ಉತ್ಪತ್ತಿಯಾಗುತ್ತದೆ. ಇದರಿಂದ ಆಕೆ ಋತುಮತಿಯಾಗುತ್ತಾಳೆ.

ಕ್ರೋಮೋಸೋಮುಗಳು

ದೇಹದ ಪ್ರತಿಯೊಂದು ಲಕ್ಷಣವೂ ಆ ಕ್ರೋಮೋಸೋಮುಗಳ ಮೇಲೆ ಪ್ರತಿ ಬಿಂಬವಾಗಿರುತ್ತದೆ. ಕಾರಣ ಬಹಳಷ್ಟು ಮಾಹಿತಿ ಗಳನ್ನು ಸಂಗ್ರಹಿಸಿಡಬಹುದಾದ ಒಂದು ಚಿಕ್ಕ ಪ್ಲಾಪಿಯಂತೆ ಈ ಕ್ರೋಮೋಸೋಮುಗಳ (ಆಟೋಸೋಮುಗಳು) ಮೇಲೆ ಆ ಮಗುವಿನ ವಂಶಪಾರಂಪರ್ಯ ಲಕ್ಷಣಗಳು ಎತ್ತರ, ಬಣ್ಣ, ಬುದ್ಧಿ ಎಲ್ಲವನ್ನು ಸಂಗ್ರಹಿಸಿಟ್ಟಿರುತ್ತದೆ.

ಪುರುಷರಲ್ಲಿ ಕಂಡುಬರದಿದ್ದಾಗ


ಸ್ತ್ರೀಯಲ್ಲಿರುವ ಮೂಲಾಂಶವೇ ಸ್ತ್ರೀಯ ಲ್ಲಿಲ್ಲದೇ ಅದು ಪುರುಷನಲ್ಲಿದ್ದರೆ, ಆ ಪುರುಷನ ಕೆಲವು ಅಂಶಗಳು ಇವಳಲ್ಲಿದ್ದರೆ ಎಷ್ಟೊಂದು ವಿಚಿತ್ರವಾದೀತಲ್ಲವೇ? ಕೆಲವೊಮ್ಮೆ ಸ್ತ್ರೀಯ ಲ್ಲಿರುವ ಡಿಂಭನಾಳ, ಗರ್ಭಾಶಯ, ಗರ್ಭ ಕಂಠಗಳಿರದೆ ಅದರ ಬದಲಾಗಿ ಪುರುಷನ ವೃಷಣಗಳು, ಪುರುಷ ರಸದೂತಗಳ ಸ್ರವಿಸುವಿಕೆ ಕಂಡುಬರುತ್ತದೆ. ಆಗ ಹೆಣ್ಣಂತೆಯೂ ಇದ್ದು



ವೃಷಣ ಸ್ತ್ರೀಲಿಂಗವಾಗುವುದು

ಅವಳು ಗಂಡಾಗಿ ಬದುಕು ಸವೆಸಬೇಕು.

ಹಾಗೆಯೇ ಗಂಡಿನಲ್ಲಿ ಇರುವ ಪುರುಷ ರಸದೂತಗಳು, ವೃಷಣಗಳ ಬದಲಿಗೆ ಅವನಲ್ಲಿ ಸ್ತ್ರೀಯ ಗರ್ಭಾಶಯ, ಡಿಂಭನಾಳಗಳು ಕಂಡು ಬಂದಾಗ ಪಾಪ ಅವನೇನು ಮಾಡಬೇಕು? ಹೆಣ್ಣಿ ನಂತೆ ಅವನೂ ಮಗುವನ್ನು ಹೆರಬೇಕಾದೀತೇ? ಬಾಣಂತಿಯ ನೋವನ್ನು ಅನುಭವಿಸ



ಟರ್ನರ್ ದೋಷ

ಬೇಕಾದೀತೇ?

ಹಾಗೆ ಆಗಲು ಸಾಧ್ಯವಿಲ್ಲ ಕಾರಣವಿಷ್ಟೇ, XX ಇರುವರಲ್ಲಿ ಮಾತ್ರ ಅಂಡಾಶಯವಿರುತ್ತದೆ. ಅಂಡಾಶಯವಿಲ್ಲದೇ ಗರ್ಭಧರಿಸಲು ಸಾಧ್ಯವಿಲ್ಲ. ಆದ್ದರಿಂದ ಗಂಡು ಇಂತಹ ವಿಚಿತ್ರ ಸ್ಥಿತಿಯಲ್ಲಿ ಹೆರಬೇಕಾಗಿಲ್ಲ, ಹೊರಬೇಕಾಗಿಲ್ಲ.

ಪರಿಣಾಮ

ಹೆಣ್ಣಿನಲ್ಲಿ ಗಂಡಿನ ವೃಷಣಗಳಿದ್ದರೆ ಅದನ್ನು ಪರೀಕ್ಷೆ ಮಾಡಿಸಿ ತೆಗೆಸಬೇಕು ಇಲ್ಲದಿದ್ದಲ್ಲಿ ಅದು ಅರ್ಬುದ ರೋಗಕ್ಕೆ ಕಾರಣವಾಗಬಹುದು. ಗಂಡಿಗೆ ಹೆಣ್ಣಿನಂತೆ ಎದೆ ಬೆಳೆಯುತ್ತದೆ. ಅಸಾಮಾನ್ಯ ಕೂದಲುಗಳು ಬೆಳೆಯುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಸಮಾಜದ ದೃಷ್ಟಿ ಕೋನದಲ್ಲಿ ವಿಚಿತ್ರ ವ್ಯಕ್ತಿಯಾಗುತ್ತಾನೆ.

ಅಸಹಜ ಜೀವಿಗಳು

ಹೀಗೆಂದರೆ ಕೆಲವು ಸಲ ಒಂದು ಕೋಶದಲ್ಲಿ XXಗಳು ಸರಿಯಾಗಿ ವಿಭಜನೆಯಾಗದೇ XX ಒಂದರಲ್ಲೇ ಉಳಿದು ಇನ್ನೊಂದು ಕಡೆ ಖಾಲಿ ಕೋಶವಾಗಬಹುದು. ಆಗ ಪುಂಬೀಜದ ಜೊತೆಗೆ ಮಿಳಿತವಾಗಿ ಅಸಾಮಾನ್ಯ ಜೀವಿಗಳು ಹುಟ್ಟಬಹುದು.

ಈ ತರಹ ವಿಭಜನೆಯಾದಾಗ 3X ಎಂಬುದು ಹೆಣ್ಣಾಗುತ್ತದೆ.

YO ಎಂಬುದು ಹುಟ್ಟಲು ಸಾಧ್ಯವಿಲ್ಲ. ಆದರೆ XXY ಗಂಡಾಗುತ್ತದೆ. XO ಹೆಣ್ಣಾಗುತ್ತದೆ. ಆದರೆ XX ಹಾಗೂ XO ಹೆಣ್ಣಿಗೆ ವ್ಯತ್ಯಾಸವಿದ್ದು XX ಹೆಣ್ಣಿನಲ್ಲಿ ಅಂಡಾಶಯವಿರುತ್ತದೆ. XO ಹೆಣ್ಣಿನಲ್ಲಿ ಅಂಡಾಶಯವಿರುವುದಿಲ್ಲ. ಇಂತಹ ಹೆಣ್ಣುಗಳಿಗೆ ಟರ್ನರ್ ಸಿಂಡ್ರೋಮ್ ಎನ್ನುತ್ತಾರೆ. ಹಾಗೂ ದೃಷ್ಟಿಯ ದೋಷ ಬಣ್ಣದ ಬಗ್ಗೆ ಸ್ಪಷ್ಟ ಕಲ್ಪನೆಯಿರುವುದಿಲ್ಲ.

ಲಿಂಗ ಪರೀಕ್ಷೆಯ ಬಗೆ

ಎ. ಕ್ಯಾರಿಯೋ ಟೈಪಿಂಗ್

ಬಿಳಿಯ ಗೋಲಕಗಳನ್ನು ಬೆಳೆಸಿ ಕೋಶ ವಿಭಜನೆಯಾದಾಗ ಮುಂದೆ ಅವು ಬೆಳೆಯದಂತೆ ಮಾಡಿ ಕೆಲವು ರಾಸಾಯನಿಕಗಳ ಮೂಲಕ ಆ ಕೋಶಗಳಿಗೆ ಬಣ್ಣಹಾಕಿ ಪರೀಕ್ಷಿಸುವುದು. ಆಗ ಎಲ್ಲಾ ಕ್ರೋಮೋಸೋಮುಗಳು ಕಾಣ ಸಿಗುವುದರಿಂದ ಕ್ರೋಮೋಸೋಮುಗಳ ವಿಭಜನೆಯಲ್ಲಿನ ಹೆಚ್ಚು ಕಡಿಮೆಯನ್ನು ಗುರುತಿಸಿ ಏನು ತೊಂದರೆಯೆಂಬುದನ್ನು ನಿರ್ಧರಿಸಬಹುದು. ಸ್ತ್ರೀ/ಪುರುಷರಲ್ಲಿನ ಯಾವ ಅಂಶ ಈ ಸ್ಥಿತಿಗೆ ಕಾರಣವಾಗಿದೆಯೆನ್ನುವುದನ್ನು ಪತ್ತೆ ಹಚ್ಚಬಹುದು.

ಬಿ. ಬಾರಬೊಡಿ


ಈ ಪರೀಕ್ಷೆಯಲ್ಲಿ ಗಲ್ಲದ ಒಳಗಿನ ಕೋಶಗಳನ್ನು ತೆಗೆದು ಪರೀಕ್ಷೆಗೊಳಪಡಿಸಿದಾಗ ಯಾರಲ್ಲಿ 2X ಇರುತ್ತದೋ ಅವರಲ್ಲಿ ಕ್ರೊಮೆಟಿನ ಅಂಶ ಕಂಡುಬರುತ್ತದೆ. ಇಲ್ಲಿಯೂ ಕೋಶಗಳಿಗೆ ಬಣ್ಣ ಹಾಕಿ ಪರೀಕ್ಷಿಸುತ್ತಾರೆ. ಈ ಪರೀಕ್ಷೆಯಿಂದಲೂ ಈ ಅಸಹಜ ಬೆಳವಣಿಗೆಯನ್ನು ಗುರುತಿಸಬಹುದು. ಆದರೆ ಕ್ಯಾರಿಯೋ ಟೈಪಿಂಗ್‌ನಷ್ಟು ಪರಿಪೂರ್ಣ ಫಲಿತಾಂಶ ಪಡೆಯಲು ಕಷ್ಟ.


ಪುರುಷ ನಿರ್ಧಾರಕ ಅಂಶಗಳು

ಪುರುಷನೆಂದು ನಿರ್ಧಾರವಾಗಬೇಕಾದರೆ ಅವನಲ್ಲಿ ಪುಂಬೀಜವಿದ್ದು XY ಕ್ರೋಮೋಸೋಮುಗಳಿರಬೇಕು. ಇದಕ್ಕೆ (Genetic Sex) ತಳಿಯ ಲಿಂಗವೆನ್ನುತ್ತಾರೆ. ನಂತರ "Y" ಕ್ರೋಮೋಸೋಮಿನ ಸಣ್ಣ ತೋಳಿನಲ್ಲಿ T.D.F. ಅಂದರೆ ಪುರುಷ ಲಿಂಗ ನಿರ್ಧಾರಕವೆಂಬ ಅಂಶವಿರುತ್ತದೆ. H.Y. ಆ್ಯಂಟಿಜನ್ (antigen) ವೆಂಬುದು ಉತ್ಪತ್ತಿಯಾಗಿ T.D.F.ಗೆ ಪೂರಕವಾಗುತ್ತದೆ. 'ಜನನ ಗ್ರಂಥಿ' ಮೊದಲು ಒಂದೇ ಇದ್ದು ಹೊರಗಡೆಯ ಭಾಗ ಕ್ಷಯಿಸಿ ಪುರುಷಲಿಂಗವಾಗುತ್ತದೆ. ಒಮ್ಮೆ ಜನಿಕ ಲಿಂಗ ವೃಷಣವಾದರೆ ಸಾಕು. ಮುಂದೆ ಸುಗಮವಾಗಿ ಸಾಗುತ್ತದೆ. ಇದಕ್ಕೆ ''ಜನಿಕ ಲಿಂಗ'' ಅಥವಾ ''ಜನನ ಲಿಂಗ''ವೆನ್ನುತ್ತಾರೆ.

ಲಿಂಗಗಳ ಬೆಳವಣಿಗೆ

ಮಗುವಿಗೆ 8 ವಾರದ ತನಕ ಅದರ ಲಿಂಗ ನಿರ್ಲಿಂಗವಾಗಿದ್ದು 9 ವಾರದಿಂದ 17ನೇ ವಾರದವರೆಗಿನ ಬೆಳವಣಿಗೆಯಲ್ಲಿ ಲಿಂಗಗಳು ನಿರ್ಧಾರಿತ ರೂಪವನ್ನು ಪಡೆಯುತ್ತವೆ. ಅದು ಹೇಗೆಂದರೆ ಮಗು ಬೆಳೆದು ದೊಡ್ಡವನಾಗಿ ಜಗತ್ತನ್ನು ಅರ್ಥೈಸಿಕೊಳ್ಳುವಂತೆ. ಅಪ್ಪ, ಅಮ್ಮ ಎಂದು ಕರೆಯುವ ತೊದಲು ನುಡಿಯಿಂದ ಹಿಡಿದು ಪ್ರತಿಭಾನ್ವಿತ ಭಾಷಣಕಾರನಾಗುವಂತೆ, ಅಂದರೆ ಭ್ರೂಣದಲ್ಲಿನ ಬೆಳವಣಿಗೆಯಿಂದ ಈ ಲಿಂಗದಲ್ಲಿಯೂ ಮಹತ್ವದ ಬೆಳವಣಿಗೆ ಯಾಗುತ್ತದೆ. 7ನೆಯ ವಾರದಷ್ಟರಲ್ಲಿ ಪುಂಬೀಜಗಳು, ವೃಷಣ, ಕೋಶಗಳು ತಯಾರಾಗಿ ವೃಷಣದ ರಸದೂತಗಳು ಸ್ರವಿಸಿದಂತೆ ಶಿಶ್ನ ಬೆಳೆದು ಎರಡೂ ಕಡೆಯ ಪದರ ಬೆಳೆದು ವೃಷಣದ ಚೀಲ ತಯಾರಾಗುತ್ತದೆ. ಅಲ್ಲಿ ವೃಷಣಗಳು ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ ಬಾಹ್ಯ ಜನನಾಂಗ ಹೆಂಗಸಿನಂತೆ ಯೋನಿಯಾಗುತ್ತದೆ. ವೃಷಣದ ಚೋದಕಗಳಿಗೆ ಪ್ರತಿಕ್ರಿಯಿಸುವ ಕಿಣ್ವಗಳು ಇರದಿದ್ದರೆ ಆಗಲೂ





ಗಂಡಸರು ಮುಟ್ಟಾಗುತ್ತರೆಯೇ?

ಹೌದು, ಸ್ವೇಯರ್‌ನ ರೋಗವೆಂಬುದೊಂದಿದೆ. ಇದರಲ್ಲಿ ಮೂಲ ರೋಗಿ XY ಅಂದರೆ ಗಂಡಾಗಿದ್ದು, ಆತನು ಗರ್ಭಾಶಯದಲ್ಲಿರುವಾಗಲೇ ವೃಷಣಗಳು ನಾಶವಾಗಿರುವುದರಿಂದ ಎಂ.ಐ.ಎಫ್ ಅಂಶದ ಕೊರತೆಯಿಂದ ಅವನಲ್ಲಿನ ಗರ್ಭಾಶಯ, ಗರ್ಭಕಂಠ, ಡಿಂಭನಾಳ ನಾಶವಾಗದೆ ಉಳಿದಿರುತ್ತದೆ. ಬಾಹ್ಯಜನನಾಂಗ ಸಹ ಹೆಂಗಸಿನಂತಿರುತ್ತದೆ. ಆಗ ಗಂಡಾಗಿದ್ದರೂ ಹೆಣ್ಣಾಗುತ್ತಾನೆ. ನಂತರ ತಿಂಗಳು ತಿಂಗಳು ಮುಟ್ಟಾಗುವುದಿಲ್ಲವೆಂದು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಾನೆ. ಆದರೆ ಅವನಲ್ಲಿ ಅಂಡಾಶಯವಿರುವುದಿಲ್ಲ.

⇦
ಸಂದಿಗ್ಧ ಬಾಹ್ಯ ಜನನಾಂಗ

ಗಂಡಸೆಂದಿದ್ದರೂ ಹೆಣ್ಣಿನಂತಾಗಬೇಕಾಗುತ್ತದೆ.

"Y" ಕ್ರೋಮೋಸೋಮುಗಳಿಲ್ಲದಾಗ ಆ ಭ್ರೂಣದಲ್ಲಿ ಅಂಡಾಶಯ ಬೆಳೆಯುತ್ತದೆ. ಆಗ ಹೆಣ್ಣಾಗುತ್ತಾಳೆ. ಗರ್ಭಧರಿಸಲು, ತಾಯಿಯಾಗಲೂ ಈ ಅಂಡಾಶಯ ಅತ್ಯವಶ್ಯಕ.

ಈ ರೀತಿಯ ಕ್ರಿಯೆಗೆ ಎಂ.ಐ.ಎಫ್. ಎಂಬಂತಹ ಅಂಶ ವಿರಲೇಬೇಕು.

ದೇಹದಲ್ಲಿ

ಅ. ವೂಲ್ಫನ್ (Wolfan)

ಆ. ಮುಲ್ಲೇನಿಯಾ (Mullania)

ಎಂಬಂತಹ ಎರಡು ಮಂಡಲಗಳಿವೆ (Systems)

ವೂಲ್ಫನ್ : ಮಂಡಲದಲ್ಲಿ ಪುಂಬೀಜದ ತರಹಾವರಿ ನಾಳಗಳಿರುತ್ತವೆ.

ಮಲ್ಲೇನಿಯಾ : ಈ ಮಂಡಲದಲ್ಲಿ 2 ನಾಳಗಳು ಇರುತ್ತವೆ.

ಈ ಎರಡು ನಾಳಗಳ ಮಧ್ಯಭಾಗ ಕೂಡಿಕೊಂಡು ಗರ್ಭಾಶಯ ಗರ್ಭಕಂಠವಾಗಿರುತ್ತದೆ. ಈ ಎಂ.ಐ.ಎಫ್. ಅಂಶವು ಬಿಡುಗಡೆಯಾಗಿ ಈ ಮುಲ್ಲೇನಿಯನ ಮಂಡಲ ಕ್ಷಯಿಸುತ್ತದೆ. ಆಗ ಈ ಗರ್ಭಾಶಯ, ಗರ್ಭಕಂಠವೆಲ್ಲಾ ಕ್ಷಯಿಸಿ ಹೋಗುತ್ತದೆ. ಈ ಎಂ.ಐ.ಎಫ್ ಅಂಶವಿಲ್ಲದಿದ್ದಾಗ ಈ ಗರ್ಭಾಶಯ ಗರ್ಭಕಂಠವೆಲ್ಲ ಕ್ಷಯಿಸುವುದಿಲ್ಲ.

ಲಿಂಗಗಳ ಬಗೆ

ಕ್ರೋಮೋಸೋಮು ಲಿಂಗ ಅಥವಾ ತಳಿಯ ಲಿಂಗ (ಕ್ರೋಮೋಸೋಮಲ್ ಸೆಕ್ಸ್)

ಜನನ ಗ್ರಂಥಿ ಲಿಂಗ (Gonodal Sex)

ರಸದೂತಗಳ ಲಿಂಗ (Hormonal Sex)

ಅಂಗರಚನ ಲಿಂಗ (Anatonical Sex)

ಮಾನಸಿಕ ಲಿಂಗ

ಈ ದಿನಗಳಲ್ಲಿ ಲಿಂಗ ಪರಿವರ್ತನೆ ಚಿಕಿತ್ಸೆ ಬಹಳಷ್ಟು ಚರ್ಚೆಗೀಡಾಗುತ್ತಿರುವ ವಿಷಯ, ವಿದೇಶಗಳಲ್ಲಿ ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಮಾರ್ಟಿನಾ ನವಾಟ್ರಿಲೋವಾ, ಮೈಕಲ್ ಜಾಕ್ಸನ್ ಇವರೆಲ್ಲಾ ಈ ಚಿಕಿತ್ಸೆಯ ಪ್ರಯೋಗಕ್ಕೆ ಸಿಕ್ಕು ಅದರ ಫಲಪ್ರದ ಯತ್ನಕ್ಕೆ ಕೈ ಜೋಡಿಸಿರುವವರು.

ಇತ್ತೀಚೆಗೆ ನಮ್ಮ ದೇಶದಲ್ಲೂ ಈ ಚಿಕಿತ್ಸೆ ಪ್ರಯೋಗಕ್ಕೀಡಾಗುತ್ತಿದೆ. ಈ ಚಿಕಿತ್ಸೆ ಸಾಧ್ಯವೂ ಹೌದು ಸಾಧುವು ಹೌದು.

ಗಂಡಸಿನ ಉಡುಗೆಯಲ್ಲಿ ಹುಡುಗಿ

ಕೆಲವು ಹುಡುಗಿಯರಿಗೆ ಗಂಡಸರ ಅರಿವೆ, ಗಂಡಸರ ಸಖ್ಯ, ಗಂಡಸಿನಂತೆಯೇ ವರ್ತಿಸಲು ಬಹಳ ಇಷ್ಟ. ಗಂಡಸರಂತೆಯೇ ಪ್ಯಾಂಟು, ಶರ್ಟು ಧರಿಸಿ ಗಂಡಸಿನಂತೆಯೇ ನಿರ್ಭಯವಾಗಿ ಸಮಾಜದಲ್ಲಿ ಅವನಂತೆಯೇ ಬಾಳಲೆತ್ನಿಸುತ್ತಾಳೆ. ಇವರಲ್ಲಿಯೂ ಎರಡು ವಿಧ, ಕೆಲವರು ವಿರುದ್ಧ ಲಿಂಗದ ಅರಿವೆ, ಸಂಗ ಬಯಸುತ್ತಾರೆ, ಬೆರೆಯಲು ಯತ್ನಿಸುತ್ತಾರೆ. ಇನ್ನು ಕೆಲವರು ಸಲಿಂಗಕಾಮಿಗಳಾಗುತ್ತಾರೆ.

ಗಂಡು ಹೆಣ್ಣಾಗಲು ಬಯಸಿದಾಗ

ಸ್ತ್ರೀ ರಸದೂತಗಳನ್ನು ಸೇವಿಸುವುದು, ಕೃತಕವಾಗಿ ಎದೆ ಹಾಗೂ ಯೋನಿಗಳನ್ನು ರಚಿಸಲಾಗುವುದು. ಆಗ ಆಕೆ ಸಂಭೋಗ ಕ್ರಿಯೆಯಲ್ಲಿ ತೊಡಗಬಹುದು. ಶಸ್ತ್ರ ಚಿಕಿತ್ಸೆಯ ಮೂಲಕ ವೃಷಣಗಳನ್ನು ತೆಗೆದು ಹಾಕಿ ವೃಷಣದ ಚೀಲದ ಚರ್ಮವನ್ನು ಕೃತಕ ಯೋನಿಗೆ ಅಳವಡಿಸಿದಾಗ ಅವನು ಅವಳಾಗುತ್ತಾಳೆ. ಆದರೆ ತಾಯಿಯಾಗಲಾರಳು.

ನಂತರ ಸ್ತ್ರೀ ರೀತಿ ನಡೆಯುವ ಪದ್ಧತಿ, ಧ್ವನಿ, ಕೂದಲು ಬೆಳೆಸುವಿಕೆ ಒಟ್ಟಿನಲ್ಲಿ ಹೆಣ್ಣಾಗಲು ಸಾಧ್ಯವಿದೆ.

ಹೆಣ್ಣು ಗಂಡಾಗುವುದಾದರೆ

ನೀವೆಷ್ಟು ಗಂಡಸರು?

ಅಸಹಜತೆಗೆ ಕಾರಣ

- ಗರ್ಭಿಣಿಯಾಗಿದ್ದಾಗ ವಾಂತಿ, ತಲೆಸುತ್ತು ಮುಂತಾದವುಗಳನ್ನು ನಿಲ್ಲಿಸಲು ವೈದ್ಯರ ಸಲಹೆಯಿಲ್ಲದೆ ಮಾತ್ರೆಗಳನ್ನು ಸೇವಿಸುವುದು.
- ಮನತನದಲ್ಲಿ ಯಾರಿಗಾದರೂ ಈ ಅಸಹಜತೆಯಿದ್ದಲ್ಲಿ ವಂಶ ಪಾರಂಪರ್ಯವಾಗಿ ಬರಬಹುದು.
- ತಾಯಿಯ ಅಂಡಾಶಯ ಅರ್ಬುದ ಗೆಡ್ಡೆಗಳಲ್ಲಿ ಪುರುಷ ರಸದೂತ ಉತ್ಪತ್ತಿಯಾಗುತ್ತಿದ್ದರೆ ಈ ರೀತಿಯ ತೊಂದರೆ ಉದ್ಭವಿಸುತ್ತದೆ.
- ಗರ್ಭದಲ್ಲಿ ಮಗುವಿಗೆ ಏನಾದರೂ ತೊಂದರೆಯಾದರೆ ಊನವಾದ, ವಿಕೃತವಾದ ಮಗುವಿನ ಜನನಕ್ಕೆ ಕಾರಣ.
- ಅಡ್ರಿನಲ್ ಗ್ರಂಥಿಯ ದೋಷವಿದ್ದಾಗಲೂ ಈ ರೀತಿಯ ಅಸಹಜತೆ ಸಾಧ್ಯವಿದೆ.

ಗಂಡಾಗ ಬೇಕೆನ್ನುವವರಿಗೆ ಅವರ ಹೊಟ್ಟೆಯನ್ನು ಕೊಯ್ದು ಅವರಲ್ಲಿನ ಅಂಡಾಶಯ, ಗರ್ಭಾಶಯ, ಗರ್ಭಕಂಠವನ್ನು ತೆಗೆದು ನಂತರ ಪುರುಷ ರಸದೂತಗಳನ್ನು ಕೊಡುತ್ತಾರೆ. ಇದರಿಂದ ಗಡ್ಡಮೀಸೆ ಬೆಳೆಯುತ್ತದೆ. ಎದೆ ಬೆಳೆಯಲಾರದು. ಹೊಟ್ಟೆಯಲ್ಲಿಯ ಚರ್ಮದಲ್ಲಿ ಕೊಬ್ಬನ್ನು ಸೇರಿಸಿ ಸುರುಳಿಮಾಡಿ ಶಿಶ್ನ ಮಾಡುತ್ತಾರೆ. ನಂತರ ಕೃತಕ ವೃಷಣಮಾಡಿ ಚರ್ಮದ ಚೀಲದಲ್ಲಿ ಸೇರಿಸುತ್ತಾರೆ. ದ್ವಿಲಿಂಗದ ತರಹ ಇದ್ದವರಲ್ಲಿ ಈ ರೀತಿ ಮಾಡುತ್ತಾರೆ. ಈ ತರಹ ಮಾಡುವುದರಿಂದ ಶಿಶ್ನ ಯಾವಾಗಲೂ ಎದ್ದು ನಿಲ್ಲುವುದರಿಂದ ಅದನ್ನು ಮಡಿಚಿ ಪ್ಯಾಂಟಿನಲ್ಲಿ ಸಿಗಿಸಬೇಕು.

ಇದೇ ತರಹ ಕೆಲವರಿಗೆ ಕಾಲಿನ ಬೆರಳನ್ನು (ಹೆಬ್ಬೆರಳು) ಕತ್ತರಿಸಿ ಕೃತಕ ಶಿಶ್ನವನ್ನಾಗಿ ಮಾಡಿ ನಂತರ ವೃಷಣದ ಚೀಲದಲ್ಲಿ ಸಲೈನ ತುಂಬಿದ ಬಲೂನುಗಳ ತರದಿ ಇಡುತ್ತಾರೆ. ಆಗ ವೃಷಣವನ್ನು ಹಿಚುಕಿದಾಗ ಅದು ಶಿಶ್ನದಲ್ಲಿ ಸೇರಿ ಸಂಭೋಗಕ್ಕೆ ಅಣಿಯಾಗುತ್ತದೆ. ಇದೆಲ್ಲರ ನಿಯಂತ್ರಣ ಹೊರಗಡೆಯಿದ್ದು ತಮಗೆ ಬೇಕಾದಾಗ ಸಂಭೋಗ ಮಾಡಲು ಅನುಕೂಲವಾಗಿರುತ್ತದೆ.

ಚಿಕಿತ್ಸೆಯಲ್ಲಿ ಅತ್ಯಾಧುನಿಕತೆ

ಈಗಿನ ದಿನಗಳಲ್ಲಿ ಸಂಪೂರ್ಣ ಗಂಡಸರನ್ನಾಗಿ ಮಾಡಲು ಸಾಧ್ಯವಾಗುತ್ತಿದೆ. ಕೆಲವೊಂದು ಹೊಸ ವಿಧಾನಗಳ ಮೂಲಕ ಅಂದರೆ ಪುರುಷ ರಸದೂತಗಳನ್ನು ನೀಡಿ ಈ ತರಹದ ಚಿಕಿತ್ಸೆಗಳಿಂದ ಪೂರ್ತಿ ಗಂಡಸಾಗಿಯೂ ಮತ್ತು ಪೂರ್ತಿ ಹೆಂಗಸಾಗಿಯೂ ಮಾಡಲು ಸಾಧ್ಯವಾಗಿದೆ. ಶಿಶ್ನವನ್ನು ಉದ್ದಕೊಯ್ದು, ಅದರ ತಿರುಳನ್ನು ಕಿತ್ತುಹಾಕಿ ವೃಷಣವನ್ನು ಬರಿದು ಮಾಡಿ ನಂತರ ವೃಷಣದ ಚೀಲದ ಚರ್ಮವನ್ನು ಕೃತಕ ಯೋನಿಗೆ ಅಳವಡಿಸಿ ಗಂಡಸನ್ನು ಸಂಪೂರ್ಣವಾಗಿ ಹೆಂಗಸನ್ನಾಗಿ ಮಾಡುವಷ್ಟು ಚಿಕಿತ್ಸೆ ಬೆಳವಣಿಗೆ ಕಂಡಿದೆ.

ಈ ಚಿಕಿತ್ಸೆಯ ಫಲಾನುಭವಿಗಳು ಜೀವನದಲ್ಲಿ ಗಂಡಸಾಗಿಯೋ ಅಥವಾ ಹೆಂಗಸಾಗಿಯೋ ಬಾಳಬಹುದು. ಆದರೆ ತಾಯಿ-ತಂದೆಯಾಗಲಾರರು.

ಪೃಥ್ವಿಯಲ್ಲಿ ಪರಿಪೂರ್ಣತೆಯೆಂಬುದೇ ಇಲ್ಲ. ಮಾನವನಲ್ಲಿಯೇ ಪರಿಪೂರ್ಣತೆಯಿಲ್ಲದಿದ್ದಲ್ಲಿ ಅವನು ಬಯಸುವ ಪರಿಸರದಲ್ಲಿ ಪರಿಪೂರ್ಣತೆಯನ್ನು ಹುಡುಕುವುದರಲ್ಲಿ ಯಾವ ಅರ್ಥವಿದೆ??

ಆದರೆ ಒಂದಂತೂ ನಿಜ. ಪ್ರಕೃತಿಯ ವೈಪರೀತ್ಯಕ್ಕೆ ಬಲಿಪಶುವಾದ ಇವರಿಗೆ ಅವಶ್ಯವಿರುವುದು ಸಮಾಜದ ಸಾಂತ್ವನ, ಪ್ರೀತಿ, ಸ್ನೇಹಗಳೇ ವಿನಹ ಅಪ್ಪ ಅಮ್ಮನಾಗಬೇಕೆಂಬ ಹಂಬಲ ಅಲ್ಲ.

ಹುಟ್ಟುವ ಮಗು ಗಂಡಾಗಲೀ, ಹೆಣ್ಣಾಗಲೆಂದು ವರವ ಕೇಳುವುದನ್ನು ಬಿಟ್ಟು ಪರಿಪೂರ್ಣ ಗಂಡು ಮಗು ಅಥವಾ ಪರಿಪೂರ್ಣ ಹೆಣ್ಣು ಮಗು ಹುಟ್ಟಲೆಂದು ಬೇಡಿಕೊಳ್ಳುವುದನ್ನು ನಾವಿನ್ನು ಕಲಿಯಬೇಕಲ್ಲವೆ?

ಇಷ್ಟೆಲ್ಲಾ ಪ್ರಕೃತಿಯ ವೈಪರೀತ್ಯಗಳನ್ನು ಗಮನಿಸಿದಾಗ ವೈಪರೀತ್ಯಕ್ಕೆ ಗುರಿಯಾದ ಹೆಣ್ಣು/ಗಂಡು ಸಮಾಜದ ವಕ್ರದೃಷ್ಟಿಗೆ ಈಡಾಗಿ ಅಸಹನೀಯ ಬಾಳನ್ನು ಸಾಗಿಸುವುದಕ್ಕಿಂತ ಈ ಆಧುನಿಕ ಚಿಕಿತ್ಸೆಯ ಮೂಲಕ ಗಂಡಸಾಗಿಯೋ ಹೆಂಗಸಾಗಿಯೋ ಲಿಂಗ ಪರಿವರ್ತನೆ ಮಾಡಿಸಿಕೊಂಡು ಬಾಳುವುದು ಒಳಿತಲ್ಲವೇ? ■

ವಿಶ್ವನಾಥನ ಪುನರ್ಜನ್ಮ ಪ್ರಕರಣ ಸತ್ಯಾಂಶವೇನು?

'ಬದುಕು' ಮೇ ಸಂಚಿಕೆಯಲ್ಲಿ ಪ್ರಕಟವಾದ ಪುನರ್ಜನ್ಮ ಕುರಿತ ಲೇಖನ ಗಮನಿಸಿದ ಓದುಗರೊಬ್ಬರು ನೇರವಾಗಿ ಪಂಜಾಬ್ ರಾಜ್ಯ ಸಂಪರ್ಕಿಸಿ ಸತ್ಯಾಂಶ ಕೆದಕಲು ಯತ್ನಿಸಿದ್ದಾರೆ. ನರೇಗಲ್ಲಿನ ಬಾಲಕ ಹೇಳಿದ ವಿವರಗಳ ಜಾಡು ಹಿಡಿದು ಪಂಜಾಬಿಗೆ ತೆರಳಿದಾಗ ತಿಳಿದಿದ್ದೇನು?

ಗೋವಾದ ಇನ್ನೊಬ್ಬ ಓದುಗರು ಡಾ. ಕೋವೂರರ ಅಭಿಪ್ರಾಯಗಳನ್ನು ಪ್ರಶ್ನಿಸಿ ತಮ್ಮದೇ ಆದ ಸಂದೇಹಗಳನ್ನು ಮುಂದಿಟ್ಟಿದ್ದಾರೆ.

ಈ ಬಗ್ಗೆ ಮುಕ್ತ ಚರ್ಚೆ ನಡೆಸಲು 'ಬದುಕು' ಮುಂದಾಗಿದೆ. ಪುನರ್ಜನ್ಮದ ಬಗ್ಗೆ ನಿಮ್ಮ ಅನಿಸಿಕೆ, ಅನುಭವ, ಚಿಂತನೆಯನ್ನು ಚಿಕ್ಕದಾಗಿ ಬರೆದು ಕಳಿಸಿ. ಈ ಕುರಿತು ವಿಚಾರವಂತರ ಅಭಿಪ್ರಾಯಗಳನ್ನು ಕಲೆಹಾಕಿ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ನರೇಗಲ್ಲಿನ ವಿಶ್ವನಾಥನೆಂಬ ಬಾಲಕನ ಪುನರ್ಜನ್ಮ ಪ್ರಕರಣ ಬಗೆಗೆ ಈಚೆಗೆ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ. ರೋಚಕವಾಗಿ, ರಂಜನೀಯವಾಗಿ ನಿರೂಪಿಸಿರುವ ಈ ಲೇಖನಗಳನ್ನು ಓದಿ 'ಪುನರ್ಜನ್ಮ ಇದೆ ಯೆಂಬುದು ಖಚಿತವಾಗಿ ಹೋಯಿತು' ಎಂಬಂತೆ ಜನರು ಚರ್ಚಿಸುತ್ತಿದ್ದಾರೆ.

ಈ ಪ್ರಕರಣ ಕುರಿತ ಪತ್ರಿಕಾ ವರದಿಗಳನ್ನು ನಾನು ಪಂಜಾಬಿನ ಅಮೃತಸರದಲ್ಲಿರುವ ನನ್ನ ಮಿತ್ರನೊಬ್ಬನಿಗೆ ಕಳಿಸಿ ಅದರ ಸತ್ಯಾಸತ್ಯತೆಯನ್ನು ಶೋಧಿಸಲು ಕೇಳಿಕೊಂಡೆ. ಬಾಲಕ ವಿಶ್ವನಾಥ ಪಂಜಾಬಿನ ಕಲ್ಯಾಣಪುರವೆಂಬ ನಗರದಲ್ಲಿ ಡಿ.ಸಿ. ಯಾಗಿದ್ದುದಾಗಿ ಹೇಳಿಕೊಂಡಿದ್ದಾನೆ. ಆದರೆ ನನ್ನ ಮಿತ್ರನ ವರದಿಯ ಪ್ರಕಾರ ಪಂಜಾಬಿನಲ್ಲಿ ಕಲ್ಯಾಣಪುರವೆಂಬ ಜಿಲ್ಲಾ ಕೇಂದ್ರವೇ ಇಲ್ಲ. ಅಷ್ಟೇ ಅಲ್ಲ, ಆ ಹೆಸರಿನ ಯಾವ ಗ್ರಾಮವೂ ಪಂಜಾಬಿನಲ್ಲಿಲ್ಲ. ಅಳ್ಳಂಪುರ ಗ್ರಾಮದಲ್ಲಿ ತನ್ನ ವಾಸದ ಬಂಗಲೆಯಿದ್ದುದಾಗಿ ವಿಶ್ವನಾಥ ಹೇಳಿಕೊಂಡಿದ್ದಾನೆ. ಆದರೆ, ಅಳ್ಳಂಪುರವೆಂಬ ಗ್ರಾಮವೂ ಪಂಜಾಬಿನಲ್ಲಿಲ್ಲ. ವಿಶ್ವನಾಥ ಹೇಳಿದ ಊರುಗಳೇ ಅಸ್ತಿತ್ವದಲ್ಲಿಲ್ಲ. ಇನ್ನು ಉಳಿದ ಸಂಗತಿಗಳನ್ನು ಶೋಧಿಸುವುದಾದರೂ ಹೇಗೆ ! ವಿಶ್ವನಾಥ ಹೇಳಿದ್ದೆಲ್ಲಾ ಸುಳ್ಳಿನ ಕಂತೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಬಾಲಕ ವಿಶ್ವನಾಥ ತನ್ನ ಹಿಂದಿನ ಜನ್ಮದ ಪತ್ನಿಯರ ಮತ್ತು ಮಕ್ಕಳ ಹೆಸರು ಹಾಗೂ ವಿವರಗಳನ್ನು ನೀಡುತ್ತಾನೆ. ಆದರೆ ಅವನಿಗೆ ತನ್ನ ಹೆಸರೇ ನೆನಪಿಲ್ಲವಂತೆ!

ವಿಶ್ವನಾಥನ ಇಂಥ ವರ್ತನೆಗೆ ಕಾರಣ ವಾದರೂ ಏನು? ವಿಶ್ವನಾಥನ ತಂದೆ ತಾಯಿ ಹಾಗು ತಾತಂದಿರೂ ಪುನರ್ಜನ್ಮದ ಬಗ್ಗೆ ನಂಬಿಕೆ ಇಟ್ಟುಕೊಂಡವರಾಗಿದ್ದು ಈ ಬಾಲಕನ ಮುಂದೆ ನಡೆಸಿರಬಹುದಾದ ಚರ್ಚೆ ಇದೆಲ್ಲಕ್ಕೂ ಕಾರಣ ವಾಗಿರಬಹುದು. ವಿಶ್ವನಾಥ ಪೂರ್ವಜನ್ಮದಲ್ಲಿ ಉನ್ನತ ಅಧಿಕಾರಿಯಾಗಿದ್ದುದಾಗಿ ಭ್ರಮಿಸಿ ಏನೇ ನೋ ಮಾತನಾಡಿದ್ದಾನೆ. ಅಷ್ಟಕ್ಕೂ, ವಿಶ್ವನಾಥ ಹೀ ಗೆಲ್ಲಾ ಮಾತನಾಡಿದ್ದಾನೆ ಅಂತ ಹೇಳಿದ್ದು ಅವನ ಅಪ್ಪ, ಅಮ್ಮಂದಿರೇ ಹೊರತು ವಿಶ್ವನಾಥನೇ ಪತ್ರ ಕರ್ತರೆದುರು ನಂಬಲರ್ಹವಾಗುವಂತೆ ವರ್ತಿಸಿಲ್ಲ.

ಬಾಲ್ಯದಲ್ಲಿ ನನಗೊಬ್ಬ ಸ್ನೇಹಿತನಿದ್ದ. ಅವನು ನೆಹರೂ ಮರಣ ಹೊಂದಿದ ದಿನವೇ ಹುಟ್ಟಿದ್ದ. ಅವನ ತಂದೆ ತಾಯಿ ಈ ಬಗ್ಗೆ ಹೇಳುತ್ತಿದ್ದರು. ಆದ್ದರಿಂದ ತಾನು ನೆಹರೂವಿನ ಪುನರ್ಜನ್ಮವೆಂದೇ ಅವನು ಭ್ರಮಿಸಿಬಿಟ್ಟ. ತನ್ನ ಮಗಳು ಇಂದಿರಾ ಗಾಂಧಿ ಅಂತ ಹೇಳಿಕೊಂಡು ನೆಹರೂ ರೀತಿ ವರ್ತಿಸಲು ಯತ್ನಿಸುತ್ತಿದ್ದ. ಈ ಬಗೆಯ ಪ್ರಕರಣಗಳು ಪುನರ್ಜನ್ಮ ಕುರಿತ ಮೂಢನಂಬಿಕೆ ಗಳಿಂದ ಸೃಷ್ಟಿಯಾಗುತ್ತದೆಯೇ ವಿನಹ ಅವುಗಳಲ್ಲಿ ಸತ್ಯಾಂಶವಿರುವುದಿಲ್ಲ.

ಹಿಪ್ನಾಟಿಸಂನಲ್ಲೂ ಇಂಥ ಅನುಭವಗಳಾಗು ವುದುಂಟು. ವ್ಯಕ್ತಿಯೊಬ್ಬನನ್ನು ಸಮ್ಮೋಹನಕ್ಕೊಳ ಪಡಿಸಿ, ಗತಜೀವನದ ನೆನಪುಗಳನ್ನು ಕೆದಕುತ್ತಾ ಅವನು ಹುಟ್ಟಿದ ದಿನಾಂಕದಿಂದ ಹಿಂದಿನ ನೆನಪುಗಳ ಕುರಿತು ಕೇಳಿದಾಗ ಏನೇನೋ ಹೇಳಬಹುದು. ಉದಾಹರಣೆಗೆ ಧಾರವಾಡದಲ್ಲಿ ಅಧ್ಯಾಪಕನಾಗಿದ್ದೆ, ಜಮಖಂಡಿಯಲ್ಲಿ ರಿಕ್ಷಾ ಓಡಿಸುತ್ತಿದ್ದೆ, ಬೆಳಗಾವಿಯಲ್ಲಿ ತಹಶೀಲ್ದಾರ ನಾಗಿದ್ದೆ ಅಂತೆಲ್ಲಾ ವಿವಿಧ ವ್ಯಕ್ತಿಗಳು ಹೇಳಿರುವ ಉದಾಹರಣೆಗಳಿವೆ. ಆದರೆ ಅವುಗಳನ್ನು ಪರೀಕ್ಷಿಸಿ ದಾಗ ಅವೆಲ್ಲಾ ಸುಳ್ಳು ಎಂದು ಸಾಬೀತಾಗಿದೆ. ಹಿಪ್ನಾಟಿಸ್ಟ್‌ಗಳು ಈ ಬಗೆಯ 'ಶೂನ್ಯದ ನೆನಪು' ಗಳನ್ನು ಪರಿಗಣಿಸುವುದೇ ಇಲ್ಲ.

ವೈಜ್ಞಾನಿಕವಾಗಿ ಪುನರ್ಜನ್ಮ ಸಾಧ್ಯವೇ ಇಲ್ಲದ ಸಂಗತಿಯಾಗಿದೆ. ದೇಹದೊಂದಿಗೆ ಮೆದುಳಿನ ಜೀವಕೋಶಗಳಲ್ಲಿ ಸಂಗ್ರಹಗೊಂಡ ನೆನಪಿನ ದಾಖಲೆಗಳೂ ನಾಶವಾಗುತ್ತವೆ. 'ದೇಹವಿಲ್ಲದೆ ಯೂ ಆತ್ಮಕ್ಕೆ ಅಸ್ತಿತ್ವವಿದೆ ಅದು ಮತ್ತೆ ಮತ್ತೆ ಪುನರ್ಜನ್ಮ ಹೊಂದುತ್ತದೆ' ಎಂದು ಅನಾದಿ ಕಾಲದಿಂದಲೂ ಮನುಷ್ಯ ನಂಬಬಯಸಿದ್ದಾನೆ. ಅದಕ್ಕಾಗಿ ಸಾಕ್ಷಿ, ಪುರಾವೆಗಳನ್ನು ಹುಡುಕುತ್ತಲೇ ಇದ್ದಾನೆ. ಆದರೆ ವಾಸ್ತವವು ಮನುಷ್ಯನ ನಂಬಿಕೆಗೆ, ಹಂಬಲಕ್ಕೆ ವ್ಯತಿರಿಕ್ತವಾಗಿದೆ.

– ಎಸ್.ಎಂ. ಶಶಿಧರ

ಈ ಪ್ರಶ್ನೆಗಳಿಗೆ ಉತ್ತರಿಸಿ

ಡಾ|| ಅಬ್ರಹಾಂ ಕೋವೂರ ಅವರ ಅಭಿಪ್ರಾಯಗಳಿಗೆ ಪ್ರತಿಕ್ರಿಯೆಯಾಗಿ ಈ ಕೆಳಗಿನ ಪ್ರಶ್ನೆಗಳು ಉದ್ಭವಿಸುತ್ತದೆ.

ಮೊಂಬತ್ತಿಯನ್ನು ಪುನಃ ಹೊತ್ತಿಸಬಹುದು ಆದರೆ ಸತ್ತ ಮನುಷ್ಯನ ಜೀವ ಮರಳೀತೆ? ಅಂತಹ ಅತ್ಯಾಧುನಿಕ ತಂತ್ರ ಇನ್ನು ವಿಕಸಿತಗೊಂಡಿಲ್ಲ. ನಮ್ಮ ರಕ್ಷಣಾದಳ ವಾಯು ವಿಭಾಗದಲ್ಲಿ ಸೈನಿಕ ತುಕಡಿಗಳು ದಾಟಿದ 2 ಗಂಟೆಗಳ ನಂತರವು ಆ ಸ್ಥಳದ ವಿಶಿಷ್ಟ ಛಾಯಾಚಿತ್ರ ತೆಗೆದಾಗ ಅದರಲ್ಲಿ ಅಲ್ಲಿ ದಾಟಿದ ಸೈನಿಕ ತುಕಡಿಗಳ ವಿವರ ಸಿಗುತ್ತದೆ. ಇದು ಸಿಗಬೇಕಾದರೆ ಸತ್ತ ನಂತರ ಮನುಷ್ಯನ ಆಲೋಚನೆಗಳು ಉಳಿಯಲಾರವೇ?

ನರ ಅಂಗಾಂಶಗಳಿಲ್ಲದ ಜೀವಿಗಳಿಲ್ಲವೆ? ಉದಾ: ಏಕ ಕೋಶ ಜೀವಿಗಳು. ಇನ್ನು ಬುದ್ಧನ ಕರ್ಮ ಸಿದ್ದಾಂತ ಆಧಾರಿತ ಧ್ಯಾನ ಪದ್ಧತಿಯು ಇನ್ನು ಜೀವಂತವಿರುವಾಗ ಬುದ್ಧನು ಅನಾತ್ಮ ಸಂದೇಶ ಸಾರಿದ ಎಂದು ಹೇಳುವುದು ಅಪ್ರ ಬುದ್ಧವಲ್ಲವೆ?

ಪ್ರಜ್ಞಾವಂತನನ್ನು ಬಿಟ್ಟು ಪ್ರಜ್ಞೆ ಉಳಿಯಲು ಸಾಧ್ಯವೆ? ಹಾಗಿದ್ದರೆ ಪ್ರಜ್ಞೆ ಹುಟ್ಟುವುದಕ್ಕೆ ಮುಂಚೆ ಎಲ್ಲಿತ್ತು? ಮಲಗುವಾಗ ಎಲ್ಲಿ ಇರು ತ್ತದೆ ? ಶಸ್ತ್ರಕ್ರಿಯೆಗಾಗಿ ಅರವಳಿಕೆ ನೀಡಿದಾಗ ಎಲ್ಲಿ ಇರುತ್ತದೆ? ಕೀರ್ತಿನಾಥ ಕುರ್ತಕೋಟಿಯ ವರ ಅನುಭವ ಏನನ್ನು ಹೇಳುತ್ತದೆ?

■ ಸುರೇಶ ವಿ. ತನ್ನಳ್ಳಿ, ಗೋವಾ

ಜಾಣತನದ ಸಿಖಾಮಣಿ

ನಮ್ಮ ತರಗತಿಯಲ್ಲಿ ಒಮ್ಮೆ ಎಲ್ಲಾ ವಿದ್ಯಾರ್ಥಿಗಳು ಖುಷಿಯಲ್ಲಿದ್ದರು. ಆಗ ಪ್ರಿನ್ಸಿಪಾಲರು ಬಂದು ಬೈದು ಬುದ್ಧಿ ಹೇಳಿದರೂ ಸಾರ್ಥಕವಾಗಲಿಲ್ಲ. ಆಗ ಇನ್ನೊಬ್ಬ ಕಾಲೇಜ್ ಉಪನ್ಯಾಸಕರು ಬಂದು ತರಗತಿಯಲ್ಲಿ ಒಂದು ಜಾಣತನವನ್ನು ತೋರಿಸಿದರು. ಆಗ ಬೆಂಕಿಪೆಟ್ಟಿಗೆಯಲ್ಲಿನ ಕಡ್ಡಿಗಳನ್ನು ಒಬ್ಬೊಬ್ಬರಿಗೆ ತಲಾ ಎರಡು ಕೊಟ್ಟರು. ಇವುಗಳಿಂದ ನಾಳೆ 'ಟೀ' ಮಾಡಿ ಕೊಂಡು ಬನ್ನಿ ಎಂದರು. ಮಾರನೆ ದಿನ ತರಗತಿಯಲ್ಲಿ ಬಂದು ಹುಡುಗರಿಗೆ ನಿನ್ನೆ ಹೇಳಿದ ವಿಷಯ ಕೇಳಿದರು. ಆಗ ಎಲ್ಲಾ ವಿದ್ಯಾರ್ಥಿಗಳು ಕಾಫಿ, ಟೀ, ಬೂಸ್ಟ್, ಹಾಲು ಮುಂತಾದವುಗಳನ್ನು ತಂದು ಉಪನ್ಯಾಸಕರಿಗೆ ಕುಡಿಯಲು ಕೊಟ್ಟರು. ಅವರು ತಂದಿದ್ದನ್ನು ಉಪನ್ಯಾಸಕರು ಸ್ವಲ್ಪ-ಸ್ವಲ್ಪ ಕುಡಿದರು. ಅದರಲ್ಲಿ ಒಬ್ಬ ಹುಡುಗ 'ಸಿಖಾಮಣಿ' ಎನ್ನುವವನು ಮಾತ್ರ ತಂದಿರಲಿಲ್ಲ. ಆಗ ಆ ಹುಡುಗನನ್ನು ಕೇಳಿದರು. ಸಿಖಾಮಣಿ ಎರಡು ಕಡ್ಡಿಗಳಿಂದ ಇಂಗ್ಲೀಷ್ 'ಟೀ' ಯನ್ನು ಮಾಡಿ ತೋರಿಸಿದ. ಅವನ ಜಾಣತನವನ್ನು ಕಾಲೇಜ್ ಉಪನ್ಯಾಸಕರು ಕೊಂಡಾಡಿದರು.

- ಬ. ದೊಡ್ಡ ಮಾರಣ್ಣ, ಸೋಮಲಾಪುರ

ನೋಡ್ಕೊಂಡು ಹೋಗಿ!



ನಾನು ಎಂ.ಎಸ್.ಸಿ ಮೊದಲನೇ ವರ್ಷದ ವಿದ್ಯಾರ್ಥಿನಿ. ಒಮ್ಮೆ ತಮಾಷೆಯಾಗಿ ನನ್ನ ಗೆಳತಿಯೊಂದಿಗೆ ಹರಟುತ್ತ ಕಾಲೇಜಿನ ಮೆಟ್ಟಿಲನ್ನು ಹತ್ತುತ್ತಿದ್ದೆ. ನನಗೆ ಎದುರಾಗಿ ಕೆಲವು ಹುಡುಗರು ಬರುತ್ತಿದ್ದರು. ನಾನು ನನ್ನಷ್ಟಕ್ಕೆ ನಡೆಯುತ್ತಿದ್ದೆ. ಅವರಲ್ಲೊಬ್ಬ ಹುಡುಗ ನನಗೆ ಬೇಕಂತಲೇ 'ಡಿಕ್ಕಿ' ಹೊಡೆದ. ತಕ್ಷಣ ಕೋಪದಿಂದ 'ಏನ್ರೀ ಸ್ವಲ್ಪ ನೋಡ್ಕೊಂಡು ಹೋಗಿ' ಅಂದೆ. ಅದಕ್ಕೆ ಅವನು 'ಹೌದುರ್‍ರೀ, ನಾನು ನಿಮ್ಮನ್ನು ನೋಡ್ದೆ, ನೋಡಿದ್ದು ನಿಮಗೆ ಗೊತ್ತಾಗಲಿ ಅಂತಾ ಡಿಕ್ಕಿ ಹೊಡೆದದ್ದು'' ಎನ್ನಬೇಕೆ, ನನಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ.

-ಬಿಂದು ಸಿ.ಆರ್. ಕೋಲಾರ

ಮರಾಠಿಯ 'ಹಗು'

ನಮ್ಮ ವಿದ್ಯಾಲಯದಲ್ಲಿ ಕೆಲಸ ಮಾಡುವ ಇಂಗ್ಲೀಷ್ ಉಪನ್ಯಾಸಕರು ಸೊಲ್ಲಾಪುರದ ಒಂದು ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿರುವಾಗ ನಡೆದ ಘಟನೆ ಇದು. ಒಂದು ದಿನ ಆ ಮಹಾವಿದ್ಯಾಲಯದಲ್ಲಿ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮ ನಡೆದಿತ್ತು. ಅತಿಥಿಗಳು, ಅಧ್ಯಕ್ಷರು ಹಾಗು ವಿದ್ಯಾಲಯದ ಎಲ್ಲ ಪ್ರಮುಖರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಮಾರಂಭದ ಮುಖ್ಯ ಅತಿಥಿಗಳನ್ನು ಹಾಗು ಅಧ್ಯಕ್ಷರನ್ನು ನಮ್ಮ ವಿದ್ಯಾರ್ಥಿಮಿತ್ರರೊಬ್ಬರು ಅತಿ ಹೆಮ್ಮೆಯಿಂದ ಪರಿಚಯವನ್ನು ಕನ್ನಡದಲ್ಲಿ ಮಾಡಿ ಕೊಡುತ್ತಿದ್ದರು. ಅವರು ಮಾತನಾಡುವಾಗ ಹಾಗೂ ಎಂಬ ಪದವನ್ನು ಅನೇಕ ಬಾರಿ ಬಳಸುತ್ತಿದ್ದರು. ಆಗ ಇಂಗ್ಲೀಷ್ ವಿಷಯದ ಮುಖ್ಯಸ್ಥರು ಒಂದೇ ಸಮನೇ ಮುಖ ಕಿವುಚುತ್ತಿದ್ದರು. ಕಾರ್ಯಕ್ರಮ ಮುಗಿದ ನಂತರ ಇಂಗ್ಲೀಷ್ ವಿಷಯದ ಮುಖ್ಯಸ್ಥರು ಕನ್ನಡದಲ್ಲಿ ಪರಿಚಯ ಭಾಷಣ ಮಾಡಿದ ಆ ವಿದ್ಯಾರ್ಥಿಯನ್ನು ತಮ್ಮ ಕೋಣೆಗೆ ಕರೆದು ಹಿಗ್ಗಾಮುಗ್ಗಾ ಬೈದುದಲ್ಲದೇ ಕೆನ್ನೆಗೆ ಬಾರಿಸಿದರಂತೆ. ಚೆನ್ನಾಗಿ ಕಾರ್ಯಕ್ರಮ ನಡೆಯುತ್ತಿದ್ದಾಗ ನೀನು ಹಾಗು ಎಂಬ ಪದವನ್ನು ಮೇಲಿಂದ ಮೇಲೆ ಬಳಸಿ ಕಾರ್ಯಕ್ರಮದ ಬಗ್ಗೆ ಹೇಸಿಗೆ ಬರುವಂತೆ ಮಾಡಿದೆ ಎಂದರಂತೆ. ಮುಂದೆ ಆ ಎಲ್ಲ ವಿದ್ಯಾರ್ಥಿಗಳು ಕೂಡಿ ಆ ಮುಖ್ಯಸ್ಥರನ್ನು ತರಾಟೆಗೆ ತೆಗೆದುಕೊಂಡಾಗ ಅವರು ನಮ್ಮ

ಎಂಬ್ರಿಯೋ ಎಲ್ಲಿ?



ವಿಜಾಪುರ ಮೆಡಿಕಲ್ ಕಾಲೇಜ್‌ನಲ್ಲಿ ನಡೆದ ಘಟನೆ. ಅದೇ ತರಗತಿಯಲ್ಲಿ ಓದುತ್ತಿದ್ದ ಹುಡುಗಿಯೊಬ್ಬಳು ತನ್ನ ಎಂಬ್ರಿಯಾಲಜಿ'' (ಭ್ರೂಣ ಶಾಸ್ತ್ರ) ಪುಸ್ತಕವನ್ನು ಟೇಬಲ್ ಮೇಲಿಟ್ಟು ಟೀ ಕುಡಿಯಲು ಹೊರಗೆ ಹೋದಳು. ಕಿಡಿಗೇಡಿ ಸಹಪಾಠಿಯೊಬ್ಬ ಆ ಪುಸ್ತಕವನ್ನು ಟೇಬಲ್ ಕೆಳಗಡೆ ಬಚ್ಚಿಟ್ಟ. ಟೀ ಕುಡಿದು ಬಂದ ಹುಡುಗಿ ಪುಸ್ತಕವನ್ನು ಹುಡುಕುತ್ತಾ ಸಂಕ್ಷಿಪ್ತವಾಗಿ ನನ್ನ 'ಎಂಬ್ರಿಯೋ' ಎಲ್ಲಿ? ಎಂದು ಪ್ರಶ್ನಿಸಿದ್ದೇ ತಡ ಪುಸ್ತಕ ಬಚ್ಚಿಟ್ಟಿದ್ದ ಹುಡುಗ ನಿಮ್ಮ ಎಂಬ್ರಿಯೋ ಕೆಳಗೆಲ್ಲೋ ಬಿದ್ದಿರಬೇಕು ಹುಡುಕಿ ಎಂದು ಬಿಡಬೇಕೆ? ಉಳಿದವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

- ಜಯ ತೀರ್ಥ ಶರ್ಮಾ, ಗುಲ್ಬರ್ಗಾ

ಮಾತ್ರೆಗಳೆಂದರೇನು?



ನಾನು ಆರನೇ ಕ್ಲಾಸು ಓದುತ್ತಿದ್ದಾಗಿನ ಅನುಭವ. ಕನ್ನಡ ವ್ಯಾಕರಣದಲ್ಲಿ ಬರುವ ಮಾತ್ರೆಗಳ ಬಗ್ಗೆ ಕನ್ನಡ ಮಾಸ್ತರರು ತಿಳಿಸಿದ್ರು. ಆದರೆ ನಾನು ಆ ಪಾಠ ಮಾಡಿದ ದಿನ ಕ್ಲಾಸಿಗೆ ಹೋಗಿರಲಿಲ್ಲ. ಮಾರನೇ ದಿನ ಶಾಲೆಗೆ ಹೋದಾಗ ಕನ್ನಡ ಮಾಸ್ತರರು ನಿನ್ನೆ ಪಾಠ ಮಾಡಿದ್ದರ ಬಗ್ಗೆ 'ಮಾತ್ರೆಗಳೆಂದರೇನು'? ಎಂದು ಕೇಳಿದರು. ಎಲ್ಲರೂ ಸುಮ್ಮನಿದ್ದಾಗ ನಾನು ಬುದ್ಧಿವಂತನಂತೆ ''ಅದೇ ಸಾರ್ ಔಷಧದ ಅಂಗಡಿಯಲ್ಲಿ ಸಿಗೋ ಗುಳಿಗೆಗಳು' ಅಂದೆ. ಕ್ಲಾಸಿನಲ್ಲಿದ್ದ ಹುಡುಗರೆಲ್ಲಾ ಗೊಳ್ಳೆಂದು ನಕ್ಕಿದ್ರು. ಆದರೆ ಮಾಸ್ತರು ನನಗೆ ಎರಡು ಬಾರಿಸಿದ್ರು.

-ಪಿ.ಬಿ. ಕುಮಾರ
ಮುದ್ದೇಬಿಹಾಳ

ಕನ್ನಡದ 'ಹಾಗೂ' ಅರ್ಥವನ್ನು ಮರಾಠಿಯಲ್ಲಿ 'ಹಗು' (ಕಕ್ಕಸಮಾಡು) ಎಂದು ಅರ್ಥೈಸಿರುವದು ಗೊತ್ತಾಗಿ ಅವರಿಗೆ ಕನ್ನಡದ ಹಾಗುವಿನ ಅರ್ಥ ಹೇಳಿದಾಗ ಅವರ ಮುಖ ಇಂಗು ತಿಂದ ಮಂಗನಂತಾಗಿತ್ತಂತೆ.

-ಸುಭಾಸಗೌಡ ಎಸ್. ಪಾಟೀಲ್
ಬಿಜಾಪುರ

ಊಟ ಚೆನ್ನಾಗಿದೆಯಾ?

ನಮ್ಮ ಶಾಲೆಯಿಂದ N.C.C. ಕ್ಯಾಂಪ್‌ಗೆ ಹೋಗಿದ್ದೆವು. ನಮ್ಮ ಕ್ಯಾಂಪ್ ಕಮಾಂಡರ್ ಇನ್ ಚೀಫ್‌ರವರಿಗೆ ಕನ್ನಡ ಬರುವುದಿಲ್ಲ ಅಂತ ನಮಗೆಲ್ಲ ತಿಳಿದಿತ್ತು. ನಾವೆಲ್ಲ ಬೇರೆ ಬೇರೆ ರಾಜ್ಯದಿಂದ ರಾಷ್ಟ್ರೀಯ ಭಾವೈಕ್ಯತೆ ಕ್ಯಾಂಪ್‌ಗೆ ಹೋಗಿದ್ದೆವು. ಅಲ್ಲಿನ ಊಟ ವ್ಯವಸ್ಥೆ ಸರಿಯಾಗಿರಲಿಲ್ಲ. ನಾವು ಬೇರೆ ಟ್ರಕ್ಕಿಂಗ್ ಮಾಡಿಕೊಂಡು ಹಸಿವಿನಿಂದ ಬೇಸ್ ಕ್ಯಾಂಪ್‌ಗೆ ಬಂದರೆ ಕಳಪೆ ಊಟ ನಮ್ಮನ್ನು ಸ್ವಾಗತಿಸುತ್ತಿತ್ತು. ದಿನಾ ನಮಗೆ ಹರಟೆ ಹೊಡೆಯಲು ಒಳ್ಳೆಯ ಕಾರಣ ಸಿಗುತ್ತಿತ್ತು. ಹಾಗೇ ಒಂದು ದಿನ ನಾವೆಲ್ಲ ಊಟ ಮಾಡುತ್ತಾ ಹರಟೆ ಹೊಡೆಯುತ್ತಾ ಸಿ.ಓ ಬಗ್ಗೆ ಬಾಯಿಗೆ ಬಂದ ಹಾಗೆ ಕಾಮೆಂಟ್ಸ್ ಮಾಡಲು ಶುರುಮಾಡಿದೆವು. ನಾನೇ ಕ್ಯಾಂಪ್ ಲೀಡರ್ ಆಗಿದ್ದರಿಂದ ಅಲ್ಲಿಯೂ ನನ್ನ ಧ್ವನಿಯೇ ಮೇಲುಗೈ ಸಾಧಿಸಿತ್ತು. ಆದರೆ ಸಿ.ಓ ನನ್ನ ಹಿಂದೆಯೇ ಇದ್ದಾರೆ ಅನ್ನುವುದು ನನಗೆ ತಿಳಿದಿರಲಿಲ್ಲ. ನಾನು ಇದ್ದಕ್ಕಿದ್ದ ಹಾಗೆ ಅವರನ್ನು ನೋಡಿ ಗಾಬರಿ ಆಗಿ ತೊದಲಲು ಶುರುಮಾಡಿದೆ. ಏಕೆಂದರೆ ಅವರು ನನ್ನನ್ನು ನೋಡಿ 'ಊಟ ಚೆನ್ನಾಗಿದೆಯಾ' ಅಂತ ಕೇಳಿಬಿಟ್ಟರು. ಆಮೇಲೆ ನಮಗೆ ತಿಳಿಯಿತು ಅವರಿಗೆ ಬರುವುದೇ ಅದೊಂದೇ ಕನ್ನಡ ವಾಕ್ಯವೆಂದು. ನಾನು ನನ್ನ ಗೆಳತಿಯರಿಗೆ ಹೇಳಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದೇ ನಕ್ಕಿದ್ದು.

-ಡಿ.ಎಂ. ಶುಭ, ಚಿತ್ರದುರ್ಗ

93 ಕೋಟಿಗೆ ಒಂದು ಕಡಿಮೆ

ನಾನು ಪಿ.ಯು.ಸಿ ಮೊದಲನೇ ವರ್ಷ. ನಮ್ಮ ಲೆಕ್ಚರ್, ಕಾಲೇಜಿಗೆ ಬಂದು ಒಂದು ಪ್ರಶ್ನೆ ಕೇಳಿದರು. 'ಈಗ ನಮ್ಮ ಭಾರತದ ಜನಸಂಖ್ಯೆ, ಎಷ್ಟು ಎಂದು?, ನನ್ನ ಬಲಕ್ಕೆ ಇದ್ದ ಎರ್ರಿಸ್ವಾಮಿ ೯೩ ಕೋಟಿ ಎಂದನು. ಆಗ ನಾನು 'ಸರ್ ತಪ್ಪು ಸರ್' ನಿನ್ನೇನೆ ಇವರ ತಾತಾ ಸತ್ತು ಹೋದರು ಈಗ ೯೩ ಕೋಟಿಗೆ ೧ ಕಡಿಮೆ ಎಂದೆ.

-ಜಿ.ಎಸ್. ಮಹೆಬೂಬ, ಕುರುಗೋಡು

ರೂಪಾಯಿ ಕಳೆದ ಕಥೆ



ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ನಡೆದ ಘಟನೆ. ಒಂದು ದಿನ ಕ್ಲಾಸ್ ಆರಂಭವಾದ ಅರ್ಧ ಘಂಟೆಯ ಮೇಲೆ ರಾಜು, ಸುರೇಶ ಮತ್ತು ರಂಗ ಬಂದರು. ಇವರನ್ನು ನೋಡಿ ''ಯಾಕ್ರೋ, ಇಷ್ಟುತಡ'' ಅಂತಾ ಮೇಷ್ಟು ವಿಚಾರಿಸಿದರು.

ರಾಜು ಹೇಳ ಲಾರಂಭಿಸಿದ. ''ನಂದು ೧ ರೂಪಾಯಿ ನಾಣ್ಯ ಕಳೆದು ಹೋಗಿತ್ತು ಸಾರ್.''

ಸುರೇಶ ಮುಂದು ವರೆಸಿದ ''ಆ ನಾಣ್ಯದ ಮೇಲೆ ರಂಗ ಕಾಲಿಟ್ಟಿದ್ದ ಸಾರ್'' ಹಾಗಾಗಿ ಎಷ್ಟು ಹುಡುಕಿದ್ರೂ ಸಿಗಲಿಲ್ಲ.

ಮೇಷ್ಟ್ರಿಗೆ ಸಿಟ್ಟು ಬಂದು ''ಅಲ್ಲೋ ಸುರೇಶ, ೧ ರೂಪಾಯಿ ಕಳೆದದ್ದು 'ರಾಜು' ವಿನದು. ಅದರ ಮೇಲೆ ಕಾಲಿಟ್ಟದ್ದು 'ರಂಗ', ಮತ್ತೆ ನೀನೇನು ಮಾಡ್ತಿದ್ದೆ? ''ರಂಗ ಯಾವಾಗ ಕಾಲು ತೆಗೀತಾನೇ ಅಂತಾ ಕಾಯ್ತಿದ್ದೆ, ಅದನ್ನು ಕಿತ್ತುಕೊಳ್ಳೋಣಾಂತ'' ಅಷ್ಟರಲ್ಲಿ ಸ್ಕೂಟರ್ ಬಂತು ರಂಗ ಕಾಲು ತೆಗೆದ ರಾಜುಗೆ ಹಣ ಸಿಕ್ತು, 'ನಾನು ಮಾತ್ರ ಬರೀ ಕಾದದ್ದೇ ಬಂತು' ಅಂದ. ತರಗತಿ ನಗುವಿನಲ್ಲಿ ಮುಳುಗಿತು.

-ಎ. ಎಚ್. ನಿರಂಜನ ಕುಮಾರ, ಧಾರವಾಡ

■ ಕೋ. ಚೆನ್ನಬಸಪ್ಪ

ನಿವೃತ್ತ ನ್ಯಾಯಾಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ,
ಬೆಂಗಳೂರು - 86.



ಸ್ವಾತಂತ್ರ್ಯ ಸುವರ್ಣೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಚಿತ್ರಣದ ಹಿನ್ನೆಲೆಯಲ್ಲಿ, ಸ್ವತಃ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಪರಿಪಕ್ವ ಅನುಭವದ ಹಿರಿಯ ಸಾಹಿತಿ ಕೋ ಚೆನ್ನಬಸಪ್ಪನವರು ರಚಿಸುತ್ತಿರುವ ಕಾದಂಬರಿ (ಇನ್ನೂ ಹೆಸರಿಟ್ಟಿಲ್ಲ)ಯಲ್ಲಿ ಸೈಮನ್ ಕಮಿಷನ್ ಪ್ರತಿಭಟನೆಗಾಗಿ, ಕರ್ನಾಟಕದಿಂದ ಮುಂಬಯಿಗೆ ಹೊರಟಿದ್ದ ಸತ್ಯಾಗ್ರಹಿಗಳ ಒಂದು ತಂಡದಲ್ಲಿ ಜರುಗಿದ ಒಂದು ಘಟನೆಯ ಕಥೆ ಇಲ್ಲಿದೆ.

ಜಾತಿ ಎತ್ತೋ ಜನರ ಬಾಯಿಗೆ.....!

ಸ್ವಾಮೀಜಿ, ವಿರೂಪಾಕ್ಷಿಯ ಬೆನ್ನು ಚಪ್ಪರಿಸಿ ಮೆಚ್ಚುಗೆಯ ದನಿಯಿಂದ 'ಈಗ ತಿಳಿಯದಿದ್ರು ಮುಂದೆ ತಿಳಿದೀತು. ಆ ಕಣ್ಣಿಗೆ ಕಾಣದ ಶಕ್ತಿ ಯಾವುದು ಅಂತ.' ಕೊಟ್ರಪ್ಪನ ಕಡೆ ತಿರುಗಿ.

''ತುಂಬ ಹುಷಾರಿ ಅದಾನೆ, ಚೆನ್ನಾಗಿ ಓದಿಸು, 'ನಹಿ ಜ್ಞಾನೇನ ಸದೃಶಂ''

ವಿರೂಪಾಕ್ಷ ಮಣಿದು ಹಿಂದೆ ಸರಿದು ನಿಂತ ಮೇಲೆ ಒಬ್ಬ ಹೆಣ್ಣುಮಗಳು ಮುಂದೆ ಬಂದು ಸ್ವಾಮೀಜಿಗೆ ನಮಸ್ಕರಿಸಿ ಎದ್ದು ನಿಂತು ಹಿಂದೆ ಸರಿದಳು. ಕೊಟ್ರಪ್ಪ, ಸ್ವಾಮಿಗಳತ್ತ ತಿರುಗಿ.

'ಈ ತಾಯೀನೆ ಇವನನ್ನು ಚಿಕ್ಕಂದಿನಲ್ಲಿ ಹಾಲುಣಿಸಿ ಸಾಕಿದಳು. ಇವನು ಎಲ್ಲಿಗಾದರೂ ಊರಿಗೆ ಹೋದ್ರೆ ಈ ತಾಯೀನೂ ಜೊತೆಗೆ ಬರ್ತಾಳೆ.' ಈಕೆ ಗೊಲ್ಲರ ಮಾಳವ್ವ, ಅಂದು ಕೊಟ್ರಪ್ಪ - ಸಿದ್ದವ್ವ ವಿರೂಪಾಕ್ಷಿಯನ್ನು ಹಂಪಿಯಿಂದ ಎತ್ತಿಕೊಂಡು ಹೋದ ದಿನವೆ ಮಾಳವ್ವ ಒಂದು ಗಂಡು ಮಗು ಹೆತ್ತಿದ್ದಳು. ಅದು ಮರುದಿನವೇ ತೀರಿಹೋಗಿತ್ತು. ಎದೆತುಂಬ ಹಾಲಿದ್ದ ಈಕೆಗೆ ಎದೆ ಬಿಗಿದು ಸಹಿಸಲಾರದ ನೋವಾಗಿತ್ತು. ಎದೆಯ ಹಾಲು ಹೊರಹಾಕದಿದ್ದರೆ ಉಬ್ಬಿದ ಎದೆ ಒಡೆದೇ ಹೋಗುವಷ್ಟು ಯಾತನೆ ಆಗುತ್ತಿತ್ತು. ಅತ್ತ ಸಿದ್ದವ್ವನ ಎದೆಯಲ್ಲಿ ಹಾಲಿಲ್ಲದೆ ಮಗು ಕಿರುಚಿಕೊಳ್ಳುತ್ತಿತ್ತು

ಹಳ್ಳಿಯಲ್ಲಿ ನೆರಮನೆಯ ಅಜ್ಜಿ.

'ಮಾಳವ್ವ ಬಾಣಂತಿ ಕೂಸು ತೀರಿ ಎದೆ ಹಾಲು ಚಿಮ್ಮುತ್ತಿದೆ. ಈ ಕೂಸನ್ನ ಆಕೆ ಎದೆಗೆ ಹಾಕ್ರಿ. ಆಕೆಗೂ ನೋವು ಕಮ್ಮಿ ಆಗ್ತದೆ,

ಈ ಮಗುವಿಗೂ ಹೊಟ್ಟೆ ತುಂಬುತ್ತೆತೆ...' ಎಂದು ಸೂಚಿಸಿದ್ದಳು.

ಅಂದಿನಿಂದ ವಿರೂಪಾಕ್ಷಿ ಮಾಳವ್ವನ ಎದೆಹಾಲು ಕುಡಿದು ಬೆಳೆದಿದ್ದ. ಆಕೆ ಆ ಹಾಲಿನ ಜೊತೆಗೆ ತನ್ನ ಪ್ರೀತಿಯನ್ನು ಮಗುವಿಗೆ ಕುಡಿಸಿದ್ದಳು. ತಿಂದದ್ದನ್ನೇ ತೇಗುವಂತೆ ವಿರೂಪಾಕ್ಷ ಮಾಳವ್ವನಿಗೆ ಪ್ರೀತಿಯನ್ನೇ ತಿರುಗಿ ಕೊಡುತ್ತಿದ್ದ. ಅವನಿಗೆ ಸಿದ್ದವ್ವ ಹಡೆದ ತಾಯಿ, ಮಾಳವ್ವ ಸಾಕಿದ ತಾಯಿ. ಈ ಎಂಟೊಂಬತ್ತು ವರ್ಷ ಕೊಟ್ರಪ್ಪನ ಮನೆಯಲ್ಲಿ ಯಾವ ಹಬ್ಬವಾಗಲಿ, ಶುಭಕಾರ್ಯವಾಗಲಿ ಮಾಳವ್ವ ಬಂದೇ ಬರಬೇಕು. ಮನೆಯ ಮಗಳೆಂಬಂತೆ ಆಕೆಗೆ ಸೀರೆ ಉಡಿಸಿ, ಉಡಿ ತುಂಬಿ ಕಳಿಸಿಕೊಡಬೇಕು, ಇದನ್ನು ನೋಡಿದವರು;

'ಮಾಳವ್ವ ಹಿಂದಿನ ಜನ್ಮದಲ್ಲಿ ಕೊಟ್ರಪ್ಪ ಸಿದ್ದವ್ವಳ ಮಗಳಾಗಿದ್ದಿರಬೇಕು, ಈ ಜನ್ಮದಲ್ಲಿ ಬ್ಯಾರೆ ಕುಲದಲ್ಲಿ ಹುಟ್ಟಿದ್ದಾಳೆ...'

ಈ ಮಾತು ಕೇಳಿದಾಗ ಕೊಟ್ರಪ್ಪ, 'ಈ ಕುಲ ಜಾತಿ ಯಾಕಬೇಕು.? ಆಕಿಗಾಗಲಿ, ನಮಗಾಗಲಿ ನಾವು ಬ್ಯಾರೆ ಬ್ಯಾರೆ ಜಾತಿ ಅಂಬೋದು ಕನಸಿನಲ್ಲೂ ಬರೋದಿಲ್ಲ. ಆಕೆ ನಮ್ಮನೆಯೊಳಗೆ ಗಂಗಳದಾಗ ಉಣ್ಣದಿದ್ದರೆ ಏನಾತು?' ಎಂದಿದ್ದ. ವಿರೂಪಾಕ್ಷನಿಗಂತೂ ಇದರ ಗಂಧ ಗಾಳಿಯೂ ಗೊತ್ತಿರಲಿಲ್ಲ. ಅವನಿಗೆ ಸಿದ್ದವ್ವ ಮಾಳವ್ವ ಇಬ್ಬರೂ ಒಂದೇ ಆಗಿದ್ದರು. ಇಬ್ಬರಲ್ಲೂ ಪ್ರೀತಿ. ಆ ಪ್ರೀತಿಯಲ್ಲಿ ಸಿದ್ದವ್ವನ ಲಿಂಗಾಯ್ತ ಪ್ರೀತಿ ಬೇರೆ, ಮಾಳವ್ವನ ಗೊಲ್ಲರ ಪ್ರೀತಿ ಬೇರೆಯಾಗಿ ಕಾಣಿಸುತ್ತಲೇ ಇರಲಿಲ್ಲ. ಹೀಗೆ ಅವನು ಬೆಳೆಯುತ್ತಿದ್ದ ಈ ಜಾತಿಯ ಸಾಂಕ್ರಾಮಿಕ ಜಾಡ್ಯದ ಸೋಂಕಿಲ್ಲದೆ. ಅವನು ಕಡೆತನಕ ಹಾಗೆಯೇ ಬೆಳೆದಿದ್ದರೆ! ಆದರೆ ಹಾಗೆ ಅವನನ್ನು ಬೆಳೆಯಗೊಡಲಿಲ್ಲ ಈ ಸಮಾಜ ಈ ದೇಶ... ಅದೇ ಅವನ ದುರಂತಕ್ಕೆ ಮೂಲಕಾರಣ ಅದು ಮುಂದಣ ಕಥೆ.

ಹಂಪಿಗೆ ಬಂದಿದ್ದವರೆಲ್ಲ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿ ಅಲ್ಲಿಂದ ಒಂದು ದಿನ ಎಲ್ಲರೂ ಹುಬ್ಬಳ್ಳಿ ಮೂರು ಸಾವಿರ ಮಠದಲ್ಲಿ ಸೇರುವುದೆಂದು ನಿರ್ಧರಿಸಿದರು. ಅದರಂತೆ ಕರ್ನಾಟಕದ ಅನೇಕ ಹಳ್ಳಿ ಪಟ್ಟಣಗಳಿಂದ ಯುವಕರು ಯುವತಿಯರು ಹುಬ್ಬಳ್ಳಿಗೆ ಬಂದು ಸೇರಿದರು. ಬಳ್ಳಾರಿ ಜಿಲ್ಲೆಯ ತಂಡದ ನೇತೃತ್ವವನ್ನು ಹರಿಹರರಾಯರು, ರಮಣಯ್ಯ ವಹಿಸಿದ್ದರು. ಈ ತಂಡದಲ್ಲಿ ಮುಳುಗಿದೂರಿನ ಕೊಟ್ರಪ್ಪ, ಮರಿಯಪ್ಪ, ಬಸಪ್ಪ, ದೇವೇಂದ್ರಪ್ಪ, ಬೆಣಕಲ್ಲು ಅಜ್ಜಯ್ಯ, ಡಾ.ಸಿದ್ಧನಾಥ ಮುಂತಾದವರಿದ್ದರು. ಇತ್ತ ದಾವಣಗೆರೆಯಿಂದ ಖಾದರ, ಧಾರವಾಡ ಜಿಲ್ಲೆಯ ಗುಂಪಿನೊಡನೆ ಸೇರಿಕೊಂಡು, ಮುಂಬಯಿಗೆ ಹೊರಟಿದ್ದ. ಸುಭಾಸಚಂದ್ರಬೋಸ್, ಜವಾಹರರ ಸಾಮ್ಯವಾದದ ವಿಚಾರಧಾರೆಗೆ ಮನಸೋತಿದ್ದ ಕಲ್ಲನಗೌಡ ಪಟೇಲರು ಯುವಕರ ನೇತೃತ್ವ ವಹಿಸಿದ್ದರು. ಕಾಂಗ್ರೆಸ್ಸಿನ ನಿಷ್ಠಾವಂತ ಶಿಸ್ತಿನ ಸಿಪಾಯಿ ವರ್ಗಕ್ಕೆ ಸೇರಿದ್ದ ಹಳ್ಳಿಗೇರಿ ಗುದ್ಲೆಪ್ಪ, ಮಹದೇವ ಮೈಲಾರ...... ಮುಂತಾದವರೂ ಮುಂಬಯಿಗೆ ಹೊರಟಿದ್ದರು.

ಬಳ್ಳಾರಿ ಜಿಲ್ಲೆಯಿಂದ ಬಂದಿದ್ದ ತಂಡ ಮೂರು ಸಾವಿರ ಮಠದ ಆವರಣದಲ್ಲಿ ಉಳಿದುಕೊಳ್ಳಲು ಬಂದಾಗ ಹರಿಜನ ಮರಿಯಜ್ಜನನ್ನು ಎಲ್ಲಿ ಉಳಿಸಿಕೊಳ್ಳುವುದೆಂಬ ಜಿಜ್ಞಾಸೆ ಬಂದು ಪೇಚಿನ ಪ್ರಸಂಗ ಉಂಟಾಗಿತ್ತು. ಮರಿಯಜ್ಜನನ್ನು ಕಲ್ಮೇಶ್ವರದ ಗುಡಿಯಲ್ಲಿ ಬಿಟ್ಟು ಕೊಂಡಮೇಲೆ ಇನ್ನಾವ ಗುಡಿಯೊಳಗಾದರೂ, ಮಠದೊಳಗಾದರೂ ಹೋಗಬಹುದೆಂದು ಎಣಿಸಿದ್ದ. ಹುಬ್ಬಳ್ಳಿಯ ಮಠದಲ್ಲಿ ರಾತ್ರಿ ಊಟಕ್ಕೆ ಹೋಗುವಾಗ ಕೊಟ್ರಪ್ಪನಿಗೆ ಈ ಸಮಸ್ಯೆ ಎದುರಾಯಿತು. ಮಠದ ಆಡಳಿತಗಾರರೊಬ್ಬರು,

'ಲಿಂಗವಂತರೆಲ್ಲ ಊಟಕ್ಕೆ ಬರ್ರಿ...' ಎಂದು ಸಾಮೂಹಿಕ ಕರೆ ಕೊಟ್ಟರು.

'ಸಿದ್ಧಾರೂಢನ ಮಠದಲ್ಲಿ ಈ ವ್ಯತ್ಯಾಸ ಯಾಕೆ?' ಎಂದು ಕೊಟ್ರಪ್ಪನಿಗೆ ಜಿಜ್ಞಾಸೆ.

ಮರಿಯಜ್ಜನೆ, ಇರ್ರಿ ಬಿಡ್ರಿ. ನಾನು ಇಲ್ಲೇ ಹೊರಗೆ ಇದ್ದು ಉಣ್ಣುತೀನಿ, ಎಂದ.

ಇದು ಹೇಗೋ ಪರಿಹಾರವಾಗಿ ಮರುದಿನ

ಮುಂಬಯಿಗೆ ಮೂರನೆ ವರ್ಗದ ರೈಲಿನಲ್ಲಿ ಪ್ರಯಾಣ ಮಾಡಿದರು. ಸಹಜವಾಗಿ ಕರ್ನಾಟಕದ ಈ ಸ್ವಯಂ ಸೇವಕರು ಒಂದೇ ಡಬ್ಬಿಯಲ್ಲಿ ಒಟ್ಟಿಗೆ ಕುಳಿತಿದ್ದರು. ದೇವೇಂದ್ರಪ್ಪ, ಬಸಪ್ಪ, ಬೆಣಕಲ್ಲು ಅಜ್ಜಯ್ಯ, ರಮಣಯ್ಯ, ಹರಿಹರರಾಯ, ಕನಕ ಲಕ್ಷ್ಮಿ ಒಂದು ಕಡೆ ಇದ್ದರು. ಅದೇ ಡಬ್ಬಿಯ ಇನ್ನೊಂದು ತುದಿಯಲ್ಲಿ ಧಾರವಾಡ ಜಿಲ್ಲೆಯ ಯುವ ಸ್ವಯಂಸೇವಕರಿದ್ದರು. ಯಾರೋ ಒಬ್ಬರು.

'ನಮ್ಮ ಜಿಲ್ಲೆಯಿಂದಲೆ ಎಲ್ಲ ಜಿಲ್ಲೆಗಳಿಗಿಂತ ಹೆಚ್ಚು ಸ್ವಯಂ ಸೇವಕರು ಹೊರಟಿದ್ದಾರೆ' ಎಂದರು.

ಈ ಮಾತು ಕೇಳಿದ ವಿಜಾಪುರದವರೊಬ್ಬರು, 'ಇಲ್ಲ ನಮ್ಮ ಜಿಲ್ಲೆಯಿಂದಲೇ ಎಲ್ಲ ಜಿಲ್ಲೆಗಿಂತ ಹೆಚ್ಚು' ಎಂದರು.

'ಈ ವಿವಾದ ಯಾಕೆ? ಪಟ್ಟಿ ಮಾಡಿದರೆ ಯಾವ ಜಿಲ್ಲೆಯಿಂದ ಎಷ್ಟು ಜನ ಹೊರಟಿದ್ದಾರೆ ಎಂದು ತಾನೇ ಗೊತ್ತಾಗುತ್ತದೆ. It is after all a verifiable fact' ಎಂದರು.

'ಹಾಗೇ ಮಾಡಿ ಈ ಉಪರಾಟಿ ಯಾಕೆ?'

ಯುವಕರೊಬ್ಬರು ಕಾಗದ ಸೀಸದಕಡ್ಡಿ ಹಿಡಿದುಕೊಂಡು ಡಬ್ಬಿಯಲ್ಲಿದ್ದವರ ಪಟ್ಟಿ ಮಾಡತೊಡಗಿದರು. ಡಬ್ಬಿಯ ಈ ಕೊನೆಗೆ ಬಳ್ಳಾರಿಯವರಿದ್ದಲ್ಲಿಗೆ ಬಂದು ದೇವೇಂದ್ರಪ್ಪನವರ ಹೆಸರು, ತಂದೆ ಹೆಸರು, ವಯಸ್ಸು, ವೃತ್ತಿ, ವಿಳಾಸಗಳ ವಿವರ ಬರೆದುಕೊಂಡು, ಅವರ ಪಕ್ಕದಲ್ಲೇ ಕುಳಿತಿದ್ದ ಬಸವ್ವನ ವಿವರಗಳನ್ನು ದೇವೇಂದ್ರಪ್ಪನವರನ್ನೇ ಕೇಳಿ ಹೆಸರನ್ನು ಬರೆದುಕೊಂಡು.

'ಗಂಡನ ಹೆಸರು?'' ಎಂದು ಕೇಳಿದರು.

'ಮದುವೆ ಆಗಿಲ್ಲ' ಎಂದರು ದೇವೇಂದ್ರಪ್ಪ

'ತಂದೆ ಹೆಸರು?'

'ತಾಯಿ ಹುಲಿಗೆವ್ವ'

ಈ ಉತ್ತರ ಕೇಳಿದೊಡನೆಯೆ ಬಸವ್ವನ ತಾಯಿಯ ವೃತ್ತಿ ಗೊತ್ತಾಗಿ ಹೋಯ್ತು. ಉತ್ತರ ಕರ್ನಾಟಕದಲ್ಲಿ ತಂದೆಯ ಹೆಸರು ಕೇಳಿದಾಗ ತಾಯಿಯ ಹೆಸರು ಹೇಳಿದರೆ ಅವರು ಸವದತ್ತಿ ಯಲ್ಲಮ್ಮನ ಮಕ್ಕಳೆಂದು ಎಲ್ಲರಿಗೂ ಗೊತ್ತು. ವಿವರಗಳನ್ನು ಬರೆದುಕೊಳ್ಳುತ್ತಿದ್ದ ಆ ಯುವಕ ಬಸವ್ವನ ಕಡೆ ಒಮ್ಮೆ ನೋಡಿದ. ಕಿಟಕಿಯ ಕಡೆ ಮುಖಮಾಡಿ ಕುಳಿತಿದ್ದ ಅವಳ ಮುಖದ ಮೇಲೆ ಮುಳುಗುತ್ತಿದ್ದ ಸೂರ್ಯನ ಕಿರಣ ಒಮ್ಮೆ ಬಿದ್ದು, ಮರಗಳು ಅಡ್ಡಬಂದಾಗ ನೆರಳು ಬಿದ್ದು, ನೆರಳು ಬೆಳಕಿನ ಆ ಆಟದಲ್ಲಿ ಅವಳ ಚೆಲುವೂ ಕಣ್ಣು ಮಿಟುಕಿಸಿ ಆಟವಾಡುತ್ತಿತ್ತು. ಗಾಳಿಯ ರಭಸಕ್ಕೆ ತಲೆಗೂದಲು ಸಡಿಲವಾಗಿ ತೂರಾಡುತ್ತಿದ್ದವು. ಮುಖಕ್ಕೆ ಅಡ್ಡಬಂದಾಗ ಕೂದಲನ್ನು ಹಿಂದಕ್ಕೆ ಸವರಿಕೊಳ್ಳುವುದರಲ್ಲೂ ನಟಿಯ ಕೌಶಲವಿತ್ತು. ವಿವರಗಳನ್ನು ಬರೆದುಕೊಳ್ಳುತ್ತಿದ್ದ ಆ ಯುವಕ,

'ವಯಸ್ಸು?' ಎಂದು ಕೇಳಿದ ದೇವೇಂದ್ರಪ್ಪನನ್ನು.

'ನೀವೇ ಅಂದಾಜು ಮಾಡಿ ಬರಕಳ್ರಿ. ಇಪ್ಪತ್ತೋ ಇಪ್ಪತ್ತೈದೊ ಖಾತ್ರಿ ಗೊತ್ತಿಲ್ಲ. ಅಮ್ಮಮ್ಮಾ ಅಂದ್ರೆ ಇನ್ನೂ ಒಂದೆರಡು ವರ್ಷ ಹೆಚ್ಚು ಬರಕಳ್ರಿ... ಗಂಟೇನು ಹೋಗಾದೈತೆ? ಎಂದು ದೇವೇಂದ್ರಪ್ಪ ನಕ್ಕರು.

ಮುಂದಿನ 'ವೃತ್ತಿ' ಏನೆಂದು ಕೇಳುವ ಧೈರ್ಯ ಆ ಯುವಕನಿಗೆ ಆಗಲಿಲ್ಲ. ತಾಯಿಯ ವೃತ್ತಿಯನ್ನೇ ಈಕೆಯೂ ಮಾಡುತ್ತಿರಬಹುದು. ಬಹುಶಃ ಆ ವೃತ್ತಿಗೆ ಇಳಿಯದಿರಬಹುದು. ಶುದ್ಧ ಖಾದಿ ಸೀರೆಹುಟ್ಟು ಕುಂಕುಮ ಬಳೆಯಿಟ್ಟುಕೊಂಡಿದ್ದ ಈಕೆ ತನ್ನ ತಾಯಿಯ ಕುಲಕಸುಬಿಗೆ ಇಳಿದಿರಲಾರಳು. ಆ ಪ್ರಶ್ನೆ ಕೇಳಲಾರದೆ ತಾನೇ ಕಾಂಗ್ರೆಸ್ ಕಾರ್ಯಕರ್ತೆ ಎಂದು ಬರೆದುಕೊಂಡು ಮುಂದಿನ ಪ್ರಶ್ನೆ:

'ಜಾತಿ?' ಎಂದು ಕೇಳಿದ

'ಆಕೀನ್ನೇ ಕೇಳ್ರಿ' ಎಂದು ದೇವೇಂದ್ರಪ್ಪ ಬಸಕ್ಕನ ಕಡೆ ನೋಡಿದ. ಬಸಕ್ಕನಿಗೆ ಆ ಪ್ರಶ್ನೆ ಕಿವಿಗೆ ಬಿದ್ದಿತ್ತು. ಆದರೂ ಕೇಳದವಳಂತೆ, ಪ್ರಶ್ನೆ ಕೇಳುತ್ತಿದ್ದವನ ಕಡೆ ತಿರುಗಿ 'ಕೇಳಿ ಏನೋ ಕೇಳಬೇಕೆಂದಿದ್ದೀರಿ?' ಎಂಬಂತೆ ನೋಡಿದಳು.

'ನಿಮ್ಮ ಜಾತಿ?'

'ಅದ್ಯಾಕ ಬೇಕ್ರಿ ಅಣ್ಣಾವರೆ?'

'ಎಲ್ಲಾರ ವಿವರಗಳನ್ನು ದಾಖಲೆ ಮಾಡ್ತಿದ್ದೆ. ಅದಕ್ಕ ನಿಮ್ಮನ್ನೂ ಕೇಳಿದೆ.'

'ನಾವೀಗ ಮುಂಬೈಗೆ ಹೋಗೋ ಕೆಲ್ಸಕ್ಕೂ ಈ ಜಾತಿಗೂ ಏನು ಸಂಬಂಧ ಅಂತ ಗೊತ್ತಾಗಲಿಲ್ಲರೀ. ಅದಕ್ಕೆ ಕೇಳಿದೆ. ಜಾತಿ ಬೇಕೇ ಬೇಕೇನು?'

'ನಿಮಗೆ ಆಕ್ಷೇಪಣೆ ಇಲ್ದಿದ್ರೆ ಹೇಳ್ರಿ ದಾಖಲೆಗಾಗಿ ಮಾತ್ರ....'

'ನನ್ನದು ಹಗಲೊಂದು ಜಾತಿ, ರಾತ್ರಿಗೊಂದು ಜಾತಿ. ಒಂದೊಂದು ರಾತ್ರಿಗೆ ಎರಡು ಜಾತಿನಾದ್ರೂ ಆಗ್ತಾವೆ !' ಎಂದು ಕವಣೆ ಬೀರಿದಂತೆ ನುಡಿದಳು.

ಆ ಮಾತು ಕೇಳಿ ಆ ಯುವಕನಿಗೆ ಕಕ್ಕಾಬಿಕ್ಕಿ ಆಯಿತು! ಅವನಿಗೆ ಏನೊಂದು ಅರ್ಥವಾಗಲಿಲ್ಲ. ಆ ಉತ್ತರ ಕೊಡುವಾಗ ಅವಳ ಮನದಲ್ಲಿದ್ದ ಅಸಹ್ಯ, ಜಿಗುಪ್ಸೆ, ತಾತ್ಸಾರ ಮುಖದ ಮೇಲೆ ಆ ಚೆಲುವಿನಲ್ಲೂ ಸ್ಪಷ್ಟಕಾಣಿಸಿತು. ಇನ್ನು ಈ ಪ್ರಶ್ನೆಯನ್ನು ವಿವರವಾಗಿ ಕೇಳುವುದಕ್ಕೆ ಹಿಂಜರಿದು ಆ ಯುವಕ ಮುಂದಕ್ಕೆ ನಡೆದ. ಈ ಖಾನೇಷುಮಾರಿ ಕರ್ಮ ಮುಗಿದು ಆ ಯುವಕ ಡಬ್ಬಿಯ ಆ ತುದಿಗೆ ನಡೆದ ಮೇಲೆ ದೇವೇಂದ್ರಪ್ಪ,

'ಅದೇನೇ ತಂಗಿ ಹಂಗ ಏಳೀದೆ. ಹಗಲೊಂದು ಜಾತಿ, ರಾತ್ರಿಗೊಂದು ಜಾತಿ ಅಂದೆಲ್ಲ. ಏನೇ ಹಂಗಂದ್ರ.'

'ಹಗಲು ಜಾತಿ ಗೊತ್ತೇ ಐತಲ್ಲ ಕಾಕ. ರಾತ್ರಿ ಜಾತಿ ಯಾವುದು ಅಂದ್ಯಾ?

ಯಾವ ಜಾತಿಯವನು ಬಂದು ನನ್ನ ಜತೆ ಮಲಗತಾನೆ ಅವನ ಜಾತಿ ನಂದಾಗತೈತಿ. ಬ್ರಾಹ್ಮಣ ಬಂದ್ರೆ ಬ್ರಾಹ್ಮಣೆ ಆಗತೀನಿ. ಲಿಂಗಾಯ್ತ ಬಂದ್ರೆ ಲಿಂಗಾಯತ್ತಳಾಗತೀನಿ' ಎಂದಳು, ಒಂದು ಬಗೆಯ ಛಲ ಒಂದು ಬಗೆಯ ಹಟ, ಒಂದು ಬಗೆಯ ತಿರಸ್ಕಾರ... ಇವೆಲ್ಲ ಭಾವಗಳೂ ಸೇರಿದ ಒಂದು ದನಿಯಿಂದ ಮುಖದ ಚಹರೆಯಿಂದ.

'ಇದು ಹ್ಯಂಗ ಗೊತ್ತಾತು ನಿನಗೆ?' ಎಂದರು ದೇವೇಂದ್ರಪ್ಪ ಇಷ್ಟಗಲ ಬಾಯಿತೆರೆದು.

'ಒಮ್ಮೆ ಒಬ್ಬ ಜಂಗಮಯ್ಯ, ಇನ್ನೊಂದಪ ಬ್ರಾಂಬ್ರು ಅಯ್ಯ ನನ್ನತ್ರ ಮಕ್ಕಂಡಿದ್ದರು. ಅವತ್ತೇ ಅವನ ಮಗನಿಗೆ ಹೆಣ್ಣು ನೋಡಾಕ ಒಗಿದ್ನಂತೆ. ಹೆಣ್ಣಿನ ಜಾತಿಗೂ ಇವನ ಜಾತಿಗೂ ಬಿಡ್ತದೆ ಅಂತ ಕುದುರಲಿಲ್ಲಂತೆ. ಹಂಗಂತ ಆವಯ್ಯ ಏಳಿದಾಗ ನಾನು,

'ನನ್ನತ್ರ ಮಲಗಿದ್ದೀರಲ್ಲ. ಅದು ಹ್ಯಂಗಾತು ಅಂದೆ.. ಮದುವೆ ಆಗೋದು ಮಲಗಾಕ ಅಲ್ವೇ? ನಿಮ್ಮ ಜಾತಿಯವಳತ್ರಾನೆ ಮಲಗದಾದರೆ, ನೀವು ಯಾರತ್ರ ಮಲಗಿದರೆ ಅವಳು ನಿಮ್ಮ ಜಾತಿಯವಳೇ ಆಗ್ತಾಳಲ್ಲ' ಅಂದೆ. ಆವಯ್ಯ ಜಲಜಲ ಬೆವತು ಹೋದ. ಪಕ್ಕದಾಗೇ ಮಲಗಿದ್ದ ಆವಯ್ಯನ ಮೈತಬ್ಬಿಕೆಂಡೆ... ಆಗ ನಾನು ಅವನ ಜಾತಿಯವಳೆ ಆದ್ನೆಲ್ಲ... ಅದ್ಕೆ ಹಗಲೊಂದು ಜಾತಿ, ರಾತ್ರಿ ಒಂದು ಜಾತಿ, ಎಂದು ಮತ್ತೆ ಕಿಟಕಿಯ ಮೂಲಕ ಹೊರ ನೋಡತೊಡಗಿದಳು.

ದೇವೇಂದ್ರಪ್ಪನಿಗೆ ಈಕೆಯ ತರ್ಕ ಕೇಳಿ ಆಶ್ಚರ್ಯದ ಜೊತೆಗೆ ಹೆಮ್ಮೆಯೂ ಆಯಿತು. ಮನದಲ್ಲೇ ಮೆಚ್ಚಿಕೊಂಡು,

'ಹಂಗಾರ ಆವಯ್ಯಗೆ ಮಚ್ಚೇಲಿ ಹೊಡ್ದೆ ಅನ್ನು...'

'ನಮ್ಮಂಥವರ ಕಾಲು ಸಂದಿನಲ್ಲಿ ಬಿದ್ದು ಒದ್ದಾಡೋ ಈ ಆಟುಗಳ್ಳರು ಜಾತಿ ಸುದ್ದಿ ಎತ್ತಿ ಮಾತಾಡ್ತಾರೆ.... ಇವರ್ನಾ... ಇವರ್ನಾ....'

'ಏನು ಮಾಡಬೇಕಂತ ಮಾಡೀದಿ...?'

'ಜಾತಿ ಮಾತಾಡೋ ಅವರ ಬಾಯಿ ತುಂಬ ಕ್ಯಾಕರಿಸಿ ತೊಂಬ್ಲ ಉಗಳಬೇಕು...'

ಆಕೆಗೆ ಅದೆಷ್ಟು ಸಿಟ್ಟು ತುಂಬಿಕೊಂಡಿತ್ತೋ ಹೇಳಲುಬಾರದು. ಅವಳ ಆ ಸಿಟ್ಟಿನ ಒಂದೇ ಒಂದು ಹನಿ ಹೀಗೆ ಹೊರಗೆ ಸಿಡಿದಿತ್ತು. ■



ರಾಣೆಬೆನ್ನೂರಿನ ರ್‍ಯಾಂಕ್ ವಿಜೇತೆ ರಶ್ಮಿ

ಹೊಸದಾಗಿ ರಚಿಸಲಾದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಪ್ರಪಂಚದ ಭೂಪಟದಲ್ಲಿ ಬೀಜೋತ್ಪಾದನೆಯ ತವರೆಂದೇ ತನ್ನನ್ನು ತಾನು ಗುರುತಿಸಿಕೊಂಡಿದೆ. ಆದರೀಗ ಶಿಕ್ಷಣಕ್ಷೇತ್ರದಲ್ಲೂ ತನ್ನ ಹೆಸರನ್ನು ಗುರುತಿಸಿಕೊಳ್ಳುವ ಸಫಲಯತ್ನವೆಸಗಿದೆ. ಅದರ ಪರಿಣಾಮವೇ ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಣೆಬೆನ್ನೂರಿನ ಶಾಲೆಗೂ ರ್‍ಯಾಂಕ್ ದೊರೆತದ್ದು.

ಸುಮಾರು 32 ವರ್ಷಗಳಿಂದ ರಾಣೆಬೆನ್ನೂರಿನ ಶಾಲೆಗಳಲ್ಲಿ ಯಾವ ಪರೀಕ್ಷೆಯಲ್ಲೂ ರ್‍ಯಾಂಕ್ ಬರದೇ ಇಡೀ ವಿದ್ಯಾರ್ಥಿ ಸಮುದಾಯ ಹಾಗೂ ಬೋಧಕ ಸಮುದಾಯ ಚಿಂತೆಗೀಡಾಗಿದ್ದರು. ಕೇವಲ ಬೆಂಗಳೂರು, ಮೈಸೂರು, ಮತ್ತಿತರ ನಗರ ಪ್ರದೇಶಗಳಿಗೆ ಸೀಮಿತವಾಗುತ್ತಿದ್ದ ರ್‍ಯಾಂಕು ಈ ಬಾರಿ ಗ್ರಾಮೀಣ ಪ್ರದೇಶವಾದ ರಾಣೆಬೆನ್ನೂರಿನ ವಿದ್ಯಾರ್ಥಿಗೆ ದಕ್ಕಿದ್ದು ವಿಶೇಷ. ಈ ಕೀರ್ತಿಗೆ ಪಾತ್ರಳಾದ ವಿದ್ಯಾರ್ಥಿನಿ ಕು। ರಶ್ಮಿ ಕೃಷ್ಣಮೂರ್ತಿ ಬೇಲೂರ.

ಬಿ.ಕೆ. ಗುಪ್ತ ಪ್ರೌಢಶಾಲೆ, ಉತ್ತಮ ಬೋಧಕ ವರ್ಗ ಹೊಂದಿರುವ ಮಾದರಿ ಶಾಲೆ. ಆದರೂ ಆಡಳಿತ ವರ್ಗಕ್ಕಿದ್ದ ಕೊರಗು ತಮ್ಮ ಶಾಲೆಯಲ್ಲಿ ಯಾರೂ ರ್‍ಯಾಂಕ್ ಗಳಿಸಿರಲಿಲ್ಲವೆಂಬುದೇ. ಈಗ ಆ ಕೊರಗನ್ನು ನೀಗಿಸಿದ್ದಾಳೆ ಈ ರಶ್ಮಿ. ಈ ಸಾಧನೆಯಿಂದ ರ್‍ಯಾಂಕ್ ವಿಜೇತರ ಪಟ್ಟಿಯಲ್ಲಿ ರಾಣೆಬೆನ್ನೂರಿನ ಹೆಸರು ದಾಖಲಾಗುವಂತಾದದ್ದು ಅಲ್ಲಿನ ಜನತೆಗೆ ಹೆಮ್ಮೆ ಮೂಡಿಸಿದೆ. ಈ ಸಾಧನೆ ನನಗೆ ಅತೀವ ಹರ್ಷ ತಂದಿದೆಯೆಂದು ಶಾಲೆಯ ಮುಖ್ಯೋಪಾಧ್ಯಾಯರಾದ ಜಿ. ಎಲ್. ಕಲಕರ್ಣಿಯವರು ತಮಗಾದ ಸಂತೋಷವನ್ನು ಹಂಚಿಕೊಂಡರು.

ಅನಿರೀಕ್ಷಿತ

'ರ್‍ಯಾಂಕ್ ಬರುತ್ತದೆಂದು ನಿರೀಕ್ಷಿಸಿರಲಿಲ್ಲ. ಶಾಲೆಯಿಂದ ರ್‍ಯಾಂಕ್ ಬಂದ ವಿಷಯ ತಿಳಿದಾಗ ನನಗಾದ ಸಂತೋಷ ಹಾಗೂ ಆಶ್ಚರ್ಯ ಹೇಳಲಿಕ್ಕೆ ಸಾಧ್ಯವಿಲ್ಲ' ಎಂದು ರಶ್ಮಿ ತಿಳಿಸಿದಳು.



ಅವಿರತ ಶ್ರಮ

'ನನಗೆ ಸಿಕ್ಕ ಸಮಯವನ್ನೆಲ್ಲಾ ವ್ಯರ್ಥ ಮಾಡದೇ ಸದುಪಯೋಗ ಪಡಿಸಿಕೊಂಡು, ತಿಳಿಯದ್ದನ್ನು ಗುರುಗಳೊಂದಿಗೆ ಚರ್ಚಿಸಿ ತಿಳಿದುಕೊಳ್ಳುತ್ತಿದ್ದೆ. ಅಲ್ಲದೆ, ನನ್ನ ತಂದೆ ಕೂಡಾ ಉಪನ್ಯಾಸಕರೇ, ತಾಯಿ ವಾಣಿಜ್ಯ ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯರು. ಅವರ ನಿರಂತರ ಪ್ರೋತ್ಸಾಹ ಈ ಸಾಧನೆಗೆ ಮೂಲ' ಎನ್ನುವ ಅಭಿಪ್ರಾಯ ರಶ್ಮಿಯದು. ರಶ್ಮಿಯ ತಮ್ಮ ಬಿಜಾಪುರ ಸೈನಿಕಶಾಲೆಯಲ್ಲಿ 7ನೇ ತರಗತಿಯ ವಿದ್ಯಾರ್ಥಿ.

ಪ್ರೇರಣೆ

ಈ ಸಾಧನೆಗೆ ಮೂಲ ಪ್ರೇರಣೆಯೆಂದರೆ ನಮ್ಮ ಶಾಲಾ ಉಪಾಧ್ಯಾಯರು ಹೇಳುತ್ತಿದ್ದ ಮಾತು. 'ನಮ್ಮ ರಾಣೆಬೆನ್ನೂರಿಗೆ ಇದುವರೆಗೆ ಒಂದು ರ್‍ಯಾಂಕ್ ಬಂದಿಲ್ಲ. ಆದರೆ ರ್‍ಯಾಂಕ್ ಗಳಿಸಲು ಎಲ್ಲರಿಗೂ ಸಾಧ್ಯವಿದೆ. ಕೇವಲ ಶ್ರಮ ಹಾಗು ಆಸಕ್ತಿ ಮುಖ್ಯ' ಎನ್ನುತ್ತಿದ್ದ ಮಾತು ನನ್ನ ತಲೆಯಲ್ಲಿ ತುಂಬಿಹೋಗಿತ್ತು. ಅದನ್ನೇ ಧ್ಯೇಯವನ್ನಾಗಿಟ್ಟುಕೊಂಡು ಛಲದಿಂದ ಮುನ್ನುಗ್ಗಿದೆ. ಮನೆಯಲ್ಲೇ ನಾನು ಸಾಕಷ್ಟು ಪ್ರಶ್ನೋತ್ತರಗಳನ್ನು ಬರೆದು ನಮ್ಮ ಶಿಕ್ಷಕರ ಬಳಿ ಮೌಲ್ಯಮಾಪನ ಮಾಡಿಸಿ, ಅದರಲ್ಲಿ ಕಂಡು ಬಂದ ತಪ್ಪನ್ನು ಮುಂದಿನ ಬಾರಿ ಸರಿಪಡಿಸಿಕೊಳ್ಳುತ್ತಿದ್ದೆ. ಈ ಕಾರ್ಯಕ್ಕೆ ನನ್ನ ತಂದೆ ತಾಯಿ ಬಹಳಷ್ಟು ಸಹಾಯಕರಾದರು. ಹೀಗಾಗಿ ರ್‍ಯಾಂಕ್ ಪಡೆಯಲು ಸಾಧ್ಯವಾಯಿತು ಎಂದು ಬಿಚ್ಚುನುಡಿಯಿಂದ ನುಡಿಯುತ್ತಾರೆ.

ಈ ಪ್ರತಿಭಾವಂತೆ ಮುಂದೆ ಇಂಜಿನಿಯರಾಗಿ ದೇಶದ ಪ್ರಗತಿಗಾಗಿ ದುಡಿಯುತ್ತಾರಂತೆ. ■

ಗೋಕಾಕದ ಪ್ರತಿಭೆಗಳು



ಜಗದೀಶ್ ಗಂಗಣ್ಣನವರ

ಶಿಕ್ಷಣವಿಂದು ವ್ಯಾಪಾರೀಕರಣ ಗೊಳ್ಳುತ್ತಿದೆ. ಈ ವ್ಯಾಪಾರೀಕರಣದ ಭರದಲ್ಲಿ ಶಾಲೆಗಳು ತಮ್ಮ ಮೂಲೋದ್ದೇಶವನ್ನೇ ಮರೆತು ಅಡ್ಡದಾರಿ ಹಿಡಿಯುತ್ತಿವೆ. ಶಾಲೆಗಳು ವ್ಯಾಪಾರೀ ಸಂಸ್ಥೆಗಳಾಗಿ ಅಲ್ಲಿನ ಬೋಧಕ/ಆಡಳಿತ ವರ್ಗದವರು ಆದರ್ಶ, ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರುತ್ತಿದ್ದಾರೆ. ಇದರ ಪರಿಣಾಮ ಗುರು ಶಿಷ್ಯರ ನಡುವಣದ ಸಂಬಂಧ ದಿನೇ ದಿನೇ ಹದಗೆಡುತ್ತಿರುವುದು ಆತಂಕ ತರುವಂತಹ ವಿಷಯ.

ಶಿಕ್ಷಣವನ್ನು ವ್ಯಾಪಾರವೆಂದು ಪರಿಗಣಿಸಿ ವಹಿವಾಟಿನಲ್ಲಿ ತೊಡಗಿಕೊಂಡವರದ್ದೊಂದು ಗುಂಪಾದರೆ, ಶಿಕ್ಷಣ ಸೇವೆಯೆಂದು ತಿಳಿದು ತಮ್ಮನ್ನು ತೊಡಗಿಸಿಕೊಂಡಿರುವವರದ್ದು ಎರಡನೇ ಗುಂಪು. ಈ ಎರಡನೇ ಗುಂಪಿನವರು ಬಹಳ ವಿರಳ. ಇಂತಹ ವಿರಳರ ಗುಂಪಿಗೆ ಗೋಕಾಕಿನ ಜಾರಕಿಹೊಳಿಯವರ ಶಿಕ್ಷಣ ಸಂಸ್ಥೆಗಳು ಸೇರಬಲ್ಲವು.

ಹಿಂದುಳಿದ ಪ್ರದೇಶವಾದ ಗೋಕಾಕ್ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರೆದಿದೆ. ಈ ಶೈಕ್ಷಣಿಕ ಪ್ರಗತಿಗೆ ಜಾರಕಿ ಹೊಳಿಯವರ ಶಿಕ್ಷಣ ಸಂಸ್ಥೆಗಳು ಮೂಲ ಕಾರಣವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಉತ್ತಮವಾದ ಬೋಧಕವರ್ಗ, ಉತ್ತಮ ಪರಿಸರ ಹಾಗೂ ಸುವ್ಯವಸ್ಥೆಯಿಂದ ಕೂಡಿರುವ ಇವರ ಶಿಕ್ಷಣ ಸಂಸ್ಥೆಗಳು ನಾಡಿನಲ್ಲೇ ಹೆಸರುವಾಸಿಯಾಗಿದೆ. ಇಷ್ಟೆಕ್ಕೆಲ್ಲಾ ಸಂಸ್ಥೆಯವರ ಸೇವಾ ಮನೋಭಾವವೇ ಕಾರಣ. ಈ ಬಾರಿ ಎಸ್.ಎಸ್.ಎಲ್.ಸಿ.ಯಲ್ಲಿ ನಾಲ್ಕು ರ್‍ಯಾಂಕುಗಳನ್ನು ಪಡೆದದ್ದು ಅವರ ಸಂಸ್ಥೆಗಳ ಹಿರಿಮೆಗೆ ಇನ್ನೊಂದು ಗರಿ ಮೂಡಿದಂತಾಯಿತು.

ಇವರ ಶಿಕ್ಷಣಸಂಸ್ಥೆಗಳಲ್ಲಿ ತರಗತಿಗಳು ಆರಂಭವಾಗುವ ದಿನದಿಂದಲೇ ಪಾಠಗಳು ಆರಂಭವಾಗುತ್ತವೆ. ಮುಂದಿನ ಡಿಸೆಂಬರ್‌ನೊಳಗೆ ಪಠ್ಯಕ್ರಮದ ಪಾಠಗಳು ಮುಗಿದು (ರಿವಿಜನ್) ಪುನರಾವರ್ತನೆಗೆ ಬೋಧಕ ವರ್ಗದವರು ತೊಡಗಿಸಿಕೊಳ್ಳುತ್ತಾರೆ. ಹಳೇ ವರ್ಷದ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದರ ಮೂಲಕ ವಿದ್ಯಾರ್ಥಿಗಳ ಸಂದೇಹವನ್ನು ನಿವಾರಿಸುತ್ತಾರೆ. ಈ ರೀತಿ ಪರೀಕ್ಷಾ ಯಜ್ಞಕ್ಕೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಮಾದರಿ ಪ್ರಯತ್ನ ಈ ಸಂಸ್ಥೆಗಳದ್ದು. 'ಬಿಸಿಲ ಬದುಕು' ಈ ಸಂಸ್ಥೆಗಳನ್ನು ಖುದ್ದಾಗಿ ಭೇಟಿ ಮಾಡಿದಾಗ ಆ ಶಾಲೆಯ ಪ್ರಧಾನ ಬೋಧಕರಾದ ಬಿ.ಕೆ. ಕುಲಕರ್ಣಿಯವರು ಈ ಮೇಲಿನ ಅಭಿಪ್ರಾಯವನ್ನು ತಿಳಿಸಿದರು.

ನಂತರ ರ್‍ಯಾಂಕ್‌ಗಳಿಸಿದ ವಿದ್ಯಾರ್ಥಿಗಳನ್ನು ಕಂಡು ಮಾತನಾಡಿಸಿದಾಗ ಕೇಳಿ ಬಂದ ರ್‍ಯಾಂಕ್ ವಿಜೇತರ ಒಕ್ಕೊರಲಿನ ಅಭಿಪ್ರಾಯ ಈ ಕೆಳಗಿನದ್ದು.

'ನಮ್ಮ ಈ ಸಾಧನೆಗೆ ತಂದೆ ತಾಯಿಯವರು, ಗುರುಗಳು, ಸ್ನೇಹಿತರು ಹಾಗೂ ಸಂಸ್ಥೆಯ ಛೇರಮನ್‌ರ ಪ್ರೋತ್ಸಾಹವೇ ಕಾರಣ'.

ಮೊದಲ ರ್‍ಯಾಂಕ್ ಗಳಿಸಿದ **ಜಗದೀಶ.ವಿ.** ಗಂಗಣ್ಣನವರ, 8ನೇ ರ್‍ಯಾಂಕ್ ಗಳಿಸಿದ ಆನಂದ ಚೌಧುರಿ ಹಾಗೂ 20ನೇ ರ್‍ಯಾಂಕ್ ಪಡೆದ ಅಜಿತ್ ಹೂಲಿಯವರಿಗೆ ಭವಿಷ್ಯದಲ್ಲಿ ವೈದ್ಯರಾಗಬೇಕೆಂಬ ಆಸೆ. ಇನ್ನು 6ನೇ ರ್‍ಯಾಂಕ್ ಗಳಿಸಿದ ಪ್ರಶಾಂತ ಮಲ್ಲಿಕಾರ್ಜುನ ಜನಮಟ್ಟಿಯವರಿಗೆ ಇಂಜಿನಿಯರ್ ಆಗಬೇಕೆಂಬ ಮಹದಾಸೆ.

ಈ ಎಲ್ಲಾ ಪ್ರತಿಭಾ ಕುಸುಮಗಳು ತಮ್ಮ ಪರಿಮಳವನ್ನು ದೇಶ ದುದ್ದಗಲಕ್ಕೂ ಪಸರಿಸುವಂತಾಗಲಿ.

-ಎಸ್.ಬಿ. ಮಲ್ಲೂರ




ಪ್ರಶಾಂತ ಜನಮಟ್ಟಿ



ಆನಂದ ಚೌಧುರಿ



ಅಜಿತ್ ಹೂಲಿ



ಭೀಮಸಿ ಲಕ್ಷ್ಮಣರಾವ್ ಜಾರಕಿಹೊಳಿ
ಛೇರಮನ್



ಅಜ್ಜಿಯ ಅಂಟಿಬಯೋಟಿಕ್ಸ್ - ಬೆಳ್ಳುಳ್ಳಿ

ಮಳೆಗಾಲ ಪ್ರಾರಂಭವಾಯಿತೆಂದರೆ ಸಾಮಾನ್ಯವಾಗಿ ನೆಗಡಿ, ಕೆಮ್ಮು, ಗಂಟಲು ಕೆರೆತ, ಜ್ವರ, ಆಮಶಂಕೆ ಬಾರದಿರುವುದಿಲ್ಲ. ಕೂಡಲೇ ಡಾಕ್ಟರ ಕಡೆಗೆ ಓಡಿಹೋಗಿ ಮಾತ್ರೆ, ಸುಂದರ ಬಾಟ್ಲಿಯಲ್ಲಿ ಸಿರಪ್ ತಂದಾಗಲೇ ಸಮಾಧಾನ. ಇಂತಹ ಚಿಕ್ಕ ಪುಟ್ಟ ರೋಗಗಳಿಗೆ ವೆಚ್ಚವೆಷ್ಟು? ಗ್ರಾಮಾಂತರ ಪ್ರದೇಶದಲ್ಲಿಯೂ ಸಾಂಪ್ರದಾಯಕತ್ವಕ್ಕೆ ವಿದಾಯ ಹೇಳಿ ಡಾಕ್ಟರ ಬೆನ್ನು ಹತ್ತುವುದು ಕಾಣುವ ದೃಶ್ಯ. ಒಬ್ಬರು ಜೋಕ್ಸ್ ಮಾಡ್ತಾ ಇದ್ದರು. ನೀವು ಕೇಳಿ ನಕ್ಕರೆ ನಿಮ್ಮ ರೋಗ ನಿವಾರಣೆಯಾಗಬಹುದು. "ಅನಾರೋಗ್ಯವಾದಾಗ ಡಾಕ್ಟರ ಹತ್ತಿರ ಹೋಗಲೆಬೇಕು. ಯಾಕೆಂದರೆ ಡಾಕ್ಟರು ಬದುಕಬೇಕಲ್ಲ! ಅವರು ಬರೆದುಕೊಟ್ಟ ಚೀಟಿ ಔಷಧ ಶಾಪ್‌ಗೆ ಒಯ್ದು ಮಾತ್ರೆ ಖರೀದಿಸಬೇಕು. ಶಾಪಿನವ ಬದುಕಬೇಕಲ್ಲಾ! ಆ ಮಾತ್ರೆಯನ್ನು ತಂದು ಮನೆಯ ಸಮೀಪವಿರುವ ಚರಂಡಿಯಲ್ಲಿ ಚೆಲ್ಲಬೇಕು ರೋಗಿ ಬದುಕಬೇಕಲ್ಲ!"

ನಮ್ಮ ದೇಹದಲ್ಲಿ ಪ್ರತಿರೋಧಕ ಶಕ್ತಿಯಿಂದಾಗಿ ಅನೇಕ ರೋಗಗಳು ತಮ್ಮಿಂದ ತಾವೇ ಶಮನಗೊಳ್ಳುತ್ತವೆ. "ಔಷಧ ತೆಗೆದು ಕೊಂಡರೆ ಒಂದೇ ವಾರದಲ್ಲಿ ನೆಗಡಿ ಮಾಯ ವಾಗುವುದು, ಇಲ್ಲವಾದಲ್ಲಿ ಏಳು ದಿವ್ಸಗಳಲ್ಲಿ ನೆಗಡಿ ಇಲ್ಲದಾಗುವುದು" ಎಂಬ ಮಾತು ಹಿಮದಷ್ಟು ಶುಭ್ರವಾದ ಸತ್ಯ. ನಗರದ ಜನಕ್ಕೆ ಈ ವಿಷಯದ ಬಗ್ಗೆ ಒಗಟು ತಿಳಿದಿರಲಾರದು. ಇವರು ಏನು ಮಾಡ್ತಾರೆ ಗೊತ್ತ? ಕರ್ಚೀಫ್‌ದಲ್ಲಿಟ್ಟು, ಕಿಸೆಯಲ್ಲಿಡುತ್ತಾರೆ, ಮತ್ತೆ ಮುಖ ಒರೆಸುತ್ತಾರೆ. ಆದರೆ ಗ್ರಾಮೀಣ ಜನರು 'ಬೆಳ್ಳಿ ಭಡಿ ನೆಲಕ್ಕ ಹೊಡಿ' ಅಂತಾರ. 'ನೆಗಡಿಯಂತಹ ಜಡ್ಡಿಲ್ಲ- ಬುಗುಡಿಯಂತಹ ಆಭರವಿಲ್ಲ.'

ಮಳೆಗಾಲದ ಪ್ರಾರಂಭದಲ್ಲಿ ಬರುವ ಆ ಸಾಮಾನ್ಯ ರೋಗಗಳಿಗೆ ಈಗಲೂ ಮನೆಯಲ್ಲಿರುವ ಅಜ್ಜಿಯನ್ನುಕೇಳಿ. ಏನು ಹೇಳ್ತಾಳಂದರೆ ರಾತ್ರಿ ಮಲಗುವ ಮುನ್ನ ನಾಲ್ಕೂ ಬೆಳ್ಳುಳ್ಳಿ ಕಾಳು ಮತ್ತು ಎರಡು ಮುಷ್ಟಿ ಚುರಮರಿ (ಕಡ್ಲೆಪುರಿ-ಮಂಡಕ್ಕಿ) ತಿಂದು ನೀರು ಕುಡಿಯದೇ ಮಲಗಿರಿ. ಬೆಳಿಗ್ಗೆ ! ವಿಕ್ಸ್‌ದ ಅಡ್ವರ್ಟೈಜಮೆಂಟ್ ನೋಡ್ತೀರಲ್ಲವೆ? ಅದಕ್ಕೂ ಹೆಚ್ಚು ಉಲ್ಲಸಿತರಾಗುವಿರಿ ಬೆಳ್ಳುಳ್ಳಿಯ ಮಹಿಮೆ ಅಂತಹದು.

ಅದರ ವಾಸನೆಯನ್ನು ಮುಚ್ಚಿಡಲಿಕ್ಕಾಗುವುದಿಲ್ಲ. ಅದಕ್ಕೆ ಕೆಲವರಿಗೆ ಅದು ಅಸ್ಪೃಶ್ಯ. ಆದರೆ ಅಲ್ಲಿರುವ ಔಷಧಿ ಗುಣಗಳನ್ನು ಜೀವ ಸತ್ವವನ್ನು ತಿಳಿದಿರುವ ಕಂಪನಿಗಳು ಸುಂದರ ಬಾಟ್ಲಿಯಲ್ಲಿ ಮಾತ್ರೆಗಳನ್ನಿಟ್ಟು ಕೊಟ್ಟರೆ ನೀವೇ ಕೊಳ್ಳುವಿರಲ್ಲ ! ಅದರಲ್ಲಿ ಬಿ-ಸಿ-ಡಿ ಜೀವ ಸತ್ವ ಇದೆ.

ಕ್ರಿ. ಶ. ಮೊದಲನೇ ಶತಮಾನದಲ್ಲಿ ರೋಮನ್ ವೈದ್ಯರು ಕಫ, ಕರುಳಿನ ಬೇನೆ, ನೆಗಡಿ ಮುಂತಾದ ರೋಗಗಳ ಉಪಶಮನಕ್ಕಾಗಿ ಬೆಳ್ಳುಳ್ಳಿ ಬಳಸಲು ಹೇಳುತ್ತಿದ್ದರು. ತೂಕ ಹೆಚ್ಚಿಸಲು ಅದು ಸಹಕಾರಿ. ಹಸಿವಿಲ್ಲದವರಿಗೆ ಹಸಿವನ್ನುಂಟು ಮಾಡುವ ಗುಣವೂ ಇದೆ ಅದರಲ್ಲಿ ಔಷಧಿಯ- ಗುಣ.

ಶೀತ, ಬ್ರಾಂಕಿಟಿಸ್, ಅಸ್ತಮಾ, ಮಂಗನ ಕೆಮ್ಮು, ತಲೆ ನೋವುಗಳಿಗೆ ಬೆಳ್ಳುಳ್ಳಿ ರಾಮಬಾಣ. ಹೊಟ್ಟೆಯಲ್ಲಿಯ ವಾಯುವನ್ನು ಕಡಿಮೆ ಮಾಡುವ ಸಾಮರ್ಥ್ಯವುಳ್ಳದ್ದು ನೀವು ಅಂಟಾಸಿಡ್‌ದ ಜಾಹೀರಾತು ನೋಡು ವಿರಲ್ಲವೆ? ಮೂಗಿನೊಳಗಿನ ಊತವನ್ನು ನಿವಾರಿಸುವುದು. ದೃಷ್ಟಿದೋಷ ಸರಿ ಪಡಿಸುವುದು. ಸಂಧಿವಾತವನ್ನು ಶಮನ ಮಾಡುವುದು. ರಕ್ತದಲ್ಲಿರುವ ಸಕ್ಕರೆ ಅಂಶ ಕಡಿಮೆ ಮಾಡಲು ಸಹಾಯಕಾರಿ. ಬೆಳ್ಳುಳ್ಳಿಯಲ್ಲಿರುವ ಸಲ್ಫರ್ ಮುಖ್ಯವಾಗಿ ದೇಹದಲ್ಲಿ ಇನ್‌ಸುಲಿ ಉತ್ಪಾದನೆಗೆ ತುಂಬಾ ಸಹಾಯಕವಾಗಿದೆ. ಮಾನಸಿಕ ಒತ್ತಡವಿರುವ ಈ ಆಧುನಿಕ ಯುಗದಲ್ಲಿ, ಬೆಳ್ಳುಳ್ಳಿಯ ನಿತ್ಯ ಉಪಯೋಗ ಅತ್ಯವಶ್ಯ. ಉದ್ವೇಗವನ್ನು ಶಮನಗೊಳಿಸುವ ಶಕ್ತಿಯುಂಟು.

ಶಕ್ತಿವರ್ಧಕ

ಬೆಳ್ಳುಳ್ಳಿ ಕೇವಲ ರೋಗ ನಿವಾರಕ ಮಾತ್ರವಲ್ಲ. ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ನಿಮ್ಮ ಹೃದಯವನ್ನು ಶಕ್ತಿಯುತವನ್ನಾಗಿಸುವ ಜೊತೆಗೆ ನಿಮ್ಮ ಬುದ್ಧಿಯನ್ನು ಚುರುಕುಗೊಳಿಸುತ್ತದೆ. ಸ್ಮರಣ ಶಕ್ತಿ ಇಲ್ಲವೆಂಬ ಭಾವನೆಯವರು, ಇದನ್ನು ನಿತ್ಯ ಉಪಯೋಗಿಸುವುದರಿಂದ ಸ್ಮರಣ ಶಕ್ತಿ ಹೆಚ್ಚುತ್ತದೆ. ಲೈಂಗಿಕ ಗ್ರಂಥಿಗಳು ಆರೋಗ್ಯಕರವಾಗಿಯೂ ಬಲಿಷ್ಠವಾಗಿಯೂ ಕಾರ್ಯಮಾಡಲು ಪ್ರಚೋದಿಸುತ್ತದೆ ಈ ಬೆಳ್ಳುಳ್ಳಿ, ರಕ್ತದಲ್ಲಿಯ ಕೊಲೆಸ್ಟ್ರಾಲ್ ಮತ್ತು ಗ್ಲುಕೋಜನ್ನೂ ನಿಯಂತ್ರಿಸುವ ಈ ಚಿಕ್ಕ ಬೆಳ್ಳುಳ್ಳಿ ದೇಹಕ್ಕೆ ಚೈತನ್ಯ ನೀಡುತ್ತದೆ: ಮತ್ತು ಮನಸ್ಸಿಗೆ ಮುದವಿಡುತ್ತದೆ.

ಭಾರತೀಯ ವೈದ್ಯ ಪದ್ಧತಿಗಳಾದ ಆಯುರ್ವೇದ, ಸಿದ್ಧ, ಯೋಗ ಮತ್ತು ನಿಸರ್ಗ ಚಿಕಿತ್ಸೆಯಲ್ಲಿ ಬೆಳ್ಳುಳ್ಳಿ ಮಹತ್ವವನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಯುನಾನಿ ಪದ್ಧತಿಯು ಒತ್ತುಕೊಟ್ಟಿದೆ. ಅಲೋಪತಿ ಇದಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದರು ಪಾಶ್ಚಾತ್ಯ ರೂಪ ಧರಿಸುವಂತೆ ಮಾಡಿದ್ದು ನಾವು ತಿಳಿಯಬೇಕಾದ ವಿಷಯ ಬೆಳ್ಳುಳ್ಳಿಯ ಕಷಾಯವನ್ನು ಮೂರು ದಿನ ಮೂರು ಸಲ ಸೇವಿಸಿದಲ್ಲಿ ಮೂತ್ರ ತೊಂದರೆ ನಿವಾರಣೆಯಾಗುವುದು. ವಿಸರ್ಜನೆ ಸರಳ ವಾಗುವುದು. ಅದಕ್ಕಾಗಿಯೇ ಭಾರತೀಯರು ಬೆಳ್ಳುಳ್ಳಿಯ ನಿತ್ಯ ಉಪಯೋಗಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು. ಊಟದಲ್ಲಿ ಬಳಸುವುದು. ಬೆಳ್ಳುಳ್ಳಿ ಚಟ್ನಿ (ಮೆಣಸಿನಕಾಯಿ ಉಪಯೋಗಿಸಿ) ಉಪ್ಪಿನಕಾಯಿ, ಸಾರು, ತರಕಾರಿ ಇತ್ಯಾದಿಗಳಲ್ಲಿ ವಿಪುಲವಾಗಿ ಬಳಸುವಂತೆ ಉಪದೇಶಿಸಿದ್ದಾರೆ. ಇನ್ನೂ ಒಂದು ಮುಖ್ಯ ಕಾರಣವೆಂದರೆ ಅದರ ಉಪಯೋಗದಿಂದ ಯಾವುದೇ ಪಾರ್ಶ್ವ ಪರಿಣಾಮಗಳಿಲ್ಲ. ಕೆಲವರಿಗೆ ಬೆಳ್ಳುಳ್ಳಿ ಉಪಯೋಗದಿಂದ ಉಷ್ಣವಾಗುವುದೆಂಬ ತಪ್ಪು ಗ್ರಹಿಕೆ ಇದೆ. ಅದನ್ನೂ ಕಳಚಿ ಹಾಕಿ ನಿತ್ಯ ಉಪಯೋಗಿಸಿ ನಿರೋಧಕ ಶಕ್ತಿ ಬೆಳೆಸಿಕೊಳ್ಳಿ, ಆರೋಗ್ಯವಂತರಾಗಿರಿ. ದೀರ್ಘಾಯುವಾಗುವ ಗುಟ್ಟು ಅದರಲ್ಲಿದೆ. ಅಜ್ಜಿಯ ಈ ಅಂಟಬಯೋಟಿಕ್ಸ್ ಹಿತ್ತಲಗಿಡದಂತೆ. ಅದು ಮದ್ದಲ್ಲ ಎಂದು ತಾತ್ಸಾರ ಮಾಡಬೇಡಿ. ■

ವಿಶಿಷ್ಟ ಜಾತ್ರೆ

ರಾಯಚೂರ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿನ 'ಮುದೇನೂರ' ಎಂಬ ಪುಟ್ಟ ಗ್ರಾಮವೊಂದಿದೆ. ಈ ಊರಿನ ಮುಖ್ಯ ದೈವ 'ಉಮಾ ಮಹೇಶ್ವರ' . ಈ ದೈವದ ಜಾತ್ರೆಯು ಪ್ರತಿ ವರ್ಷ ಶಿವರಾತ್ರಿ ಅಮವಾಸ್ಯೆಯ ಮಾರನೆ ದಿನದಿಂದ ತುಂಬಾ ವಿಶಿಷ್ಟವಾದ ರೀತಿಯಲ್ಲಿ ಆಚರಿಸಲ್ಪಡುತ್ತದೆ. ಅಲ್ಲಿನ ಜನರಿಗಷ್ಟೆ ಅಲ್ಲದೆ ಸುತ್ತಲಿನ ವರಿಗೂ ಕೂಡಾ ಈ ಜಾತ್ರೆ ಮುದ ನೀಡುತ್ತದೆ.

ಶಿವರಾತ್ರಿ ಅಮವಾಸ್ಯೆಯ ಮಾರನೆ ದಿನ ಪಾಡ್ಯದಂದು ಕೇವಲ ಗಂಡಸರ ಜಾತ್ರೆ ಜರಗುತ್ತದೆ. ಆಗ ಚಿಕ್ಕದಾದ ತೇರು ಎಳೆಯುವುದು ತೇರು ಎಳೆಯಲು ಸಂಬಂಧಿಸಿದ ಕೈಂಕರ್ಮ ಕೈಗೊಳ್ಳುವವರು ಗಂಡಸರು ಮಾತ್ರ. ಉಳಿದಂತೆ ಹೆಂಗಸರು ಮಕ್ಕಳು ಈ ಜಾತ್ರೆ ವೀಕ್ಷಿಸಿ ಖುಷಿ ಪಡುತ್ತಾರೆಯೇ ವಿನಹ ಅದರಲ್ಲಿ ಭಾಗವಹಿಸುವುದಿಲ್ಲ.

ಗಂಡಸರ ಜಾತ್ರೆಯ ಮಾರನೆ ದಿನ ಹೆಂಗಸರ ಜಾತ್ರೆ. ಇಲ್ಲಿ ಗಂಡಸರಾರು ಭಾಗವಹಿಸುವಂತಿಲ್ಲ. ತೇರು ಎಳೆಯುವುದು, ಡೊಳ್ಳು ಬಡಿಯುವುದು ಇತರ ತೇರಿನ ಕೈಂಕರ್ಮ ಮಾಡುವವರು ಹೆಂಗಸರೆ! ಅದರಲ್ಲಿ ಗಂಡಸರು ಭಾಗವಹಿಸುವಂತಿಲ್ಲ. ಈ ಜಾತ್ರೆಯಲ್ಲಿ ಬಾಜಾ ಭಜಂತ್ರಿ ಬಾರಿಸುವವರೂ ಹೆಂಗಸರೇ ಆಗಿರುತ್ತಾರೆ.

ಹೆಂಗಸರ ಜಾತ್ರೆಯ ಮಾರನೇ ದಿನ 'ಹುಡುಗರ ಜಾತ್ರೆ' ಯಲ್ಲಿ ತೇರು ಎಳೆಯುವವರು ಮಕ್ಕಳಾದರೂ ಕೂಡಾ ಗಂಡಸರು ಈ ಮಕ್ಕಳಿಗೆ ನೆರವು ನೀಡುತ್ತಾರೆ.

ಮೂರು ದಿನಗಳ ಕಾಲ ನಡೆಯುವ ಈ ವಿಶಿಷ್ಟ ಜಾತ್ರೆ ಅಲ್ಲಿನವರು ಶಿವ ಸ್ವರೂಪಿ ಗಂಡಸರು, ಪಾರ್ವತಿ ಸ್ವರೂಪ ಹೆಂಗಸರು, ಶಿವ ಪಾರ್ವತಿಯ ಮಕ್ಕಳ ಸ್ವರೂಪದಲ್ಲಿ ಹುಡುಗರ ಜಾತ್ರೆ ಎಂದು ಹೇಳುತ್ತಾರೆ. ಅಂತೆಯೇ 'ಊಟಕ್ಕೆ ಹಬ್ಬ ಚಂದ ನೋಟಕ್ಕೆ ಜಾತ್ರೆ ಚಂದ, ? ವೆನ್ನುವ ಗಾದೆ ಇಂತಹ ಜಾತ್ರೆ ನೋಡೇ ಹುಟ್ಟಿರಬೇಕು. ನಗರದ ನಾಗರೀಕತೆ ಹಾಗೂ ಸಂಸ್ಕೃತಿಗಳಿಂದ ದೂರ ಸರಿದು ತನ್ನದೇ ಆದ ವಿಶಿಷ್ಟ ಸಂಸ್ಕೃತಿ ನಾಗರೀಕತೆಯನ್ನ ಈ ಜಾತ್ರೆಗಳು ಉಳಿಸಿಕೊಂಡಿವೆ.

-ಟಿ. ತೇಜಾನಂದ, ಕೊಟ್ಟೂರು

ಹಾಯ್ ಹಾಸ್ಯ ಶ್ರೀ

ನಾನು ಒಂಭತ್ತನೇ ತರಗತಿ ಓದುತ್ತಿದ್ದೆ. ಸರ್ ಬರಲು ತಡವಾಗುವುದೆಂದು ತಿಳಿದು, ಬೇಸರ ಕಳೆಯಲು, ಧೈರ್ಯದಿಂದ ಬೋರ್ಡ್ ಮೇಲೆಯೇ ಒಂದು ಚಿತ್ರ ಬರೆದೆ. ಅದು ನಮ್ಮ ಶಾಲೆಯ ಪ್ರಾಂಶುಪಾಲರದ್ದು! ನಾನಾಗ ವ್ಯಂಗ್ಯ ಚಿತ್ರ ಬಿಡಿಸಿ, ಹಾಸ್ಯ ಮಾಡಿ ಕ್ಲಾಸ್‌ನಲ್ಲಿದ್ದವರನ್ನು ನಗಿಸುತ್ತಿದ್ದೆ. ಅವರೆಲ್ಲರಿಗೂ ನಾನು ಅಚ್ಚುಮೆಚ್ಚಿನ 'ಹಾಸ್ಯಶ್ರೀ' ಆಗಿಬಿಟ್ಟಿದ್ದೆ.

ನಮ್ಮ ಪ್ರಾಂಶುಪಾಲರ ಚಿತ್ರ ನೋಡಿ ನನ್ನ ಮಿತ್ರರು ಹಾಯ್, ಹಾಯ್ ಹಾಸ್ಯ ಶ್ರೀ ಎಂದು ದೊಡ್ಡದಾಗಿ ನಗುತ್ತಿದ್ದರು. ಅದೇ ವೇಳೆಗೆ 'ಡ್ರಾಯಿಂಗ್ ಸರ್'ಬಂದೇ ಬಿಟ್ಟರು. ನಾನು ಅವಸರದಲ್ಲಿ ಅಲ್ಪ ಸ್ವಲ್ಪ ಚಿತ್ರ ಅಳಿಸಿದೆ.

ನಮ್ಮ ಸರ್‌ಗೆ ಸ್ವಲ್ಪ ಕೋಪ ಬಂದಿತ್ತು. ''ಬೋರ್ಡ್ ಮೇಲೆ ಏನ್ ಚಿತ್ರ ಬಿಡ್ಸಿದ್ದಿ?' ಎಂದು ಬೋರ್ಡು ನೋಡಿದರು. ಅರ್ಧಂಬರ್ಧ ಚಿತ್ರ ಇತ್ತು. ಇನ್ನೂ ಸುಮ್ನಿದ್ರೆ ಸರ್ ಮತ್ತಷ್ಟು ಸಿಟ್ಟಿಗೇಳ್ತಾರೆ ಅಂತ ತಿಳಿದು, ''ಸರ್, ಅದು ಅದು ಡಾ. ಅಂಬೇಡ್ಕರ್ ಚಿತ್ರ ಬಿಡಿಸಲು ಟ್ರೈ ಮಾಡ್ತಾ ಇದ್ದೆ'' ಎಂದು ರೈಲು ಬಿಟ್ಟೆ, ಕಾರಣ ನಮ್ಮ ಪ್ರಾಂಶುಪಾಲರು ದಪ್ಪ ಕನ್ನಡಕ ತೊಡುವುದರಿಂದ ಅಂಬೇಡ್ಕರ್‌ರನ್ನೆ ಹೋಲುತಿದ್ದರು. ಆಗ ಸರ್ ''ಪರ್‍ವಾ ಇಲ್ಲ ನಿನ್ನ ಚಿತ್ರಕಲೆ ಚೆನ್ನಾಗಿದೆ. '' ಆದರೂ ಇನ್ನೂ ಸುಧಾರಿಸಬೇಕು'', ಎಂದು ದಿಟ್ಟಿಸಿ ಚಿತ್ರನೋಡಿ ನುಡಿದರು.

- ಶ್ರೀಪಾದ ಮೆಣಸುಮನೆ, ಕನ್ನಡಗಲ್

ಮಾಡಿದ್ದು-ಮಾಡದ್ದು?

ನಮ್ಮ ಊರು ಕೊಟ್ಟೂರು. ಬಳ್ಳಾರಿ ಜಿಲ್ಲೆಯಲ್ಲಿದೆ. ಈಗ್ಗೆ ಸುಮಾರು ೪ ವರ್ಷಗಳ ಹಿಂದೆ ಹೊಸಪೇಟೆಯಿಂದ ಕೊಟ್ಟೂರಿಗೆ ಓಡಾಡುತ್ತಿದ್ದ ರೈಲನ್ನು ಯಾವ ಕಾರಣವೂ ನೀಡದೆ ರದ್ದು ಪಡಿಸಿದ್ದರು. ಆಗ ಊರಿನ ನಾಗರೀಕರು ಚಳುವಳಿ ಮತ್ತು ಬಂದ್‌ನಿಂದ ರೈಲಿಗಾಗಿ ಹೋರಾಡಿರುತ್ತಾರೆ. ಆಗ ನಮ್ಮ ಬೇಡಿಕೆಗಳು ಕೊಟ್ಟೂರಿನ ಮಧ್ಯೆ ಹೊಸಪೇಟೆಯವರೆಗೆ ಬ್ರಾಡ್‌ಗೇಜ್ ಹಾಕುವುದು ಮತ್ತು ಕೊಟ್ಟೂರಿನಿಂದ ಹರಿಹರದವರೆಗೆ ಮಾರ್ಗವನ್ನು ವಿಸ್ತರಿಸುವುದು.

ಮಾಡಿದ್ದು: ಆಗಿನ ರೈಲ್ವೆ ಮಂತ್ರಿಯಾಗಿದ್ದ ಸನ್ಮಾನ್ಯ ಶ್ರೀ ಸಿ.ಕೆ. ಜಾಫರ್ ಷರೀಫ್‌ರವರು. ಕೊಟ್ಟೂರಿನಿಂದ ಹೊಸಪೇಟೆಯವರೆಗೆ ಬ್ರಾಡ್‌ಗೇಜ್ ಮಾಡಲಿಕ್ಕೆ ಅನುಮತಿ ಕೊಟ್ಟರು. ಈಗ ಮೀಟರ್‌ಗೇಜ್‌ನಿಂದ ಬ್ರಾಡ್‌ಗೇಜಿಗೆ ಪರಿವರ್ತಿತ ಆಗಿರುತ್ತದೆ. ಈ ಕಾರ್ಯವನ್ನು ಭರವಸೆ ಕೊಟ್ಟ ಹಾಗೆ ನೆರವೇರಿಸಿದ್ದಾರೆ.

ಮಾಡದ್ದು: ಆದರೆ ಕೊಟ್ಟೂರಿನಿಂದ ಹರಿಹರದವರೆಗೆ ಮಾರ್ಗವನ್ನು ವಿಸ್ತರಿಸುವುದಕ್ಕೆ ಬಜೆಟ್‌ನಲ್ಲಿ ೧ ಕೋಟಿ ರೂಪಾಯಿಯನ್ನು ತೆಗೆದಿಟ್ಟಿದ್ದರು. ಆದರೆ ಆಗಿನ ರೈಲ್ವೆ ಸಚಿವರಾದ ರಾಮವಿಲಾಸ್ ಪಾಸ್ವಾನ್‌ರವರು ೫ ಕೋಟಿ ರೂಪಾಯಿಯನ್ನು ತೆಗೆದಿಟ್ಟಿದ್ದೇನೆ ಎಂದು ಹೇಳಿದ್ದರು. ಈವರೆಗೂ ಈ ಕಾರ್ಯ ಇನ್ನೂ ಆಗಿಲ್ಲ. ಸರ್ವೇಕಾರ್ಯ ಮುಗಿದಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಗಮನ ಹರಿಸುತ್ತಾರೋ ಇಲ್ಲವೋ ನೋಡಬೇಕಾಗಿದೆ.

-ಟಿ. ತೇಜಾನಂದ, ಕೊಟ್ಟೂರು

ನನ್ನ ಜನ ಮತ್ತು ಸಂಸ್ಕೃತಿ

ರಾಯಚೂರಿನಿಂದ ೮ ಕಿ.ಮೀ. ದೂರವಿರುವ ಊರು ಮಲಿಯಾಬಾದ. ನಮ್ಮೂರಿನ ಜನರು ಸಾಂಪ್ರದಾಯಿಕ ವೃತ್ತಿಗಳನ್ನು ಬಿಡದೇ ನಡೆಸಿಕೊಂಡು ಬಂದಿದ್ದಾರೆ. ನಮ್ಮೂರಿನ ಹೆಣ್ಣು ಮಕ್ಕಳು ಹಾಲು, ಮೊಸರು, ಬೆಣ್ಣೆ, ತುಪ್ಪ ಮಾರುತ್ತಾರೆ. ಗಂಡಸರು ಹಮಾಲಿ, ಬೇಸಾಯ ಇತ್ಯಾದಿ ಮಾಡುತ್ತಾರೆ.

ಹಬ್ಬ ಹರಿದಿನಗಳಲ್ಲಿ ಚಿಕ್ಕ ಹುಡುಗರಿಂದ ಹಿರಿಯರವರೆಗೆ ಆಡುವ ಕೋಲಾಟ, ಬಯಲಾಟ, ನಾಟಕಗಳು ನಮ್ಮೂರಿನ ಕಲಾ ಚಟುವಟಿಕೆಗಳು, ಹಿಂದಿನ ರಾಜರು ಕಟ್ಟಿಸಿದ ಕೋಟೆ ಇದೆ. ಕಲ್ಲಿನ ಕೆತ್ತನೆಯ ಎರಡು ಆನೆಗಳಿವೆ. ಅಲ್ಲದೆ ದೊಡ್ಡ ಗಣೇಶನ ವಿಗ್ರಹವೂ ಇದೆ. ನಮ್ಮೂರಿನಿಂದ ಒಂದು ಕಿ.ಮೀ. ದೂರದಲ್ಲಿ ಒಂದು 'ಗೋ'ಶಾಲೆಯಿದೆ. ಅಲ್ಲಿ ನೂರು ಆಕಳುಗಳು (ಹಸುಗಳು) ಇವೆ. ನಮ್ಮೂರು ಬೆಟ್ಟಗಳಿಂದ ಸುತ್ತುವರಿದಿದ್ದು ಬೆಟ್ಟಗಳ ನಡುವೆ ಎರಡು ಸರೋವರಗಳಿವೆ. ಇವುಗಳನ್ನು ತೆಲುಗಿನಲ್ಲಿ 'ಸಿನ್ನ ನಾರಿಗಿದ್ದ' 'ಪೆದ್ದನಾರಿಗಿದ್ದ' ಎಂದು ಕರೆಯುತ್ತಾರೆ.

ನಮ್ಮೂರು ಕರ್ನಾಟಕ ರಾಜ್ಯಕ್ಕೆ ಸೇರಿದ್ದರೂ ಊರಲ್ಲಿ ಸಂಪೂರ್ಣ ತೆಲುಗು ಭಾಷೆಯನ್ನಾಡುತ್ತಾರೆ. ನಾಲ್ಕು ಸಾವಿರ ಜನ ಸಂಖ್ಯೆಯಿದ್ದರೂ ೫ನೇ ತರಗತಿಯವರೆಗೆ ಮಾತ್ರ ಶಿಕ್ಷಣ ಕಲ್ಪಿಸಿಕೊಡಲಾಗಿದೆ.

ರಾಯಚೂರು ಬೆಳೆದಂತೆಲ್ಲ ನಮ್ಮೂರಿನ ಬೆಟ್ಟದ ಕಲ್ಲುಗಳು ಮಾಯವಾಗಿ ಬೆಟ್ಟಗಳು ನಾಶವಾಗುತ್ತಿವೆ. ಈ ಬೆಟ್ಟಗಳು ನಾಶವಾದರೆ ಅಲ್ಲಿ ಸಿಗುವ ಸೀತಾಫಲ ಹಣ್ಣುಗಳು ಕ್ರಮೇಣ ಕಣ್ಮರೆಯಾಗುತ್ತವೆ. ನಮ್ಮೂರಿನ ಉಡುಗೆ ತೊಡುಗೆಗಳಿಗೆ ಆಧುನಿಕತೆ ಸ್ಪರ್ಶಿಸಿದಂತಿಲ್ಲ.

-ಎಂ.ಬಿ. ವೀರನಗೌಡ, ಮಲಿಯಾಬಾದ

ಕ್ವಿಜ್-12 ಬಹುಮಾನ ವಿಜೇತರು



ಪ್ರಥಮ ಬಹುಮಾನ
ರೂ. ೫೦೦-೦೦

ಎಂ.ಡಿ. ರೇಖಾ
D/o ದ್ಯಾವಪ್ಪ S/o ಪೊನ್ನಾಭೋವಿ,
ಮಾರುತಿ ನಗರ, ಸುಣ್ಣದ ಹಳ್ಳಿ ಪೋಸ್ಟ್,
ಭದ್ರಾವತಿ (ತಾ)
ಶಿವಮೊಗ್ಗ (ಜಿಲ್ಲೆ) - 577303

ದ್ವಿತೀಯ ಬಹುಮಾನ
ರೂ. ೨೦೦-೦೦

ಕೆ.ಪಿ ಮಂಜುನಾಥ
ಪ್ರಥಮ ಟಿ.ಸಿ.ಹೆಚ್. 'ಬಿ' ವಿಭಾಗ,
ಸಿದ್ದಾರ್ಥ ಶಿಕ್ಷಕರ ತರಬೇತಿ ಕೇಂದ್ರ,
ಸಿದ್ಧಾರ್ಥನಗರ,
ತುಮಕೂರು -572107

ಸಮಾಧಾನಕರ ಬಹುಮಾನ
ತಲಾ ರೂ. ೧೦೦/-

ಕೆ. ಉಮೇಶ್
ಶಿವಬುಕ್ ಸ್ಟಾಲ್,
ಹಳೇ ಬಸ್ ಸ್ಟ್ಯಾಂಡ್,
ಕೂಡ್ಲಿಗಿ (ತಾ),
ಬಳ್ಳಾರಿ - 583135.

ಮಂಡ್ಯ ಬಸವರಾಜ್
ನಂ. 3756, 14ನೇ ಅಡ್ಡರಸ್ತೆ,
ಗಾಯಿತ್ರಿನಗರ,
ಬೆಂಗಳೂರು - 560 021.

ಬಿ.ಎಸ್ ವೀರಭದ್ರಪ್ಪ
ದ್ವಿತೀಯ ಟಿ.ಸಿ.ಹೆಚ್,
ದಿ ಆಕ್ಸ್‌ಫರ್ಡ್ ಟಿ.ಟಿ.ಐ,
ಮೊದಲನೇ ಹಂತ, ಜೆ.ಪಿ.ನಗರ,
ಬೆಂಗಳೂರು - 560 078.

ಕ್ವಿಜ್ - 12ರ ಸರಿಯುತ್ತರ

1. ಪ್ರೊಖ್ರಾನ್ (ರಾಜಸ್ಥಾನ)
2. ಶಾರದೆ
3. ಚಿಗಟೇರಿ ವೀರಣ್ಣ
4. ವಾಣಿಜ್ಯ ಖಾತೆ
5. ನಿವೇದಿತಾ ಜೈನ್

ಕ್ವಿಜ್ 13ರಲ್ಲಿ ಭಾಗವಹಿಸುವಿರಾ?

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್‌ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತೀಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿ ಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15-7-1998**

ಕ್ವಿಜ್ - 13

೧. ಇತ್ತೀಚೆಗೆ ಬಿಡುಗಡೆಯಾದ ಜ್ಞಾನ-ವಿಜ್ಞಾನ ಕೋಶದ ಪ್ರಕಾಶಕರು ಯಾರು?

....

೨. ಪಿ.ಯು.ಸಿ ಕಲಾ ವಿಭಾಗದಲ್ಲಿ ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ಹೆಸರೇನು?

....

೩. ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಯಾರು?

....

೪. ಅಣ್ವಸ್ತ್ರಕ್ಕೆ ಸಂಬಂಧಿಸಿದ ಸಿ.ಟಿ.ಬಿ.ಟಿಯ ವಿಸ್ತೃತ ರೂಪ (Longform) ಏನು?


....

೫. ಜನತಾದಳದ ಅಧ್ಯಕ್ಷ ಬಿ.ಎಲ್.ಶಂಕರ್ ಅವರ ವಿರುದ್ಧ ಕೇಳಿ ಬರುತ್ತಿರುವ ಆರೋಪ ಯಾವುದು?

ಹೆಸರು..
ವಿಳಾಸ..
....
....
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಬಹುಮುಖ ವ್ಯಕ್ತಿತ್ವದ
ಡಾ. ಶಂಭು ಬಳಿಗಾರ

ಆಡು ಮುಟ್ಟದ ಸೊಪ್ಪಿಲ್ಲ ವೆಂಬಂತೆ ಡಾ. ಶಂಭು ಬಳಿಗಾರರು ಬಹುಮುಖ ವ್ಯಕ್ತಿತ್ವದವರು. ವೃತ್ತಿಯಲ್ಲಿ ಬೋಧಕ ರಾಗಿದ್ದೂ ತಮ್ಮನ್ನು ತಾವು ಗುರುತಿಸಿ ಕೊಂಡದ್ದು ಜಾನಪದ ಪ್ರಪಂಚದಲ್ಲಿ.



ಪಾಶ್ಚಾತ್ಯ ಸಂಸ್ಕೃತಿಯ ಅಬ್ಬರದ ನಡುವೆಯೂ ನಮ್ಮ ಜಾನಪದ ಸಾಹಿತ್ಯ ತನ್ನ ಅಸ್ತಿತ್ವವನ್ನು ದಿನೇ ದಿನೇ ಜನಮಾನಸದಲ್ಲಿ ಭದ್ರಪಡಿಸಿಕೊಳ್ಳುತ್ತಲೇ ಬಂದಿದೆ. ಈ ಜಾನಪದ ಸಂಪಿಗೆಯ ಪರಿಮಳ ನಾಡಿನ ಮೂಲೆ-ಮೂಲೆಗೂ ಪಸರಿಸುವಂತಹ ಕಾರ್ಯದಲ್ಲಿ ಉತ್ತರ ಕರ್ನಾಟಕದ ಜಾನಪದ ಕಲಾವಿದರ ಸೇವೆ ಅನನ್ಯವಾದುದು. ನಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗೆ ಧಕ್ಕೆಯಾಗುತ್ತಿದೆ ಎನ್ನಲಾಗುತ್ತಿರುವ ಈ ದಿನಗಳಲ್ಲಿ ಜಾನಪದ ಹಾಡುಗಳನ್ನು ತಮ್ಮ ಕಂಠದಿಂದ ಹಾಡಿ ಜನಮನ ತಲುಪುವಲ್ಲಿ ಪ್ರಾಮಾಣಿಕ ಪ್ರಯತ್ನಗೈದಿರುವವರಲ್ಲಿ ಡಾ॥ ಶಂಭು ಬಳಿಗಾರರು ಒಬ್ಬರು.

ಮೂಲತಃ ಧಾರವಾಡ ಜಿಲ್ಲೆಯ ಶಿರಹಟ್ಟಿಯ ಶಿಗ್ಲಿ ಎಂಬಲ್ಲಿ ಕೃಷಿಕ ಮನೆತನದಲ್ಲಿ ಜನಿಸಿ ಪ್ರಾಥಮಿಕ ಹಾಗೂ ಪ್ರೌಢ ವ್ಯಾಸಂಗವನ್ನು ಹುಟ್ಟೂರಿನಲ್ಲಿಯೇ ಮುಗಿಸಿ ಧಾರವಾಡದಲ್ಲಿ ಕಾಲೇಜು ಶಿಕ್ಷಣವನ್ನು ಮುಂದುವರೆಸಿದರು. ಎಂ.ಎ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದು ಪ್ರಸ್ತುತದಲ್ಲಿ ಬಿಜಾಪುರದ ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯು.ಜಿ.ಸಿಯವರ ಎಫ್.ಐ.ಪಿ [F.I.P.] ಯೋಜನೆಯಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿಯನ್ನು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಯನ್ನು ಗಳಿಸಿದ್ದಾರೆ.

ತಮ್ಮ ಬೋಧಕ ವೃತ್ತಿಯೊಂದಿಗೆ ಜಾನಪದ ಹಾಡುಗಳನ್ನು, ಕಥೆಗಳನ್ನು ಜನರಲ್ಲಿಗೆ ತಲುಪಿ ಸುವಲ್ಲಿ ಶ್ರಮಿಸಿದ್ದಾರೆ. ನಮ್ಮ ನಾಡಷ್ಟೇ ಅಲ್ಲದೇ ಮಹಾರಾಷ್ಟ್ರ, ಆಂಧ್ರದ ಗಡಿ ಪ್ರದೇಶಗಳಲ್ಲಿ ಸಾಕಷ್ಟು ಉಪನ್ಯಾಸಗಳನ್ನು ನೀಡಿದ್ದಾರೆ. ಗ್ರಾಮೀಣ ಬದುಕಿನ ನೋವು-ನಲಿವು, ಸರಸ-ವಿರಸಗಳೇ ಇವರ ಕಾರ್ಯಕ್ರಮದ ಮುಖ್ಯಾಂಶವಾಗಿದ್ದು ವಿಶೇಷ. ಗ್ರಾಮೀಣ ಜನ ಜೀವನವನ್ನು ಪ್ರತಿಬಿಂಬಿಸುವ ಜಾನಪದ ಸಾಹಿತ್ಯದ ಹಲವಾರು ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ''ನುಚ್ಚಿನ ಮಲ್ಲಯ್ಯ'' 'ಕೆರೆಗೆ ಹಾರ', '' ಹಾಲುಂಡ ತವರು'', ''ತೊಗರಿ ತಿಪ್ಪ'', ''ಪತಿವ್ರತೆ ನೀಲಮ್ಮ'', ''ಮಹಾಂತ ಜೋಳಿಗೆ'' ಇವು ಹೆಚ್ಚು ಮೆಚ್ಚುಗೆಯನ್ನು ಪಡೆದಿರುವ ಅವರ ಧ್ವನಿಸುರುಳಿಗಳು. 'ನುಚ್ಚಿನ ಮಲ್ಲಯ್ಯ' ಹಾಸ್ಯವನ್ನು ಕುರಿತಾದರೆ ''ಹಾಲುಂಡ ತವರು'' ಮಹಿಳೆಯರ ನೋವು ನಲಿವುಗಳನ್ನು ಪ್ರತಿನಿಧಿಸುವ ಧ್ವನಿ ಸುರುಳಿಗಳು. 'ಕೆರೆಗೆ ಹಾರ' ಜಾನಪದ ಶೈಲಿಯ ಮಹಿಳೆಯ ಬಲಿದಾನದ ಕಥೆಯನ್ನು ಒಳಗೊಂಡಿದೆ.

ಇಷ್ಟಕ್ಕೆ ತಮ್ಮ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಿಕೊಳ್ಳದೇ ''ಹುನಗುಂದ ತಾಲೂಕು ದರ್ಶನ'', ''ಎಸ್.ಆರ್. ಕಂಠಿಯವರು'', ಹಾಗೂ ''ಜೋಳದ ರಾಶಿ ದೊಡ್ಡನಗೌಡರ - ಸಮಗ್ರ ಅಧ್ಯಯನ''ಗಳೆಂಬ ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. ''ಮಹಾತಪಸ್ವಿ'' ಎಂಬ ಚಲನಚಿತ್ರ ಮತ್ತು ''ಜಗಜ್ಯೋತಿ ಬಸವೇಶ್ವರ'' ವೆಂಬ ನಾಟಕದಲ್ಲಿ ಅಭಿನಯಿಸುವ ಮೂಲಕ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

ಹುನಗುಂದ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ, ಇಳಕಲ್‌ನ ಗಂಧರ್ವ ಸಂಗೀತ ವಿದ್ಯಾಲಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಇವರ ''ಜೋಳದ ರಾಶಿ ದೊಡ್ಡನಗೌಡರ - ಸಮಗ್ರ ಅಧ್ಯಯನ'' ಕೃತಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯವು ಡಾಕ್ಟರೇಟ್ ಪುರಸ್ಕಾರ ನೀಡಿ ಗೌರವಿಸಿದೆ. ''ಬಸವಗುರು ಕಾರಣ'', ''ಜಾನಪದ ಸಾಹಿತ್ಯ ಕಲಾಕುಶಲ'' ಇವು ಇವರ ಸೇವೆಗೆ ಸಂದಿರುವ ಇನ್ನಿತರ ಪ್ರಶಸ್ತಿಗಳು.

ನನ್ನ ಈ ಸಾಧನೆಗೆ ಪ್ರೇರಕ ಶಕ್ತಿಯಾದವರು ನನ್ನ ಸಹಧರ್ಮಿಣಿ ಶ್ರೀಮತಿ ಪ್ರೇಮಾದೇವಿ, ತಂದೆ ವೀರಭದ್ರಪ್ಪ, ತಾಯಿ ಗಂಗಮ್ಮ ಹಾಗೂ ಸಹೋದರ ಶಿವಣ್ಣನವರು ಎಂದು ಬಿಚ್ಚು ಮಾತಿನಿಂದ ಹೇಳುತ್ತಾರೆ.


ಹೀಗೆ ಶಿಕ್ಷಕರಾಗಿ, ಕವಿಯಾಗಿ, ಸಾಹಿತಿಯಾಗಿ, ಹಾಡುಗಾರರಾಗಿ ತಮ್ಮ ಬಹುಮುಖ ವ್ಯಕ್ತಿತ್ವದ ಮೂಲಕ ತಮ್ಮನ್ನು ಜಾನಪದ ಕಲಾ ಪ್ರಪಂಚದಲ್ಲಿ ಗುರುತಿಸಿಕೊಂಡಿರುವ ಇವರು ಇತ್ತೀಚೆಗೆ ಶಿರಹಟ್ಟಿ ತಾಲೂಕಿನಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದದ್ದು ಇವರ ಸಮಗ್ರ ಸೇವೆಗೆ ಸಂದ ಗೌರವ.

ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವದ ಮೂಲಕ ಸಾಂಸ್ಕೃತಿಕ ಸೇವೆಗೈಯುತ್ತಿರುವ ಡಾ.ಶಂಭು ಬಳಿಗಾರರು ತಮ್ಮ ಕಾರ್ಯ ಕ್ಷೇತ್ರದಲ್ಲಿ ಇನ್ನಷ್ಟು ಯಶಸ್ವಿಯಾಗಲಿ ಎಂಬುದೇ ನಮ್ಮ ಹಾರೈಕೆ.

■ ಕೆ.ಎ. ಬಳಿಗೇರ

ಸಂವೇದನೆ

■ ಎಂ. ಎಸ್. ಮೂರ್ತಿ



■

ಒಂದು ಊರಿನ ನಿರ್ದಿಷ್ಟ ಪರಿಸರದಲ್ಲಿ ನಾವು ಎಷ್ಟೋ ವರ್ಷಗಳಿಂದ ವಾಸವಾಗಿರುತ್ತೇವೆ. ಆದರೆ ಅನೇಕ ಸಲ ನಮ್ಮ ಸಂಬಂಧ, ಸಂಭಾಷಣೆ, ಸಮಾಲೋಚನೆ ಕೇವಲ ಮನುಷ್ಯರೊಂದಿಗೆ ಸೀಮಿತವಾಗಿರುತ್ತದೆ. ಪರಿಸರದಲ್ಲಿನ ಕಲ್ಲು, ಮಣ್ಣು, ಗಿಡ, ಕಟ್ಟಡ ಇತ್ಯಾದಿಗಳನ್ನು ಪ್ರಜ್ಞಾಪೂರ್ವಕವಾಗಿ ದಿಟ್ಟಿಸುವುದೇ ಇಲ್ಲ. ಇಂಥ ಹಲವು ನಿರ್ಲಕ್ಷಿತ ವಸ್ತು ವಿಚಾರಗಳೆಡೆ ನವುರಾದ ನೋಟ ಬೀರುವುದು ಈ ನವೀನ ಅಂಕಣದ ಉದ್ದೇಶ. ಬೆಂಗಳೂರಿನಂತಹ ಮಹಾನಗರದಲ್ಲಿ ಇದ್ದುಕೊಂಡೇ ಗ್ರಾಮೀಣ ವಾಸನೆಯನ್ನು ಉಳಿಸಿಕೊಂಡಿರುವ ಕಲಾವಿದ ಎಂ.ಎಸ್. ಮೂರ್ತಿ ಅವರು ಪ್ರತಿ ತಿಂಗಳು ಈ ಅಂಕಣದಲ್ಲಿ ತಮ್ಮ ಸಂವೇದನೆಗಳನ್ನು ಅಭಿವ್ಯಕ್ತಿಸಲಿದ್ದಾರೆ.

■

ಬಾಗಿಲು

ಎಪ್ಪತ್ತೈದರ ಸಂದರ್ಭದಲ್ಲಿ ಬೆಂಗಳೂರಿನಲ್ಲಿದ್ದ ವಾಸ್ತವ್ಯದ ಸಮಸ್ಯೆಗೆ ಪರಿಹಾರವೆಂಬಂತೆ ಆಗ ತಾನೇ 'ಅಪಾರ್ಟ್‌ಮೆಂಟ್' ಸಂಸ್ಕೃತಿ ಕಾಲಿಡುತ್ತಿತ್ತು. ನಗರದ ಹೊರವಲಯ ಎನಿಸಿಕೊಂಡಿದ್ದ ಕಂಟೋನ್‌ಮೆಂಟ್, ಇಂದಿರಾನಗರ, ಸದಾಶಿವನಗರ, ರಾಜಾಜಿನಗರ ಬಡಾವಣೆಗಳು ಪ್ರತಿಷ್ಠಿತರ ವಾಸಸ್ಥಾನವಾಗಿದ್ದು ಈಗಿನಂತೆ ಜನಸಂದಣಿ ಪ್ರದೇಶವಾಗಿರಲಿಲ್ಲ! ಇಂತಹ ಶ್ರೀಮಂತ ಪ್ರದೇಶಗಳಲ್ಲಿ ನಾನು ಹೆಚ್ಚು ಓಡಾಡಿರಲಿಲ್ಲ. ಹಾಗೆ ಓಡಾಡುವಂತಹ ಅನಿವಾರ್ಯ ಕೆಲಸವಾಗಲೀ, ಅವಕಾಶವಾಗಲೀ, ನನಗೇನು ಇರುತ್ತಿರಲಿಲ್ಲ. ಹಳೆಯ ಇಂಗ್ಲಿಷ್ ಸಿನಿಮಾ ನೋಡುವ ಹುಚ್ಚಿನಿಂದಾಗಿ ಆಗಾಗ ಮಹಾತ್ಮಗಾಂಧಿ ರಸ್ತೆಗೆ ಹೋಗುವಾಗ ನಾನು ನನ್ನ ಗೆಳೆಯರು ಅನಾವಶ್ಯಕವಾಗಿ ಕನ್ನಿಂಗ್ ಹ್ಯಾಂ ರಸ್ತೆ, ರಿಚ್‌ಮಂಡ್ ರಸ್ತೆ, ಸೇಂಟ್‌ಮಾರ್ಕ್ ರಸ್ತೆ ಮಾರ್ಗವಾಗಿ ಸುತ್ತುತ್ತಾ ಇಡೀ ದಿನ ಕಳೆದು ಬರುತ್ತಿದ್ದೆವು. ಅಲ್ಲೆಲ್ಲಾ ಸುತ್ತುವಾಗ ಇಂಗ್ಲಿಷ್ ಸಿನಿಮಾಗಳಲ್ಲಿ ಬರುವ ವಿದೇಶದ ರಸ್ತೆಗಳು ನೆನಪಾಗಿ ಒಂದು ರೀತಿಯಲ್ಲಿ ನಾವೂ 'ಫಾರಿನ್' ಪ್ರವಾಸದ ಭ್ರಮೆಯಲ್ಲಿರುತ್ತಿದ್ದೆವು. ಆಗಿನ ಡಿಸೆಂಬರ್ ಮುಂಜಾನೆಗಳಲ್ಲಿ 'ಸ್ವಿಜರ್ ಲ್ಯಾಂಡ್' ನ್ನು ಬೆಂಗಳೂರಿನಲ್ಲಿ ಕಾಣಬಹುದಾಗಿತ್ತು. ಇಲ್ಲಿನ ನಿರ್ಜನ ರಸ್ತೆಗಳು, ದೊಡ್ಡ ದೊಡ್ಡ ಮರಗಳು, ಬಂಗಲೆಗಳು, ಮುಂಜಾನೆ ಮತ್ತು ಸಂಜೆ ಮುಸುಕುತ್ತಿದ್ದ ಮಂಜು ನಿಗೂಢ ವಾತಾವರಣ ಸೃಷ್ಟಿಸುತ್ತಿದ್ದವು. ಬ್ರಿಟಿಷರು ವಾಸಿಸಿ ಬಿಟ್ಟ ಬಂಗಲೆಗಳಲ್ಲಿ ಈಗಿನ ಶ್ರೀಮಂತರು ವಾಸಿಸುತ್ತಿದ್ದಾರಾದರೂ ಆ ಪ್ರದೇಶ ಯಾರೂ ವಾಸವೇ ಇಲ್ಲವೆಂಬಂತೆ ನಿಶ್ಯಬ್ದವಾಗಿರುತ್ತಿತ್ತು. ನಾನು ಬಾಲ್ಯವೆಲ್ಲಾ ಕಳೆದ ಚಾಮರಾಜಪೇಟೆ ವಾತಾವರಣಕ್ಕೂ ಬೆಂಗಳೂರಿನ ದಕ್ಷಿಣಭಾಗದ ಈ ಪ್ರತಿಷ್ಠಿತ ವಾತಾವರಣಕ್ಕೂ ಬಹಳ ವ್ಯತ್ಯಾಸವಿತ್ತು. ನಮ್ಮ ಸುತ್ತಮುತ್ತ ಸಾಮಾನ್ಯ ಜನರು, ಮಧ್ಯಮವರ್ಗದವರು ಅತ್ಯಂತ ಶ್ರೀಮಂತ ವರ್ಗದವರು ವಾಸಿಸುತ್ತಿದ್ದರು. ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಅವರವರ ವಾಸ ಸ್ಥಳಗಳಿರುತ್ತಿದ್ದವು. ಕೆಂಪಾಂಬುದಿ ಕೆರೆಯ ಪ್ರದೇಶದ ಜೋಪಡಿಗಳಂತಹ ಮನೆಗಳು (ಈಗಿನ ಇಂಡಿಪೆಂಡೆಂಟ್ ಹೌಸ್) ಮತ್ತು ೧೦೦X೨೦೦ ಅಡಿ ನಿವೇಶನಗಳಲ್ಲಿ ಕಟ್ಟಿದ ದೊಡ್ಡ ದೊಡ್ಡ ಬಂಗಲೆಗಳು, ನಾನು ರಸ್ತೆಯಲ್ಲಿ ಓಡಾಡುವಾಗೆಲ್ಲಾ ಸಹಜವಾಗಿ ಕಣ್ಣಿಗೆ ಬೀಳುತ್ತಿದ್ದವು. ವಿದ್ಯಾರ್ಥಿ ದೆಸೆಯಲ್ಲಿದ್ದ ನನಗೆ ಇವೆಲ್ಲದರ ಬಗ್ಗೆ ಅಂತಹ ಆಸಕ್ತಿಯೇನೂ ಇರಲಿಲ್ಲ. ವರ್ಷಗಳು ಉರುಳಿದಂತೆ, ನಗರದ ಜನರ ಜೀವನ ಶೈಲಿ ಬದಲಾದಂತೆ ಎಲ್ಲವೂ ಸ್ಥಿತ್ಯಂತರಗೊಂಡವು. ಪ್ರಶಾಂತವಾಗಿರುತ್ತಿದ್ದ ರಸ್ತೆಗಳಲ್ಲಿ ವಾಯು, ಶಬ್ದ ಮಾಲಿನ್ಯವಾಗತೊಡಗಿತು. ಎಲೆ-ಹೂ ಉದುರಿಸಿ ತಣ್ಣನೆ ಗಾಳಿ ಬೀಸುತ್ತಿದ್ದ ಮರಗಳು ಮುದಿಯಾಗಿ ಉರುಳತೊಡಗಿದವು. ಅಲ್ಲಿ ವಾಸಮಾಡುತ್ತಿದ್ದ ಅನೇಕ ಜಾತಿಯ ಹಕ್ಕಿಗಳು ಮಾಯವಾದವು. ಬಂಗಲೆಗಳು ಆಫೀಸು, ಕಾರ್ಖಾನೆಗಳಾಗಿ ಬದಲಾದವು.

ನೋಡ ನೋಡುತ್ತಿದ್ದಂತೆ ಆದ ಇಂತಹ ಬದಲಾವಣೆಗಳು ನನಗೆ ಮನವರಿಕೆಯಾಗುತ್ತಿದ್ದುದು ಹೊರಗಿನಿಂದ ಯಾರಾದರೂ ಬಂದಾಗ; 'ಬೆಂಗಳೂರಿನ ವಾತಾವರಣ ತುಂಬಾ ಚೆನ್ನಾಗಿದೆ!' ಎಂದಾಗ. ಅವರಿಗೆ ಎರಡು ದಶಕಗಳ ಹಿಂದೆ ನಾನು ಕಂಡ ಅನುಭವಿಸಿದ ಪ್ರೀತಿಸಿದ ಬೆಂಗಳೂರಿನ ಬಗ್ಗೆ ವಿವರಿಸಿದರೆ ಆಶ್ಚರ್ಯಪಡುತ್ತಿದ್ದರು. ಅಷ್ಟು ವರ್ಷಗಳ ಕಾಲ ಯಾವ ಉದ್ದೇಶವೂ ಇಲ್ಲದೆ ನಾನು ಗಮನಿಸಿದ್ದ ಈ ಎಲ್ಲ ವರ್ಗದ ಮನೆಗಳ ನೆನಪುಗಳೊಂದಿಗೆ ಮನಸ್ಸಿನ ದೃಶ್ಯ ಸಂಗ್ರಹ ಸೇರಿ ಅಚ್ಚಳಿಯದೆ ಉಳಿದ ಚಿತ್ರವೆಂದರೆ ಆ ಮನೆಗಳ 'ಬಾಗಿಲು'.

ಅಲ್ಲಿಂದ ಪ್ರಾರಂಭವಾದ ಈ ಬಾಗಿಲ ಮೇಲಿನ ಕುತೂಹಲ ಮುಂದೆ ನಾನು ಸುತ್ತಿದ ಭಾರತದ

ಅನೇಕ ಊರು, ನಗರ, ಹಳ್ಳಿಗಳವರೆಗೂ ಮುಂದುವರೆಯಿತು. ಬನಾರಸ್‌ನಂತಹ ಪುರಾತನ ನಗರಗಳು ಹಾಗೂ ಇನ್ನಿತರ ಐತಿಹಾಸಿಕ ನಗರಗಳಲ್ಲಿ ಕೋಟೆ ಬಾಗಿಲುಗಳಿಂದ ಹಿಡಿದು ನಮ್ಮ ಮಲೆನಾಡಿನ ಸಣ್ಣ ಹಳ್ಳಿಯವರೆಗೂ ದೊಡ್ಡ ಸಣ್ಣ 'ಬಾಗಿಲು'ಗಳು ನನ್ನಲ್ಲಿ ಒಂದು ರೀತಿಯ ವಿಚಿತ್ರ ಆಕರ್ಷಣೆ ಹುಟ್ಟಿಸುತ್ತಿದ್ದವು.

ಹೀಗೆ ಗಮನ ಸೆಳೆವ ಬಾಗಿಲುಗಳು ಆಯಾ ಮನೆಯ ಕುಟುಂಬದ ಕನ್ನಡಿಗಳಂತೆ. ಹಾಳು ಬಿದ್ದ ಕೆಲವು ದೊಡ್ಡ ಬಂಗಲೆಗಳ ಬಾಗಿಲುಗಳು ಇರುವ ಸ್ಥಿತಿಯಲ್ಲೇ ಅಲ್ಲಿ ವಾಸಿಸುವವರ ಬಗ್ಗೆ ಅಥವಾ ಅವರ ಬಂಗಲೆಗೆ ಮುಂದೆ ಮಾಡಬಹುದಾದ ಮಾರ್ಪಾಡಿನ ಬಗ್ಗೆ ನೇರವಾಗಿ ಮಾತನಾಡುತ್ತಿದ್ದವು. ಕೆಲವಂತೂ ಆ ಮನೆಯಲ್ಲಿ ಮೆರೆದ ಜನರು ಹಾಳಾಗಿದ್ದರೂ ಆ ಜನರ ಗತ್ತನ್ನು ಉಳಿಸಿಕೊಂಡು ಅವರನ್ನು ರಕ್ಷಿಸಿದ್ದ ನೆನಪಿನೊಂದಿಗೆ ಅರೆ ತೆರೆದು ಸ್ಥಿರವಾಗಿ ನಿಂತು ಬಿಟ್ಟಿರುತ್ತವೆ.

ಹರಕು ಮುರುಕಾದ 'ಬಾಗಿಲು' ಹಿಂದೆ ಮಜಬೂತಾಗಿದ್ದಂತೆ ಅನಿಸಿದರೂ ಈಗ ಮಂದಿ ಪೈಲ್ವಾನನಂತೆ ಸೊರಗಿರುತ್ತಿದ್ದವು. ಇನ್ನು ಕೆಲವು ಯಜಮಾನನ ಮರ್ಯಾದೆ ರಕ್ಷಣೆಗಾಗಿ ಪೂರ್ಣ ಮುಚ್ಚಿ ಕೊಂಡಿರುತ್ತವೆ. ಬೀಗ ತುಕ್ಕು ಹಿಡಿದು ಹೋಗುವವರೆಗೂ ಮುಚ್ಚಿಕೊಂಡು ಆ ಮನೆಯ ಕಥೆಯನ್ನು ಮೌನವಾಗಿ ಉಲಿಯುತ್ತವೆ.

ಮಧ್ಯಮ ವರ್ಗದ ಮನೆಗಳ ಬಾಗಿಲುಗಳ ಬಗ್ಗೆ ಹೇಳುವುದಾದರೆ ಅವುಗಳಿಗೆ ಭೂತವೂ ಇಲ್ಲ, ಭವಿಷ್ಯವೂ ಇಲ್ಲ. ಕೈಗೆಟುಕದ ಐಶ್ವರ್ಯದ ಆಸೆ, ಅಭಿರುಚಿಯಿಲ್ಲದ ಆಡಂಬರದ ಜೀವನ, ಎಲ್ಲವೂ ಅವರ ಬಾಗಿಲ ಮೂಲಕ ಪ್ರತ್ಯಕ್ಷವಾಗುತ್ತವೆ.

ಕೆಳವರ್ಗದ ಮನೆಗಳ ಬಗ್ಗೆ ಹೇಳುವುದಕ್ಕೆ ಅಲ್ಲಿ ಬಾಗಿಲೇ ಇರುವುದಿಲ್ಲವಲ್ಲ? ಹೆಚ್ಚೆಂದರೆ ಗೋಣಿ ಚೀಲ, ಮುರುಕು ತಗಡು, ಅರೆ ಬರೆ ಹಲಗೆಗಳಿಂದಾದ ಬಾಗಿಲು, ಅಥವಾ ತಡಿಕೆಯೇ ಬಾಗಿಲ ಸೋಗು ಹಾಕಿರುತ್ತವೆ. ಅವು ಇರುವುದು ಚಿತ್ರಿಸಲು ಮಾತ್ರ; ರಕ್ಷಣೆಗಾಗಿ ಅಲ್ಲ. ಅವು ಮುಚ್ಚಿದರೂ ಮನೆಯೊಡೆಯನನ್ನು ಪೂರ್ತಿ ಮುಚ್ಚಿಟ್ಟುಕೊಳ್ಳುವುದಿಲ್ಲ! ಭವಿಷ್ಯವಿಲ್ಲದ ಆ ಬಾಗಿಲುಗಳ ಕಿಂಡಿಯಲ್ಲಿ ನೂರೆಂಟು ಚಿತ್ರಗಳು:

ನನಗೆ ಮಾತ್ರ ಈ ಎಲ್ಲ ಬಾಗಿಲುಗಳೂ ಚಿತ್ರವಾದಾಗ ಒಂದೇ ಅನಿಸುತ್ತಿತ್ತು. ಮುಚ್ಚಿದವು, ಅರೆತೆರೆದವು, ತೆರೆದೇ ಇರುವುವು. ಗೋಡೆಯ ಅರೆಬರೆ ಕಿತ್ತುಹೋದ ಸಿಮೆಂಟು, ಅದರೊಳಗಿನ ಕೆಂಪು ಇಟ್ಟಿಗೆ, ಆ ಮುರುಕಲುಗಳ ಮೇಲೆ ಸದಾ ಹಸಿರಾಗಿರುವ ಬಳ್ಳಿ, ಆಗಾಗ ಅದರಲ್ಲಿ ಅರಳುವ ನೀಲಿ, ಬಿಳಿ, ಸಣ್ಣ ಹೂಗಳು - ಇವೆಲ್ಲವೂ ನಮ್ಮೆಲ್ಲರ ಮನಸ್ಸಿನ ಚಿತ್ರಗಳಂತೆಯೇ. ಆದರೆ ಅವುಗಳನ್ನು ನಾವುಗಳು ಮೊದಲು ನೋಡಬೇಕು - ಮನಸ್ಸಿನ ಬಾಗಿಲನ್ನು ತೆರೆದು.

ನೀವೂ ನಿಮ್ಮ ಊರಿನ ಬಾಗಿಲುಗಳ ಮೂಲಕ ಇಣುಕಿ ನೋಡಿ, ಬಹುಶಃ ನಿಮಗೂ ಕಾಣಿಸಬಹುದು ಒಂದು ಹೊಸ ಲೋಕ ಬಾಗಿಲುಗಳು ತೆರೆದಿದ್ದರೆ.

■

ಅರ್ಜುನ ಮಾಡಿದ ಯುದ್ಧದಲ್ಲಿ ವಿಶ್ರಾಂತಿಯಿತ್ತು. ಆದರೆ ನನ್ನ ನಾದಿನಿ ಸಾರಥ್ಯದಲ್ಲಿ ವಿಶ್ರಾಂತಿಯೇ ಇಲ್ಲದ ಯುದ್ಧಘೋಷ - ನನ್ನ ಬೆಲ್ಲಿಯ ಮೇಲೆ!



ಗಂಡ ಹೆಂಡತಿ ಜಗಳ ಉಂಡು ಮಲಗಿದ ನಂತರ!

ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ'' ಎಂದು ಹೇಳಿದವನು ಇಂದು ಸಿಕ್ಕರೆ, ಜೀವಾವಧಿ ಶಿಕ್ಷೆಯಾದರೂ ಪರವಾಗಿಲ್ಲ ಅವನನ್ನು ಕೊಲೆ ಮಾಡಿಬಿಡುತ್ತಿದ್ದೆ. ಈ ಆಸ್ಪತ್ರೆಯಲ್ಲಿ ಗ್ಲೂಕೋಸ್ ನೇತಾಡಿಸಿಕೊಂಡು ಬಿದ್ದಿರಬೇಕಾದ ಪ್ರಮೇಯವೇ ಬರುತ್ತಿರಲಿಲ್ಲ.

ಕಳೆದ ಐದಾರು ತಿಂಗಳಿಂದ ನಮ್ಮನೆಯಲ್ಲಿ ಉಂಡುಮಲಗುವಾಗಲೇ ''ಕದನಾಸುರ'' ಬರುತ್ತಿದ್ದ.

ಇದೆಲ್ಲಾ ನನ್ನ ಕರ್ಮ. ಆತ್ಮೀಯರೆಂದು ನೆಂಟರಿಷ್ಟರನ್ನು ಸೇರಿಸಿದ್ದೇ ಬಂತು. "Its looks very funny"

ನನ್ನ ನಾದಿನಿಯ ಗಂಡ ನನ್ನ ಹೊಟ್ಟೆಯ ಮೇಲೆ ಮಾಡಿದ ಕಾಮೆಟ್ ಜಯಳನ್ನು ಚುಚ್ಚಿ ರೇಗಿಸಿತ್ತು.

ಅದೇನೂ ಅಷ್ಟು ದೊಡ್ಡದಿರಲಿಲ್ಲ. ನಾಲ್ಕೈದು ತಿಂಗಳಿಗೊಮ್ಮೆ ನಾಲ್ಕೈದು ಇಂಚು ದೊಡ್ಡದಾಗಿತ್ತು. ಸುಖವಾಗಿ ಬೆಳೆಸಿದ್ದು.

''ಸಾರ್ ಈ ಥರಾ ಆದ್ರೆಕಷ್ಟ, ನಿಮ್ಮ ಪ್ಯಾಂಟಿಗೆ ಬೆಲ್ಟ್‌ಬದ್ಲು ಎಲಾಸ್ಟಿಕ್ ಹಾಕ್ತೀನಿ. ಎಷ್ಟು ದೊಡ್ಡದು, ಚಿಕ್ಕದಾದ್ರೂ - ಹೊಟ್ಟೆ - ಬಿಗಿಯಾಗಿರುತ್ತೆ.'' ಚಾಂಡಾಲ ಟೈಲರ್ ಹೀಗೆ ಹೇಳಬಹುದೆ? ನೀವೂ ಅಪಾರ್ಥ ಮಾಡಿಕೊಳ್ಳಬೇಡಿ. ಅಷ್ಟು ದೊಡ್ಡಹೊಟ್ಟೆಯೆ? ಎಂದು. ನಾನು ನೆಟ್ಟಗೆ ನಿಂತು ನೆಲ ನೋಡಿದರೆ ನನ್ನ ಕಾಲಿನಿಂದ ಮೂರಡಿ ಮುಂದಿನದೆಲ್ಲಾ ಚೆನ್ನಾಗಿ ಕಾಣುತ್ತದೆ!

ನನ್ನ ನಾದಿನಿ ಬೇರೆ ಅಕ್ಕನ ಗಾಯಕ್ಕೆ ಉಪ್ಪು ಸವರಿದಳು.

''ಫಾರಿನ್‌ನಲ್ಲಿ ಇಂತಾ ಬೆಲ್ಲಿ ಇರೋವ್ರು ಇಲ್ವೇ ಇಲ್ಲ. ಎಷ್ಟು ಸ್ಲಿಮ್ ಗೊತ್ತಾ?'' ಜಯ ಕಣ್ಣರಳಿಸಿ ಕೇಳಿದ್ದೇ ಕೇಳಿದ್ದು. ಕೊನೆಗೆ ನಾದಿನಿ ನನಗೆ ಕೊಟ್ಟಿದ್ದು ಒಂದು ಜೊತೆ ಬಟ್ಟೆ. ಅದೇ ಸ್ವಾಮಿ, ಬರ್ಮುಡ ಚೆಡ್ಡಿ, ಕಾಗೆ ಗೂಬೆ ಚಿತ್ರ ಇರೋ ಬನೀನು.

ನಮ್ಮ ಹಳ್ಳಿಯ ಪಟಾಪಟಿ ಚೆಡ್ಡಿಯೇ! ಆದರೆ ಬೆಡ್‌ಶೀಟಿನಂತಹ ಡಿಸೈನು, ರಾಡಿ ಬಣ್ಣ, ಮೈಗೆ ಸ್ವಲ್ಪ ಸುಣ್ಣಬಣ್ಣ ಮಾಡಿದರೆ ಹಗಲು ವೇಷದ ಕೋಡಂಗಿಯಂತೆ.

''ಭಾವ ಈ ಬೆಲ್ಲಿ, ಐಮೀನ್ ಬೊಜ್ಜನ್ನ ಒಂದರ್ಧ ಅಡಿ ಕಮ್ಮಿ ಮಾಡಿದ್ರೆ ಈವತ್ತೂ ಮದ್ವೆಗಂಡಿನಂತೆ ಕಾಣ್ತೀರಿ. ಸ್ವಲ್ಪ ವಯಸ್ಸಾಯ್ತು ಆದ್ರೂ ಪರ್ವಾಗಿಲ್ಲ'' ನಾದಿನಿ ನಿಧಾನವಾಗಿ ಹೇಳಿದಳು.

ಅಂದಿನಿಂದ ಪ್ರಾರಂಭ ಕದನಾಸುರನ ಹಾವಳಿ. ಹಗಲೆಲ್ಲಾ ಆಫೀಸು, ನಾನು ಜಯಳ ಕೈಗೆ ಸಿಕ್ಕುವುದೇ ರಾತ್ರಿ - ಕದನಕ್ಕೆ ಒಳ್ಳೇ ಸಮಯ. ಕಾರಣ ಬೊಜ್ಜು- I mean belly.

ಯಾವುದು ಜಯಾಳ ಅಭಿಮಾನಕ್ಕೆ ಪಾತ್ರವಾಗಿತ್ತೋ ಅದೇ ಬೊಜ್ಜು ಅಂದಿನಿಂದ ಅವಳಿಗೆ ಪರಮ ವೈರಿಯಂತೆ ಕಂಡಿತು.

''ಸ್ವಲ್ಪ ಆಕಡೆ ಜರ್‍ಗಿ, ಜಾಗವಿಲ್ಲ''

''ನಿಮ್ಮ ಹೊಟ್ಟೆಯೇ ಅರ್ಧಭಾಗಕ್ಕಿದೆ. ಇನ್ನೆಲ್ಲಿ ಜಾಗ?

ಎಂದು ಪ್ರಾರಂಭವಾಗುವ ಜಗಳ ಇಬ್ಬರಲ್ಲಿ ಒಬ್ಬರಿಗೆ ನಿದ್ದೆ ಬರುವವರೆಗೂ ಗುಸು ಗುಸು, ಪಿಸಪಿಸ ಎಂದೇ ನಡೆಯುತ್ತಿತ್ತು. ಜಯಳ ಕೊನೇ ಅಸ್ತ್ರ ಸೊರ ಸೊರಕ್ ಎಂದು ಕಿವಿಬಳಿ ಮುಖವಿಡುತ್ತಿದ್ದುದು. ಸ್ವಲ್ಪ ಶಬ್ದವಾದರೂ ನಿದ್ರೆ ಬರದ ರೋಗ - ನನಗೆ, ಒಂದು ಕಡೆ ಕಣ್ಣು ಎಳೆಯುತ್ತದೆ.

ಇವಳ ಸೊರ್ ಸೊರಕ್ ನನ್ನನ್ನು ಎಚ್ಚರಿಸುತ್ತದೆ - ಚಿತ್ರಹಿಂಸೆ.

'' ಮಗೂ, ನನ್ನ ದೃಷ್ಟಿನೇ ಆಗುತ್ತೆ ಒಳ್ಳೆ ಗಣೇಶ ಇದ್ದಹಾಗಿದ್ದಿ'' ಅಮ್ಮ ನನ್ನ ನೋಡಿ ಹೇಳುತ್ತಿದ್ದ ಮಾತು.

''ನಾನೇನು ಮಾಡ್ಲಮ್ಮ? ನೀನೂ ಇಂತಾ ಸ್ಥಿತೀಲಿ ನನ್ನ ಕೈಬಿಟ್ಟು ಹೋದ್ಯಲ್ಲ?'' ಎಂದು ಸತ್ತ ಅಮ್ಮನನ್ನು ನೆನೆಸಿದೆ. ಅವಳೇನೂ ಮಾಡು ವಂತಿರಲಿಲ್ಲ.

ಮರುದಿನದಿಂದ್ಲೇ ಜಯ ಆರೋಗ್ಯಕ್ಕೆ ಸಂಬಂಧಿಸಿದ ಪುಸ್ತಕ ಗುಡ್ಡೆ ಹಾಕಿದಳು. ಅಂದಿನಿಂದ್ಲೇ ಪ್ರಾರಂಭ - ಬೆಲ್ಲಿಯ ಮಾರಣ ಹೋಮ ಸಿದ್ಧತೆ.

''ಇದೇನು ಇದು?'' ಕಿರುಚಿದೆ, ಕುರಿ ಮೇಕೆಗೆ ಹಾಕುವಂತೆ ತಟ್ಟೆಯಲ್ಲಿ ನ ಸೊಪ್ಪನ್ನು ನೋಡಿ.

''ಇವೆಲ್ಲಾ ಬೇಯಿಸದೆ ತಿನ್ಬೇಕು''

'' ಈ ತರಕಾರೀನೆಲ್ಲಾ ಹಸೀ ಹಸೀ ತಿನ್ಬೇಕು'' ನೆಮ್ಮದಿ ಊಟಕ್ಕೆ ಕಲ್ಲು, ಟಿ.ವಿ. ನೋಡಿ ಯಾವ ಯಾವ ಎಣ್ಣೆ ಬೊಜ್ಜು ತರಿಸುವುದಿಲ್ಲ ಎಂದು ಲಿಸ್ಟ್ ಹಾಕಿದಳು. ಪುಸ್ತಕ ಓದಿ ಯಾವುದನ್ನು ಬಿಡಬೇಕೆಂದು ದೊಡ್ಡ ಪಟ್ಟಿಯೇ ಇಟ್ಟಳು.

''ಇವೆಲ್ಲಾ ನಿಮ್ಗೆ ಒಳ್ಳೇದಾಗ್ಲಿಂತ್ಲೇ'' ನನ್ನ ಗೋಳಾಟ ನೋಡಲಾರದೆ ಸಂತೈಸಿದಳು. '' ನಿಮ್ಗೆ ಹೆಚ್ಚು ಕಮ್ಮಿಯಾದ್ರೆ ನಮ್ಗ್ಯಾರ್ರಿ ದಿಕ್ಕು?''

ಕೊನೇ ಅಸ್ತ್ರ- ವಾಟರ್ ಜೆಟ್. ಮಧ್ಯೆ ನನ್ನ ನಾದಿನಿ ಕಳುಹಿಸಿದ ''ಆಹಾರ ದರ್ಪಣ'' ಅವಳ ಭಗವದ್ಗೀತೆ.

ಒಂದು ತಿಂಗಳಲ್ಲಿ ಪೂರ್ಣ ಚಂದ್ರನಂತಿದ್ದ ನನ್ನ ಹೊಟ್ಟೆ, ಅಮಾವಾಸ್ಯೆ ಹತ್ತಿರ ಬಂದ ಚಂದ್ರ ನಂತಾಯ್ತು. ಜಯಳಿಗೆ ಹಿಗ್ಗು. ಸುಟ್ಟ ಬದನೇಕಾಯಿ ಮುಖ, ನುಗ್ಗೇಕಾಯಂತಾದ ದೇಹ. ಎಲ್ಲರೂ ಆಶ್ಚರ್ಯ, ಅನುಕಂಪ ಪಟ್ಟರು.

ಆಗಾಗ ಸುಸ್ತು ನಡೆಯಲು ಕಾಲೇಬರುತ್ತಿರಲಿಲ್ಲ.

''ಮೈ ಸ್ಲಿಮ್ ಆಗಿದೆ. ಅದಕ್ಕೆ ಹಾಗ ನಿಸ್ತಿರಬಹುದು'' ಜಯ ಉವಾಚ.

ನನ್ನ ಸ್ಥಿತೀ ತೀರಾ ಬಿಗಡಾಯಿಸಿದ್ದು ''ಕೋಟಿಲಿಂಗ ದರ್ಶನ''ದಿಂದ. ಆಶ್ಚರ್ಯವೇ?

''ರಾಗಿ ಆರೋಗ್ಯಕ್ಕೆ ಒಳ್ಳೆಯದು. ಮುದ್ದೆ ತಿಂದ್ರೆ ಯಾವ ರೋಗಾನೂ ಬರಲ್ಲ. ಬೊಜ್ಜೂ ಬರಲ್ಲ'' ಯಾರೋ ನನ್ನ ಹಿತ ಶತ್ರುಗಳೇ ಇರಬೇಕು, ಜಯಳಿಗೆ ಸಲಹೆ ಕೊಟ್ಟಿದ್ದರು. ಇವಳಿಗೂ ಮುದ್ದೆ ಮಾಡಲು ಬರದು ಅದರ ಪಾಠವೂ ಆಯ್ತು. ಊಟದ ಹೊತ್ತಿಗೆ ''ಮುದ್ದೇಶ್ವರ'' ತಟ್ಟೆಯಲ್ಲಿ ಸಿದ್ಧನಾದ.

ಅಷ್ಟೊತ್ತಿಗಾಗಲೇ ನನ್ನ ಹೊಟ್ಟೆ ಅಭಾವ ಪೀಡಿತ ಅಂಗವೆಂದು ನನ್ನ ಮೆದುಳು

ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ ಎಂದು ಹೇಳಿದವನು ಇಂದು ಸಿಕ್ಕರೆ, ಜೀವಾವಧಿ ಶಿಕ್ಷೆಯಾದರೂ ಪರವಾಗಿಲ್ಲ ಅವನನ್ನು ಕೊಲೆ ಮಾಡಿಬಿಡುತ್ತಿದ್ದೆ.

ಘೋಷಿಸಿತ್ತು. ನಾಲಗೆ ಸತ್ತಿತ್ತು.

ಅಂದಾದರೂ ಹೊಟ್ಟೆ ತುಂಬಾ ತಿನ್ನೋಣವೆಂದು ತಿಂದೆ. ಮುದ್ದೆಯನ್ನು ಅಖಂಡವಾಗೇ-ಒಂದೇ-ಇದ್ದ ಮುದ್ದೆಯೊಳಗೆ ನೂರಾರು ಸಣ್ಣ ಸಣ್ಣ ಗಂಟುಗಳು ಲೆಕ್ಕಸಿಗಲಿಲ್ಲ. ಒಟ್ಟಿನಲ್ಲಿ ಕೋಟಿಲಿಂಗೇಶ್ವರ ದರ್ಶನ.

ಅಂದು ರಾತ್ರಿಯೇ ನನ್ನ ಉದರ ಕ್ಷೇತ್ರದಲ್ಲಿ ಗುಂಡಾಟ-ಒಂದೊಂದು ಸಣ್ಣ ಮುದ್ದೆಗಳೂ ಅತ್ತಿಂದಿತ್ತ ಓಡಾಡ ತೊಡಗಿದವು. ಜಠರವೆಲ್ಲಾ ಗಲಿಬಿಲಿ. ಬೆಳಿಗ್ಗೆ ಹೊತ್ತಿಗೆ ಹತ್ತಾರು ಸಾರಿ ಬೇಧಿ ಮೊದಲೇ ಅರ್ಧ ಸತ್ತಿದ್ದ ದೇಹ, ಈಗ ಉಳಿದುದರಲ್ಲಿ ಮತ್ತರ್ಧ.

ಕಣ್ಣು ತೇಲಿಸಿ, ಕೈಕಾಲು ಸೆಟಸಿ ಬಿದ್ದದ್ದೇ ಜ್ಞಾಪಕ.

ಜ್ಞಾನ ಬಂದಾಗ ಆಸ್ಪತ್ರೆಯಲ್ಲಿದ್ದೆ. ಗ್ಲೂಕೋಸ್ ನೇತಾಡುತ್ತಿತ್ತು. ನಾಲ್ಕು ದಿನದಲ್ಲಿ ಸರಿಹೋದೆ.

ನನ್ನ ನೋಡಲು ನೆಂಟರಿಷ್ಟರೆಲ್ಲಾ ಬಂದರು. ಯಾರೊಂದಿಗೂ ನನ್ನ ಕತೆಯನ್ನು ಹೇಳ ಲಾಗಲಿಲ್ಲ.

''ಡಾಕ್ಟ್ರೇ, ಎಷ್ಟೇ ಖರ್ಚಾದ್ರೂ ಪರ್‍ವಾಗಿಲ್ಲ. ಪೂರ್ತಿ ಚೆಕ್ ಮಾಡ್ಬಿಡಿ'' ಅತ್ತೆ ಕಣ್ಣೊರಸಿ ಕೊಂಡಿದ್ದರು.

''ನೀ ಸುಮ್ನಿರೆ ನಾನೆಲ್ಲಾ ಹೇಳಿದ್ದೀನಿ ಯಾವ ಕಾಯಿಲೆಯಿದ್ರೂ ಹೇಳಿ ಡಾಕ್ಟ್ರೆ ಪರವಾಗಿಲ್ಲ'' ಮಾವನ ಧ್ವನಿ.

''ಇದು - ಬರಗಾಲ ರೋಗ''ವೆಂದು ಕಿರುಚಬೇಕೆನಿಸಿದರೂ ಸುಮ್ಮನಿದ್ದೆ.

''ಏನು ಗುರುವೇ ಇದು?'' ಪರಮ ಬಂದ.

''ಪರಮ ಹೇಗಾದ್ರೂ ಮಾಡಿ ನನ್ನ ಬದುಕಿಸ್ಕೋಳ್ಳೋ'' ಕೈಹಿಡಿದೆ.

ಎಲ್ಲಾ ಕತೆ ಕೇಳಿ ಪರಮ ಬಿದ್ದೂ ಬಿದ್ದೂ ನಕ್ಕ.

''ಅಂತೂ ಸೀಮೇ ಹಸುವನ್ನ, ನಾಟಿ ಹಸು ಮಾಡಿದಂತಾಯ್ತು''

ಅಲ್ಲಿಯವರೆಗೂ ಡಾಕ್ಟ್ರಿಗೂ ನನ್ನ ಕಾಯಿಲೆಯ ತಳಬುಡ ತಿಳಿದಿರಲಿಲ್ಲ ಹೆಸರೂ ಇಟ್ಟಿರಲಿಲ್ಲ.

''ನಂಗೆ ಒಬ್ರು ವೈದ್ಯರು ಗೊತ್ತು. ಅವ್ರು ಗಾಳಿ, ಪಿಶಾಚೀನೆಲ್ಲಾ ಓಡಿಸ್ತಾರೆ ಇದು ಅದರ್ದೇ ಪ್ರಭಾವ. ಇವ್ನ ಮೊದ್ಲು ಇಲ್ಲಿಂದ ಕರ್‍ಕೊಂಬನ್ನಿ'' ಪರಮ ಮಾವನ ಬುರುಡೆ ಒಳಗೇ ನಾಟುವಂತೆ ಮಾತಾಡಿದ್ದ. ಕೊನೆಗೆ ನನ್ನ ಹೆಂಡತಿಯ ಪ್ರಯೋಗ ಗಾಳಿ, ಭೂತ ಚೇಷ್ಟೆಗೆ ಬಂದು ನಿಂತಿತ್ತು.

ಹದಿನೈದು ದಿನ ಸ್ವಾಮಿ ಸುಳ್ಳುಹೇಳಬಾರದು. ಪರಮ ಪಾರು ಇಬ್ಬರೂ ಗಾಳಿ ಹೋದ ನನ್ನ ದೇಹದ ಬೆಲೂನಿಗೆ ಗಾಳಿ ತುಂಬಿದರು. ಅದು ಮೊದಲಿನಂತೇ ದುಂಡಗಾಯ್ತು. ನಾನು ಬೇಕೆಂದುದನ್ನು ತಿನ್ನಿಸಿದರು.

ಜಯ, ಅತ್ತೆ, ಮಾವ ಎಲ್ಲರಿಗೂ ಆನಂದ. ಒಂದು ರಾತ್ರಿ ಎಲ್ಲರಿಗೂ ಕತೆ ಹೇಳಿದೆ. ಎಲ್ಲರೂ ಬಿದ್ದೂ ಬಿದ್ದೂ ನಕ್ಕರು.

''ಒಳ್ಳೇ ಕುಷನ್ ತರಾ ಇದೇರಿ. ಅನ್ಯಾಯವಾಗಿ ಇದ್ನ ಒಣಗಿಸಿದ್ನಲ್ಲಾ'' ಜಯಾ ನನ್ನ ಬೆಲ್ಲಿಯ ಮೇಲೆ ತಲೆಯಿಟ್ಟು, ಅಪ್ಯಾಯತೆಯಿಂದ ಸವರುತ್ತಾ ಹೇಳಿದಳು.,

''ಆದ್ರೂ ಇದು ತುಂಬಾ ದೊಡ್ಡದಾಯ್ತು ಕಣೆ''

''ನಿಮ್ಮನ್ನ ಇನ್ಯಾರು ನೋಡಬೇಕು ಬಿಡ್ರಿ. ಅಲ್ಲದೆ ಆಸ್ಪತ್ರೆಗೆ ಕಟ್ಟೋಕೆ ಕಾಸಿಲ್ಲಪ್ಪ'' ಮುದ್ದು ಮುಖವನ್ನು ಉಬ್ಬಿಸಿ ಹುಸಿ ನಕ್ಕಳು.

■ಡಾ. ಹೆಚ್.ಎಸ್. ವೆಂಕಟೇಶ್

ಕೃಷಿಕ ಭಾರತಿ ಸಹಕಾರಿ ನಿಯಮಿತ : ಸಾಧನೆಯ ಮೈಲಿಗಲ್ಲುಗಳು

ಕೃಷಿಕ ಭಾರತಿ ಸಹಕಾರಿ ನಿಯಮಿತವು ಒಂದು ರಾಷ್ಟ್ರ ಮಟ್ಟದ ಸಹಕಾರಿ ಸಂಸ್ಥೆಯಾಗಿದ್ದು ಇದನ್ನು ಭಾರತ ಸರ್ಕಾರ ಹಾಗೂ ಕೃಷಿ ಸಹಕಾರ ಸಂಘಗಳ ಪ್ರೋತ್ಸಾಹದಿಂದ ಪ್ರಾರಂಭಿಸಲಾಗಿದೆ. ಕೃಷಿಕ ಭಾರತಿ ಸಹಕಾರ ನಿಯಮಿತ ಈಗಾಗಲೇ ಅಮೋನಿಯಾ ಮತ್ತು ಯೂರಿಯಾ ಸಂಕೀರ್ಣವನ್ನು ಹಜಿರಾ (ಗುಜರಾತ) ಎಂಬಲ್ಲಿ ಸ್ಥಾಪನೆ ಮಾಡಿ ನೈಸರ್ಗಿಕ ಅನಿಲದ ಉಪಯೋಗದಿಂದ ಯೂರಿಯಾ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಪ್ರತಿ ದಿವಸಕ್ಕೆ ಸುಮಾರು ೧೩೫೦ ಮೆ.ಟನ್ ಅಮೋನಿಯ ಉತ್ಪಾದಿಸುವ ಎರಡು ಕಾರ್ಖಾನೆಗಳನ್ನು ಹೊಂದಿದೆ. ಅದರಂತೆ ಪ್ರತಿ ದಿವಸಕ್ಕೆ ಸುಮಾರು ೨೨೦೦ ಮೆ. ಟನ್ ಯೂರಿಯಾ ಗೊಬ್ಬರವನ್ನು ಉತ್ಪಾದಿಸುವ ಎರಡು ಸ್ಥಾವರಗಳನ್ನು ಹೊಂದಿರುತ್ತದೆ. ಪ್ರತಿ ವರ್ಷಕ್ಕೆ ಒಟ್ಟು ೧೪.೫೨ ಲಕ್ಷ ಮೆ.ಟನ್ ಯೂರಿಯಾ ಗೊಬ್ಬರವನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ.

ಉತ್ಪಾದನಾ ಸಾಧನೆ

ನೈಸರ್ಗಿಕ ಅನಿಲದ ಪೂರೈಕೆಯ ಕೊರತೆಯಿದ್ದಾಗ್ಯೂ ಸಹ ಕ್ರಿಭ್ಕೋ ಅನಿಲ ಸ್ಥಾವರವು ೧೯೯೬-೯೭ರಲ್ಲಿ ಸುಮಾರು ಶೇಕಡಾ ೧೦೬.೧% ಮತ್ತು ೧೧೦.೬% ಉತ್ಪಾದನಾ ಶಕ್ತಿಯನ್ನು ಉಪಯೋಗಿಸಿಕೊಂಡು ಯೂರಿಯಾ ಮತ್ತು ಅಮೋನಿಯಾ ಉತ್ಪಾದನೆ ಮಾಡಿದೆ.

ಕ್ರಿಭ್ಕೋ ತನ್ನ ಪ್ರತಿಯೊಂದು ಕಾರ್ಯಕ್ರಮದಲ್ಲಿ ಉನ್ನತ ಸಾಧನೆ ಗೈದಿರುವುದರಿಂದ ೧೯೯೬-೯೭ರಲ್ಲಿ ೨೨೯.೩೮ ಕೋಟಿ ರೂ ನಿವ್ವಳ ಲಾಭ ಗಳಿಸಿದೆ. ೧೯೯೬-೯೭ ರಲ್ಲಿದ್ದ ತನ್ನ ಸದಸ್ಯ ಸಂಸ್ಥೆಗಳಿಗೆ ಶೇ ೧೩ರಷ್ಟು ಲಾಭಾಂಶವನ್ನು ಘೋಷಿಸಿದೆ. ಭಾರತ ಸರಕಾರ ೪೨.೬೪ ಕೋಟಿ ರೂ ಲಾಭಾಂಶವನ್ನು ಪಡೆದರೆ ಇಫ್ಕೋ ಸಂಸ್ಥೆ ೧೭.೧೪ ಕೋಟಿ ರೂ ಲಾಭಾಂಶವನ್ನು ಪಡೆದಿರುತ್ತದೆ. ಈ ಸಂಸ್ಥೆಯ ಒಟ್ಟು ಸದಸ್ಯತ್ವ ೩೧ ಮಾರ್ಚ್ ೧೯೯೭ರ ಅಂತ್ಯಕ್ಕೆ ೩೯೫೦ ಆಗಿರುತ್ತದೆ.

ಕೃಷಿಕ್ ಭಾರತಿಯು ಗೊಬ್ಬರವನ್ನು ಸಹಕಾರಿ ಸಂಘಗಳ ಮತ್ತು ಸರ್ಕಾರದ ಸಂಸ್ಥೆಗಳ ಮೂಲಕ ಮಾರಾಟ ಮಾಡುತ್ತಿದೆ. ೧೯೯೬-೯೭ರಲ್ಲಿ ಈ ಸಂಸ್ಥೆಯು ೧೬.೬೦ ಲಕ್ಷ ಮೆ. ಟನ್ ಸ್ವಂತ ತಯಾರಿಸಿದ ಕ್ರಿಭ್ಕೋ ಯೂರಿಯಾ ಗೊಬ್ಬರವನ್ನು ಮಾರಾಟ ಮಾಡಿದೆ. ಸ್ವಂತ ಕ್ರಿಭ್ಕೋ ಯೂರಿಯಾ ಅಲ್ಲದೆ ಈ ಸಂಸ್ಥೆ ೦.೬೦ ಲಕ್ಷ ಮೆ. ಟನ್ ಎನ್.ಎಫ್.ಸಿ.ಎಲ್. ಸಂಸ್ಥೆಯ ಯೂರಿಯಾವನ್ನು ಆಂಧ್ರ ಪ್ರದೇಶದಲ್ಲಿ ಮತ್ತು ೦.೮೭ ಲಕ್ಷ ಮೆ.ಟನ್. ಅಮೋನಿಯಾವನ್ನು ಗೊಬ್ಬರ ಮತ್ತು ಗೊಬ್ಬರೇತರ ಉಪಯೋಗಕ್ಕಾಗಿ ಮಾರಾಟ ಮಾಡಿದೆ. ಈ ಸಂಸ್ಥೆ ನಮ್ಮ ರಾಷ್ಟ್ರದ ೧೫ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅವುಗಳೆಂದರೆ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ದೆಹಲಿ, ಗುಜರಾತ್, ರಾಜಸ್ತಾನ್, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಬಿಹಾರ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ.

ಮಳೆಯಾಶ್ರಿತ ಕೃಷಿ ಯೋಜನೆ

ಮಳೆಯಾಶ್ರಿತ ಕೃಷಿ ನಮ್ಮ ದೇಶದಲ್ಲಿ ಬಹಳಷ್ಟು ಪ್ರಾಮುಖ್ಯತೆ ಪಡೆದಿದೆ. ಇದಕ್ಕೆ ಸಂಬಂಧಿಸಿದಂತೆ, ಓವರಸೀಸ್ ಡೆವಲೆಪ್‌ಮೆಂಟ್ ಅಡ್ಮಿನಿಷ್ಟೇಷನ್ (ಓ.ಡಿ.ಎ) ಯು.ಕೆ. ಇವರ ಆರ್ಥಿಕ ಮತ್ತು ತಾಂತ್ರಿಕ ಸಹಾಯದಿಂದ ಮಳೆಯಾಶ್ರಿತ ಕೃಷಿ ಯೋಜನೆಯನ್ನು ವಿವಿಧ ರಾಜ್ಯಗಳಾದ ರಾಜಸ್ತಾನ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಪ್ರಾರಂಭಿಸಿದೆ. ಐದು ವರ್ಷಗಳ ಕಾಲದ ಈ ಯೋಜನೆ ಜನವರಿ ೧೯೯೩ ರಿಂದ ತನ್ನ ಕಾರ್ಯ ಪ್ರಾರಂಭ ಮಾಡಿದೆ. ಈ ಯೋಜನೆಗೆ ತಗಲಬಹುದಾದ ಒಟ್ಟು ಖರ್ಚನ್ನು ೧೯.೦೬ ಕೋಟಿ ರೂಗಳನ್ನು ಬಹು ಮಟ್ಟಿಗೆ ಓ.ಡಿ.ಎ. ಸಂಸ್ಥೆ ಭರಿಸಲಿದೆ.

ಐದು ವರ್ಷಗಳ ಅವಧಿಯ ಮತ್ತೊಂದು ಮಳೆಯಾಶ್ರಿತ ಕೃಷಿ ಯೋಜನೆಯನ್ನು ಏಪ್ರಿಲ್ ೧೯೯೫ರಿಂದ ರಾಷ್ಟ್ರದ ಪೂರ್ವ ಭಾಗದಲ್ಲಿರುವ ಪಶ್ಚಿಮ ಬಂಗಾಳ, ಒರಿಸ್ಸಾ ಮತ್ತು ಬಿಹಾರ ರಾಜ್ಯಗಳಿಗೆ ವಿಸ್ತರಿಸಿದೆ. ಈ ಯೋಜನೆಗೆ ತಗಲಬಹುದಾದ ಒಟ್ಟು ಖರ್ಚನ್ನು ೩೮.೬೬ ಕೋಟಿ ರೂಪಾಯಿಗಳನ್ನು ಬಹುಮಟ್ಟಿಗೆ ಓ.ಡಿ.ಎ. ಸಂಸ್ಥೆಯೇ ಭರಿಸಲಿದೆ.

ಬೀಜೋತ್ಪಾದನಾ ಕಾರ್ಯಕ್ರಮ

ವ್ಯವಸಾಯಕ್ಕೆ ಮುಖ್ಯವಾಗಿ ಏಳು ಕೃಷಿ ಸಾಮಗ್ರಿಗಳು ಬೇಕಾಗುತ್ತವೆ. ಅದರಲ್ಲಿ ಬೀಜ ಬಹು ಮುಖ್ಯ ಪಾತ್ರ ಪಡೆದಿರುತ್ತದೆ. ಯಾವುದೇ ಬೆಳೆಯ ಉತ್ತಮ ಇಳುವರಿಯನ್ನು ಪಡೆಯಬೇಕಾದರೆ ರೈತರಿಗೆ ಉತ್ತಮ ಬಿತ್ತನೆ ಬೀಜದ ಸರಬರಾಜು ಮಾಡುವುದು ಅತ್ಯವಶ್ಯ. ಈ ದಿಸೆಯಲ್ಲಿ ಕ್ರಿಭ್ಕೋ ಸಂಸ್ಥೆ ರಸಗೊಬ್ಬರದೊಂದಿಗೆ ಒಳ್ಳೆಯ ಬಿತ್ತನೆ ಬೀಜಗಳನ್ನು ಕೂಡ ರೈತರಿಗೆ ಒದಗಿಸಲು ೧೯೯೦ನೆಯ ವರ್ಷದಿಂದ ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಬೀಜೋತ್ಪಾದನಾ ಕಾರ್ಯಕ್ರಮವನ್ನು ಕೈಗೊಂಡಿದ್ದು ಮತ್ತೆ ರಾಜಸ್ತಾನ, ಗುಜರಾತ್, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ವಿಸ್ತರಿಸಿದೆ. ಈಗಾಗಲೇ ಈ ಸಂಸ್ಥೆ ಐದು ಬೀಜ ಸಂಸ್ಕರಣ ಘಟಕಗಳನ್ನು ಅಲಿಘರ್ (ಉ.ಪ್ರ), ಹಿಸ್ಸಾರ್ (ಹರ್ಯಾಣ), ಗೋದ್ರಾ (ಗುಜರಾತ), ನಿಜಾಮಾಬಾದ್(ಆಂಧ್ರ ಪ್ರದೇಶ) ಮತ್ತು ಅಜ್ಮೀರ್ (ರಾಜಸ್ತಾನ)ಗಳಲ್ಲಿ ಸ್ಥಾಪಿಸಿದೆ.

ಕ್ರಿಭ್ಕೋ ಜೈವಿಕ ಗೊಬ್ಬರಗಳು

ಕೃಷಿಯಲ್ಲಿ ಹೆಚ್ಚು ಹೆಚ್ಚಾಗಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಮಣ್ಣಿನ ಪ್ರಾಕೃತಿಕ ಫಲವತ್ತತೆ ಕಡಿಮೆಯಾಗುತ್ತಾ ಬಂದು ಕೃಷಿಗೆ ಅಯೋಗ್ಯವಾಗುತ್ತದೆಂದು ಸಂಶೋಧನೆಗಳ ಮೂಲಕ ತಿಳಿದು ಬಂದುದರಿಂದ ಮತ್ತು ರಾಸಾಯನಿಕ ಗೊಬ್ಬರಗಳ ಬೆಲೆ ಹೆಚ್ಚಾದುದರಿಂದ ಜೈವಿಕ ಮತ್ತು ಸಾವಯವ ಗೊಬ್ಬರಗಳ ಬಳಕೆಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈ ದಿಸೆಯಲ್ಲಿ ಕ್ರಿಭ್ಕೋ ಸಂಸ್ಥೆ ಕಾರ್ಯವನ್ನು ೧೯೯೫ನೇ ಸಾಲಿನಿಂದ ಜೈವಿಕ ಗೊಬ್ಬರಗಳ ಉತ್ಪಾದನೆಗಾಗಿ ವಿಸ್ತರಿಸಿ ರೈತರಿಗೆ ಯೋಗ್ಯದರದಲ್ಲಿ ಉತ್ತಮ ಪೋಷಕಾಂಶಗಳನ್ನು ಜೈವಿಕ ಗೊಬ್ಬರಗಳ ಮೂಲಕ ಪೂರೈಕೆ ಮಾಡುವಲ್ಲಿ ಕಾರ್ಯನಿರತವಾಗಿದೆ. ಈ ಕ್ರಿಭ್ಕೋ ಜೈವಿಕ ಗೊಬ್ಬರಗಳನ್ನು ಬಳಸುವುದರಿಂದ ಶೇ. ೧೫ ರಿಂದ ೩೦ ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು. ಮಣ್ಣಿನ ಪ್ರಾಕೃತಿಕ ಫಲವತ್ತತೆಯ ಗುಣಮಟ್ಟವನ್ನು ಕಾಪಾಡುವುದರಲ್ಲಿ ಜೈವಿಕ ಗೊಬ್ಬರಗಳು ಯಶಸ್ವಿಯಾಗಿವೆ

ಯೆಂದು ತಿಳಿದಿರುವುದು. ಪ್ರತಿ ವರ್ಷ ಕ್ರಿಭ್ಕೋ ಸಂಸ್ಥೆ ಸುಮಾರು ೧೦೦ ಮೆ.ಟನ್ ಕ್ರಿಭ್ಕೋ ಜೈವಿಕ ಗೊಬ್ಬರಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಮೊದಲನೆಯ ವರ್ಷ ಕ್ರಿಭ್ಕೋ ೧೯೯೬-೯೭ರಲ್ಲಿ ೧೩.೨ ಮೆ. ಟನ್ ಕ್ರಿಭ್ಕೋ ಜೈವಿಕ ಗೊಬ್ಬರಗಳಾದ ರೈಜೋಬಿಯಂ, ಅಜಟೋಬ್ಯಾಕ್ಟರ್ ಮತ್ತು ಪಿ.ಎಸ್.ಎಮ್‌ಗಳನ್ನು ರೈತರಿಗೆ ವಿತರಿಸಿ ಶೇ. ೧೦೦ರಷ್ಟು ಮಾರಾಟ ಮಾಡಿದೆ. ೧೯೯೭-೯೮ರ ಬೇಡಿಕೆಯನ್ನು (೭೯ ಮೆ.ಟನ್) ಕಾಲಕ್ಕನುಸಾರವಾಗಿ ಪೂರೈಸಿದೆ.

ಕಡಿಮೆ ದರದ ಸಸ್ಯ ಪೋಷಕಾಂಶಗಳಿಗೆ ಭಾರತ ಸರಕಾರ ಕೊಡುತ್ತಿರುವ ಆದ್ಯತೆಯನ್ನು, ಜೈವಿಕ ಗೊಬ್ಬರಗಳಿಗಿರುವ ಕಡಿಮೆ ಆಯುಷ್ಯ ಮತ್ತು ಸಾಗಾಣಿಕೆ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಭ್ಕೋ ಸಂಸ್ಥೆ ಜೈವಿಕ ಗೊಬ್ಬರಗಳನ್ನು ಉತ್ಪಾದಿಸುವ ಘಟಕಗಳನ್ನು ಉತ್ತರ ಭಾರತದಲ್ಲೊಂದು ಮತ್ತು ದಕ್ಷಿಣ ಭಾರತದಲ್ಲೊಂದರಂತೆ ಸ್ಥಾಪಿಸುವ ಕಾರ್ಯವನ್ನು ಹಮ್ಮಿಕೊಂಡಿದೆ.

ಕ್ರಿಭ್ಕೋ ಸಂಸ್ಥೆಯು ಕ್ರಿಭ್ಕೋ ಯೂರಿಯಾ ಹಾಗೂ ಕ್ರಿಭ್ಕೋ ಜೈವಿಕ ಗೊಬ್ಬರಗಳ ಉತ್ಪಾದನೆ ಹಾಗೂ ಮಾರಾಟದ ವ್ಯವಸ್ಥೆ ಮಾಡುವುದಲ್ಲದೇ ರೈತರ ಆರ್ಥಿಕ ಮತ್ತು ಸಾಮಾಜಿಕ ಗುಣಮಟ್ಟವನ್ನು ಉತ್ತಮಪಡಿಸಲು ಹಲವಾರು ಶೈಕ್ಷಣಿಕ ಮತ್ತು ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕೃಷಿ ತಾಂತ್ರಿಕತೆ ವರ್ಗಾವಣೆ

ಸಮಗ್ರ ಕೃಷಿ ಸಾಮಾಜಿಕ-ಆರ್ಥಿಕತೆ ಮತ್ತು ಗ್ರಾಮೀಣ ಅಭಿವೃದ್ಧಿಗೋಸ್ಕರ ಕ್ರಿಭ್ಕೋ ಸಂಸ್ಥೆ ಹಲವಾರು ಕೃಷಿ ತಾಂತ್ರಿಕತೆ ವರ್ಗಾವಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇಂತಹ ಹಲವಾರು ಕಾರ್ಯಕ್ರಮಗಳನ್ನು ಕ್ರಿಭ್ಕೋ ಸಂಸ್ಥೆ ೧೯೯೬-೯೭ರಲ್ಲಿ ರಾಜ್ಯಾದ್ಯಂತ ಏರ್ಪಡಿಸುವಲ್ಲಿ ಯಶಸ್ವಿಯಾಗಿದೆ.

ಬೆಳೆ ವಿಚಾರ ಸಂಕಿರಣ

ಆಯಾ ಪ್ರದೇಶದ ಮುಖ್ಯ ಬೆಳೆಗಳ ಆಧುನಿಕ ಕೃಷಿ ತಂತ್ರ ಜ್ಞಾನದ ಬಗ್ಗೆ ರೈತರಲ್ಲಿ ಅರಿವು ಮೂಡಿಸುವಲ್ಲಿ, ಬೆಳೆಗಳ ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ಹಂಗಾಮು ಪ್ರಾರಂಭವಾಗುವುದಕ್ಕಿಂತ ಮುಂಚೆ ಏರ್ಪಡಿಸಿ ಕೃಷಿ ವಿಜ್ಞಾನಿಗಳು ಮತ್ತು ಸ್ಥಳೀಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಆಹ್ವಾನಿಸಿ ರೈತರಿಗೆ ಆಧುನಿಕ ಕೃಷಿ ಮತ್ತು ಇತರ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ವಸ್ತು ಪ್ರದರ್ಶನ ತಾಂತ್ರಿಕ ಮೇಳಗಳನ್ನು ಮತ್ತು ಕೃಷಿ ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ಕೂಡ ರೈತರಿಗೆ ಆಧುನಿಕ ಕೃಷಿ ತಾಂತ್ರಿಕತೆಯ ಬಗ್ಗೆ ಮಾಹಿತಿ ನೀಡುವುದೊಂದು ಹೊಸ ಹೆಜ್ಜೆಯಾಗಿದೆ. ಇಂತಹ ಪ್ರದರ್ಶನಗಳನ್ನು ಜಾತ್ರೆ ಮತ್ತು ಕೃಷಿ ಮೇಳಗಳಲ್ಲಿ ಏರ್ಪಡಿಸಿ ರೈತರ ಸೇವೆಯಲ್ಲಿ ಕೃಷಿಕ್ ಭಾರತಿ ನಿರತವಾಗಿದೆ.

ಚರ್ಚಾಕೂಟ

ರಾಸಾಯನಿಕ ಗೊಬ್ಬರಗಳ ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಚರ್ಚಾಕೂಟಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ಏರ್ಪಡಿಸಲಾಗುತ್ತಿದೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ರಾಸಾಯನಿಕ ಗೊಬ್ಬರಗಳ ಪ್ರಮುಖ ಪಾತ್ರವೇನು ಎಂಬುದನ್ನು ಕೃಷಿ ವಿಜ್ಞಾನಿಗಳ ಮೂಲಕ ತಿಳಿಯಪಡಿಸುವದೇ ಈ ಕಾರ್ಯಕ್ರಮದ ಮೂಲ ಉದ್ದೇಶ.

ರೈತರ ಸಭೆಗಳು

ಆಯಾ ಪ್ರದೇಶಗಳಿಗೆ ಸಂಬಂಧಪಟ್ಟ ಕೃಷಿ ಉತ್ಪಾದನೆ ಮತ್ತು ಇತರೆ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕೃಷಿಕ ಭಾರತಿ ರೈತರ ಸಭೆಗಳನ್ನು ಏರ್ಪಡಿಸುತ್ತಿದೆ. ಕೃಷಿ ಇಲಾಖೆ ಮತ್ತು ಕೃಷಿ ವಿಶ್ವ ವಿದ್ಯಾನಿಲಯಗಳೊಡಗೂಡಿ ನಿಯೋಜಿಸಿ ರೈತರಿಗೆ ಹೊಸ ಕೃಷಿ ತಂತ್ರ ಜ್ಞಾನಗಳ ಹಾಗೂ ಕೃಷಿಯಲ್ಲಿ ಅವುಗಳನ್ನು ಅಳವಡಿಸುವ ಬಗ್ಗೆ ಅನೇಕ ಮಾಹಿತಿಗಳನ್ನು ನೀಡಲಾಗುವುದು.

ವಿಶೇಷ ಆಂದೋಲನ ಕಾರ್ಯಕ್ರಮ

ಫಲಿತಾಂಶಗಳನ್ನು ತಕ್ಷಣ ಒದಗಿಸಲು ವಿಶೇಷ ಆಂದೋಲನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಉದಾ: ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ಪಶು ಚಿಕಿತ್ಸಾ ಶಿಬಿರಗಳು, ಸಸ್ಯ ಸಂರಕ್ಷಣಾ ಶಿಬಿರಗಳು, ಮಣ್ಣು ಪರೀಕ್ಷೆ ಶಿಬಿರ ಮತ್ತು ವನ ಮಹೋತ್ಸವ ಇತ್ಯಾದಿ ತಂತ್ರಜ್ಞರು ಮತ್ತು ಸ್ಥಳೀಯ ರೈತರು ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುತ್ತಾರೆ.

ಕ್ಷೇತ್ರ ಪ್ರಾತ್ಯಕ್ಷಿತೆ

'ಮಾಡಿ ತಿಳಿ ಮತ್ತು ನೋಡಿ ಕಲಿ' ಎಂಬುದನ್ನು ರೈತರಿಗೆ ಕೃಷಿಕ ಭಾರತಿಯು ಕ್ಷೇತ್ರ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸುವುದರ ಮೂಲಕ ತಿಳಿಸಿಕೊಡುತ್ತಿದೆ. ಉದಾ: ಜೈವಿಕ ಗೊಬ್ಬರಗಳ ಬಳಕೆ ಮತ್ತು ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಕ್ಷೇತ್ರ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸಲಾಗುತ್ತಿದೆ. ರೈತರಿಗೆ ಪ್ರತ್ಯಕ್ಷವಾಗಿ ಪ್ರಾತ್ಯಕ್ಷಿತೆ ತಾಕಿಗೂ ಮತ್ತು ಸ್ಥಳೀಯ ಬೇಸಾಯ ಕ್ರಮಗಳಿಗೂ ಇರುವ ವ್ಯತ್ಯಾಸ ಅರಿಯಲು ಕ್ಷೇತ್ರೋತ್ಸವಗಳನ್ನು ಏರ್ಪಡಿಸಲಾಗುತ್ತಿದೆ.

ಸಲಹಾ ಸಮಿತಿ ಸಭೆಗಳು

ಈ ಸಲಹಾ ಸಮಿತಿಯು ಕೃಷಿಕ ಭಾರತಿಯು ಎದುರಿಸುವ ಅನೇಕ ಮಾರಾಟ ತೊಂದರೆಗಳನ್ನು ಸರ್ಕಾರಿ ಅಧಿಕಾರಿಗಳು ಕೃಷಿ ವಿಶ್ವ ವಿದ್ಯಾನಿಲಯದ ಪ್ರತಿನಿಧಿಗಳು, ಸಹಕಾರಿ ಮಾರಾಟ ಮಹಾ ಮಂಡಳಿಯ ಅಧಿಕಾರಿಗಳು ಮತ್ತು ಸಲಹಾ ಸಮಿತಿ ಸಭೆಯ ಪ್ರತಿನಿಧಿಗಳೆಲ್ಲರೂ ಒಂದೇ ವೇದಿಕೆಯಲ್ಲಿ ಸೇರಿ ಚರ್ಚಿಸುವ ಅವಕಾಶವನ್ನು ಮಾಡಿಕೊಟ್ಟಿದೆ. ಇದರಿಂದಾಗಿ ಅದರ ಹಲವಾರು ಸಮಸ್ಯೆಗಳನ್ನು ಚರ್ಚಿಸಿ ಅವುಗಳನ್ನು ನಿವಾರಿಸುವ ಇಂತಹ ಸಭೆಗಳು ಅನುಕೂಲಕಾರಿಯಾಗಿದೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ

ಒಳ್ಳೆಯ ವ್ಯಾಪಾರ ಸಂಬಂಧವನ್ನು ಅಭಿವೃದ್ಧಿ ಪಡಿಸಲು ಮಾರಾಟಗಾರರ ಹಾಗೂ ರೈತರ ನಿಕಟ ಸಂಬಂಧವನ್ನು ಬಲಪಡಿಸಲು ಸದಸ್ಯ ಸಂಘದಿಂದ ಕೇವಲ ೫ ಕಿ.ಮೀ ದೂರದಲ್ಲಿರುವ ಗ್ರಾಮ ಸೇವಾ ಸಹಕಾರಿ ಸಂಘವನ್ನು ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯಡಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.

ಈ ಯೋಜನೆಯಡಿಯಲ್ಲಿ ಕೃಷಿ ಸಾಮಾಜಿಕ ಕ್ಷೇಮಾಭಿವೃದ್ಧಿ, ಪಶು ಆರೋಗ್ಯ, ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ.

ದತ್ತು ಗ್ರಾಮ ಸ್ವೀಕಾರ

ಕೃಷಿಕ ಭಾರತಿಯು ತನ್ನ ಕಾರ್ಯಕ್ರಮದಡಿಯಲ್ಲಿ ಅನೇಕ ಹಳ್ಳಿಗಳನ್ನು ದತ್ತು ಗ್ರಾಮವನ್ನಾಗಿ ಸ್ವೀಕರಿಸಿ ಅದರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಇಂತಹ ಹಳ್ಳಿಗಳಲ್ಲಿ ಒಂದು ವರ್ಷ ಕಾಲ 'ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೃಷಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಗ್ರಾಮ ನೈರ್ಮಲ್ಯ ಹಾಗೂ ವನ ನಿರ್ಮಾಣ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಿ ಕೃಷಿಕರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದೆ.

■ ಮಂಜುನಾಥ್ (ಮ್ಯಾನೇಜರ್)
■ ಸಾಲಿಮಠ

ಬಳ್ಳಾರಿ ಜಿಲ್ಲೆಯ ಆಡುಮಾತಿನ ವೈಶಿಷ್ಟ್ಯಗಳು

■ ಎಂ.ಎ. ಚಕ್ರಪಾಣಿ

ಬಳ್ಳಾರಿಯ ರಣರಣ ಬಿಸಿಲು ರಾಚುತ್ತಿದೆ. ಬಳ್ಳಾರಿಯ ಬದುಕೆಂದರೆ ಬಿಸಿಲ-ಬದುಕು. ಅದರಲ್ಲೂ ಬೇಸಿಗೆಯ ಬಿಸಿಲೆಂದರೆ ಕೇಳಬೇಕೆ? ನಡೆದೋ ಟೂ ವೀಲರ್ ಮೇಲೊ ಸಾಗಿದರೆ ತುಟಿಗಳಿಂದ ಗಂಟಲ ತನಕವೂ ಪಸೆ ಆರುತ್ತದೆ.

ಹಠಾತ್ತನೆ ರಸ್ತೆಯ ಬದಿಯಲ್ಲಿ ರಾಶಿ ಹಾಕಿದ ಎಳೆನೀರು ಕಾಣಿಸುತ್ತದೆ. ಹೋದ ಜೀವ ಮರಳಿ ಬರುತ್ತದೆ. ನಾಲಗೆಯಿಂದ ತುಟಿಯನ್ನು ಸವರಿಕೊಳ್ಳುತ್ತ

''ಎಳೆನೀರು ಕೊಡಪ್ಪ'' ಎನ್ನುತ್ತೀರಿ. ಎಳೆನೀರಿನಾತ ಥಟ್ಟನೆ ಕೇಳುತ್ತಾನೆ-

''ಹಾಲಾ? ಗಂಜಿಯಾ?''

ನೀವು ಈ ಜಿಲ್ಲೆಯವರಾದರೆ ಮಾತ್ರ ಆತನ ಪ್ರಶ್ನೆ ನಿಮಗೆ ಅರ್ಥವಾಗುತ್ತದೆ. ಬೇರೆ ಕಡೆಯವರಾದರೆ ತಲೆ ಕೆರೆದುಕೊಳ್ಳುತ್ತೀರಿ. ಎಳೆನೀರಿನಲ್ಲಿ ಹಾಲೆಲ್ಲಿಂದ ಬರಬೇಕು? ಗಂಜಿ ಎಲ್ಲಿಂದ ಬರಬೇಕು?

ಇಲ್ಲಿ ಹಾಲೆಂದರೆ ಹಸುವಿನ ಕೆಚ್ಚಲಿನಿಂದಲೂ KMF ಪ್ಯಾಕೆಟ್ಟಿನಿಂದಲೂ ಸುರಿಯುವ ಹಾಲಲ್ಲ; 'ನೀರು' ಎಂದಷ್ಟೇ ಅರ್ಥ. 'ಗಂಜಿ' ಎಂದರೆ ಅನ್ನ ಬಸಿದಾಗ ಸಿಗುವ ಗಂಜಿಯಲ್ಲ; 'ತಿರುಳು' ಎಂದಷ್ಟೆ ಅರ್ಥ. ''ನೀರು ಮಾತ್ರ ಇರುವ ಎಳೆನೀರು ಕೊಡಲೆ? ಅಥವಾ ತಿರುಳು ಬಲಿತಿರುವ ಎಳೆನೀರು ಕೊಡಲೆ?'' ಎಂದು ಎಳೆನೀರಿನಾತ ನಿಮ್ಮನ್ನು ಕೇಳಿರುತ್ತಾನೆ. ನೀರಡಿಕೆ ಮಾತ್ರ ಆಗಿದ್ದರೆ ಹಾಲಿನ ಎಳೆನೀರು ಕೇಳುತ್ತೀರಿ; ನೀರಡಿಕೆ ಜೊತೆಗೆ ಹೊಟ್ಟೆಯೂ ಹಸಿದಿದ್ದರೆ ನೀವು ಗಂಜಿಯ ಎಳೆನೀರು ಕೇಳುತ್ತೀರಿ!

ಪ್ರತಿಯೊಂದು ಪ್ರದೇಶಕ್ಕೂ ಆಡುಮಾತಿನ ವೈಶಿಷ್ಟ್ಯ ಇದ್ದೇ ಇದೆ. ಇನ್ನೊಂದು ಪ್ರದೇಶದವರಿಗೆ ಅದು ಅರ್ಥವಾಗುವುದೂ ಅಷ್ಟರಲ್ಲಿಯೇ ಇದೆ. ಲಿಖಿತ ರೂಪದ ಭಾಷೆಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ ಆಡುಮಾತು.

ಈ ಜಿಲ್ಲೆಗೆ ಬಂದು ಕೆಲವೇ ದಿನಗಳ ನಂತರ ತರಕಾರಿ ಅಂಗಡಿಗೆ ಹೋಗಿದ್ದೆ.

''ಟೊಮ್ಯಾಟೊ ಹಣ್ಣು ಕೊಡಪ್ಪ'' ಎಂದೆ.

''ಏಸು?'' ಎಂದ ಅಂಗಡಿಯಾತ.

'ಏಸು' ಎಂದರೆ 'ಜೀಸಸ್' ಎಂಬುದರ ತದ್ಭವರೂಪ ಎಂದಷ್ಟೇ ತಿಳಿದಿದ್ದ ನಾನು ಗಲಿಬಿಲಿಗೊಂಡೆ. ''ಎಷ್ಟು?'' ಎಂಬುದರ ತದ್ಭವ ರೂಪವೂ 'ಏಸು?'' ಎಂದು ತಿಳಿದುಕೊಳ್ಳಲು ನನಗೆ ಸ್ವಲ್ಪ ದಿನಗಳೇ ಬೇಕಾದವು.

ಬಳ್ಳಾರಿಯ ಆಡುಮಾತು ಈ ಜಿಲ್ಲೆಯ ವೈಶಿಷ್ಟ್ಯ. ಇನ್ನಾವ ಜಿಲ್ಲೆಯಲ್ಲೂ ಈ ಆಡುಮಾತು ಸಿಗಲಿಕ್ಕಿಲ್ಲ. ದಕ್ಷಿಣ ಕರ್ನಾಟಕದವರು ಎಕಾರ ಪ್ರಿಯರು. ತಟ್ಟೆ, ತಲೆ, ದೋಸೆ, ಮೀಸೆ, ಕಟ್ಟೆ, ಉಂಡೆ, ಚಿಟ್ಟೆ ಇತ್ಯಾದಿ. ಬಳ್ಳಾರಿ ಜನ ಇಕಾರಪ್ರಿಯರು. ತಟ್ಟಿ, ತೆಲಿ, ದಾಸಿ, ಮೀಸಿ, ಕಟ್ಟಿ, ಉಂಡಿ, ಚಿಟ್ಟಿ ಇತ್ಯಾದಿ.

ಹೊಡಿ-ಬಡಿ

ಹೊಡೆಯುವುದಕ್ಕೂ ಬಡಿಯುವುದಕ್ಕೂ ವ್ಯತ್ಯಾಸವಿದೆಯೆ? 'ಇಲ್ಲ' ಎನ್ನುತ್ತೀರಿ. 'ತಂದೆ ಮಗನನ್ನು ಹೊಡೆದ' ಎಂದರೂ 'ತಂದೆ ಮಗನನ್ನು ಬಡಿದ' ಎಂದರೂ ಅರ್ಥ ಒಂದೇ, ಅಲ್ಲವೆ?

ಬಳ್ಳಾರಿಯ ಆಡುಮಾತಿನಲ್ಲಿ ಇವೆರಡೂ ಒಂದೇ ಅಲ್ಲ! ಒಂದು ದಿನ ಶಿಶುಮಂದಿರ ಓದುವ ಪುಟ್ಟ ಪುಟ್ಟ ಮಕ್ಕಳು ಗುಂಪುಗೂಡಿ ಆಟವಾಡುತ್ತಿದ್ದರು. ಕುದುರಿ(ರೆ!) ಆಟ. ಒಂದು ಮುಷ್ಟಿಯ ಮೇಲೆ ಇನ್ನೊಂದು ಮುಷ್ಟಿಯನ್ನಿಟ್ಟು ಒಬ್ಬ ಹುಡುಗ ಕುಳಿತಿದ್ದ. ಇನ್ನೊಬ್ಬ ರಾಗವಾಗಿ ಹೀಗೆ ಕೇಳುತ್ತಿದ್ದ:

ಪ್ರಶ್ನೆ: ''.... ಯಾವೂರ ಕುದರಿ?''
ಉತ್ತರ: ''ರಾಚೂರ ಕುದರಿ''
ಪ್ರಶ್ನೆ: ''ಇಲ್ಲಿಗ್ಯಾಕೆ ಬಂತು?''
ಉತ್ತರ: ''ಮೇವು ತಿನ್ನಾಕ್ಬಂತು.''

ಮೇವು ತಿನ್ನಾಕ್ಬಂತು ಎಂಬ ಉತ್ತರ ಬಂದ ಕೂಡಲೆ ಪ್ರಶ್ನೆ ಕೇಳುವ ಹುಡುಗನ ಮುಂದಿನ ಪ್ರಶ್ನೆ ಹೀಗಿತ್ತು:

''ಹೊಡಿಲಾ ಬಡಿಲಾ?''

ಅಲ್ಲಿ ತನಕವೂ ಆಟವನ್ನು ಸುಮ್ಮನೆ ನೋಡುತ್ತಿದ್ದ ನಾನು ಈ ಪ್ರಶ್ನೆ ಕಿವಿಗೆ ಬೀಳುತ್ತಲೆ ಹುಷಾರಾದೆ. ಎಚ್ಚರದಿಂದ ಗಮನಿಸತೊಡಗಿದೆ:

ಹುಡುಗ ಉತ್ತರಿಸಿದ : ''ಹೊಡಿ.'' ಪ್ರಶ್ನೆ ಕೇಳುತ್ತಿದ್ದ ಹುಡುಗ- ''ಹೇಯ್ ಹೇಯ್...'' ಎಂದು ಜಬರಿಸಿದ. ಮತ್ತೆ ಆಟ ಮುಂದು ವರಿಯಿತು.

'ಹೊಡಿ' ಎಂದಾಗ ಹುಡುಗ ಕುದುರಿಯನ್ನು ಶಿಕ್ಷಿಸಲಿಲ್ಲ. ಜಬರಿಸಿ ಬೆನ್ನಟ್ಟಿದ್ದ. 'ಬಡಿ' ಎಂದಾಗಷ್ಟೆ ಬಡಿಯುವದನ್ನು ನಟಿಸಿ ತೋರಿಸಿದ. ಮಕ್ಕಳ ಆಟದಲ್ಲಿ ಆಡು ಮಾತಿನ ವೈಶಿಷ್ಟ್ಯವೊಂದು ಇಣುಕುತ್ತಿತ್ತು. 'ಹೊಡಿ' ಎಂದರೆ ಜಬರಿಸಿ ಬೆನ್ನಟ್ಟುವ ಕ್ರಿಯೆ. 'ಬಡಿ' ಎಂದರೆ ಬಡಿದು ಶಿಕ್ಷಿಸುವ ಕ್ರಿಯೆ!

''ಕಣಕ್ಕೆ ಆಕಳ ಬಿದ್ದಂಗಾತು. ಹೊಡಿಯಲೇ'' ಎಂದು ರೈತನೊಬ್ಬ ಹುಡುಗನಿಗೆ ಹೇಳುವದನ್ನು ಬಹಳ ದಿನಗಳ ಬಳಿಕ ಕೇಳಿದೆ. ''ಆಕಳ ಬಿದ್ದಂಗಾತು'' ಎಂದರೆ ಕಾಲು ಜಾರಿ ಬಿದ್ದಿತು ಎಂದಲ್ಲ ಅರ್ಥ; 'ಕಳ್ಳತನದಿಂದ ಪ್ರವೇಶಿಸಿತು' ಎಂದು. ಕಣಕ್ಕೆ 'ಬಿದ್ದ' ಆಕಳನ್ನು ಹುಡುಗ ಜಬರಿಸಿ ಕಣದಿಂದ ಹೊರಕ್ಕೆ ಓಡಿಸಿದ. ರೈತ 'ಬಡಿಯಲೇ' ಎಂದಿದ್ದರೆ ಹುಡುಗ ಬಡಿಗೆ ಹಿಡಿದುಕೊಂಡು ಬಡಿಯುತ್ತಿದ್ದ!

ವದಿ

'ವದಿ' ಎನ್ನುವುದು 'ಒದೆ' ಎನ್ನುವ ಪದದ ಬಳ್ಳಾರಿ ರೂಪ. 'ಒದೆಯುವುದು' ಎಂದರೆ ಕಾಲಿನಿಂದ ಹೊಡೆಯುವ ಕ್ರಿಯೆ ಎಂದು ನಿಮಗೆ ಗೊತ್ತು. ಆದರೆ ಬಳ್ಳಾರಿಯ ಜನ ಕೈಯಿಂದಲೂ ವದಿಯಬಲ್ಲರು! ಇಲ್ಲಿ ವದಿ ಎಂದರೆ 'ಬಡಿಯುವುದು' ಎಂದರ್ಥ. 'ಕೃತಯುಗದೊಳು ಗುರುವು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ ಮಹಾಹಸಾದವೆಂದರಯ್ಯ'' ಎಂಬ ಪ್ರಭುದೇವರ ವಚನದಲ್ಲಿ ಹೇಳಿರುವ ಅರ್ಥ.

ಕಾಲಿನಿಂದ ಹೊಡೆಯುವ ಕ್ರಿಯೆಯನ್ನು ತಿಳಿಸಲು ಬಳ್ಳಾರಿಯ ಜನ 'ವದಿ'ಗೆ ಒಂದು ವಿಶೇಷಣ ಸೇರಿಸುತ್ತಾರೆ. 'ಕಾಲಿಂದ ವದ್ದ' ಎಂದು. ಹೊಡೆತ ಜೋರಾಗಿದ್ದರೆ ವಿಶೇಷಣ ದ್ವಿರುಕ್ತಿಯಾಗುತ್ತದೆ. ಕಾಲು ಕಾಲಿಲೇ ವದ್ದ!

'ಹಾಸಿ' ಮತ್ತು 'ಹಿಂದೆ'

'ದಾಟಿ' 'ಹಾದು' ಎಂಬ ಪದವು ಬಳ್ಳಾರಿ ಜಿಲ್ಲೆಯಲ್ಲಿ 'ಹಾಸಿ' ಎಂಬ ರೂಪ ತಾಳಿದೆ. 'ಗುಡಿಯನ್ನು ಹಾದು ಬಾ' ಎಂಬ ವಾಕ್ಯವನ್ನು ನಮ್ಮ ಜನ 'ಗುಡಿಯಾಗ್ಹಾಸಿ ಬಾ' ಎನ್ನುತ್ತಾರೆ. 'ಹಾಸಿ' ಎಂಬುದು 'ಹಾಯಿಸಿ' ಎಂಬುದರ ಹ್ರಸ್ವ ರೂಪ. 'ಕಣದಾಗಾಸಿ' 'ಹೊಲದಾಗಾಸಿ' ಎಂದರೆ

'ಕಣವನ್ನು ದಾಟಿ' 'ಹೊಲವನ್ನು ದಾಟಿ' ಎಂದರ್ಥ.

'ಬಳಿಕ' 'ಆಮೇಲೆ' ಎಂಬ ಪದವು 'ಹಿಂದೆ' ಎಂಬ ರೂಪ ತಾಳಿದೆ. ''ಜಳಕ ಆದಿಂದೆ ಗುಡಿಗೊಕ್ಕಿನಿ'' ಎಂದರೆ ಜಳಕ ಆದ ಹಿಂದೆ (=ಸ್ನಾನ ಆದ ಬಳಿಕ) ಗುಡಿಗೆ ಹೋಗ್ತೀನಿ'' ಎಂಬುದರ ರೂಪ.

ಅಕ್ಷರ ಪಲ್ಲಟ

ಬಳ್ಳಾರಿ ಜಿಲ್ಲೆಯ ಜನ ಕೆಲವೊಂದು ಪದಗಳಲ್ಲಿ ಒಂದೆರಡು ಅಕ್ಷರಗಳನ್ನು ಸ್ಥಾನಪಲ್ಲಟಗೊಳಿಸಿ ಬಳಸುವದೂ ಉಂಟು. 'ಅಗಳಾಡು' ಎಂಬುದು ಅಂತಹ ಒಂದು ಪದ. ಇದು 'ಅಲುಗಾಡು' ಎಂಬುದರ ರೂಪ. ಮಧ್ಯದ ಎರಡು ಅಕ್ಷರಗಳು ಸ್ಥಾನಪಲ್ಲಟ ಹೊಂದಿವೆ. ಅಲುಗಾಡು ಎಂಬ ಪದವು ಅಲಗಾಡು ಎಂಬ ರೂಪ ತಾಳಿ ಕ್ರಮೇಣ 'ಅಗಳಾಡು' ರೂಪಕ್ಕೆ ಬಂದಿದೆ.

'ಪದರೆ' ಇನ್ನೊಂದು ಅಂತಹ ಪದ. ಇದು 'ಪರದೆ' ಎಂಬ ಪದದ ರೂಪಾಂತರ. 'ಇಬ್ಯಾರ' ಇನ್ನೊಂದು ಪದ. ಇದು 'ಇಬ್ಬರು' ಎಂಬ ಅರ್ಥ ಕೊಡುವ ಪದ. 'ಇಬ್ಬರು ಆಳು' >ಇಬ್ರಾಳು>ಇಬ್ರಾಳ>ಇಬ್ಯಾರ ಇಂತಹ ಹಲವಾರು ಪದಗಳು ಸಿಗುತ್ತವೆ.

ನೀವು ಬಳ್ಳಾರಿ ಜಿಲ್ಲೆಗೆ ಬಂದರೆ, ನಿಮಗೆ 'ಕುಚ್ಚಿದ ಶೇಂಗಾ' ಸಿಗಬಹುದು. ಶೇಂಗಾ ನಿಮಗೆ ಗೊತ್ತು-ನೆಲಗಡಲೆ. 'ಕುಚ್ಚಿದ' ಎಂದರೇನು?

ಕುಚ್ಚಿದ್ದು ಎಂದರೆ ಬೇಯಿಸಿದ್ದು. ಕುದಿಸಿದ್ದು- ಎಂಬ ಪದ ಆಡುಮಾತಿನಲ್ಲಿ 'ಕುಚ್ಚಿದ್ದು' ಎಂದಾಗಿದೆ. ಕುದಿಸು>ಕುತ್ಸು>ಕುಸ್ಸು>ಕುಚ್ಚು.

ಕರಾವಳಿಯ ಜನ ಬಳಸುವ ಮತ್ತು ಬಯಸುವ 'ಕುಚ್ಚಲಕ್ಕಿ'ಯ ಮೂಲವೂ ಇದೆ. ಕುಚ್ಚಿದ ಬತ್ತದಿಂದ ತಯಾರಿಸಿದ ಅಕ್ಕಿಯೆ 'ಕುಚ್ಚಲಕ್ಕಿ'!


ವೈಶಿಷ್ಟ್ಯ

ಬಳ್ಳಾರಿಯ ಆಡುಮಾತಿನಲ್ಲಿ ಮಾತ್ರ ಇರುವದೆ? ಹಾಗೇನಿಲ್ಲ. ಆಡು ಮಾತೇ ವೈಶಿಷ್ಟ್ಯಗಳ ಭಂಡಾರ; ವಿಸ್ಮಯಗಳ ಕೊಪ್ಪರಿಗೆ. ಆ ಪ್ರದೇಶದಲ್ಲಿದ್ದು ಅಲ್ಲಿನ ಜನರೊಂದಿಗೆ ಹೊಕ್ಕು ಬಳಕೆ ಉಳ್ಳವನಿಗೆ ಮಾತ್ರ ಅದು ತನ್ನ ಎದೆ ತೆರೆಯುತ್ತದೆ. ತನ್ನ ರಹಸ್ಯಪೂರ್ಣ ಒಳದಾರಿಗಳನ್ನು ತೋರಿಸುತ್ತದೆ.

ಅದನ್ನು ಬರೆದು ಪ್ರಕಟಿಸುವುದು ಕಷ್ಟವೇ.

''ಹೇಳಿದರೆ ಉಳಿಯದೊ ಸವಿಯು
ಹೇಳದೆ ತಾಳಲಾರನೊ ಕವಿಯು.'' ■

ಕೋಲಾಟದ ಫಕ್ಕೀರಪ್ಪ



■ ಫೋಟೋ : ನಿತ್ಯಾನಂದ್

ನಮ್ಮ ಜಾನಪದ ಸಾಹಿತ್ಯ ಹಳ್ಳಿಗರ ನಾಲಗೆಯ ಮೇಲೆ ನಲಿಯುವ ಸಾಹಿತ್ಯ. ವಿಷಾದದ ಸಂಗತಿಯೆಂದರೆ ಜನಪದ ಸಂಗ್ರಹಕಾರರೆಂಬ ಅಕ್ಷರಸ್ಥರಿಗಿರುವ ಬೆಲೆ, ತಲೆಮಾರಿನಿಂದ ತಲೆಮಾರಿಗೆ ಆ ಅಪೂರ್ವ ಸಾಹಿತ್ಯವನ್ನು ಜತನದಿಂದ ಸ್ಮೃತಿ ಪಟಲಗಳಲ್ಲಿರಿಸಿ ಕಾಪಾಡಿಕೊಂಡು ಬಂದ ಅನಕ್ಷರಸ್ಥ ಹಳ್ಳಿಗನಿಗಿಲ್ಲದಿರುವುದು.

ದಿನ ಬೆಳಗಾದರೆ ಕೂಲಿನಾಲಿ ಸಾಲ ಸೂಲಿಗಳ ನಡುವೆ ನಲುಗಿದ್ದರೂ, ಕೋಲಾಟವೆಂದರೆ ಸಾಕು ಹರೆಯದ ಹುಡುಗನಂತಾಗಿಬಿಡುತ್ತಾನೆ ಹರಿಜನ ಫಕ್ಕೀರಪ್ಪ. ಆತನ ಉತ್ಸಾಹಕ್ಕೆ ೬೪ರ ಇಳಿವಯಸ್ಸು ಅಡ್ಡಿ ಬರದು.

೧೯೬೪ರಿಂದ ಬಳ್ಳಾರಿಯ ಹತ್ತಿರ ಗೋನಾಳಿನಲ್ಲಿರುವ ಫಕ್ಕೀರಪ್ಪ ತನ್ನ ಜೀವನದುದ್ದಕ್ಕೂ ಕಷ್ಟಗಳ ಸರಮಾಲೆಯನ್ನೇ ಕೊರಳಿಗೆ ಸುತ್ತಿಕೊಂಡಿದ್ದರೂ ಕಲೆಯನ್ನು ಅಪ್ಪಿಕೊಂಡೇ ನಡೆದಾತ. ಅದಕ್ಕಿಂತ ಮುಂಚೆ ಆಂಧ್ರದ ಕಣೇಕಲ್ ಗಿಣಿಗೇರಿಯಲ್ಲಿ ಜೀತಕ್ಕಾಗಿ ದುಡಿಯುತ್ತಿದ್ದ ಈತ ಸಂಜೆಯಾಯಿತೆಂದರೆ ಕನ್ನಡದ ಹಾಡು ಹಾಡುತ್ತಾ ಕುಣಿಯುತ್ತಾ ಮೈಮರೆಯುತ್ತಿದ್ದ. ಆ ದಿನಗಳಲ್ಲಿ ಈತನಿಗೆ ಕೋಲಾಟ ಕಲಿಸಿಕೊಟ್ಟ ಗುರುವು ಅಂಬಾಪುರದ ನಾಯಕರ ಹೊನ್ನಪ್ಪ.

ಆ ದಿನಮಾನಗಳಲ್ಲಿ-ಅಂದರೆ ಸುಮಾರು ೪೦ ವರ್ಷಗಳ ಹಿಂದೆ ಫಕ್ಕೀರಪ್ಪನಿಗೆ ಒಂದು ವರ್ಷಕ್ಕೆ ಸಿಗುತ್ತಿದ್ದ ಕೂಲಿ ರೂ. ೩೦/-. ಜೊತೆಗೆ ಊಟ ಬಟ್ಟೆ. ಅಂತಹ ಪರಿಸ್ಥಿತಿಯಲ್ಲಿ ಕೋಲಾಟ ಕಲಿಸುವ ಗುರುವಿಗೆ ತಿಂಗಳಿಗೆ ಕೊಡಬೇಕಾದ ಕಾಣಿಕೆ ರೂ. ೫/-. ಜೊತೆಗೆ ಬಟ್ಟೆಬರೆ. ದುಡ್ಡಿಲ್ಲವೆಂದು ದೂರ ಉಳಿದರೆ ತುಡಿಯುವ ಮನವನ್ನು ತಣಿಸುವವರಾರು? ತೊಳಲಾಟದಿಂದ ಹೊಯ್ದಾಡಿದ ಫಕ್ಕೀರಪ್ಪ ತಾನೇ ಒಂದು ದಾರಿ ಹುಡುಕಿಕೊಂಡ...

ಮಣ್ಣಲ್ಲಿ ಹೆಕ್ಕಿ ತೆಗೆದದ್ದು ಕಾಳಲ್ಲ, ಹಾಡು

ಹೊಲಗಳಲ್ಲಿ ಕೊಯ್ಲೆಲ್ಲ ಮುಗಿದು ರೈತರು ನೆಲಗಡಲೆಯನ್ನು ಚೀಲಗಳಿಗೆ ತುಂಬಿ ಕಳಿಸಿದ ಮೇಲೂ, ಆ ಮಣ್ಣಿನಲ್ಲಿ ಅಲ್ಲೊಂದು ಇಲ್ಲೊಂದು ನೆಲಗಡಲೆ ಫಕ್ಕೀರಪ್ಪನಿಗಾಗಿ ಮೀಸಲೆಂಬಂತೆ ಬಚ್ಚಿಟ್ಟುಕೊಂಡಿರುತ್ತಿದ್ದವು. ನಿತ್ಯದ ಕೂಲಿ ಕೆಲಸ ಮುಗಿಸಿಕೊಂಡು ಹೊತ್ತು ಮುಳುಗುವ ವೇಳೆ ಆತ ಮಣ್ಣು ಬಗೆದು ಬಗೆದು ನೆಲಗಡಲೆ ಆಯ್ದು ಸಂಗ್ರಹಿಸತೊಡಗಿದ. ಆ ಫಲವನ್ನೇ ಮಾರಿ ಗುರುವಿನ ಕಾಣಿಕೆಗೆ ಹಣ ಜೋಡಿಸಿಕೊಂಡ. ಚೀಲದಲ್ಲಿ ಕಾಳು ಸಂಗ್ರಹವಾದಂತೆ ತಲೆಯಲ್ಲಿ ಹಾಡು ಸಂಗ್ರಹವಾಗತೊಡಗಿದವು. ಕೈಯಲ್ಲಿ ಕೋಲು, ಕಾಲಲ್ಲಿ ಗೆಜ್ಜೆ, ಬಾಯಲ್ಲಿ ಹಾಡು... ಇಷ್ಟೇ ಸಾಕಾಗಿತ್ತು ಜಗದ ಜಂಜಡ ಮರೆಯಲು.

ತಾನು ಕಲಿತ ವಿದ್ಯೆ ಮರೆಯಾಗಬಾರದೆಂಬ ಛಲದಿಂದ ಗೋನಾಳಿನಲ್ಲಿ ಪಡುವಣ ಕೆಂಪಾಗುತ್ತಲೇ ಫಕ್ಕೀರಪ್ಪ ಹುಡುಗರನ್ನು ಕಲೆ ಹಾಕಿ ಕೋಲಾಟದ ಹೆಜ್ಜೆ ಕಲಿಸುತ್ತಿರುತ್ತಾನೆ. ಆತನ ಜಾನಪದ ಖಜಾನೆಯಿಂದ ಹೊರಬಿದ್ದ ಜನಪ್ರಿಯ ಹಾಡೊಂದು ಹೀಗಿದೆ:

ಕುಂಬೆಮ್ಯಾಲೆ ಕುಂತಗಂಡು ಕುಣುಕಂತ ಬರ್ತಾಳ । ಕೋಲೆನ್ನಾ ಕೋಲೇ ।
ಆಕೀ ಕುಣತಾ ಬ್ಯಾರೇ ಕುಂಬಾರ ಹುಡುಗಿ । ಕೋಲೆನ್ನಾ ಕೋಲೇ ।

ಬೇಲ್ಯಾಗ ನಿಂತಗಂಡು ಭೇದಾ ಮಾಡ್ತಾಳ । ಕೋಲೆನ್ನಾ ಕೋಲೇ ।
ಆಕೀ ಭೇದಾ ಬ್ಯಾರೇ ಬ್ಯಾಡಾರ ಹುಡುಗಿ । ಕೋಲೆನ್ನಾ ಕೋಲೇ ।

ಗಿರಿಕ್ಯಾಗ ನಿಂತಗಂಡು ಕಿರಾಕಿ ಮಾಡ್ತಾಳ । ಕೋಲೆನ್ನಾ ಕೋಲೇ ।
ಆಕೀ ಕಿರಾಕಿ ಬ್ಯಾರೇ ತುರುಕರ ಹುಡುಗಿ । ಕೋಲೆನ್ನಾ ಕೋಲೇ ।

ಅಗಸ್ಯಾಗ ನಿಂತಗಂಡು ತಕಾಸಿ ಮಾಡ್ತಾಳ । ಕೋಲೆನ್ನಾ ಕೋಲೇ ।
ಆಕೀ ತಕಾಸಿ ಬ್ಯಾರೇ ಅಗಸರ ಹುಡುಗಿ । ಕೋಲೆನ್ನಾ ಕೋಲೇ ।

ಮಂದ್ಯಾಗ ನಿಂತಗಂಡು ಮಾತನಾಡ್ತಾಳ । ಕೋಲೆನ್ನಾ ಕೋಲೇ ।
ಆಕೀ ಮಾತೆ ಬ್ಯಾರೇ ಮಾದಿಗರ ಹುಡುಗಿ । ಕೋಲೆನ್ನಾ ಕೋಲೇ ।

ವಡ್ಡಿನ್ಯಾಗ ನಿಂತಗಂಡು ಓಡಿ ಬರ್ತಾಳ । ಕೋಲೆನ್ನಾ ಕೋಲೇ ।
ಆಕೀ ಓಡು ಬ್ಯಾರೇ ವಡ್ಡರ ಹುಡುಗಿ । ಕೋಲೆನ್ನಾ ಕೋಲೇ ।

ಈ ಹಾಡನ್ನು ಬರೆದುಕೊಳ್ಳುವಾಗ ಫಕ್ಕೀರಪ್ಪ ಒಂದು ಎಚ್ಚರಿಕೆಯನ್ನು ನೀಡಿದ : ''ನಾವು ಹರಿಜನ ಸ್ವಾಮಿ, ಈ ಪದದಾಗ ಕುಲಾತಲಗಳ ವಸ್ತು ಐದಾವ. ಮತ್ತೆ ನನಿಗೆ ಏನನ್ನ ಫಜೀತಿ ಆಗಂಗಿದ್ರೆ ಬರಕಾಬ್ಯಾಡ್ರಿ. ಕಾಲ ನೆಟ್ಟಗಿಲ್ಲ.''

ಎಂತಹ ಮುಗ್ಧ ಮನಸ್ಸು!

■ **ಕೆ. ಜಗದೀಶ್**

ಬಾಗಲಕೋಟೆ ಬಸವೇಶ್ವರ ಪಟ್ಟಣ ಸಹಕಾರಿ ಬ್ಯಾಂಕ್

ಅಮೃತ ಮಹೋತ್ಸವದ ಸಂಭ್ರಮದಲ್ಲಿ



ಬಾಗಲಕೋಟೆಯು ಒಂದು ವಿಶಿಷ್ಟ ನಗರ. ಈ ಬಾಗಲಕೋಟೆ ಜಿಲ್ಲಾ ಸ್ಥಾನಮಾನ ಪಡೆದು ಸಾಕಷ್ಟು ಗಮನ ಸೆಳೆದಿದೆಯಾದರೂ ಈ ನಗರ ಕೃಷ್ಣೆಯಲ್ಲಿ ಮುಳುಗಲಿದೆ. ಮುಂದಿನ ಪೀಳಿಗೆಯ ಏಳಿಗೆಗಾಗಿ ತ್ಯಾಗ ಮಾಡಿದ ನಗರವಿದು. ಮುಳುಗಡೆಯ ನೋವಿನ ಮಧ್ಯದಲ್ಲಿಯೂ ಧೈರ್ಯಗುಂದದೇ ಇಲ್ಲಿಯ ಸಂಘ-ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಅವಿರತವಾಗಿ ಕಾರ್ಯನಿರ್ವಹಿಸುತ್ತಲಿವೆ. ಅವುಗಳಲ್ಲಿ ಸ್ಥಳೀಯ ಬಸವೇಶ್ವರ ಪಟ್ಟಣ ಸಹಕಾರಿ ಬ್ಯಾಂಕ್ ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ.

'ನಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ'' ಎಂಬ ಸಹಕಾರಿ ತತ್ವವನ್ನು ಅಕ್ಷರಶಃ ಜಾರಿಗೆ ತಂದು, ಆರ್ಥಿಕ ಅಭಿವೃದ್ಧಿಯ ಪಥದತ್ತ ಮುನ್ನಡೆದು ರಾಜ್ಯದ ಪ್ರತಿಷ್ಠಿತ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿದೆ. ಸಾಕಷ್ಟು ಲಾಭದೊಂದಿಗೆ ಬಾಗಲಕೋಟೆಗೆ ಕಲಶಪ್ರಾಯವಾಗಿ ಜನತೆಯ ಭಾವನೆಗಳಿಗೆ ಸ್ಪಂದಿಸಿ ಆರ್ಥಿಕ ವಿಕಾಸದಲ್ಲಿ ಸಹಭಾಗಿಯಾಗಿದೆ.

ಬ್ಯಾಂಕ್ ಸ್ಥಾಪನೆ

ಬೀಳೂರಿನ ಪೂಜ್ಯ ಲಿಂ.ಮ.ನಿ.ಪ್ರ ಗುರುಬಸವ ಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಬಾಗಲಕೋಟೆಯಲ್ಲಿ ಮಾರ್ಚ್ ೨-೧೯೧೭ರಂದು ಬಸವೇಶ್ವರ ಸಹಕಾರಿ ಪತ್ತಿನ ಸಂಘಕ್ಕೆ ಮೂರ್ತ ಸ್ವರೂಪ ಸಿಕ್ಕಿತು. ಕೇವಲ ೧೯೨೫ ರೂ ಶೇರು ಬಂಡವಾಳದ ಸಂಗ್ರಹದೊಂದಿಗೆ ತನ್ನ ಕಾರ್ಯ ಚಟುವಟಿಕೆಗಳನ್ನು ಮಹಾಂತಪ್ಪ ತಪಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿತು. ಸಹಕಾರಿ ನೇತಾರ ದಿ|| ಪಿ.ಎಂ. ನಾಡಗೌಡರ ತಂದೆ ಎಂ.ಪಿ. ನಾಡಗೌಡ, ಹಾಲಪ್ಪಾ ಹಾವೇರಿ, ಎಚ್.ಎಫ್. ಕಟ್ಟೀಮನಿ, ಇವರೆಲ್ಲರ ಅವಿಶ್ರಾಂತ ಪರಿಶ್ರಮದ ಫಲವಾಗಿ ಪ್ರಗತಿಯ ರೇಖೆಯನ್ನು ತಲುಪಿತು. ನಂತರ ೧೯೩೧ರಲ್ಲಿ ಶ್ರೀ ಬಸವೇಶ್ವರ ಅರ್ಬನ್ ಕೊ-ಆಪರೇಟಿವ್ ಬ್ಯಾಂಕ್ ಎಂದು ಪರಿವರ್ತನೆಗೊಂಡಿತು.

ಪ್ರಗತಿ ಪಥ

ಪ್ರಥಮದಲ್ಲಿ ಕೇವಲ ನಗರ ಸಭೆಯ ಕ್ಷೇತ್ರ ಕಕ್ಷೆಗೆ ಸೀಮಿತವಾಗಿದ್ದ ಬ್ಯಾಂಕಿನ ಚಟುವಟಿಕೆಗಳು ಈಗ ವಿಜಾಪುರ ಜಿಲ್ಲೆಯವರೆಗೂ ವಿಸ್ತಾರಗೊಂಡಿದೆ. ಬಾಗಲಕೋಟೆಯಲ್ಲಿಯೇ ಆಡಳಿತ ಕಚೇರಿ ಮತ್ತು ಎರಡು ಶಾಖೆಗಳನ್ನು ಹೊಂದಿದೆ. ಬ್ಯಾಂಕಿನ ಗಮನಾರ್ಹ ಪ್ರಗತಿಯನ್ನು ಗಮನಿಸಿದ ಭಾರತೀಯ ರಿಸರ್ವ್‌ಬ್ಯಾಂಕ್ ಬಾಗಲಕೋಟೆಯಲ್ಲಿ ಮಹಿಳಾ ಶಾಖೆಯನ್ನು ಸೇರಿದಂತೆ ನಿಡಗುಂದಿ ಮತ್ತು ಬೀಳಗಿಯಲ್ಲಿ ಹೊಸ ಮೂರು ಶಾಖೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿತು. ಸದ್ಯದಲ್ಲಿ ಈ ಶಾಖೆಗಳು ಕಾರ್ಯಾರಂಭ ಮಾಡಿ ಜನತೆಯ ಭಾವನೆಗಳಿಗೆ ಸ್ಪಂದಿಸುತ್ತಲಿವೆ. ಈಗ ಬ್ಯಾಂಕಿನ ಶಾಖೆಗಳು ಪೂರ್ಣ ಕಂಪ್ಯೂಟರೀಕರಣ ಹೊಂದಿವೆ. ಇನ್ನೂ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಆಡಳಿತಮಂಡಳಿ ಗ್ರಾಹಕರಿಗೆ ಹೆಚ್ಚಿನ ಸೇವೆ ನೀಡಲು ಮುಂದಾಗಿದೆ. ಅಲ್ಲದೇ



ಬ್ಯಾಂಕಿನ ಸಿಬ್ಬಂದಿ ವರ್ಗ ದಿನನಿತ್ಯದ ವ್ಯವಹಾರ ನಡೆಸುತ್ತಿರುವ ದೃಶ್ಯ

ಇನ್ನೂ ಹಲವಾರು ಶಾಖೆಗಳನ್ನು ಪ್ರಾರಂಭಿಸುವ ಯೋಚನೆಯಲ್ಲಿದೆ. ಸುಸಜ್ಜಿತ ಸ್ವಂತ ಕಟ್ಟಡ ಸಮುಚ್ಚಯವನ್ನು ಬ್ಯಾಂಕ್ ಹೊಂದಿದೆ.

ಸಾಲ ಸೌಕರ್ಯ

ಬ್ಯಾಂಕ್ ಸದ್ಯದಲ್ಲಿ ಸಾಕಷ್ಟು ಸದಸ್ಯರನ್ನು ಹೊಂದಿದ್ದು ಸರಕಾರಿ, ಅರೆಸರಕಾರಿ, ಅನುದಾನಿತ ಸಂಸ್ಥೆ, ಶಿಕ್ಷಕರು ಮುಂತಾದವರಿಗೆ ವೇತನಸಾಲ, ಒದಗಿಸುತ್ತಲಿದೆ. ಅಲ್ಲದೇ ವರ್ತಕರಿಗೆ ಕೈಗಾರಿಕೋದ್ಯಮಿಗಳಿಗೆ, ವ್ಯಾಪಾರ-ವ್ಯವಹಾರಗಳ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ನೀಡುತ್ತಲಿದೆ. ಬ್ಯಾಂಕ್ ಸದಾ ಸದಸ್ಯರ ಹಿತಕ್ಕಾಗಿ ಇದ್ದು, ಜನಸಾಮಾನ್ಯರಿಗಾಗಿ ನಗರದ ಸರ್ವ ನಾಗರೀಕರ ಹಿತರಕ್ಷಣೆಗಾಗಿ ಇರುವ ಸಂಸ್ಥೆಯಾಗಿದೆ. ಸ್ವಯಂ ಉದ್ಯೋಗ ಹೊಂದ ಬಯಸುವ ವಿದ್ಯಾವಂತ ನಿರುದ್ಯೋಗಿಗಳಿಗೆ ಆರ್ಥಿಕ ಸಹಾಯ ನೀಡಿ ಪ್ರೋತ್ಸಾಹಿಸುತ್ತಲಿದೆ.

ಮನೆ ಕಟ್ಟಲು ಸಾಲ, ವಾಹನ ಖರೀದಿಗೆ ಸಾಲ, ಅಲ್ಲದೇ ವಿಶೇಷವಾಗಿ ನ್ಯಾಯವಾದಿಗಳಿಗೆ - ವೈದ್ಯರಿಗೆ - ಇಂಜನಿಯರುಗಳಿಗೆ ಹಾಗೂ ಇತರ ವೃತ್ತಿಪರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ ನೀಡುತ್ತಲಿದೆ. ಅಲ್ಲದೆ ಬ್ಯಾಂಕ್ ಆಸ್ತಿ ಭದ್ರತೆಯ ಮೇಲೆ ಮತ್ತು ಜಾಮೀನು ಆಧಾರದ ಮೇಲೆ ಸಾಲಗಳನ್ನು ನೀಡುತ್ತಲಿದೆ.

ಆರ್ಥಿಕ ಸಾಧನೆ

ಬ್ಯಾಂಕ್ ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ಗಮನಾರ್ಹ ಸಾಧನೆ ತೋರಿಸುತ್ತ ಬಂದಿದ್ದು ಪ್ರಸ್ತುತ ಹಣಕಾಸು ವರ್ಷದಲ್ಲಿ ತನ್ನ ಲಾಭಗಳಿಕೆಯಲ್ಲಿ ಐತಿಹಾಸಿಕ ದಾಖಲೆ ಸ್ಥಾಪಿಸಿದೆ. ಬ್ಯಾಂಕಿನ ಲೆಕ್ಕ ಪರಿಶೋಧನೆಯ ಅಡಿಟ್ 'ಅ' ವರ್ಗದಲ್ಲಿದೆ.

೧೯೯೮ನೇ ಸಾಲಿನ ಕೊನೆಗೊಂಡ ವರ್ಷದಲ್ಲಿ ಬ್ಯಾಂಕ್ ೧೩,೬೩೫ ಸದಸ್ಯರನ್ನು ಹೊಂದಿದ್ದು ೨೭೯೭.೧೬ ಲಕ್ಷ ರೂ ದುಡಿಯುವ ಬಂಡವಾಳ ಮತ್ತು ೮೨.೭೪ ಲಕ್ಷ ರೂ ಶೇರು ಬಂಡವಾಳ ಹೊಂದಿದೆ. ಪ್ರಸಕ್ತ ಅವಧಿಗೆ ಬ್ಯಾಂಕಿನ ಠೇವಣಿ ೧೯೮೯.೯೭ ಲಕ್ಷ ರೂ ಇದ್ದು, ೧೩೬೫.೩೭ ಲಕ್ಷ ರೂ ಗಳಿಗೂ ಹೆಚ್ಚು ವಿವಿಧ ರೀತಿಯ ಸಾಲಗಳನ್ನು ವಿತರಿಸಿದೆ. ಮಾರ್ಚ್ ೩೧-೧೯೯೮ಕ್ಕೆ ಅಂತ್ಯಗೊಂಡಂತೆ ಬ್ಯಾಂಕು ೧೦೧.೨೫ ಲಕ್ಷ ರೂ ನಿವ್ವಳ ಲಾಭ ಹೊಂದಿ ದಾಖಲೆ ಸ್ಥಾಪಿಸಿದೆ. ಬ್ಯಾಂಕು ಯಾವುದೇ ಸಂಘ-ಸಂಸ್ಥೆಗಳಿಂದ ಸಾಲ ಪಡೆಯದೇ ತನ್ನದೇ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಮುನ್ನಡೆಯುತ್ತಲಿದೆ.

ಸಾಮಾಜಿಕ ಕಳಕಳಿ

ಪ್ರಸಕ್ತ ಹಣಕಾಸು ವರ್ಷದಲ್ಲಿ ೧೦೧.೨೫ ಲಕ್ಷ ರೂ ಲಾಭಗಳಿಸಿರುವ ಬ್ಯಾಂಕಿಗೆ ಕೇವಲ ಲಾಭದತ್ತ ಗುರಿ ಇರದೆ ಗ್ರಾಹಕರನ್ನು ತೃಪ್ತಿಗೊಳಿಸುವತ್ತ ನಿಗಾವಹಿಸಿದೆ. ಸಂಘ - ಸಂಸ್ಥೆಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಸರಕಾರಿ ನೌಕರರಿಗೆ, ವರ್ತಕರಿಗೆ, ಕೈಗಾರಿಕೋದ್ಯಮಿಗಳಿಗೆ ದುರ್ಬಲ ವರ್ಗದವರಿಗೆ ಆಶಾಕಿರಣವಾಗಿ ಬೆಳೆದಿದೆ. ಬ್ಯಾಂಕ್ ಸಾಮಾಜಿಕ ಧಾರ್ಮಿಕ-ಶೈಕ್ಷಣಿಕ-ಸಾಂಸ್ಕೃತಿಕ ಮುಂತಾದ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿ ಸಹಾಯ ಮಾಡುತ್ತಲಿದೆ.

ಆಡಳಿತ ಮಂಡಳಿ

ಕಳೆದ ೧೯೮೪ರಿಂದಲೇ ಯುವ ಉತ್ಸಾಹಿ ಅಧ್ಯಕ್ಷರಾದ ಪ್ರಕಾಶ ತಪಶೆಟ್ಟಿ, ಉಪಾಧ್ಯಕ್ಷರಾದ ಎಸ್.ಎಸ್ ನಾವಲಗಿ ಅವರ ನಿರ್ದೇಶಕ ಮಂಡಳಿ ಅಪೂರ್ವ ಸೇವೆಗೈದು ೧೪ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಮೊನ್ನೆಯಷ್ಟೇ ೧೯೯೭ರಲ್ಲಿ ನಡೆದ ಬ್ಯಾಂಕಿನ ಚುನಾವಣೆಯಲ್ಲಿ ಈ ಮಂಡಳಿಯೇ ಬಹುಮತದಿಂದ ಆರಿಸಿಬಂದು ಮತ್ತೆ ಬ್ಯಾಂಕಿನ ಪ್ರಗತಿಗಾಗಿ ಕಂಕಣಬದ್ಧವಾಗಿದೆ.


ಹದಿನಾಲ್ಕು ವರ್ಷಗಳಲ್ಲಿ ಸದಸ್ಯರ ಸಂಖ್ಯೆ, ಶೇರು ಬಂಡವಾಳ, ಠೇವಣಿಗಳು, ನಿಧಿಗಳು, ದುಡಿಯುವ ಬಂಡವಾಳ, ಸಾಲಬಟವಾಡೆ, ನಿವ್ವಳ ಲಾಭ, ಇತ್ಯಾದಿಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಗ್ರಾಹಕರಿಗೆ ಹಲವಾರು ಉಪಯುಕ್ತ ಯೋಜನೆಗಳನ್ನು ಹಾಕಿಕೊಂಡಿರುವ ನಿರ್ದೇಶಕರ ಮಂಡಳಿ ಇನ್ನೂ ಹಲವಾರು ಶಾಖೆಗಳನ್ನು ಪ್ರಾರಂಭಿಸುವ ಯೋಚನೆಯಲ್ಲಿದೆ.

ಪ್ರಕಾಶ ತಪಶೆಟ್ಟಿ ಅವರ ನೇತೃತ್ವದ ಆಡಳಿತ ಮಂಡಳಿ ಈ ಸಾಧನೆಯಲ್ಲಿ ನೆರವಾಗಿರುವ ಸಿಬ್ಬಂದಿ, ಗ್ರಾಹಕ, ಶೇರುದಾರರಿಗೆ ಋಣಿಯಾಗಿದೆ. ರಾಜ್ಯ ಸರಕಾರ, ಕೇಂದ್ರ ಸರಕಾರ, ರಿಸರ್ವ್ ಬ್ಯಾಂಕ್, ಸಹಕಾರಿ ಇಲಾಖೆ, ಸಹಕಾರಿ ಬ್ಯಾಂಕುಗಳ ಮಹಾಮಂಡಳಕ್ಕೆ ಕೃತಜ್ಞತೆ ಸಲ್ಲಿಸುತ್ತದೆ. ಗ್ರಾಹಕರ ಹಾಗೂ ಸಂಸ್ಥೆಯ ಹಿತಾಸಕ್ತಿಗೆ ಕೈಗೊಳ್ಳುವ ಪ್ರತೀಕಾರ್ಯಕ್ಕೆ ಮುಕ್ತ ಮನಸ್ಸಿನ ಸಹಾಯ-ಸಹಕಾರ, ಬೆಂಬಲ ನೀಡುತ್ತಿರುವ ಸಂಘ-ಸಂಸ್ಥೆಗಳ ಶಿಕ್ಷಕರಿಗೂ, ವರ್ತಕರಿಗೂ, ಸದಸ್ಯರಿಗೂ ಹಾಗೂ ದಕ್ಷ ಸಿಬ್ಬಂದಿ ವರ್ಗಕ್ಕೂ ವಿಶೇಷವಾಗಿ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗಕ್ಕೆ ಮನಃಪೂರ್ವಕವಾಗಿ ಅಭಿನಂದಿಸುತ್ತದೆ.

ಹೀಗೆ ಬಾಗಲಕೋಟೆಯಲ್ಲಿ ಬಸವೇಶ್ವರ ಪಟ್ಟಣ ಸಹಕಾರಿ ಬ್ಯಾಂಕ್ ಪ್ರಮುಖ ಬ್ಯಾಂಕುಗಳ ಪಟ್ಟಿಯಲ್ಲಿ ಸೇರಿ ತನ್ನ ೮೧ ವರ್ಷದ ಸಾರ್ಥಕ ಸೇವೆಯನ್ನು ಸಲ್ಲಿಸಿ ಜನತೆಯ ಆಶಾಕಿರಣವಾಗಿ ಸಾಧನೆಗೈದು ಗಮನ ಸೆಳೆಯುತ್ತಲಿದೆ.

■ ಸಿದ್ಧರಾಜ್ ಎಂ. ಕೆಂಧೂಳಿ

ಹೋರಾಟದ ಹಾದಿ




(ಆತ್ಮಕಥೆ)
ಲೇ: ಡಾ. ಎಚ್. ನರಸಿಂಹಯ್ಯ
ಪ್ರ: ನ್ಯಾಷನಲ್ ಕಾಲೇಜು,
ಬಸವನಗುಡಿ, ಬೆಂಗಳೂರು - 560 004.
ಪುಟ ಸಂಖ್ಯೆ : 472, ಬೆಲೆ : ರೂ. 70.

ವಿಚಾರವಾದಿಗಳೆಂದೇ ನಾಡಿನಾದ್ಯಂತ ಹೆಸರಾಗಿರುವ ಡಾ. ಎಚ್. ನರಸಿಂಹಯ್ಯ (ಎಚ್ಚೆನ್)ನವರ ಆತ್ಮಕತೆ ''ಹೋರಾಟದ ಹಾದಿ''. ಎಚ್ಚೆನ್ ಅವರ ಸುದೀರ್ಘ ಜೀವನದ ಅನುಭವಗಳ, ಹೋರಾಟಗಳ, ಮನನ -ಚಿಂತನಗಳ ಫಲಶೃತಿ ಈ ಆತ್ಮಕತೆ. ಸಹಜವಾಗಿಯೇ ಈ ಕೃತಿಯು ಓದುಗರನ್ನು ಗಂಭೀರ ಚಿಂತನೆಗೆ ತೊಡಗಿಸುತ್ತದೆ. ಪ್ರಾಮಾಣಿಕವಾದ ಆತ್ಮರಕ್ಷಣೆಗೆ ಪ್ರೇರಣೆ ನೀಡುತ್ತದೆ.

ಸುಮಾರು ಮುಕ್ಕಾಲು ಶತಮಾನದ ಹಿಂದೆ ಗ್ರಾಮವೊಂದರಲ್ಲಿ ಎಚ್ಚೆನ್ ಅವರ ಜನನ. ತಂದೆ ಕೂಲಿಮಠದಲ್ಲಿ ಓದಿಸೋ 'ಅಯ್ಯ'. ತಾಯಿ ದಿನಗೂಲಿ ಹೆಂಗಸು. ಎರಡು ಹೊತ್ತಿನ ಊಟಕ್ಕಾಗಿ ಪರದಾಟ ಹಳ್ಳಿಯಲ್ಲೇ ಮಾಧ್ಯಮಿಕ ಶಾಲೆವರೆಗೆ ಶಿಕ್ಷಣ. ಯೋಗ್ಯ ಗುರುಗಳ ಸಂಪರ್ಕ. ಅವರುಗಳಿಂದ ಖಾದಿಯ ದೀಕ್ಷೆ. ರಾಷ್ಟ್ರೀಯತೆಯ, ಗಾಂಧಿವಾದದ, ಸ್ವಾಭಿಮಾನದ ಮೊದಲ ಪಾಠ. ಭಾವೀ ಬದುಕಿಗೆ ಭದ್ರ ಬುನಾದಿ. ಮುಂದೆ ಪ್ರೌಢಶಿಕ್ಷಣಕ್ಕಾಗಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್‌ಗೆ ಪದವೀಧರ ನಾಗುವವರೆಗೂ ಬಡ ವಿದ್ಯಾರ್ಥಿ ನಿಲಯಗಳ ಆಸರೆ. ಕೆಲವು ವರ್ಷಗಳು ಶ್ರೀ ರಾಮಕೃಷ್ಣಾಶ್ರಮದಲ್ಲಿ ವಾಸ. ಮನೆಪಾಠ ಮಾಡಿ ಅಂಗಿ ಪಂಚೆಗಾಗಿ ನಾಲ್ಕು ಕಾಸು ಸಂಪಾದನೆ. ಈ ಮಜಲಿನವರೆಗೆ ಅವರು ನಡೆದು ಬಂದ ದಾರಿ ತುಂಬ, ಕಲ್ಲು ಮುಳ್ಳು, ಭೌತಶಾಸ್ತ್ರದ ಬಿ.ಎಸ್ಸಿ (ಹೋಮ್) ಕಡೆಯ ಪರೀಕ್ಷೆಗೆ ಕೆಲವೇ ತಿಂಗಳುಗಳಿರುವಾಗ ಆಗಸ್ಟ್ ಚಳುವಳಿ ಪ್ರಾರಂಭ. ಗಾಂಧೀಜಿಯಿಂದ ''ಭಾರತ ಬಿಟ್ಟು ತೊಲಗಿ'' ಘೋಷಣೆ. ಎಚ್ಚೆನ್ ಕ್ರಿಯಾಶೀಲ ಸತ್ಯಾಗ್ರಹಿ, ಬಂಧನ, ಸೆರೆಮನೆ ವಾಸ, ಪೋಲಿಸರಿಂದ ಹಿಂಸೆ, ಬಿಡುಗಡೆಯ ನಂತರವೇ ಪರೀಕ್ಷೆಗೆ ಕೂರಲು ಸಾಧ್ಯವಾದದ್ದು. ನ್ಯಾಷನಲ್ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿ. ಕೆಲವು ವರ್ಷಗಳ ನಂತರ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕೆಗೆ. ಅಲ್ಲಿ ಡಾಕ್ಟರೇಟ್ ಸಂಪಾದನೆ. ಮರಳಿ ಭಾರತಕ್ಕೆ, ಅದೇ ನ್ಯಾಷನಲ್ ಕಾಲೇಜಿಗೆ. ಅವರ ಆತ್ಮಕತೆಯ ಈ ಹಂತದವರೆಗಿನ ನಿರೂಪಣೆಯಲ್ಲಿ ವಾಚಕನಿಗೆ ಕರುಣಕಾವ್ಯದ ಆಸ್ವಾದನೆ. ಇದೊಂದು ರಸಘಟ್ಟ. ಎಚ್ಚೆನ್ ಅವರ ಛಲ ಆತ್ಮವಿಶ್ವಾಸ, ದಣಿವರಿಯದ ದುಡಿಮೆ, ಪ್ರಾಮಾಣಿಕತೆ ಮತ್ತು ವಿನಯಶೀಲತೆ ಓದುಗನಲ್ಲಿ ಅವರ ಬಗ್ಗೆ ಗೌರವಾದರ ಭಾವನೆಗಳನ್ನು ಮೂಡಿಸುತ್ತವೆ.

ಇನ್ನು ಮುಂದೆ ಎಚ್ಚೆನ್ ಅವರ ಕಾರ್ಯಕ್ಷೇತ್ರ ವಿಶಾಲ. ಅವರ ಕಾಳಜಿಗಳು ಹಲವಾರು, ಮೂಢನಂಬಿಕೆಗಳನ್ನು ಸಾರಾಸಗಟಾಗಿ ತಿರಸ್ಕರಿಸುವಷ್ಟು ವಿಚಾರ ಶಕ್ತಿಯನ್ನು, ಎಚ್ಚೆನ್ ತಮ್ಮ ಬಾಲ್ಯದಲ್ಲೇ ಪಡೆದಿದ್ದರು. ಆಗ ಅವರು ಕಾಣುತ್ತಿದ್ದುದು, ಅಶಿಕ್ಷಿತ ಗ್ರಾಮೀಣ ಜನರ ಮೂಢನಂಬಿಕೆಗಳನ್ನು. ಈಗ ಅವರಿಗೆ ಅಚ್ಚರಿಯನ್ನುಂಟು ಮಾಡಿದುದು ಸುಶಿಕ್ಷಿತ ಜನರ ಮೂಢನಂಬಿಕೆಗಳು. ಅನೇಕ ಸ್ವಾಮಿಗಳಿಂದ ಬಾಬಾಗಳಿಂದ, ಜ್ಯೋತಿಷಿಗಳಿಂದ ಜನರ ಮೂಢನಂಬಿಕೆಗಳ ದುರುಪಯೋಗ, ಶೋಷಣೆ ಎಚ್ಚೆನ್ ಅವರ ವಿಚಾರ ಶಕ್ತಿಗೆ ಸವಾಲನ್ನೊಡ್ಡಿತು. ಎಚ್ಚೆನ್ ಪವಾಡ ಪುರುಷರ ವಿರುದ್ಧ, ಜ್ಯೋತಿಷಿಗರ ವಿರುದ್ಧ ಸಮರ ಹೂಡಿದರು. ತಮ್ಮ ಮೊದಲ ಎದುರಾಳಿಗಳನ್ನಾಗಿ ಅವರು ಆರಿಸಿಕೊಂಡದ್ದು ವಿಶ್ವ ವಿಖ್ಯಾತ ಪವಾಡ ಪುರುಷ ಸಾಯಿಬಾಬಾ ಅವರನ್ನು ; ತಪಶ್ಶಕ್ತಿಯಿಂದ ಮಳೆ ಸುರಿಸುತ್ತೇನೆಂದು ಬುರುಡೆ ಬಿಟ್ಟ ಶಿವಬಾಲ ಯೋಗಿಗಳನ್ನು. ಈ ಹೋರಾಟದ ಫಲವೇ ನಾಡಿನಾದ್ಯಂತ ಸಣ್ಣದಾಗಿ ಪ್ರಾರಂಭವಾದ ವಿಚಾರವಾದದ ಆಂದೋಲನ, ಮುಂದೆ ಎಚ್ಚೆನ್ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಪವಾಡಗಳು ಮತ್ತು ಮೂಢ ನಂಬಿಕೆಗಳ ಪರೀಕ್ಷೆಗಾಗಿ ಒಂದು ಸಮಿತಿ ರಚಿಸಿದರು. ಕೇವಲ ಭಾರತದಲ್ಲಷ್ಟೇ ಅಲ್ಲ. ಪ್ರಪಂಚದ ಯಾವ ವಿಶ್ವವಿದ್ಯಾಲಯವೂ ಇಂತಹ ಯೋಜನೆ ಹಾಕಿಕೊಂಡಿರಲಿಲ್ಲ. ಇದರಿಂದಾಗಿ ಎಚ್ಚೆನ್ ಖ್ಯಾತಿ ದೂರದ ನಾಡುಗಳವರೆಗೆ. ಅವರ ವಿಚಾರವಾದಕ್ಕಾಗಿ ಸರಕಾರದಿಂದ ಪದ್ಮಭೂಷಣ ಗೌರವ.

ಎಚ್ಚೆನ್ ಅವರು ಒಬ್ಬ ಆದರ್ಶ ಶಿಕ್ಷಕ. ಅವರಿಗೂ ನ್ಯಾಷನಲ್ ಕಾಲೇಜಿಗೂ ಸುಮಾರು ಅರ್ಧ ಶತಮಾನದ ಸಂಬಂಧ. ''ಜೀವನೋಪಾಯಕ್ಕಾಗಿ ಶಿಕ್ಷಣ'' ಕೊಡುವುದರ ಜೊತೆಗೆ ''ಜೀವನ ಶಿಕ್ಷಣ''ವನ್ನೂ ಕೊಡಬೇಕೆಂಬುದು ಅವರ ವಿಚಾರ. ಈ ದಿಸೆಯಲ್ಲಿ ಅವರ ಸಾಧನೆ, ಸಿದ್ಧಿ ಅನನ್ಯವಾದುದು. ಅವರ ನೇತೃತ್ವದಲ್ಲಿ ನ್ಯಾಷನಲ್ ಕಾಲೇಜ್ ರಾಷ್ಟ್ರದ ಒಂದು ಶ್ರೇಷ್ಠ ವಿದ್ಯಾ ಸಂಸ್ಥೆಯಾಗಿ ರೂಪುಗೊಂಡಿತು. ಒಂದು ಕಾಲೇಜು ಇದ್ದುದು ಹಲವಾರು ಕಾಲೇಜುಗಳಾದವು. ನ್ಯಾಷನಲ್ ಕಾಲೇಜಿನೊಂದಿಗಿನ ಅವರ ಸಂಬಂಧದ ಬಗ್ಗೆ, ಅಸಂಖ್ಯಾತ ವಿದ್ಯಾರ್ಥಿಗಳೊಂದಿಗಿನ ಮಧುರ ಬಾಂಧವ್ಯದ ಬಗ್ಗೆ ಈ ಆತ್ಮಕತೆಯಲ್ಲಿ ಪ್ರಸ್ತಾಪಿತವಾಗಿರುವ ನೆನಪುಗಳು ಎಚ್ಚೆನ್ ಅವರ ಹೃದಯ



ಶ್ರೀಮಂತಿಕೆಯನ್ನು, ನಿರ್ವ್ಯಾಜ ಪ್ರೇಮವನ್ನು ದಾಖಲಿಸಿವೆ.

ಇನ್ನು ಅವರ ಸಾಮಾಜಿಕ ಚಿಂತನೆಗಳು ''ಜಾತಿ ಪದ್ಧತಿಯನ್ನು ನಾವು ನಾಶಮಾಡದಿದ್ದರೆ ಜಾತಿಗಳು ದೇಶವನ್ನೇ ನಾಶಮಾಡುತ್ತವೆ'' ಎಂಬುದು ಅವರ ಖಚಿತ ನಿಲುವು. ಆತ್ಮಕತೆಯಲ್ಲಿ ತಾವು ಯಾವ ಜಾತಿಗೆ ಸೇರಿದವರೆಂಬುದನ್ನು ಎಲ್ಲಿಯೂ ಪ್ರಸ್ತಾಪಮಾಡದೆ ತಮ್ಮ ಜಾತ್ಯಾತೀತತೆಯನ್ನು ಪ್ರದರ್ಶಿಸಿದ್ದಾರೆ. ''ಸಮಾಜ ವ್ಯವಸ್ಥೆಗೆ ನಾವೆಲ್ಲ ಪ್ರತ್ಯಕ್ಷವಾಗಿಲ್ಲದಿದ್ದರೂ ಪರೋಕ್ಷವಾಗಿ ಜವಾಬ್ದಾರರು. ನತದೃಷ್ಟರ ನೋವಿನೊಂದಿಗೆ ಸ್ಪಂದಿಸದೆ ಯಾವಾಗಲೂ ತನ್ನ ಸುಖದ ಕಡೆಗೇ ಗಮನ ಕೊಡುವವನು ಸ್ವಾರ್ಥಿಯಷ್ಟೇ ಅಲ್ಲ ಸಮಾಜ ಘಾತುಕನೂ ಹೌದು'' ಎಂಬುದು ಅವರ ಹೃದಯಾಂತರಾಳದ ಮಾತು. ಮೀಸಲಾತಿ ಸೌಲಭ್ಯದಿಂದ ಮೇಲೆ ಬಂದು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಉನ್ನತ ಸ್ತರದಲ್ಲಿರುವವರು ತಮ್ಮ ಮಕ್ಕಳಿಗಾಗಿ ಯಾವ ಸರಕಾರಿ ಸೌಲಭ್ಯವನ್ನು ನಿರೀಕ್ಷಿಸಬಾರದು ಮತ್ತು ದಯನೀಯ ಸ್ಥಿತಿಯಲ್ಲಿರುವ ತಮ್ಮ ಬಾಂಧವರಿಗಾಗಿ ತ್ಯಾಗ ಮಾಡಬೇಕು, ಸೇವೆ ಮಾಡಬೇಕು. ಆದರೆ ಈಗ ಹಾಗಾಗುತ್ತಿಲ್ಲವಲ್ಲ ಎಂಬ ನೋವು ಎಚ್ಚೆನ್ ಅವರದು.

ಇದೇ ಗ್ರಂಥದಲ್ಲಿ ಎದ್ದು ಕಾಣುವ ಎರಡು ಪ್ರಮುಖ ಅಂಶಗಳೆಂದರೆ ಎಚ್ಚೆನ್ ಅವರ ವಿನಯಶೀಲತೆ ಮತ್ತು ಹಾಸ್ಯ ಪ್ರಜ್ಞೆ. ಅವರು ಬದುಕಿನಲ್ಲಿ ಅನುಭವಿಸಿದ ಎಲ್ಲ ನೋವುಗಳನ್ನು ಮರೆತು ಈ ಇಳಿ ವಯಸ್ಸಿನಲ್ಲೂ ಉಲ್ಲಾಸ ಉತ್ಸಾಹಗಳಿಂದ ಕ್ರಿಯಾಶೀಲರಾಗಿರುವುದು ಈ ಹಾಸ್ಯ ಪ್ರಜ್ಞೆಯಿಂದಾಗಿಯೆ ಎಂದು ಹೇಳಬಹುದು.

ಕಳೆದ 60 ವರ್ಷಗಳಿಂದ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿ ನಿಲಯದ ಒಂದು ಕೋಣೆಯಲ್ಲಿ ಅವಧೂತನಂತೆ ವಾಸಿಸುತ್ತಿರುವ ಈ ಬ್ರಹ್ಮಚಾರಿಯ ತ್ಯಾಗ, ಸರಳತೆ, ಪ್ರಾಮಾಣಿಕತೆ, ಕಷ್ಟ ಸಹಿಷ್ಣುತೆ, ಪುರುಷ ಪ್ರಯತ್ನ, ಆತ್ಮ ವಿಶ್ವಾಸಗಳಿಗೆ ಜೀವಂತ ಪ್ರತೀಕವಾಗಿದ್ದಾರೆ.

ಈ ಆತ್ಮಕತೆಗೆ ಮುನ್ನುಡಿ ಬರೆಯುತ್ತಾ ಹಿರಿಯ ಕವಿ ಜಿ.ಎಸ್ ಶಿವರುದ್ರಪ್ಪನವರು ಹೇಳಿದ ಮಾತು ''ಈ ಹೊತ್ತಿನ ಭ್ರಷ್ಟ ಪರಿಸರದಲ್ಲಿ ಗಾಂಧೀಜಿಯವರ ಜೀವಂತ ನೆನಪಿನಂತೆ ಕಾಣುವ ನರಸಿಂಹಯ್ಯನವರಂತಹ ಒಬ್ಬಿಬ್ಬರು ಮಾತ್ರ ಕಾಣಸಿಗಬಹುದು'', ಎಚ್ಚೆನ್ ಅವರ ಆತ್ಮಕತೆ 'ಹೋರಾಟದ ಹಾದಿ'ಯನ್ನು ಓದಿದವರು ಈ ಮಾತನ್ನು ಒಪ್ಪದೆ ಇರಲಿಕ್ಕೆ ಸಾಧ್ಯವಿಲ್ಲ.

■ ಎಂ.ಆರ್. ವಿಶ್ವನಾಥರೆಡ್ಡಿ

ಹೊಸ ಪುಸ್ತಕಗಳು

ಕನ್ನಡ ಲೇಖಕರ ವಿಳಾಸಗಳು

ಸಂ : **ನೀಲಾ ಪಾಟೀಲ**
ಪ್ರ: ನೀಲಾ ಪಾಟೀಲ, ಸಂಕ್ರಮಣ ಪ್ರಕಾಶನ, ಬನಶಂಕರಿ ಎರಡನೇ ಹಂತ, ಬೆಂಗಳೂರು - 560 070.
ಮುದ್ರಣ : 1998
ಪುಟ :224, ಬೆಲೆ : ರೂ. 75/-

ಹುಡುಗಿ ಸತ್ಯವಾಗಲಿಲ್ಲ

(ಕವನ ಸಂಕಲನ)
ಲೇ : **ದಿನೂ ಸಂ. ಚಂ**
ಪ್ರ: ಸಂವಹನ ಪ್ರಕಾಶನ, 5ನೇ ಅಡ್ಡರಸ್ತೆ ಹಳೇಸಂತೆವೇರಿ ಬಡಾವಣೆ. ಸಕಲೇಶಪುರ - 573 134.
ಮುದ್ರಣ: 1998, ಪುಟ : 48, ಬೆಲೆ : ರೂ. 35/-

ನಕ್ಕುಬಿಡೆ ಗೆಳತಿ

(ಕವನ ಸಂಕಲನ)
ಲೇ : **ಸುಶೀಲಾ ಸೋಮಶೇಖರ್**
ಪ್ರ : ಪುನೀತ್ ಪ್ರಕಾಶನ, C/o ಸುಶೀಲಾ ಸೋಮಶೇಖರ್, ಚೇತನಾ ಪ್ರೌಢಶಾಲೆ, ಚಂಪಕನಗರ ಬಡಾವಣೆ, ಸಕಲೇಶಪುರ - 573 134. ಹಾಸನ ಜಿಲ್ಲೆ.
ಮುದ್ರಣ : 1998
ಪುಟ : 60, ಬೆಲೆ :ರೂ. 35/-

ಏಕಾಕಿ

(ಕವನ ಸಂಕಲನ)
ಲೇ: **ವತ್ಸಲಾ ಜಿ. ಭಟ್ (ಭವ)**
ಪ್ರ : ಶೋಭಿತ ಪ್ರಕಾಶನ, 'ಶ್ರೀ ವತ್ಸ' ನಂ. 52, 35ನೇ ಮುಖ್ಯರಸ್ತೆ, ಬಿ.ಟಿ. ಎಂ.ಲೇ ಔಟ್, ಎರಡನೇ ಹಂತ. ಬೆಂಗಳೂರು - 560 068.
ಮುದ್ರಣ : 1998,
ಪುಟ : 80 + VIII, ಬೆಲೆ :25/-

ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಶತಕ

(ವಚನಗಳು)
ಲೇ : **ಪಂಡಿತ ನಾ.ಮ. ದೊಡ್ಡಯ್ಯ ಶಾಸ್ತ್ರಿಗಳು (ನಾಗರಹಾಳು)**
ಪ್ರ : ಲಿ. ಶ್ರೀ ದೊಡ್ಡಯ್ಯ ಶಾಸ್ತ್ರಿಗಳವರ ಪ್ರಕಾಶನ ಸಂಸ್ಥೆ, ನಾಗರಹಾಳು (ಪೋ), ಸಿರಗುಪ್ಪ (ತಾ), ಬಳ್ಳಾರಿ(ಜಿ).
ಮುದ್ರಣ : 1997, ಪುಟ : 48, ಬೆಲೆ: ರೂ. 10/-

ನದಿ ನೀರಿನ ಸ್ಪೆಷಲ್

(ಬಿಡಿ ಲೇಖನಗಳು)
ಲೇ : **ಪರಂ ಜ್ಯೋತಿ**
ಪ್ರ: ಇಂಚರ ಪ್ರಕಾಶನ ನಂ. 167, 10ನೇ ಮುಖ್ಯರಸ್ತೆ, 3ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು - 560 058.
ಮುದ್ರಣ : 1998
ಪುಟ : 120, ಬೆಲೆ : ರೂ. 40/-

ಅಗಲಿಕೆಯ ದುಃಖ

(ಅಸ್ವಸ್ಥ ಮನಸ್ಸರ ಅಂತರಾಳದ ಕಥೆಗಳು)
ಲೇ : **ಡಾ. ಸಿ. ಆರ್. ಚಂದ್ರಶೇಖರ್**
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - 560 001.
ಮುದ್ರಣ : 1997
ಪುಟ : 104, ಬೆಲೆ : ರೂ. 30/-

ರೂಪ ಸೋಲಿಸಿತೆನ್ನಂ

(ಜನ್ನನ ಅನಂತ ಪುರಾಣಗಳ ಸಂಗ್ರಹ)
ಲೇ : **ಪ್ರೊ. ಸಿ.ಪಿ. ಹೇಮಗಿರಿಮಠ**
ಪ್ರ : ಪ್ರತಿಭಾ ಗ್ರಂಥಮಾಲೆ, ಧಾರವಾಡ
ಮುದ್ರಣ : 1997
ಪುಟ :68+VIII
ಬೆಲೆ : ರೂ. 13/-

ಸೂರ್ಯನಲ್ಲಿ ನಿಯೋಗ

(ಮಕ್ಕಳ ಕಥೆಗಳು)
ಲೇ : **ನೀಲಾಂಬರಿ**
ಪ್ರ : ಇಂಚರ ಪ್ರಕಾಶನ, ನಂ. 167, 10ನೇ ಮುಖ್ಯರಸ್ತೆ, 3ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು - 560 058.
ಮುದ್ರಣ : 1997
ಪುಟ :40, ಬೆಲೆ : ರೂ. 15/-

ಸಿಂಗರಾಯನ ಗವಿ

(ಮಕ್ಕಳ ನೀಳ್ಗತೆಗಳು)
ಲೇ : **ನೀಲಾಂಬರಿ**
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - 560 001
ಮುದ್ರಣ : 1997
ಪುಟ : 64,
ಬೆಲೆ:ರೂ. 18/-

ಪುಸ್ತಕ ಪ್ರೇಮಿ ನೆಪೋಲಿಯನ್ ಚಕ್ರವರ್ತಿ

■ ಪ್ರೊ. ವಿಜಯಕುಮಾರ ವೈದ್ಯ

ಇಟಲಿಯ ಮೂಲಸ್ಥನಾಗಿ ಜನಿಸಬೇಕಾಗಿದ್ದ ನೆಪೋಲಿಯನ್ ಆಕಸ್ಮಿಕವಾಗಿಯೇ ಫ್ರಾನ್ಸ್ ದೇಶದ ತುಂಬಾ ಬಡ ಕುಟುಂಬದಲ್ಲಿ ಜನಿಸಿದ. ಈತ ತನ್ನ ಶಕ್ತಿ ಸಾಮರ್ಥ್ಯ ಹಾಗೂ ಪರಿಶ್ರಮಗಳಿಂದ ಫ್ರಾನ್ಸಿನ ಚಕ್ರವರ್ತಿಯಾದ. ಆತನಲ್ಲಿ ಅಗಾಧವಾದ ಜ್ಞಾಪಕ ಶಕ್ತಿಯಿತ್ತು, ಮುಖ್ಯವಾಗಿ ತನ್ನ ಬಗೆಗೆ ವಿಶ್ವಾಸವನ್ನಿಟ್ಟುಕೊಂಡಿದ್ದ. ಇಂದಲ್ಲ ನಾಳೆ ತನಗೆ ಅಧಿಕಾರ ದಿಗ್ವಿಜಯಗಳು ದೊರಕುವುದೆಂಬ ವಿಶ್ವಾಸವಿತ್ತು. ಈ ನೆಪೋಲಿಯನ್ ಚಕ್ರವರ್ತಿ ಯುರೋಪಿನಲ್ಲಿ ಇಂಗ್ಲೆಂಡ್ ದೇಶವೊಂದನ್ನು ಬಿಟ್ಟು ಬಹುತೇಕ ರಾಷ್ಟ್ರಗಳನ್ನು ಗೆದ್ದುಕೊಂಡು ತನ್ನ ಸಾಮ್ರಾಜ್ಯದ ಸೀಮೆಯನ್ನು ವಿಸ್ತರಿಸಿದ್ದ. ಈತ ಒಂದು ನೂರಕ್ಕೂ ಹೆಚ್ಚು ಯುದ್ಧಗಳನ್ನು ಗೆದ್ದನೆಂಬ ಮಾತೊಂದಿದೆ. ಈ ಅವಿಸ್ಮರಣೀಯ ಗುಣ ಸ್ವಭಾವಹೊಂದಿದ್ದ ನೆಪೋಲಿಯನ್ ಒಬ್ಬ ಪುಸ್ತಕ ಪ್ರೇಮಿಯಾಗಿದ್ದ.

ನೆಪೋಲಿಯನ್ ಯಾವುದೇ ದೇಶದ ಮೇಲೆ ಯುದ್ಧ ಸಾರುವ ಮುನ್ನ ಆ ದೇಶದ ಇತಿಹಾಸ, ಭೌಗೋಳಿಕ ಸ್ಥಿತಿ, ನದಿ ಕಣಿವೆ, ಬೆಟ್ಟ ಸರೋವರ, ಆ ದೇಶವನ್ನಾಳುವ ಅರಸರ ದೌರ್ಬಲ್ಯ ಇತ್ಯಾದಿಗಳನ್ನೆಲ್ಲಾ ಓದಿ ತಿಳಿದುಕೊಂಡು ತನ್ನ ದಂಡಯಾತ್ರೆ ಯಾವ ದಿಕ್ಕಿನಿಂದ ಹೇಗಿರಬೇಕೆಂಬ ಸೈನ್ಯದ ಪಥಚಲನ ನಿರೂಪಿಸುವ ನಕ್ಷೆ ಸಹ ರಹಸ್ಯವಾಗಿ ಸಿದ್ಧಪಡಿಸಿಕೊಂಡು ಯುದ್ಧವನ್ನು ಆತ ಮೊದಲು ಮನಸ್ಸಿನಲ್ಲಿ ಗೆಲ್ಲುತ್ತಿದ್ದ. ಆನಂತರ ಅದರ ಸಾಧನೆಗಾಗಿ ಪರಿಶ್ರಮಿಸಿ ತನ್ನ ಕನಸುಗಳನ್ನು, ಯೋಜನೆಗಳನ್ನು ಸಾಕಾರಗೊಳಿಸುತ್ತಿದ್ದ. ಹೀಗಾಗಿ ನೆಪೋಲಿಯನ್ ಯುದ್ಧದ ಶಿಬಿರದಲ್ಲೂ ಸಂಚಾರಿ ಗ್ರಂಥಾಲಯವೊಂದು ಇದ್ದೇ ಇರುತ್ತಿತ್ತು. ಒಮ್ಮೆ ಆತ ಟ್ಯುಲನ್ (Toulon)ದಿಂದ ಯುದ್ಧಕ್ಕಾಗಿ ತೆರಳಬೇಕಾದಾಗ ತನ್ನೊಂದಿಗೆ ಪುಸ್ತಕದ ರಾಶಿಯೊಂದನ್ನು ಒಯ್ದಿದ್ದ. ಅದರಲ್ಲಿ 'ಕುರಾನ್', ಪ್ಲರ್ಟನಿಕ್ ಅಬ್ಬೆಸಿಯಸ್‌ರ ಕೃತಿ ಸಹ ಇದ್ದವು.

ನೆಪೋಲಿಯನ್ ಪ್ಯಾರಿಸ್ಸಿನ ಮಿಲ್ಟ್ರಿ ಶಾಲೆಯಲ್ಲಿ ತರಬೇತಿ ಪಡೆಯುತ್ತಿರುವಾಗಲೇ ಓದುವ ಗೀಳು ಆರಂಭ ಗೊಂಡಿತು. ಆಗ ಆತನಿಗೆ ಫ್ರಾನ್ಸ್ ದೇಶದ ವಿಚಾರವಾದಿಗಳಾದ ರೂಸೋ, ವಾಲ್ಟೆರೊ, ಮಾಂಟೆಸ್ಕ್ಯೋರ ಕೃತಿಗಳು ದೊರಕಿದವು. ಅಲ್ಲದೆ ಟುರ್ಗೊ, ನೆಕ್ಕರ್, ಕ್ಯಾಲೂನಿಯರ ಬರವಣಿಗೆಗಳು (ಇವರೆಲ್ಲಾ ಫ್ರಾನ್ಸಿನ ಕ್ರಾಂತಿ ಕಾಲದಲ್ಲಿ ಅರ್ಥಶಾಸ್ತ್ರಜ್ಞರಾಗಿ ಹಣಕಾಸಿನ ಸಚಿವರಾಗಿ ಸೇವೆಯಲ್ಲಿದ್ದರು) ಪ್ರಭಾವವನ್ನುಂಟು ಮಾಡಿದವು. ಫ್ರಾನ್ಸ್ ಕ್ರಾಂತಿ ಸ್ಫೋಟಗೊಂಡಾಗ ನೆಪೋಲಿಯನ್ 20 ವರ್ಷದ ವಯಸ್ಕನಾಗಿದ್ದ. ಸೆಪ್ಟೆಂಬರ್ 10-1769 ರಂದು ಪ್ಯಾರಿಸ್ಸಿನ ನಗರ ಪಟ್ಟಣಗಳಲ್ಲಿ ಗಿಲೀಟಿನ ಯಂತ್ರದೊಂದಿಗೆ ನಡೆಸಿದ ಸಾಮೂಹಿಕ ಹತ್ಯೆಯಿಂದ ತಲ್ಲಣಗೊಂಡ.

ನೆಪೋಲಿಯನ್ ದಿನದ 24 ಗಂಟೆಯಲ್ಲಿ 16 ರಿಂದ 18 ತಾಸುಗಳವರೆಗೆ ಕೆಲಸ ಮಾಡಬಲ್ಲವನಾಗಿದ್ದ, ಅಗತ್ಯವಿದ್ದಲ್ಲಿ ಆತ 20 ತಾಸುಗಳವರೆಗೆ ಕೆಲಸ ಮಾಡಲು ಹಿಂಜರಿಯುತ್ತಿರಲಿಲ್ಲ. ಆತ ಮಲಗುವ ಸಂದರ್ಭಗಳಲ್ಲೂ ಓದುವುದನ್ನು ಕೇಳುತ್ತಲೇ ನಿದ್ರಿಸುವ ಸ್ವಭಾವವುಳ್ಳವನಾಗಿದ್ದ. ಹೀಗಾಗಿ ಆತ ಎಂದೂ ಹಾಸಿಗೆ ಮೇಲೆ ಮಲಗಿ ಓದಲು ಇಚ್ಛೆಸುತ್ತಿರಲಿಲ್ಲ. ಹಾಗೇನಾದರೂ ದಣಿದಿದ್ದರೆ ಇನ್ನೇನು ಮಲಗಿ ನಿದ್ರಿಸಬೇಕೆನ್ನುವಾಗ ತನ್ನ ಹೆಂಡತಿಯಾದ ಜೋಸೆಫೆನ್ನಳ ಕೈಯಲ್ಲಿ ಪುಸ್ತಕ ಕೊಟ್ಟು ಆಕೆ ಓದುವಂತೆ ತಿಳಿಸಿ ಕಣ್ಮುಚ್ಚಿ ನಿದ್ರೆ ಮಾಡುತ್ತಿದ್ದ ಹಾಗೂ ಆ ಸಮಯದಲ್ಲಿ ಕೇಳಿದ ಎಲ್ಲಾ ವಿಷಯಗಳು ಆತನಲ್ಲಿ ಅಳಿಸದೆ ನೆನಪಿನಲ್ಲಿರುತ್ತಿದ್ದವು. ಅಂತೆಯೇ ನೆಪೋಲಿಯನ್ ಎಲ್ಲಾ ಹಂತದಲ್ಲೂ ಪುಸ್ತಕಗಳನ್ನೋದುವ ಹವ್ಯಾಸವನ್ನಿಟ್ಟುಕೊಂಡಿದ್ದನು.

ಯುವಕನಾಗಿದ್ದಾಗಿನಿಂದಲೇ ಪ್ರಾರಂಭವಾದ ಈ ಪುಸ್ತಕದ ಗೀಳು ಆತ ಸೆಂಟ್-ಹೆಲೆನಾದ ಬಂಧನದಲ್ಲಿರುವಾಗಲೂ ಮುಂದುವರೆಯಿತು.

ನೆಪೋಲಿಯನ್ ಫ್ರಾನ್ಸಿನ ಸೈನ್ಯದಲ್ಲಿದ್ದಾಗ ಆನಂತರ ಸೈನ್ಯಾಧಿಕಾರಿಯಾದಾಗ, ಹಾಗೂ ಆತ ಚಕ್ರವರ್ತಿಯಾದಾಗಲೂ ಪುಸ್ತಕಗಳನ್ನು ತುಂಬಾ ಪ್ರೀತಿಸುತ್ತಿದ್ದ. ಆತ ಅರಮನೆ ಹಾಗೂ ಯುದ್ಧ ಭೂಮಿಯಲ್ಲೂ ತನ್ನೊಂದಿಗೆ ನೂರಾರು ಸಾವಿರ ಪುಸ್ತಕಗಳನ್ನು ಕೊಂಡೊಯ್ಯುತ್ತಿದ್ದ, ಅಲ್ಲದೆ ಅವುಗಳನ್ನು ಓದಿ ನಂತರ ಪ್ರತಿ ಪುಸ್ತಕದ ಅಡಿಯಲ್ಲಿ ಅಲ್ಲಿನ ಸಾರಾಂಶಗಳನ್ನು ಬರೆದಿಟ್ಟುಕೊಳ್ಳುತ್ತಿದ್ದ.

ಪುಸ್ತಕದ ವಿಷಯಗಳು ಸ್ವಾರಸ್ಯಕರವಾಗಿರದಿದ್ದರೆ ಆತನ ಸಹಾಯಕರು ಕೂಡಲೇ ಚಕ್ರವರ್ತಿಗೆ ಹೊಸ ಪುಸ್ತಕಗಳನ್ನೊದಗಿಸಬೇಕಾಗುತ್ತಿತ್ತು. ಹೀಗೆ ನೆಪೋಲಿಯನ್ ಪುಸ್ತಕ ಸಂಗ್ರಹಿಸುವ ಹಾಗೂ ಅವುಗಳನ್ನು ನೋಡಿಕೊಳ್ಳಲೆಂದೇ ಗ್ರಂಥಾ ಪಾಲಕರನ್ನು



ನೇಮಿಸಿಕೊಂಡಿದ್ದ. ಆತ ಚಕ್ರವರ್ತಿಗೆ ಹಿಡಿಸುವ ಪುಸ್ತಕ ಒದಗಿಸುವಲ್ಲಿ ತುಂಬಾ ಕಷ್ಟ ಪಡುತ್ತಿದ್ದನಂತೆ. ಒಮ್ಮೆ 1808ರಲ್ಲಿ ಹೊಸ ಪುಸ್ತಕದ ವ್ಯವಸ್ಥೆ ಮಾಡಲಾರದ ಕಾರಣದಿಂದಾಗಿ ಗ್ರಂಥಪಾಲಕ ಚಕ್ರವರ್ತಿಯ ನಿಂದನೆಗೆ ಗುರಿಯಾದನೆಂದು ಆ ಸ್ಥಾನದ ಇತಿಹಾಸಕಾರನಾಗಿದ್ದ "Meneval" ಎಂಬಾತ ವರದಿ ಮಾಡಿರುವನು.

ನೆಪೋಲಿಯನ್ ಮಾಸ್ಕೋದ ಯುದ್ಧ ಭೂಮಿಯಿಂದ ಹಿಂತಿರುಗುವಾಗ ದೂತನೊಬ್ಬನನ್ನು ಪ್ಯಾರಿಸ್ಸಿಗೆ ಕಳುಹಿಸಿ ಅಲ್ಲಿಂದ ಹೊಸ ಪುಸ್ತಕ ತರುವಂತೆ ಆಜ್ಞೆ ಹೊರಡಿಸಿದ. ಹೀಗೆ ತರಿಸಿಕೊಂಡು ಆ ಪುಸ್ತಕಗಳೂ ಆತನಿಗೆ ಹಿಡಿಸಲಿಲ್ಲವಾದ್ದರಿಂದಾಗಿ ಇನ್ನೊಬ್ಬ ದೂತನನ್ನು ಡ್ರೆಸ್ಸ್‌ಡೆನ್ (Dresdesn)ದಿಂದ ಕಳುಹಿಸಿ ಪ್ಯಾರಿಸ್ಸಿನ ಪುರಸಭೆ ವಾಚನಾಲಯದಿಂದ ಸಾವಿರಾರು ಪುಸ್ತಕಗಳನ್ನು ತರಿಸಿಕೊಂಡ. ಆದರೆ ನೆಪೋಲಿಯನ್ ಮಾಸ್ಕೋದ ಮೇಲೆ ಯುದ್ಧ ಮಾಡಿದಾಗ ಅದೊಂದು ಚಳಿಗಾಲವಾಗಿತ್ತು. ಅಲ್ಲಿನ ಚಳಿ ಎಷ್ಟು ತೀಕ್ಷ್ಣವಾಗಿತ್ತೆಂದರೆ ಮಾಸ್ಕೋದ ನದಿ ಕಣಿವೆಗಳೆಲ್ಲ ಮಂಜಿನಗಡ್ಡೆಗಳಾಗಿ ಪರಿವರ್ತನೆ ಗೊಂಡಿದ್ದವಂತೆ. ಅಂತಹ ಪ್ರಾಕೃತಿಕ ವಿಪತ್ತನ್ನೆದುರಿಸಿ ಚಕ್ರವರ್ತಿಯ ಸೈನ್ಯ ಸೋಲು ಗೆಲುವನ್ನು ಕಾಣದೆ ಕಂಗೆಟ್ಟು ಅಸಂಖ್ಯಾತ ಸೈನಿಕರು ಅಲ್ಲಿನ ಕಣಿವೆಗಳಿಗೆ ಹಾರಿ ಆತ್ಮಹತ್ಯೆ ಮಾಡಿ ಕೊಂಡರು. ಈ ಕಾರಣದಿಂದಾಗಿ ನೆಪೋಲಿಯನ್ ತರಿಸಿಕೊಂಡ ಪುಸ್ತಕ ರಾಶಿಗಳೆಲ್ಲ ಕಳೆದು ಹೋದವು. ರಷ್ಯದ ಝಾರ್ ಒಂದನೇ ಅಲೆಕ್ಸಾಂಡರ್ ತನ್ನ ಯುದ್ಧದ ತಂತ್ರವನ್ನು ಬದಲಾಯಿಸಿ ನೆಪೋಲಿಯನ್ ಸೈನ್ಯದ ವಿರುದ್ಧ ಮುಖಾ ಮುಖಿಯಾಗಿ ಹೋರಾಡಲು ನಿರಾಕರಿಸಿ ತಮ್ಮ ಹಳ್ಳಿ, ನಗರಗಳಿಗೆ ಬೆಂಕಿ ಹಚ್ಚಿ ಹಿಂದಕ್ಕೆ ಸರಿದಿದ್ದರಿಂದಾಗಿ ಆತನಿಗೆ ರಷ್ಯದ ಮೇಲೆ 1811 ರಲ್ಲಿ ಯುದ್ಧ ಮಾಡುವ ಅವಕಾಶವೇ ತಪ್ಪಿತು. ಈ ನಿರಾಶೆಗಿಂತ ಹೆಚ್ಚಾಗಿ ಆತನಿಗೆ ತಾನು ತರಿಸಿಕೊಂಡ ರಾಶಿ ಪುಸ್ತಕದ ಸಂಗ್ರಹವೇ ಕಳೆದಿದ್ದು, ತುಂಬಾ ಹಾನಿಯಾಯಿತು. ಪ್ಯಾರಿಸ್ಸಿಗೆ ಹಿಂತಿರುಗಿದ ನಂತರ ನೆಪೋಲಿಯನ್ ಪುರಸಭಾ ಗ್ರಂಥಾಲಯಕ್ಕೆ ಪುಸ್ತಕ ಹಾನಿ ತುಂಬಲು ಅಪಾರ ಹಣ ನೀಡಿ, ಕಣ್ಮರೆಯಾದ ಪುಸ್ತಕಗಳು ಮತ್ತೆ ಸಂಗ್ರಹಿಸುವಂತೆ ಆಜ್ಞಾಪಿಸಿದ.

ನೆಪೋಲಿಯನ್ ತನ್ನ ಮೊದಲ ಹೆಂಡತಿಯೊಂದಿಗೆ ರಥದಲ್ಲಿ ಕುಳಿತು ವಿಹಾರಕ್ಕೆ ತೆರಳುತ್ತಾ ಮಾರ್ಗದುದ್ದಕ್ಕೂ ಆಕೆ ಚಕ್ರವರ್ತಿ ಸೂಚಿಸುವ ಪುಸ್ತಕವನ್ನು ಗಟ್ಟಿಯಾಗಿ ಓದಬೇಕಾಗುತ್ತಿತ್ತು. ಕೆಲವೊಮ್ಮೆ ಈ ಕೆಲಸ ಆತನ ಕಾರ್ಯದರ್ಶಿಗಳಿಗೂ ಬರುತ್ತಿತ್ತು.

ನೆಪೋಲಿಯನ್ ತಾನು ಓದಿ ಸಂಗ್ರಹಿಸಿದ ಪುಸ್ತಕಗಳ ಮೇಲೆ ತನ್ನ ರುಜು ಹಾಕಿ ಅವುಗಳ ವಿಷಯಕ್ಕನುಸಾರವಾಗಿ ಗ್ರಂಥಗಳನ್ನು ವರ್ಗೀಕರಿಸಿಟ್ಟು ಕೊಳ್ಳುತ್ತಿದ್ದ.

ಅಂದಿನ ಕಾಲಮಾನದಲ್ಲಿ ಬಹುತೇಕ ಜನರು ವಿಲಾಸಿ ಜೀವನವನ್ನು ಬಯಸುವವರಾಗಿದ್ದರಿಂದ ಅವರಿಗೆಲ್ಲ ಪುಸ್ತಕ ಓದುವ ಇಲ್ಲವೆ ಓದಿದ ಪುಸ್ತಕ ಸಂಗ್ರಹಿಸಿಟ್ಟುಕೊಂಡಿರಬೇಕೆಂಬ ತಾಳ್ಮೆ ಇರುತ್ತಿತ್ತು. ಆದರೆ ಪುಸ್ತಕ ಪ್ರೇಮಿಯಾಗಿದ್ದ ನೆಪೋಲಿಯನ್‌ನ ಹವ್ಯಾಸವೇ ಬೇರೆ ತರಹದ್ದಾಗಿತ್ತು. ಆತ ಒಂದು ಪುಸ್ತಕ ಓದಿದ ನಂತರ ತನ್ನದೇ ವಿಚಾರ ಕುರಿತಾದ ಕಿರು ಅಡಕವೊಂದನ್ನು ಪ್ರತಿಯೊಂದು ಪುಸ್ತಕದಲ್ಲೂ ಇಡುತ್ತಿದ್ದ. ಹೀಗಾಗಿ ನೆಪೋಲಿಯನ್ ಪುಸ್ತಕಗಳನ್ನು ಬರಿ ಓದುತ್ತಿರಲಿಲ್ಲ ಬದಲಾಗಿ ಅವುಗಳ ಅಧ್ಯಯನವನ್ನೇ ಮಾಡುತ್ತಿದ್ದಾನೆಂದು ಹೇಳುವುದುಂಟು.

ನೆಪೋಲಿಯನ್ ಪುಸ್ತಕಗಳ ಅಧ್ಯಯನ ಮಾಡುವ ವಿಧಾನವು ಅನ್ಯರಿಗಿಂತ ತುಂಬಾ ಭಿನ್ನವಾಗಿರುತ್ತಿತ್ತು. ಆತ ಯಾವುದೇ ಪುಸ್ತಕವನ್ನು ಓದುವ ಮೊದಲು ಅದರ ಕೆಲ ಪುಟಗಳಲ್ಲಿನ ವಿಷಯಗಳ ಮೇಲೆ ಕಣ್ಣಾಡಿಸಿ ಹಿಡಿದ ಪುಸ್ತಕವು ಎಂತಹದ್ದೆಂದು ನಿರ್ಣಯಿಸುತ್ತಿದ್ದ. ಹಾಗೇನಾದರೂ ಹಿಡಿದ ಪುಸ್ತಕದ ವಿಷಯಗಳು ಕುತೂಹಲಕರವಾಗಿರುವುದೆಂದು ಅನಿಸಿದರೆ ಇಡೀ ಪುಸ್ತಕವನ್ನೇ ಓದಿ ಅದರಲ್ಲಿನ ಸಂಗತಿಗಳನ್ನು ತನ್ನ ಸ್ಮೃತಿಯಲ್ಲಿಟ್ಟುಕೊಳ್ಳುತ್ತಿದ್ದ.



ಅವನ ಖಾಸಾ ಗ್ರಂಥ ಸಹಾಯಕನಿಗೆ ಮುದ್ರಣಗೊಂಡ ಹೊಸ ಪುಸ್ತಕಗಳ ಹೆಸರು, ಅದರ ಕಿರು ಸಾರಾಂಶಗಳ ನಿರೂಪಣೆ ಕೊಡುವುದೇ ಕ್ಲಿಷ್ಟಕರ ಕೆಲಸವಾಗಿತ್ತು.

ನೆಪೋಲಿಯನ್‌ಗೆ ಕಾದಂಬರಿ ಓದುವ ಬಗ್ಗೆ ಹೆಚ್ಚು ಆಸಕ್ತಿ ಇರಲಿಲ್ಲ. ಅಲ್ಲದೆ ನೀರಸ ಕಥೆ ಹೇಳುವ ಪುಸ್ತಕಗಳನ್ನು ಆತ ಓದಲು ಬಯಸುತ್ತಿರಲಿಲ್ಲ.

ಈಜಿಪ್ಟಿನ ದಂಡಯಾತ್ರೆಯಲ್ಲಿರುವಾಗ ತನ್ನ ಸಹಾಯಕ ಸೈನ್ಯಾಧಿಕಾರಿಗಳಿಗೆ, ಓದುವ ಪುಸ್ತಕ ಎಂತಹ ವಿಷಯ ಹೊಂದಿರಬೇಕು? ಮತ್ತು ಅದು ಯಾವ ವಿಷಯ ವಿವರಿಸಿದರೆ ಒಳ್ಳೆಯದಿರುತ್ತದೆ ಎಂಬ ಸಂಗತಿ ಕುರಿತು ಚರ್ಚೆಗೆ ಇಳಿದ.

ಆಗ Bessier-Eugune ಮತ್ತು Bourrienee ಎಂಬ ಅಧಿಕಾರಿಗಳೆಲ್ಲಾ ಓದುವ ಪುಸ್ತಕ ಕಾದಂಬರಿಯಾಗಿದ್ದರೆ ಹೃದಯ ಸ್ಪರ್ಶಿಸುವುದೆಂದು ಉತ್ತರಿಸಿದರು.

ಅದಕ್ಕೆ ಪ್ರತಿಯಾಗಿ ನೆಪೋಲಿಯನ್ ಕಾದಂಬರಿ ಓದುವುದು ಅರಮನೆಯ ಹೆಂಗಸರಿಗೆ ಆಸಕ್ತಿ ವಿಷಯವಾಗಬಲ್ಲದು. ಕಾದಂಬರಿಯ ಬದಲಾಗಿ ಸೈನ್ಯದ ಅಧಿಕಾರಿಗಳಿಗೆ ಇತಿಹಾಸ, ಭೂಗೋಳ, ಯುದ್ಧದ ತಂತ್ರಗಾರಿಕೆ ವಿವರಿಸುವ ಪುಸ್ತಕ ಒದಗಿಸುವಂತೆ "Arnott' ಎಂಬ ತನ್ನ ಖಾಸಾ ಗ್ರಂಥಸಹಾಯಕನಿಗೆ ಆಜ್ಞೆ ನೀಡಿದ.

ಯೌವ್ವನದಲ್ಲಿ ನೆಪೋಲಿಯನ್ ಇತಿಹಾಸ, ಭೂಗೋಳ, ತತ್ವಶಾಸ್ತ್ರಗಳ ಗ್ರಂಥಗಳನ್ನು ಓದುತ್ತಿದ್ದ. ಅನಂತರ ಆತನ ಗಮನ ವಿಜ್ಞಾನಗಳತ್ತ ಹರಿದಿದ್ದರಿಂದಾಗಿ ಅಂತಹ

ಮೋಡಿ

ಪ್ರೇಮಕ್ಕಿಂತ ಪ್ರೇಮದ
ಹೆಂಡತಿಯ 'ಪಾಶ'ದಲ್ಲಿ
ಸಿಕ್ಕವನು
ಹೀಗೆಂದನು 'ಮನೆಯಾಕೆ'
ಇಲ್ಲದ
ಮನೆ- ಯಾಕೆ?

-ಕೆ. ಎಲ್. ಶಂಕರ್

ವಿಷಯಗಳುಳ್ಳ ಗ್ರಂಥ ಸಂಗ್ರಹ ಮಾಡಿದ. ಮುಂದೆ ಯುದ್ಧಕ್ಕಾಗಿ ತೆರಳುವಾಗ ನೆಪೋಲಿಯನ್‌ನ ಬಳಿಯಿದ್ದ ಸಂಚಾರಿ ಗ್ರಂಥಾಲಯದಲ್ಲಿ ಹಲವು ವಿಷಯಗಳ ಗ್ರಂಥಗಳ ರಾಶಿಯೇ ಇರುತ್ತಿತ್ತು. ಅವುಗಳಲ್ಲಿ ಸಾಮಾನ್ಯವಾಗಿ ಇತಿಹಾಸದ ಪುಸ್ತಕಗಳೇ ಅಧಿಕ ಸಂಖ್ಯೆಯಲ್ಲಿರುತ್ತಿದ್ದವು.

ನೆಪೋಲಿಯನ್ ಮಾಸ್ಕೋ ಯುದ್ಧಕ್ಕಾಗಿ ಆಗಮಿಸಿದ ದಿನದಂದೇ ದೊಡ್ಡ ಪ್ರಮಾಣದ ಬೆಂಕಿಯೊಂದು ನಗರದಲ್ಲಿ ಕಾಣಿಸಿಕೊಂಡಿತು. ಆಗ ಆತನಿಗೆ ಮಾಡಲು ಕೆಲಸವಿಲ್ಲವೆಂದು ಅರಿತು voltairo ಬರೆದ "History of Charles XII' ಎಂಬ ಪುಸ್ತಕ ಓದುವುದರಲ್ಲಿ ಮುಳುಗಿದ.

ಸದಾ ಕೆಲಸವನ್ನೇ ಪ್ರೀತಿಸುತ್ತಿದ್ದ ನೆಪೋಲಿಯನ್ನನಿಗೆ 'ಎಲ್ಬಾ' ನಡುಗಡ್ಡೆಯ ಬಂಧನದ ಅವಧಿಯಲ್ಲಿ ಆತನಿಗೆ ಮಾಡಲು ಕೆಲಸಗಳೇ ಇಲ್ಲವಾದ್ದರಿಂದಾಗಿ ವೈವಿಧ್ಯ ವಿಷಯಗಳುಳ್ಳ ಪುಸ್ತಕಗಳನ್ನು ಓದಿದ. ಅದರಲ್ಲಿ 'Bailly's Astronomy, plinny ಬರೆದ ಇತಿಹಾಸ ಕೃತಿ ಓದಿದ. ವಿವಿಧ ದೇಶಗಳ ದಂತ ಕಥೆಯೂ ಕಲ್ಪನಾ ಕಥಾ ಸಂಗ್ರಹವಾದ ' Cabinet des fees' ಎಂಬ ಗ್ರಂಥವೂ ಆತನ ಗ್ರಂಥಾಲಯದಲ್ಲಿತ್ತು.

ನೆಪೋಲಿಯನ್ ಎಲ್ಬಾ ನಡುಗಡ್ಡೆಯಿಂದ ಪ್ಯಾರಿಸ್ಸಿಗೆ ಹಿಂತಿರುಗಿದ ನಂತರ ಲೂವರ್ ಗ್ರಂಥಾಲಯಕ್ಕೆ ಹಾಗೂ ಆಗಿನ ಪುಸ್ತಕ ರಾಶಿಗಳ ಸ್ಥಿತಿ ಸಮೀಕ್ಷೆಗೆ ಚಕ್ರವರ್ತಿ ತಾನೇ ಸ್ವಯಂ ಭೇಟಿಕೊಟ್ಟ. ಕಳೆದ ಮೂರು ತಿಂಗಳಿಂದ (ಈ ಕಾಲದಲ್ಲಿ ನೆಪೋಲಿಯನ್ ಪ್ರಥಮ ಬಾರಿಗೆ ಸಿಂಹಾಸನ ತ್ಯಾಗ ಮಾಡಿ ಎಲ್ಬಾ ನಡುಗಡ್ಡೆಯ ಬಂಧನದಲ್ಲಿದ್ದ) ಲೂವರ್ ಗ್ರಂಥಾಲಯಕ್ಕೆ ಅಧಿಕಾರಿ ವರ್ಗದವರು ಹೋಗಿರಲಿಲ್ಲ. ಹೀಗಾಗಿ ಅಲ್ಲಿನ ಬಹು ಉಪಯೋಗಿ ಪುಸ್ತಕಗಳೆಲ್ಲ ಧೂಳಿನಿಂದ ಆವೃತಗೊಂಡಿತ್ತು. ಅನಂತರ ಅವುಗಳನ್ನು ವಿಷಯ ಕ್ರಮಗಳಿಗನುಸಾರವಾಗಿ ಜೋಡಿಸುವ ವ್ಯವಸ್ಥೆ ಜಾರಿಗೆ ತಂದನು.

ವಾರ್ಟಲೂ ಯುದ್ದದಲ್ಲಿ ನೆಪೋಲಿಯನ್ ಪರಾಭವ ಗೊಂಡ. ಅನಂತರ ಬ್ರಿಟಿಷರಿಗೆ ಶರಣಾಗಿ ಆಕಸ್ಮಿಕವಾಗಿ ಸೆಂಟ್-ಹೆಲೆನಾ ನಡುಗಡ್ಡೆಯ ಬಂಧನದ ಜೀವನ ಆಯ್ಕೆ ಮಾಡಿ ಕೊಂಡಾಗ ನೆಪೋಲಿಯನ್ ಆ ನಿರ್ಜನ ಪ್ರದೇಶದಲ್ಲಿ ವೇಳೆ ಕಳೆಯುವುದಾದರೂ ಹೇಗೆ? ಎಂದು ಧೃತಿಗೆಟ್ಟು ಲೂವರ್ ಗ್ರಂಥಾಲಯದ ಎಲ್ಲಾ ಪುಸ್ತಕಗಳನ್ನು 'ಸೆಂಟ್-ಹೆಲೆನಾ'ಗೆ ತರಿಸಿಕೊಳ್ಳುವ ಆಲೋಚನೆ ಮಾಡಿದ. ಆದರೆ ಆತ ತುಂಬಾ ಕಷ್ಟದಿಂದ ಕೇವಲ 500 ಪುಸ್ತಕಗಳ ಸಂಗ್ರಹ ಪಡೆದ.

ನನ್ನ ದೇಶವು ಯುದ್ಧ, ಕಲಹಗಳಿಗೆ ತುತ್ತಾಗಿ ನನಗೆ ಚಿತ್ತಭ್ರಮಣೆಯಾಗಿದೆ ನಾನಂತೂ ನನ್ನ ರಾಜಕೀಯ ಜೀವನವನ್ನು ಕೊನೆಗೊಳಿಸಿ ಬ್ರಿಟಿಷರ ಆತಿಥ್ಯದಲ್ಲಿಯೇ ಕೊನೆ ಉಸಿರೆಳೆಯಲು ಬಯಸಿ ಬಂದಿರುವೆ. ಆದ್ದರಿಂದಾಗಿ ತನಗೆ ಓದಲು ಹೆಚ್ಚು ಹೆಚ್ಚು ಪುಸ್ತಕಗಳು ಬೇಕಾಗಿವೆಯೆಂದು ಅಲ್ಲಿನ ಬ್ರಿಟಿಷ್ ಗವರ್ನರ್‌ಗಳಾಗಿದ್ದ George Cockburn ಹಾಗೂ Admiral Hudson lowie ರೊಂದಿಗೆ ಜಗಳವಾಡಿ ನೆಪೋಲಿಯನ್ ಫ್ರಾನ್ಸಿನಿಂದ ಸಾವಿರಾರು ಪುಸ್ತಕಗಳನ್ನು ತರಿಸಿಕೊಂಡ.

ನೆಪೋಲಿಯನ್ ಏಕಾ ಏಕಿ ಸೆಂಟ್-ಹೆಲೆನಾದ George Town ದಿಂದ Longwood ಗೆ ಸ್ಥಳಾಂತರಿಸಿದಾಗ ಆತ ಹೆಚ್ಚಾಗಿ ಧಾರ್ಮಿಕ ಪುಸ್ತಕಗಳನ್ನು ಓದಿದ. Massllon Bourdaloueರ ಧಾರ್ಮಿಕ ಕೃತಿಗಳು ನೆಪೋಲಿಯನ್‌ನ ಮೆಚ್ಚುಗೆ ಪುಸ್ತಕಗಳಾದವು.

ನೆಪೋಲಿಯನ್ ತನ್ನ ಬಾಲ್ಯದಿಂದ ಬಾಳಿನ ಸಂಧ್ಯಾಕಾಲದ ವರೆಗೆ Ossian ಎಂಬಾತ ಬರೆದ ಕವಿತೆ ಓದಿ ಪ್ರಭಾವಿತನಾಗಿದ್ದ. ಆ ಕವಿಯ ಅಭಿಮಾನಿಯಾಗಿದ್ದಲ್ಲದೆ Ossian ಕವಿತೆ ಎಷ್ಟು ಬಾರಿ ಓದಿದರೂ ಆತನಿಗೆ ಬೇಸರ ವೆನಿಸುತ್ತಿರಲಿಲ್ಲ. ಆದ್ದರಿಂದಾಗಿ ಚಕ್ರವರ್ತಿಯು ತನ್ನ ನೆಚ್ಚಿನ ಈ ಕವಿ Homer ಹಾಗೂ ಪ್ರಪಂಚದ ಅನೇಕ ವಿಖ್ಯಾತರ ಸಾಲಿಗೆ ಹೋಲಿಸಿದ್ದ.



ನೆಪೋಲಿಯನ್ ಚಕ್ರವರ್ತಿ ಹಿಡಿದ ಪುಸ್ತಕವನ್ನು ಗಟ್ಟಿಯಾಗಿ ಓದುತ್ತಿದ್ದ. ಹೀಗೆ ಆತನ ಓದುವ ಶೈಲಿ ಶುಶ್ರಾವ್ಯವಾಗಿರಬೇಕೆಂದು ಆತ ಎಂದೂ ಕಿವಿಗೊಟ್ಟಿರಲೇ ಇಲ್ಲ. ಕೆಲವೊಮ್ಮೆ ಪುಸ್ತಕದಲ್ಲಿದ್ದ ಪದಕ್ಕೆ ಸಮವಾಗಿ ಮತ್ತೊಂದು ಪದ ಸೇರಿಸಿ ತನ್ನ ಸ್ಮೃತಿಯಲ್ಲಿ ವಿಷಯಗಳು ಬಹುಕಾಲ ಉಳಿಯಲೆಂದು ಗಟ್ಟಿಯಾಗಿ ಓದುತ್ತಿದ್ದ ಹಾಗೂ ಅವು ಕೆಲವೊಂದು ತಪ್ಪಾಗಿಯೇ ಉಚ್ಚರಿಸಲ್ಪಡುತ್ತಿದ್ದವು. ಓದುವ ಭರದಲ್ಲಿ ಆತನಿಗೆ ಅಂತಹ ತಪ್ಪುಗಳು ಗಮನಕ್ಕೆ ಬರುತ್ತಿರಲಿಲ್ಲ.

ನೆಪೋಲಿಯನ್‌ನಿಗೆ ವಿಜ್ಞಾನದಲ್ಲಿ ಆಸಕ್ತಿಯಿತ್ತು. ಅಂತೆಯೇ ಅನೇಕ ವಿಜ್ಞಾನಕ್ಕೆ ಸಂಬಂಧಿಸಿದ ಕೃತಿ ಸಂಗ್ರಹಿಸಿ ಓದಿ ತಿಳಿದಿದ್ದ. ಇಂದು ವಿಜ್ಞಾನವು ಮಿಲಿಯನ್ ಗಟ್ಟಲೆ ಪ್ರಾಚೀನತೆ ಹೊಂದಿದ ಮಾನವನ ಬದುಕು ಹಾಗೂ ದಿಕ್ಕನ್ನ ಬದಲಿಸಿದೆ. ಆದರೆ ಮುಂದೆ ಮಾನವನ ಬದುಕು ವಿಜ್ಞಾನ ಯುಗದಲ್ಲಿ ಇನ್ನೆಷ್ಟು ಮಾರ್ಪಾಡಾಗುವುದೆಂಬ ಪ್ರಶ್ನೆಗೆ ಉತ್ತರ ಊಹಿಸಲು ಅಸಾಧ್ಯವೆಂಬ ಉದ್ಗಾರ ತೆಗೆದಿದ್ದ.

ನೆಪೋಲಿಯನ್ ಶಿಸ್ತಿನ ಮನುಷ್ಯನಾಗಿದ್ದ. ಜೀವನದುದ್ದಕ್ಕೂ ನಡವಳಿಕೆ, ರೀತಿ, ನೀತಿಗಳ ಆದರ್ಶಗಳನ್ನು ಹಾಕಿಕೊಂಡು ತನ್ನ ವಿಚಾರ ಆದರ್ಶಗಳಂತೆಯೆ ನಡೆಯಲು ಬಯಸಿದ. ಆತನ ಬದುಕು ಹೇಗೆ ಇದ್ದರೂ ಆರೋಗ್ಯ, ಓದುವ ಹವ್ಯಾಸ ನೆಪೋಲಿಯನ್‌ನಲ್ಲಿ ಕಡಿಮೆಯಾಗಲಿಲ್ಲ. ಆತ ಜೀವನದುದ್ದಕ್ಕೂ ಪುಸ್ತಕ ರಾಶಿಯಲ್ಲಿ ಅಧ್ಯಯನ, ಬರವಣಿಗೆ ಹಾಗೂ ಯುದ್ಧ ಭೂಮಿಯಲ್ಲಿನ ದಿಗ್ವಿಜಯಗಳಲ್ಲಿಯೇ ಸಾಗಿತ್ತು. ವಾರ್ಟಲೂ ಯುದ್ಧದಲ್ಲಿ ಸೋತು, ಸೆಂಟ್‌ಹೆಲೆನಾದ ಬಂಧನದಲ್ಲಿರುವಾಗ ತನ್ನ ಅವಿಸ್ಮರಣೀಯ ಯುದ್ಧ ಭೂಮಿಯ ಅನುಭವ ಕುರಿತು Lacases ಎಂಬ ಆಪ್ತ ಕಾರ್ಯ ದರ್ಶಿಯೊಂದಿಗೆ ಹೇಳಿ ಬರೆಸುತ್ತಿದ್ದ. ಇಂತಹ ಪುಸ್ತಕ ಪ್ರೇಮಿ ನೆಪೋಲಿಯನ್‌ನ ಹೊರತಾಗಿ ಅನ್ಯರು ದೊರಕುವುದು ದುರ್ಲಭ. "Nepoleon was a man who liked old slippers, an open fire and good books'!

■



ಆಪ್ತ ಸಮಾಲೋಚನೆ

■ ಉಷಾ ನವರತ್ನರಾಮ್

ದ್ವಿ-ಸಂಬಂಧ ಸಾಧುವೇ?

ನಾನೊಬ್ಬ ಕಲಾವಿದ. ನನಗೀಗ 23 ವರ್ಷ, 8 ವರ್ಷಗಳ ಹಿಂದೆ ನನ್ನಕ್ಕನ ಮಗಳೊಂದಿಗೆ ನನ್ನ ಮದುವೆಯಾಯಿತು. ಆದರಿನ್ನೂ ಅವಳು ಋತುಮತಿಯಾಗಿಲ್ಲ. ಅವಳು ಒರಟು ಮತ್ತು ಮತ್ಸರ ಸ್ವಭಾವದವಳು. ಅವಳ ಜೊತೆಗೆ ಹೊಂದಾಣಿಕೆ ಕಷ್ಟವೆಂದು ತಿಳಿದು ಮತ್ತೊಂದು ಹುಡುಗಿಯನ್ನು ಪ್ರೀತಿಸಿದ್ದೇನೆ. ಅವಳು ನನ್ನನ್ನು ಮದುವೆಯಾಗಲು ಒಪ್ಪಿದ್ದಾಳೆ. ಈ ವಿಷಯ ಮನೆಯ ಹಿರಿಯರಿಗೆ ತಿಳಿದಿಲ್ಲ. ಮೊದಲಿನ ಹೆಂಡತಿಯನ್ನು ಬಿಡಲು ಮನಸ್ಸಿಲ್ಲ. ಕಾರಣ, ಅವಳೂ ಹೆಣ್ಣಲ್ಲವೇ? ಆದರೆ ಈ ರೀತಿಯ ದ್ವಿ-ಸಂಬಂಧ ಸಾಧುವೇ - ಸಾಧ್ಯವೇ? ಸಾಧ್ಯವಿದ್ದರೆ ಹೇಗೆ ತಿಳಿಸಿ.

-ಹೆಸರು ಬೇಡ, ಶಿವಮೊಗ್ಗ.

ಸಲಹೆ

ನೀವು ಈಗ 23 ವರ್ಷ ವಯಸ್ಸಿನವರೆಂದು , 8 ವರ್ಷಗಳ ಹಿಂದೆ ಅಕ್ಕನ ಮಗಳನ್ನು ಮದುವೆಯಾಗಿದ್ದೀರಿ ಎಂದು ಹೇಳುತ್ತೀರಿ. ಅಂದರೆ ನಿಮಗೆ ಮದುವೆಯಾದಾಗ 15 ವರ್ಷ, ನಿಮ್ಮಕ್ಕನ ಮಗಳಿಗೆ ಎಷ್ಟು ವಯಸ್ಸಿದ್ದಿರಬಹುದು? ಅವಳು ಋತುಮತಿ ಆಗಿಲ್ಲವೆಂದು ತಿಳಿಸಿದ್ದೀರಿ. ಕೈ ಹಿಡಿದ ಗಂಡನಾಗಿ ನಿಮ್ಮ ಕರ್ತವ್ಯಗಳನ್ನು ಮರೆತಿದ್ದೀರಿ. ನಿಮ್ಮದು ಬಾಲ್ಯ ವಿವಾಹವಾಗಿದ್ದಲ್ಲಿ, ವಿವಾಹವಾದ ಮೇಲೆ ಅವಳನ್ನು ನೀವು ಶಾಲೆಗೆ ಸೇರಿಸಿ ಓದು ಬರಹ ಕಲಿಸಬಹುದಿತ್ತು. ಅವಳ ಸ್ವಭಾವವನ್ನು ತಿದ್ದಬಹುದಿತ್ತು. ಅದನ್ನು ಬಿಟ್ಟು ಪಲಾಯನವಾದಿಯಾಗಿ ಹೊಂದಾಣಿಕೆ ಕಷ್ಟವೆಂದು ಬೇರೆ ಹುಡುಗಿಯನ್ನು ಪ್ರೀತಿಸಿ ಮದುವೆಯಾಗ ಬಯಸಿದ್ದೀರಿ. ಇದು ಕಾನೂನಿಗೆ ವಿರೋಧವಾಗಿದೆ. ಧರ್ಮ ಪತ್ನಿ ಬದುಕಿರುವಾಗ ಅವಳಿಂದ ವಿಚ್ಛೇದನ ಪಡೆಯದೇ ಎರಡನೇ ಮದುವೆಯಾಗುವುದು ಸಾಧ್ಯವಿಲ್ಲ . ಹೆಣ್ಣಿನ ಮೇಲೆ ಅಷ್ಟೊಂದು ಕರುಣೆ ತೋರುವ ನೀವು ನಿಮ್ಮ ಪತ್ನಿಯನ್ನು ಪ್ರೀತಿ, ಆದರದಿಂದ ತಿದ್ದಬಹುದು. ತಜ್ಞ ವೈದ್ಯರಲ್ಲಿ ತೋರಿಸಿ, ಅವಳು ಋತುಮತಿಯಾಗಿ ಎಲ್ಲಾ ಹೆಣ್ಣಿನಂತೆ ಬದುಕು ನಡೆಸಲು ಸಾಧ್ಯವಾಗುವಂತೆ ಮಾಡಬಹುದು. 'ಇದು ಬೇಡ, ಅದು ಬೇಕು' ಎನ್ನುವುದಕ್ಕೆ ಹೆಣ್ಣು ಮಾರಾಟದ ಸರಕಲ್ಲ. ಮೊದಲು ನಿಮ್ಮನ್ನು ನೀವು ತಿದ್ದಿಕೊಳ್ಳಿ.ಅವಳ ಮತ್ಸರಕ್ಕೆ ಒರಟುತನಕ್ಕೆ ನೀವೇ ಕಾರಣವಿರಬಹುದಲ್ಲವೆ? ನಮ್ಮಲ್ಲಿ ನಿಮ್ಮಂತಹ ಪುರುಷರು ಸಾಮಾನ್ಯವಾಗಿರುವುದರಿಂದಲೇ ನಮ್ಮ ದೇಶದ ಹೆಣ್ಣು ಮಕ್ಕಳು ಅನೇಕ ಶೋಷಣೆಗಳಿಗೆ ಒಳಗಾಗುತ್ತಿದ್ದಾರೆ. ಶ್ರೀರಾಮ ಚಂದ್ರ ಹುಟ್ಟಿದ ಈ ನೆಲದಲ್ಲಿ ನಿಮ್ಮಂತಹವರು, ನಿಮ್ಮ ದುರಾಲೋಚನೆ ದೂರಾಲೋಚನೆಗಳನ್ನು ಬಿಟ್ಟು ಕರ್ತವ್ಯ ಪ್ರಜ್ಞರಾಗಿ.

ವಯಸ್ಸಿನ ಅಂತರ

ನಮ್ಮ ತಂದೆ ತಾಯಿಯವರು ನನಗೆ ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡಿಬಿಟ್ಟರು. ಆದರೆ ಅವಳು ನನಗಿಂತ ದೊಡ್ಡವಳು, ನಾನು ಸಣ್ಣವನು. ಈಗ ನಾನು ಬೇರೊಬ್ಬಳನ್ನು ಮನಸಾರೆ ಪ್ರೀತಿಸುತ್ತಿದ್ದೇನೆ.' ಆದ್ದರಿಂದ ನನ್ನ ಹೆಂಡತಿಯನ್ನು ತ್ಯಜಿಸಿ ಪ್ರೀತಿಸಿದವಳೊಂದಿಗೆ ಸಂಸಾರ ಮಾಡಬಹುದೇ? ತಿಳಿಸಿ.

-ಚಿದಂಬರರಾವ್, ಮೈಸೂರು.

ಸಲಹೆ

ನಿಮಗೆ ಚಿಕ್ಕವಯಸ್ಸಿನಲ್ಲಿ ನಿಮ್ಮ ತಂದೆ ತಾಯಿ ಮದುವೆ ಮಾಡಿದರೆಂದು ತಿಳಿಸಿದ್ದೀರಿ. ನಿಮ್ಮ ಪತ್ನಿ ನಿಮಗಿಂತ ದೊಡ್ಡವಳಾದರೆ ತಪ್ಪೇನಿಲ್ಲ. ವಿವಾಹದಲ್ಲಿ ವಯಸ್ಸಿನ ಅಂತರ ಮುಖ್ಯವಲ್ಲ. ಎಷ್ಟೋ ಮಂದಿ ಪುರುಷರೂ ಹೆಂಡತಿಗಿಂತ ಕಿರಿವಯಸ್ಸಿನವರಾಗಿದ್ದರೂ, ಸುಖವಾಗಿ ಸಂಸಾರ ಮಾಡಿಕೊಂಡಿರುತ್ತಾರೆ. ವಿವಾಹರಾಗಿದಾಗ್ಯೂ ಬೇರೊಬ್ಬಳನ್ನು ಪ್ರೀತಿಸಿ ಮದುವೆಯಾಗಲು ಬಯಸಿರುವಿರಿ. ಇದು ಕಾನೂನು ಬಾಹಿರ. ನಿಮ್ಮ ಪತ್ನಿಯಿಂದ ವಿಚ್ಛೇದನ ಪಡೆದು ಬೇರೆಯವಳನ್ನು ವಿವಾಹವಾಗಬಹುದು. ತಜ್ಞ ವಕೀಲರನ್ನು ಸಂಪರ್ಕಿಸಿ.

ಅವಿದ್ಯಾವಂತೆಯನ್ನು ಮದುವೆಯಾಗಲೇ?

ನಾನು ಎಂ.ಕಾಂ. ಪದವೀಧರನಾಗಿದ್ದು ಕೃಷಿಯಾಧಾರಿತ ಕುಟುಂಬದವನು. ಸದ್ಯಕ್ಕೆ ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ.

ಇಂದಿನ ಕಲಿತ ಮಹಿಳೆಯರ ನಡೆ, ನುಡಿಗಳನ್ನು ಇಷ್ಟ ಪಡದ ನನ್ನ ತಂದೆ ತಾಯಿಯವರು ಒಬ್ಬಳು ಅವಿದ್ಯಾವಂತೆಯೊಂದಿಗೆ ನನ್ನ ಲಗ್ನವನ್ನು ನಿಶ್ಚಯಿಸಿದ್ದಾರೆ. ಆದರೆ ಅವಳು ನಮ್ಮ ಕುಟುಂಬಕ್ಕೆ ಪರಿಚಿತಳು.

ನಮ್ಮ ಮುಂದಿನ ಬದುಕು ಇವಳೊಂದಿಗೆ ನೆಮ್ಮದಿಯಿಂದ ಕೂಡಿರಬಹುದೇ ? ನನ್ನ ಭಾವಿಪತ್ನಿ ಅವಿದ್ಯಾವಂತಳಾಗಿರುವುದರಿಂದ ಬೇರೆ ತರಹದ ಸಮಸ್ಯೆಗಳು ಉದ್ಭವಿಸಬಹುದೇ?

-ಹೆಸರು , ಊರು ಬೇಡ.

ಸಲಹೆ

ಇಂದಿನ ಕಲಿತ ಮಹಿಳೆಯರ ನಡೆ-ನುಡಿಗಳನ್ನು ನಿಮ್ಮ ತಂದೆ ತಾಯಿ ಇಷ್ಟ ಪಡುವುದಿಲ್ಲವೆಂದು ತಿಳಿಸಿರುತ್ತೀರಿ, ಎಂತಹ ನಡೆ-ನುಡಿ ಎಂದು ತಿಳಿಸಿಲ್ಲ. ಕಲಿತ ಮಹಿಳೆಯರು ಪ್ರಬುದ್ಧರಾಗಿರುತ್ತಾರೆ. ಕಲಿಯದ ಮಹಿಳೆಯರೂ ಪ್ರಬುದ್ಧರಾಗಿರುತ್ತಾರೆ. ಪದವೀಧರರಾಗಿದ್ದರೆ ಮಾತ್ರ ವಿದ್ಯಾವಂತೆ ಎನ್ನುವುದು ತಪ್ಪು. ಅಕ್ಷರ ಜ್ಞಾನವಿಲ್ಲದಿದ್ದರೂ ಎಷ್ಟೋ ಮಹಿಳೆಯರು ಹೃದಯವಂತಿಕೆಯಿಂದ ಸ್ನಾತಕೋತ್ತರ ಪದವೀಧರೆಯರಿಗಿಂತ ಮಿಗಿಲಾಗಿರುತ್ತಾರೆ. ನೀವು ಅವಳನ್ನು ಅರ್ಥ ಮಾಡಿಕೊಂಡು, ಅವಳು ನಿಮ್ಮನ್ನು ಅರ್ಥ ಮಾಡಿಕೊಂಡು ಒಬ್ಬರಿಗೊಬ್ಬರು ಹೊಂದಿಕೊಂಡು ಸಾಮರಸ್ಯದಿಂದ ಬದುಕಬಹುದು. ನಿಮ್ಮ ಪತ್ನಿಗೆ ನೀವೇ ಮಾರ್ಗದರ್ಶಕರಾಗಿ ವಿದ್ಯಾವಂತಳನ್ನಾಗಿ ಮಾಡಬಹುದು. ಅವಿದ್ಯಾವಂತಳಾಗಿರುವುದು ಮಹಾಪರಾಧವೇನಲ್ಲ. ಓದಲು ಅವಕಾಶವಿಲ್ಲದೆ, ಎಷ್ಟೋ ಹೆಣ್ಣು ಮಕ್ಕಳು ಒಳ್ಳೆಯ ಪತಿಯನ್ನು ಪಡೆಯುವುದರಿಂದ ವಂಚಿತರಾಗಿರುತ್ತಾರೆ. ಕಲಿಯುವುದಕ್ಕೆ ವಯಸ್ಸು ಮುಖ್ಯವಲ್ಲ. ಕಲಿಯಲು ಆಸೆ ಇದ್ದಲ್ಲಿ ಅವಳನ್ನು ನೀವು ಪದವೀಧರೆಯನ್ನಾಗಿ ಮಾಡಬಹುದು. ದಾಂಪತ್ಯ ಜೀವನದಲ್ಲಿ ಎರಡು ವ್ಯಕ್ತಿಗಳ ಮನಸ್ಸು ಹೃದಯ ಒಂದಾಗಬೇಕು.

ಅನುಮಾನಾಸ್ಪದ ನಡತೆಯ ಹುಡುಗಿ

ನನಗೀಗ 25 ವರ್ಷ. ಕಳೆದ 1 ವರ್ಷದಿಂದ ನಾನೊಂದು ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಅವಳಿಗೆ 20 ವರ್ಷ, ಅವಳೂ ಪ್ರೀತಿಸುತ್ತಿದ್ದಾಳೆ. ಆದರೆ ಇತ್ತೀಚೆಗೆ ಅವಳ ನಡತೆಯ ಮೇಲೆ ಸಂಶಯ ಬಂದಿದೆ. ಕಾರಣ ಅವಳು ಯಾವಾಗಲೂ ಹುಡುಗರೊಂದಿಗೆ ಬೆರೆತಿರುವುದಲ್ಲದೇ ಅವಳ ಭಾವಂದಿರ ಜೊತೆಗೆ ಅತೀ ಸಲುಗೆಯಿಂದ ವರ್ತಿಸುತ್ತಾಳೆ. ಅವಳ ಇನ್ನೊಂದು ಕೆಟ್ಟ ಅಭ್ಯಾಸವೆಂದರೆ ಬಸ್ಸಿನಲ್ಲಿ ಪ್ರಯಾಣಿಸುವಾಗ ಗಂಡಸರೊಂದಿಗೆ ಸಲುಗೆಯಿಂದಿರುವುದು. ಇವೆಲ್ಲಾ ಕಣ್ಣಾರೆ ಕಂಡಿರುವ ನನಗೆ ಅವಳನ್ನು ಮದುವೆಯಾಗಲು ಹೆದರಿಕೆಯಾಗುತ್ತಿದೆ. ಒಂದು ವೇಳೆ ಮದುವೆಯಾದಲ್ಲಿ ನಮ್ಮ ವೈವಾಹಿಕ ಜೀವನ ನೆಮ್ಮದಿಯಿಂದ ಕೂಡಿರಬಹುದೇ?

ಎಸ್.ಎಂ. ಪಠಾಣ, ಗುಲಬರ್ಗಾ.

ಸಲಹೆ

ನೀವು ಪ್ರೀತಿಸುವ ಹುಡುಗಿಯ ಮೇಲೆ ನೀವು ಸಂಶಯ ಪಡುವುದನ್ನು ನೋಡಿದರೆ ನಿಮ್ಮ ಪ್ರೀತಿಯ ಆಳ ಎಷ್ಟೆಂದು ತಿಳಿಯುತ್ತದೆ. ನಂಬಿಕೆ ಭರವಸೆಗಳ ಮೇಲೆ ಪ್ರೀತಿಯ ಸೌಧ ಕಟ್ಟಲು ಸಾಧ್ಯ. ಅವಳು ಇತರರೊಂದಿಗೆ ಸಲಿಗೆಯಿಂದಿರುವುದು, ಹುಡುಗರೊಂದಿಗೆ ಬೆರೆಯುವುದು ಇವುಗಳನ್ನು ನೀವು ಸಂಶಯದಿಂದ ನೋಡುವವರು ಅವಳನ್ನು ಬದುಕಿನಲ್ಲಿ ಹಾಸು ಹೊಕ್ಕಾಗಿ ಬಾಳ ಸಂಗಾತಿಯಾಗಿ ಸ್ವೀಕರಿಸಲು ಸಾಧ್ಯವೇ? ಸಂಶಯ ಪಿಶಾಚಿಯಿಂದ ಅನೇಕ ಸಂಸಾರಗಳು ಛಿದ್ರವಾಗಿದೆ ಬಿಚ್ಚು ಮನಸ್ಸಿನಿಂದ ನೀವೇ ಯೋಚಿಸಿ, ನೀವೇ ನಿರ್ಧಾರ ಕೈಗೊಳ್ಳಿ,

ಹುಡುಗಿಯ ಬೆದರಿಕೆ

ನಾನು ಈ ವರ್ಷ ಬಿ.ಎ. ಮುಗಿಸಿದ್ದೇನೆ. ಡಿಗ್ರಿ ಓದುವಾಗ ಒಂದು ಹುಡುಗಿ ನಾನು ನಿನ್ನನ್ನು ಪ್ರೀತಿಸುತ್ತೇನೆ ಇಲ್ಲದಿದ್ದರೆ ಸಾಯ್ತೇನೆ ಎಂದಳು. ನಾನು ಯೋಚಿಸಿ ಅವಳಿಂದ ತಪ್ಪಿಸಿಕೊಳ್ಳೋಕೆ ಬಹಳಷ್ಟು ಪ್ರಯತ್ನಿಸಿದೆ. ಆದರೆ ಅವಳು ಬಿಡಲಿಲ್ಲ. ಕೊನೆಗೆ ಸಮ್ಮತಿ ಸೂಚಿಸಿದೆ. ಕ್ರಮೇಣವಾಗಿ ಓದುವ ಆಸಕ್ತಿ ಕುಂಠಿತವಾಯಿತು. ನನ್ನ ಆರ್ಥಿಕ ಸ್ಥಿತಿ ಸ್ವಲ್ಪ ಹದಗೆಟ್ಟಿದ್ದ ಕಾರಣ ಮುಂದೆ ಓದಲಿಲ್ಲ. ಆದರೀಗ ಅವಳು ನನ್ನಿಂದ ದೂರ ಸರಿದಿದ್ದಾಳೆ. ಬಿ.ಎಡ್ ಮಾಡಲು ಒಳ್ಳೆಯ ಅಂಕಗಳು ಬರಲಿಲ್ಲ. ಈಗ ನಾನು ಮಾಡುತ್ತಿರುವ ಉದ್ಯೋಗದ ವರಮಾನ ಏನೂ ಸಾಲದು. ನಾನು ಒಂಟಿ. ಅದನ್ನೇ ಹೆಚ್ಚು ಬಯಸುತ್ತಿದ್ದೇನೆ. ಒಮ್ಮೊಮ್ಮೆ ಸಮಾಜಘಾತುಕ ಶಕ್ತಿಗಳ ಜೊತೆಗೆ ಸೇರಿ ಬಿಡೋಣ್ವೆ ಎನ್ನಿಸುತ್ತದೆ. ಇನ್ನೊಮ್ಮೆ ಬೇಡ ಅನ್ನಿಸುತ್ತದೆ. ನನ್ನಲ್ಲಿ ಪ್ರತಿಭೆ, ಜ್ಞಾನ, ವಾಕ್ ಚಾತುರ್ಯ ಎಲ್ಲಾ ಇದೆ. ಆದನ್ನು Express ಮಾಡಲು Inferiority Complex ನನ್ನನ್ನು ಬಹುವಾಗಿ ಕಾಡುತ್ತಿದೆ. ದಯವಿಟ್ಟು ಈ ಸಮಸ್ಯೆಗೆ ಪರಿಹಾರ ತಿಳಿಸಿ.

ಸಲಹೆ

ನಿಮ್ಮನ್ನ ಹೆದರಿಸಿ ಬೆದರಿಸಿ ಪ್ರೀತಿ ಬಯಸಿದವಳು ನಿಮ್ಮ ಬದುಕಿನಲ್ಲಿ ಕ್ಷೋಭೆ ಎಬ್ಬಿಸಿದ್ದಾಳೆ. ಅವಳನ್ನು ಪ್ರೀತಿಸಿ ನೀವು ತಪ್ಪು ಮಾಡಿದ್ದೀರಿ. ಯಾವ ವಯಸ್ಸಿನಲ್ಲಿ ಏನು ಮಾಡಬೇಕೆಂಬುದು ತಿಳಿಯುವುದು ಬಹಳ ಮುಖ್ಯ. ಓದುವ ವಯಸ್ಸಿನಲ್ಲಿ, ಭವಿಷ್ಯ ರೂಪಿಸಿಕೊಳ್ಳುವ ವಯಸ್ಸಿನಲ್ಲಿ ಪ್ರೀತಿಯ ಸೆಳೆಗೆ ಸಿಕ್ಕುವುದು ಮಹಾಪೂರದಲ್ಲಿ ಕೊಚ್ಚಿಹೋಗುವಂತೆ! ಹಿಂದಿನದನ್ನೆಲ್ಲಾ ಕೆಟ್ಟ ಕನಸ್ಸೆಂದು ಮರೆತು ಬಿ. ಎಡ್ ಅಲ್ಲದಿದ್ದರೆ ಬೇರೆ ಏನಾದರೂ ಓದಿ ಒಳ್ಳೆಯ ವರಮಾನ ಬರುವ ಕೆಲಸಕ್ಕೆ ಸೇರಿ, ಇಲ್ಲವೇ ಸ್ವಯಂ ಉದ್ಯೋಗಕ್ಕೆ ಪ್ರಯತ್ನಿಸಿ. ಈಗ ಸರಕಾರ ಯುವ ಪೀಳಿಗೆಗೆ ಬೇಕಾದಷ್ಟು ದಾರಿಗಳನ್ನು ತೆರೆದಿಟ್ಟಿದೆ. ಪ್ರತಿಭೆ, ಜ್ಞಾನ, ವಾಕ್‌ಚಾತುರ್ಯ ಇರಬೇಕಾದರೆ ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ, ಕೀಳರಿಮೆಯನ್ನು ಮನಸ್ಸಿನಿಂದ ಕಿತ್ತೊಗೆಯಿರಿ. ಒಳ್ಳೆಯವರ ಸ್ನೇಹ ಬೆಳೆಸಿ. ಮೆಡಿಟೇಷನ್, ಯೋಗ ಇವುಗಳು ಮನಸ್ಸಿನ ಮಾಲಿನ್ಯವನ್ನು ತೆಗೆದು ಹಾಕುತ್ತದೆ.

ಊರ ಹೆಂಗಸರ ಕಾಟ

ನಾನು 19 ವರ್ಷದ ವಿದ್ಯಾರ್ಥಿ. ನನ್ನದೊಂದು ವಿಚಿತ್ರ ಸಮಸ್ಯೆ. ನಾನು ನೋಡಲು ಸ್ವಲ್ಪ ಸುಂದರವಾಗಿದ್ದೇನೆ. ಆದರೆ ನಾನು ವಾಸಿಸುವ ಊರಲ್ಲಿರುವ ಕೆಲವು ಹೆಂಗಸರು ನನ್ನನ್ನು ವಿಚಿತ್ರವಾಗಿ ದೃಷ್ಟಿಸುತ್ತಾರೆ. ಅಂದರೆ ಕೆಟ್ಟದಾಗಿ ನೋಡುತ್ತಿರುತ್ತಾರೆ. ನನಗೆ ಅವರನ್ನು ದಿಟ್ಟಿಸಲು ಭಯ, ಕಾರಣ ಮುಂದೇನಾಗುವುದೋ? ಎಂಬುದು. ಈಗ ನಾನು ಈ ಹೆಂಗಸರ ಆ ಭಾವನೆಯನ್ನು ತೊಡೆದುಹಾಕಲು ಅವರೊಂದಿಗೆ ಹೇಗೆ ವರ್ತಿಸಲಿ? ತಿಳಿಸಿ.

ಸಲಹೆ

ಮಾನಸಿಕ ವೈಪರೀತ್ಯಗಳಲ್ಲಿ ಯಾವಾಗಲೂ ತನ್ನ ಬಗ್ಗೆಯೇ ಹೆಚ್ಚಾಗಿ ಯೋಚಿಸುವುದೂ ಒಂದು. ನೀವು ಚೆನ್ನಾಗಿರುವ ಮಾತ್ರಕ್ಕೆ ಕೆಲವು ಹೆಂಗಸರು ನಿಮ್ಮನ್ನು ವಿಚಿತ್ರವಾಗಿ ನೋಡುವರೆಂದು ನೀವು ತಿಳಿಯುವುದು ಭ್ರಮೆ. ಚೆನ್ನಾಗಿರುವವರನ್ನು ನೋಡಲು ಅನೇಕರು ಬಯಸುತ್ತಾರೆ. ಹೆಂಗಸರು ನಿಮ್ಮ ಸುಂದರ ಮುಖವನ್ನು ನೋಡಿದರೆ ನಿಮಗೆ ವಿಚಿತ್ರವೆನಿಸಬಹುದು. ಅವರಿಗೆ ಅದು ಸಹಜವಾಗಿರಬಹುದು. ನಿಮ್ಮ ನಡೆ, ನುಡಿ ಆಕರ್ಷಕವಾಗಿರಬಹುದು. ಎಲ್ಲಕ್ಕಿಂತ ಹೆಚ್ಚಾಗಿ ನಿಮಗೆ ಎಲ್ಲರೂ ನಿಮ್ಮನ್ನೇ ನೋಡುತ್ತಾರೆ, ಅದರಲ್ಲೂ ಹೆಂಗಸರು ನೋಡುತ್ತಾರೆ ಎಂಬ ಗೀಳು ಇರಬಹುದು. ಅವರು ನಿಮ್ಮನ್ನು ವಿಚಿತ್ರ ರೀತಿಯಲ್ಲಿ ನೋಡುತ್ತಾರೆ ಎಂದು ತಿಳಿಯಲು ನೀವೂ ಅವರನ್ನು ನೋಡಿ ಗಮನಿಸುವುದಿಲ್ಲವೇ? ಸ್ವಲ್ಪ ದಿನ ಅವರತ್ತ ನೋಡಬೇಡಿ. ಅವರನ್ನು ನೀವು ನಿರ್ಲಕ್ಷಿಸಿ. ನಿಮ್ಮ ಮನಸ್ಸು, ಅವರ ದೃಷ್ಟಿ ತನಗೆ ತಾನೇ ಸರಿಹೋಗುವುದು.

ನಿರೂಪಕಿಯಾಗುವ ಆಸೆ

ನಾನು 18 ವರ್ಷದ ಹುಡುಗಿ. ನನಗೆ ಮದುವೆಯಾಗಲು ಇಷ್ಟವಿಲ್ಲ. ನನಗೆ ರೂಪದರ್ಶಿ, ಚಿತ್ರನಟಿ, ಟಿ.ವಿ. ಕಾರ್ಯಕ್ರಮಗಳ ನಿರೂಪಕಿಯಾಗಬೇಕೆಂಬ ಮಹದಾಸೆ. ನನ್ನ ಆಸೆಗೆ ಮನೆಯಲ್ಲಿ ಸಕಾರಾತ್ಮಕ ಪರಿಸರವಿದೆ. ಮದುವೆಯಾದಲ್ಲಿ ನನ್ನ ಗುರಿ ಸಾಧಿಸಲು ಸಾಧ್ಯವಿಲ್ಲವೆನ್ನುವ ಅನಿಸಿಕೆ.

ನನ್ನ ಅನಿಸಿಕೆ ನಿಜವೇ? ಹಾಗೂ ನನ್ನ ಗುರಿ ಈಡೇರಿಸಿಕೊಳ್ಳಲು ನಾನೇನು ಮಾಡಬೇಕು?

ಸಲಹೆ

ನಿಮ್ಮ ಆಸೆಗೆ ಮನೆಯಲ್ಲಿ ಪ್ರೋತ್ಸಾಹವಿದ್ದಲ್ಲಿ ಮುನ್ನಡೆಯಿರಿ. ಮಾಡೆಲಿಂಗ್‌ಗಾಗಿ ಅನೇಕ ಅವಕಾಶಗಳಿವೆ. ಅದಕ್ಕಾಗಿ ರೂಪದರ್ಶಿಗಳನ್ನು ಜಾಹೀರಾತಿನ ಮೂಲಕ ಆಹ್ವಾನಿಸುತ್ತಾರೆ. ಅದರಲ್ಲಿ ನೀವು ಗೆದ್ದರೆ ಅನೇಕ ಬಾಗಿಲುಗಳು ತೆರೆದಂತೆ. ಟಿ.ವಿ.ಯಲ್ಲಿ ನಿರೂಪಣೆಗಾಗಿ ಆರಿಸುತ್ತಾರೆ. ಅದರಲ್ಲೂ ಪಾಲ್ಗೊಳ್ಳಬಹುದು. ಇವುಗಳು ಚಿತ್ರನಿರ್ಮಾಪಕರು, ನಿರ್ದೇಶಕರನ್ನು ಆಕರ್ಷಿಸುವುದರಿಂದ ನಿಮ್ಮ ಅದೃಷ್ಟ ಚೆನ್ನಾಗಿದ್ದರೆ ಚಿತ್ರ ನಟಿಯಾಗಬಹುದು ಗುಡ್‌ಲಕ್!.


ವಯಸ್ಸಿನ ಅಂತರ

ನನಗೀಗ 21 ವರ್ಷ. ನನ್ನನ್ನು ಒಬ್ಬ ಹುಡುಗ ಪ್ರೀತಿಸುತ್ತಿದ್ದಾನೆ. ಆದರೆ ನಮ್ಮಿಬ್ಬರಿಗೂ 10 ವರ್ಷದ ವಯಸ್ಸಿನ ಅಂತರವಿದೆ. ಆ ಹುಡುಗ ಮತ್ಯಾರೂ ಅಲ್ಲ. ನನ್ನ ಚಿಕ್ಕಪ್ಪನ ಮೈದುನ. ನಮ್ಮಿಬ್ಬರ ಮದುವೆ ವಿಚಾರದಲ್ಲಿ ಮನೆಯಲ್ಲಿ ಯಾರಿಗೂ ಇಷ್ಟವಿಲ್ಲ. ನಮ್ಮಿಬ್ಬರಿಗೂ ಪರಸ್ಪರ ಬಿಟ್ಟು ಬದುಕಲು ಸಾಧ್ಯವೇ ಇಲ್ಲ. ನನ್ನ ಮನಸ್ಸಿನಲ್ಲಿ ದೃಢಮನೋಭಾವನೆಯೇ ಇಲ್ಲ. ನಮ್ಮನ್ನು ಕಾಡುತ್ತಿರುವುದು ವಯಸ್ಸಿನ ಅಂತರ ಹಾಗೂ ಸಂಬಂಧ. ಈ ಸಮಸ್ಯೆ ನಮ್ಮ ಮದುವೆಗೆ ತೊಡಕಾಗುವುದೇ? ಆಗುವುದಿದ್ದಲ್ಲಿ ಅದಕ್ಕೆ ಪರಿಹಾರ ತಿಳಿಸಿ.

ಸಲಹೆ

ಮದುವೆಗೆ ವಯಸ್ಸಿನ ಅಂತರ ಅಂತಹ ಮಹತ್ತಾದ ಪರಿಣಾಮ ಬೀರದು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಹೊಂದಿಕೊಂಡಿದ್ದರೆ ಸಾಕು. ಸಂಬಂಧದ ಬಗ್ಗೆ ಕಾನೂನು ತಜ್ಞರನ್ನು, ವಿವಾಹ ತಜ್ಞರನ್ನು(ಮ್ಯಾರೇಜ್ ಕೌನ್ಸಲರ್) ಸಂಪರ್ಕಿಸಿ.

ವಯಸ್ಕರ ಸಂದೇಹ ಸಲಹೆ



ದೈಹಿಕ ನೋವು

ನಾನು 43 ವರ್ಷದ ಗೃಹಿಣಿ, ಆರೋಗ್ಯವಂತೆ. ಆದರೆ ಅಂಗಮರ್ದನ ಅಥವಾ ಸಂಭೋಗದ ನಂತರ ನನ್ನ ದೇಹ ಬಹಳಷ್ಟು ನೋವಾಗುತ್ತದೆ. ಆ ನೋವು ಸುಮಾರು ಎರಡು ಮೂರುದಿನಗಳವರೆಗೂ ಇರುತ್ತದೆ. ಈ ನೋವು ಯಾಕಾಗುತ್ತದೆ? ನನ್ನ ವಯಸ್ಸಿನಿಂದಲೋ ಅಥವಾ ಯಾವುದಾದರೂ ನ್ಯೂನತೆಯಿಂದಲೋ? ದಯವಿಟ್ಟು ಉಪಚಾರಗಳನ್ನು ತಿಳಿಸಿ.

- ಮೀನಾಕ್ಷಮ್ಮ, ಊರುಬೇಡ.

ಉತ್ತರ

ಕ್ಯಾಲ್ಸಿಯಂ, ವಿಟಮಿನ್ಸ್ ಹಾಗೂ ಖನಿಜಾಂಶಗಳು ಹೆಚ್ಚಿಗಿರುವ ಸಮತೋಲನದ ಆಹಾರವನ್ನು ಸೇವಿಸಿ. ಅನಾವಶ್ಯಕವಾಗಿ ಚಿಂತೆ ಮಾಡಬೇಡಿ. ಮಾನಸಿಕ ಗೊಂದಲಗಳಿಂದ ಮುಕ್ತರಾಗಿ. ದಿನಾ ಸರಳ ಸುಲಭ ಯೋಗಾಸನಗಳನ್ನು ಮಾಡಿ. ಆದಷ್ಟು ನಿಶ್ಚಿಂತರಾಗಿರಲು ಪ್ರಯತ್ನಿಸಿ.

ಈಗಲೇ ಮಗು ಬೇಡ

ನಾನು 25 ವರ್ಷದ ಯುವಕ. ಇತ್ತೀಚೆಗೆ 21 ವರ್ಷದ ಯುವತಿಯನ್ನು ಮದುವೆಯಾದೆ. ಮುಂದಿನ ಎರಡು ವರ್ಷದವರೆಗೆ ಮಗು ಬೇಡವೆಂದು ನಿರ್ಧರಿಸಿದ್ದೇವೆ. ಆದರೆ ಕಾಂಡೋಮ್‌ಗಳನ್ನು ಬಳಸಿ ಸಂಭೋಗ ಮಾಡಲು ನನಗೆ ಇಚ್ಛೆಯಿಲ್ಲ. ಕಾಂಡೋಮ್‌ಗಳ ಮೂಲಕ ಏಡ್ಸ್ ಬರುತ್ತದೆಂದು ಕೆಲವರಿಂದ ಕೇಳಿದ್ದೇನೆ. ಆರೋಗ್ಯ ಪೂರ್ಣವಾಗಿ ಲೈಂಗಿಕ ಕ್ರಿಯೆಯಲ್ಲಿ ಹೆಚ್ಚು ತೃಪ್ತಿ ಹೊಂದುವುದು ಹೇಗೆ?

ಉತ್ತರ

ಕಾಂಡೋಮ್‌ಗಳ ಬಳಕೆಯಿಂದ ಏಡ್ಸ್ ಬರುತ್ತದೆಂಬ ನಿಮ್ಮ ಅಭಿಪ್ರಾಯ ತಪ್ಪು. ಕಾಂಡೋಮ್‌ಗಳು ಏಡ್ಸ್ ಇನ್ನಿತರ ಲೈಂಗಿಕ ರೋಗ ಹರಡುವುದನ್ನು ತಡೆಗಟ್ಟುತ್ತದಯೇ ವಿನಹ ಆ ರೋಗವನ್ನು ಹರಡುವುದಿಲ್ಲ.

ನಿಮ್ಮ ನಿಧಾನವಾಗಿ ಮಗು ಪಡೆಯುವ ನಿರ್ಧಾರ ಸಮಯೋಚಿತ. ಆ ಕಾರ್ಯ ಸಾಧ್ಯವಾಗಬೇಕಾದಲ್ಲಿ ನೀವು ಕಾಂಡೋಮ್‌ಗಳನ್ನು ಉಪಯೋಗಿಸಬೇಕು. ಇಲ್ಲವೇ ನಿಮ್ಮ ಪತ್ನಿಗರ್ಭನಿರೋಧಕ ಮಾತ್ರೆಗಳನ್ನು ವೈದ್ಯರ ಸಲಹೆಯ ಮೇರೆಗೆ ತೆಗೆದುಕೊಳ್ಳಬೇಕು.

ಇನ್ನು ಲೈಂಗಿಕ ತೃಪ್ತಿಗೆ ''ಅತಿಯಾದರೆ ಅಮೃತನೂ ವಿಷ'', ಎಂಬಂತೆ ಕೇವಲ ಸಂಭೋಗದಿಂದಲೇ ಸುಖ ಸಿಗುವುದೆಂದಲ್ಲ ಹಾಗೂ ಪದೇ ಪದೇ ಅದೇ ಕ್ರಿಯೆಯಲ್ಲಿ ತೊಡಗಿಕೊಳ್ಳುವುದರಲ್ಲೂ ಪರಸ್ಪರ ಒಮ್ಮತವಿರಬೇಕು. ಅತಿಯಾದ ಸಂಭೋಗಕ್ಕೂ ಆರೋಗ್ಯ ದುರ್ಬಲತೆಗೂ ಯಾವುದೇ ಸಂಬಂಧವಿಲ್ಲ. ಪರಸ್ಪರ ಈರ್ವರು ತೃಪ್ತಿಪಡುವ ಮಾರ್ಗವೇ ಸರಿಯಾದ ರೀತಿ.

ಹಸ್ತ ಮೈಥುನವೆಂದರೇನು?

ನನಗೀಗ 20 ವರ್ಷ, ನನಗೆ ಇದುವರೆಗೂ ಹಸ್ತಮೈಥುನವೆಂದರೆ ತಿಳಿದಿಲ್ಲ? ಮಾಡಿಲ್ಲ? ಹಾಗಾದರೆ ನಾನು ಆರೋಗ್ಯವಂತಳೇ? ಹಸ್ತಮೈಥುನ ಮಾಡಿಕೊಳ್ಳುವುದು ಹೇಗೆ?

ಹೆಸರು, ಊರು ಬೇಡ

ಉತ್ತರ

ಯಾರೂ ಹಸ್ತ ಮೈಥುನವನ್ನು ಕಲಿಯುವುದಿಲ್ಲ ಅಥವಾ ಅಭ್ಯಾಸ ಮಾಡುವುದಿಲ್ಲ. ಅದು ವಯಸ್ಸಿನಲ್ಲಿ ಆಗುವ ಸಾಮಾನ್ಯ ಸ್ವಾಭಾವಿಕ ಲೈಂಗಿಕ ಕ್ರಿಯೆ. ಅನೇಕರಲ್ಲಿ ಇಂಥ ಆಕಾಂಕ್ಷೆ ಪ್ರಕಟಗೊಳ್ಳದೆಯೂ ಇರಬಹುದು. ಸ್ವಾಭಾವಿಕವಾದ (ಲಿಂಗಕ್ಕನುಗುಣವಾದ) ಜನಿಕಲಿಂಗ ಹಾಗೂ ದ್ವಿತೀಯ ಲಿಂಗದ ಗುರುತುಗಳು ನಿಮ್ಮ ದೇಹದಲ್ಲಿ ಕಂಡು ಬಂದಿದ್ದರೆ ಅನಾವಶ್ಯಕ ಚಿಂತೆ ಮಾಡುವುದು ಬೇಡ.

ಚಿಕ್ಕ ಸ್ತನಗಳೇ ಆಕರ್ಷಕ

ನಾನು ಹದಿನಾರು ವರ್ಷದ ಹುಡುಗಿ. ನನ್ನ ಋತುಚಕ್ರ ಇದೀಗ ಆರಂಭವಾಗಿದೆ. ಆದರೆ ನನ್ನ

ಹೊಸ ಅಂಕಣ ಏಕೆ?

ಖ್ಯಾತ ಲೇಖಕಿ ಉಷಾ ನವರತ್ನರಾಮ್ ಅವರ 'ಆಪ್ತ ಸಮಾಲೋಚನೆ' ಅಂಕಣಕ್ಕೆ ಹರಿದು ಬರುವ ಪತ್ರಗಳ ಮಹಾಪೂರದಲ್ಲಿ ಅನೇಕ ಪತ್ರಗಳು ವೈದ್ಯಕೀಯ ಸಮಸ್ಯೆಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಹೆಚ್ಚಿನವರು ಲೈಂಗಿಕ ಸಮಸ್ಯೆಗಳನ್ನು ತೋಡಿಕೊಳ್ಳುತ್ತಿದ್ದಾರೆ. ಇಂಥ ಸಮಸ್ಯೆಗಳು 'ಆಪ್ತಸಮಾಲೋಚನೆ' ಅಂಕಣದ ವ್ಯಾಪ್ತಿಗೆ ಹೊರತಾದ್ದರಿಂದ ಈ ತನಕ ಈ ಬಗೆಯ ಪತ್ರಗಳನ್ನು ನಿರ್ಲಕ್ಷಿಸುತ್ತಿದ್ದೆವು. ಈ ಬಗೆಯ ವೈದ್ಯಕೀಯ ಸಮಸ್ಯೆಗಳ ಸಂಖ್ಯೆ ವಿಪರೀತ ಹೆಚ್ಚಾಗಿರುವುದನ್ನು ಗಮನಿಸಿ ಇದೀಗ ಓದುಗರ ಅಭಿಲಾಷೆಯಂತೆ, ''ವಯಸ್ಕರ ಸಂದೇಹ ಸಲಹೆ'' ಅಂಕಣ ಆರಂಭಿಸುತ್ತಿದ್ದೇವೆ. ಮುಜುಗರದ ವಿಷಯಗಳನ್ನು ಹೇಳಲಾಗದೆ ಒಳಗೇ ಅದುಮಿಟ್ಟು ಕೊಂಡು ಕೊರಗುವವರಿಗೆ ಸರಿಯಾದ ಮಾಹಿತಿ-ಮಾರ್ಗದರ್ಶನ ನೀಡುವುದು ಈ ಅಂಕಣದ ಉದ್ದೇಶ. ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಖ್ಯಾತ ವೈದ್ಯೆಯೊಬ್ಬರು ಪ್ರತಿ ತಿಂಗಳು ಉತ್ತರಿಸುವ ಈ ವಿಭಾಗಕ್ಕೆ ನೀವು ಮುಕ್ತವಾಗಿ ಬರೆಯಬಹುದು. ಹೆಸರು, ವಿಳಾಸ ತಿಳಿಸುವ ಅಗತ್ಯವಿಲ್ಲ.

ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ 'ಆಪ್ತ ಸಮಾಲೋಚನೆ' ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ ''ವಯಸ್ಕರ ಸಂದೇಹ ಸಲಹೆ'' ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಕತ್ತರಿಸಿಟ್ಟುಕೊಳ್ಳಬಹುದು.

- ಸಂಪಾದಕ

ಸ್ತನಗಳು ಬಹಳ ಚಿಕ್ಕದಿವೆ. ಆದರೆ ನನ್ನ ಪ್ರಿಯಕರನನ್ನು ಆಕರ್ಷಿಸಲು ನಾನು ದೊಡ್ಡ ಸ್ತನಗಳನ್ನು ಹೊಂದಬೇಕೆಂದಿದ್ದೇನೆ. ದಯವಿಟ್ಟು ಸಹಾಯಮಾಡಿ.

-ಕಾವೇರಿ, ಊರುಬೇಡ.

ಉತ್ತರ

ಬಹಳಷ್ಟು ಹುಡುಗಿಯರು ದಪ್ಪ ಸ್ತನಗಳು ಆಕರ್ಷಕ ಹಾಗೂ ಮುಖ್ಯವೆಂದು ತಿಳಿದಿದ್ದಾರೆ. ಆದರೆ ಇತ್ತೀಚಿಗೆ ನಡೆದ ಸಂಶೋಧನೆಯಲ್ಲಿ ಹೆಂಗಸರ ದೇಹದಲ್ಲಿ ಹೆಚ್ಚು ಆನಂದ ಕೊಡುವ ಭಾಗ ಯಾವುದೆನ್ನುವ ಪ್ರಶ್ನೆಗೆ ಶೇ 50 ರಷ್ಟು ಜನ ಅವಳ ಎದೆಯೆಂದರು. ಅವರಲ್ಲಿ ಸುಮಾರು 3/4 ಭಾಗ ಅಂದರೆ 40 ಜನ ಚಿಕ್ಕ ಸ್ತನಗಳು ಹೆಚ್ಚು ಆಕರ್ಷಕ ಹಾಗೂ ಆನಂದದಾಯಕವೆಂದರು. ಹಾಗಾಗಿ ನಿಮ್ಮ ಆತಂಕ ಅನಾವಶ್ಯಕ ವೆಂದಾಯಿತಲ್ಲ.

ನಿಮ್ಮದು ಈಗಲೇ ಸ್ತನದ ಬೆಳವಣಿಗೆಯನ್ನು ನಿರ್ಧರಿಸುವ ವಯಸ್ಸಲ್ಲ. 20 ವಯಸ್ಸಿನ ತನಕ ಬೆಳವಣಿಗೆಯಿರುತ್ತದೆ. ಸುಮ್ಮನೆ ಚಿಂತೆಮಾಡಬೇಡಿ. ನಿಮ್ಮ ದೇಹದ ಬಗ್ಗೆ ಹಾರ್ಮೋನುಗಳು ಸರಿಯಾದ ತೀರ್ಪನ್ನು ಸರಿಯಾದ ವೇಳೆಯಲ್ಲಿ ತೆಗೆದುಕೊಳ್ಳುತ್ತವೆ. ದೊಡ್ಡಸ್ತನ ಹೊಂದಿದ ಬಹುತೇಕ ಮಂದಿ ಜೀವನದಲ್ಲಿ ನಿರಾಶೆ ಹೊಂದಿದ್ದಾರೆನ್ನುವುದನ್ನು ನೆನಪಿಡಿ. ಕೇವಲ ದೇಹ ಸೌಂದರ್ಯದಿಂದ ಆಕರ್ಷಿಸುವುದಷ್ಟೇ ಅಲ್ಲ. ಅಂತರಂಗ ಸೌಂದರ್ಯದ ಕಡೆಗೂ ಗಮನ ಕೊಡಿ.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ
ಸಂಪಾದಕರು
('ವಯಸ್ಕರ ಸಂದೇಹ - ಸಲಹೆ' ವಿಭಾಗ)
ಬಿಸಿಲ ಬದುಕು, ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.

ವೇಶ್ಯೆಯ ಸಂಗ

ಕೆಲವು ತಿಂಗಳ ಹಿಂದೆ ನಾನು ವೇಶ್ಯೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ಭಾಗಿಯಾಗಿದ್ದೆ. ಇದುವರೆಗೂ ನಾನು ಯಾವುದೇ ಲೈಂಗಿಕ ರೋಗಗಳನ್ನು ಹೊಂದಿಲ್ಲ. ಆದರೆ ನನಗೆ ಹೆಚ್.ಐ.ವಿ. ಬಂದಿರಬಹುದೇ ಎಂಬ ಚಿಂತೆ. ನನ್ನ ಶಿಶ್ನ ಎಂದಿನಂತೆ ಇದ್ದರೂ ನನ್ನ ಮನಸ್ಸಿನಲ್ಲಿ ಶಾಂತಿ ಇಲ್ಲ. ಪರಿಹಾರ ಸೂಚಿಸಿ.

- ಹೆಸರು, ಊರು ಎರಡೂ ಬೇಡ.

ಉತ್ತರ

ಹೆಚ್.ಐ.ವಿ. ವೈರಾಣುಗಳು ಹಾಗೂ ಇನ್ನಿತರ ಲೈಂಗಿಕ ರೋಗಾಣುಗಳು ಒಬ್ಬರಲ್ಲೇ ಇರಬೇಕೆಂದಿಲ್ಲ. ಹಾಗಂತ ಒಂದು ರೋಗಾಣುಗಳು ಪ್ರವೇಶಿಸಲಿಲ್ಲವೆಂದರೆ ಮತ್ತೊಂದು ಪ್ರವೇಶಿಸಬಾರದೆಂದಿಲ್ಲ. ನಿಮ್ಮ ಶಿಶ್ನ ಸಹಜ ಸ್ಥಿತಿ ಹೆಚ್.ಐ.ವಿ.ಯ ಬಗ್ಗೆ ತಿಳಿಸುವುದಿಲ್ಲ. ನಿಮ್ಮಲ್ಲಿ ಆ ಭಾವನೆಯಿದ್ದಲ್ಲಿ ದಯವಿಟ್ಟು ನಿಮ್ಮ ಹತ್ತಿರದ ಹೆಚ್.ಐ.ವಿ./ಏಡ್ಸ್‌ಗಳಿಗೆ ಚಿಕಿತ್ಸೆ ನೀಡುವ ಡಾಕ್ಟರ್‌ನ್ನು ಸಂಪರ್ಕಿಸಿ.

ವೃದ್ಧಾಪ್ಯ ಸಮಸ್ಯೆ

ನಾನು 70 ವರ್ಷದವನು. ನಾನು ಹದಿನೈದು ದಿನಕ್ಕೊಮ್ಮೆ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತೇನೆ. ಆದರೆ ನಂತರ ಮತ್ತೆ ಹತ್ತು ಹದಿನೈದು ದಿನಗಳವರೆಗೆ ನನ್ನ ಶಿಶ್ನ ಪ್ರಚೋದನೆಗೊಳ್ಳುವುದೇ ಇಲ್ಲ? ಇದು ಅಸ್ವಾಭಾವಿಕವೇ?

ಪಿ.ಎನ್.ಸಿ., ಗುಲಬರ್ಗಾ.

ಉತ್ತರ

ದೇಹಕ್ಕೆ ವಯಸ್ಸಾದಂತೆ ನಿಮ್ಮಲ್ಲಿ ಸಹಜವಾಗಿ ಉತ್ಸಾಹ ಕಡಿಮೆಯಾಗುತ್ತದೆ. ಆದರಂತೆ ತಾರುಣ್ಯ ವಯಸ್ಸಿನಲ್ಲಿದ್ದ ಹಾಗೇ ಈಗಲೂ ಇರಬೇಕೆಂದಿಲ್ಲ. ವಯಸ್ಸಾದಂತೆ ಶಿಶ್ನ ಉದ್ರೇಕದ ಸ್ಥಿತಿ ತಲುಪಲು ಅಧಿಕ ಸಮಯ ಹಿಡಿಯುತ್ತದೆ. ಸಹಜವಾಗಿಯೇ. ಎರಡು ಸಂಭೋಗಗಳ ನಡುವಿನ ಅವಧಿ ಹೆಚ್ಚುತ್ತದೆ. ಒಮ್ಮೆ ವೀರ್ಯ ಸ್ರಾವವಾದ ನಂತರ ಮತ್ತೆ ಉದ್ರೇಕದ ಸ್ಥಿತಿ ತಲುಪಲೂ ಹೆಚ್ಚು ಸಮಯ ಹಿಡಿಯುತ್ತದೆ. ಈ ಬಗ್ಗೆ ಕಡ್ಡಾಯ ನಿಯಮ ವೇನೂ ಇಲ್ಲ. ಲೈಂಗಿಕ ಕ್ರಿಯೆ ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಇದರಲ್ಲಿ ಅಸಹಜವಾದುದೇನು ಇಲ್ಲ.

ಮಾರ್ಗದರ್ಶಿ



■ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು,
ಆರ್.ವಿ. ಇಂಜನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - ೫೯.

ಜಯಂತಿ ಎಚ್. ಎಸ್., ಬೆಂಗಳೂರು

ಸರ್, ನನ್ನ ಹೆಸರು ಜಯಂತಿ ಎಚ್. ಎಸ್. ಎಂದು. ನಾವು ಬೆಂಗಳೂರಿನ ರಾಮಮೂರ್ತಿನಗರದಲ್ಲಿ ವಾಸಿಸುತ್ತಿದ್ದೇವೆ. ನಾನು ವಾಣಿಜ್ಯ ಶಾಸ್ತ್ರದಲ್ಲಿ ಪದವಿಯನ್ನು ಪಡೆಯುವಂತಾಗಿದ್ದೇನೆ. correspondence ನಲ್ಲಿ III yr B.Com exam ಅನ್ನು ಈ ಏಪ್ರಿಲ್‌ನಲ್ಲಿ ಬರೆದಿದ್ದೇನೆ.

ಯಾವುದೇ ಒಬ್ಬ ವ್ಯಕ್ತಿ ಅವರು ಹೆಣ್ಣೇ ಆಗಿರಲಿ, ಗಂಡೇ ಆಗಿರಲಿ ಒಂದು ವಾಣಿಜ್ಯ ಕೇಂದ್ರವನ್ನಾಗಲಿ ಅಥವಾ Xerox & typing centre ಅನ್ನು ಪ್ರಾರಂಭಿಸಲು ಪಾಲಿಸಬೇಕಾದ ನೀತಿ- ನಿಬಂಧನೆಗಳು- ಹಾಗೂ ಆಚರಣೆಗೆ ತರಲು ಕೈಗೊಳ್ಳಬೇಕಾದ ಕಾನೂನಿನ ಕ್ರಮ-ವಿಧಾನಗಳ ಪರಿಯನ್ನು ದಯವಿಟ್ಟು ತಿಳಿಸಿಕೊಡಿ. (Institute of Commerce)

ಅಂದರೆ ಅವರು ತಮ್ಮದೇ ಆದ ಸ್ಥಳ ಹೊಂದಿದ್ದರೆ, ಆ ಒಂದು ಸಂಸ್ಥೆ ಪ್ರಾರಂಭಿಸಲು ಸರ್ಕಾರದಿಂದ ಮಾನ್ಯತೆ ಪಡೆಯಬೇಕೇ? ತೆರಿಗೆಗಳನ್ನು ಏನಾದರೂ ನೀಡಬೇಕೇ? ಮತ್ತು ಯಾವುದೇ ರೀತಿಯ (ಸಾಲ) ಸೌಲಭ್ಯಗಳ ಮುಖಾಂತರ ನಿರ್ಮಿಸಬೇಕಾಗಿದ್ದಲ್ಲಿ ಯಾವ ರೀತಿಯ ಕ್ರಮ ಅನುಸರಿಸಬೇಕು.

ಉದಾ: ಜವಾಹರ್ ರೋಜ್‌ಗಾರ್ ಯೋಜನೆಯಡಿ ಸಾಲ ತೆಗೆದುಕೊಂಡು ನಮ್ಮದೇ ಆದ ಸ್ಥಳದಲ್ಲಿ ಸಂಸ್ಥೆ ಪ್ರಾರಂಭಿಸಬೇಕಾದರೆ ? ಅಥವಾ ಯಾವ ಬ್ಯಾಂಕುಗಳಿಂದ ಈ ರೀತಿಯ ವ್ಯಾಪಾರ, ವ್ಯವಹಾರಗಳಿಗೆ ಸಾಲದ ಸವಲತ್ತು ನೀಡುತ್ತಾರೆ ಎಂಬುದರ ಬಗ್ಗೆ ದಯವಿಟ್ಟು ತಿಳಿಸಿಕೊಡಿ.

Xerox or typing ಕೇಂದ್ರಗಳನ್ನು ಸ್ಥಾಪಿಸಲು ಯಾವುದೇ ನೀತಿ ನಿಯಮಗಳು ಇರುವುದಿಲ್ಲ. ನಿಮ್ಮ ಇಚ್ಛೆ ಇದ್ದಲ್ಲಿ ಅವಶ್ಯಕವಾಗಿ ಪ್ರಾರಂಭಿಸಬಹುದು. ಇದಕ್ಕೆ ಬ್ಯಾಂಕ್ ಸಾಲ ಸೌಲಭ್ಯಗಳು ಲಭ್ಯವಿರುತ್ತವೆ. ನೀವು ನಿಮ್ಮ ವ್ಯವಹಾರಿಕ ಬ್ಯಾಂಕಿನಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೆರಿಗೆ ವಿಚಾರದಲ್ಲಿ ತಮ್ಮ ವಹಿವಾಟಿನ ಆಧಾರದ ಮೇಲೆ ತೆರಿಗೆಯನ್ನು ಸರ್ಕಾರ ನಿರ್ಧರಿಸುತ್ತದೆ. ತಾವು ಸ್ವಪ್ರಯತ್ನದಿಂದ ಸ್ವಂತ ಉದ್ಯೋಗ ಹೊಂದಲು ಬಯಸಿದ್ದೀರಿ. ನಿಮ್ಮ ಬಯಕೆಯಂತೆ ನೀವು ಕಾರ್ಯಪ್ರವೃತ್ತರಾಗಿ.

ಸಂಗಮೇಶ್, ಉಮಲೂಟಿ

ಕೆ.ಪಿ. ಎಸ್.ಸಿ. ಯವರು ನಡೆಸುತ್ತಿರುವ ಕೆ.ಎ.ಎಸ್. ಪೂರ್ವಭಾವಿ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ (G.K) ಮತ್ತು ಐಚ್ಛಿಕ ವಿಷಯದ ಪ್ರಶ್ನೆ ಪತ್ರಿಕೆಗಳಲ್ಲಿ ಬರುವ ಒಟ್ಟು ಪ್ರಶ್ನೆಗಳ ಸಂಖ್ಯೆ ಎಷ್ಟು? ಹಾಗು ಕೆ.ಎ.ಎಸ್. ಪೂರ್ವಭಾವಿ ಪರೀಕ್ಷೆಯಲ್ಲಿ ಮೌಲ್ಯಮಾಪನವು ನೆಗೆಟಿವ್ ಇವಾಲ್ಯುವೇಶನ್ ಸಿಸ್ಟಮ್‌ನ್ನು ಒಳಗೊಂಡಿರುತ್ತದೆಯೇ ಹೇಗೆ?

ಈ ಮೇಲಿನ ಪ್ರಶ್ನೆಗೆ ದಯವಿಟ್ಟು ಮಾರ್ಗದರ್ಶನ ನೀಡಿ. ನಮ್ಮಲ್ಲಿರುವ ಗೊಂದಲವನ್ನು ನಿವಾರಿಸುತ್ತೀರೆಂದು ನಂಬಿರುವ ಅಭಿಮಾನಿ.

ಕೆ.ಎ.ಎಸ್. ಪೂರ್ವ ಭಾವಿ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ (G.K) ಮತ್ತು ಐಚ್ಛಿಕ ವಿಷಯದ ಪ್ರಶ್ನೆ ಪತ್ರಿಕೆಗಳಲ್ಲಿ ಒಟ್ಟು 450 ಅಂಕಗಳಿಗೆ ಬರುತ್ತವೆ. ಸಾಮಾನ್ಯವಾಗಿ 1 ಅಂಕಗಳ ಪ್ರಶ್ನೆಗಳು ಇರುತ್ತವೆ. ಇದರಲ್ಲಿ ನೆಗೆಟಿವ್ ಇವಾಲ್ವೇಶನ್ (Negative evaluation) ಇರುವುದಿಲ್ಲ.

ಬಸವರಾಜ , ಊರು ಬೇಡ

ಸರ್, ನಾನು ಪಿ.ಯು.ಸಿ. ಪ್ರಥಮ ವರ್ಷ ವಿಜ್ಞಾನದವರೆಗೆ ಮಾತ್ರ ಓದಿದ್ದು. ನಂತರ ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ಹಾಗು ಬಿ.ಎ. ತತ್ಸಮಾನದ ಹಿಂದೀ ಪರೀಕ್ಷೆ ಕರ್ನಾಟಕ ಹಿಂದೀ ಪ್ರಚಾರ ಸಮಿತಿಯ ರಾಜಭಾಷಾ ವಿದ್ವಾನ್ (ಅಂಕಪಟ್ಟಿ ಆಧಾರದ ಮೇಲೆ) 1996-97ನೇ ಸಾಲಿನಲ್ಲಿ ಶಿಕ್ಷಾ ಸ್ನಾತಕ (ಹಿಂದೀ ಬಿ.ಎಡ್) ಕೋರ್ಸ್ ಮಾಡಿರುತ್ತೇನೆ.

1. ನಾನು ಮೂರು ವರ್ಷಗಳ ಪದವಿಯನ್ನು ಪಡೆದಿರುವುದಿಲ್ಲ. ಆದ್ದರಿಂದ ನನಗೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಿಂದೀ ಶಿಕ್ಷಕ ಹುದ್ದೆಗೆ ಮೇಲಿನ ಕೋರ್ಸ್ ಅರ್ಹತೆಯಿಂದ ಉದ್ಯೋಗ ದೊರೆಯುವುದೇ? ತಿಳಿಸಿರಿ.

2. ದೊರೆಯುವುದು ಎಂದಾದಲ್ಲಿ ನನ್ನ ಅರ್ಹತೆ ಎಸ್.ಎಸ್.ಎಲ್.ಸಿ. ಶಿಕ್ಷಾಸ್ನಾತಕ ಆಗುವುದೋ ಅಥವಾ ಬಿ.ಎ. ಬಿ.ಎಡ್ (ಹಿಂದಿ) ಎಂದಾಗುವುದೋ ತಿಳಿಸಿರಿ.

3. ನನಗೆ 21 ವರ್ಷವಾಗಿರುವುದರಿಂದ ನಾನು ಕರ್ನಾಟಕ ಮುಕ್ತ ವಿ.ವಿ. ಮೂಲಕ ನೇರವಾಗಿ ಎಂ.ಎ. (ಹಿಂದಿ) ಕೋರ್ಸ್‌ನ್ನು ಮಾಡಿದರೆ ನನ್ನ ಶೈಕ್ಷಣಿಕ ಅರ್ಹತೆ M.A (Hindi) ಬಿ. ಎಡ್ ಎಂದಾಗುವುದೇ? ನನ್ನನ್ನು ಪ್ರೌಢಶಾಲಾ ಶಿಕ್ಷಕ (ಹಿಂದಿ) ಹುದ್ದೆಗೆ ಆಗಲಾದರೂ ಪರಿಗಣಿಸುವರೆ? ತಿಳಿಸಿರಿ

ನೀವು ಹಿಂದಿ ಬಿ.ಎಡ್ ಮಾಡಿರುವುದರಿಂದ ನೀವು ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಲು ಅರ್ಹರಾಗಿದ್ದೀರಿ. ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಶಿಕ್ಷಕರಾಗಬಹುದು.

ನಿಮ್ಮ ಅರ್ಹತೆ ಬಿ.ಎ. ಬಿ.ಎಡ್.(ಹಿಂದಿ) ಆಗಿರುತ್ತದೆ.

ನೀವು ಮುಕ್ತವಿಶ್ವವಿದ್ಯಾಲಯದಿಂದ ಎಂ.ಎ. (ಹಿಂದಿ) ಮಾಡಿದಲ್ಲಿ ನಿಮ್ಮ ವಿದ್ಯಾರ್ಹತೆ ಎಂ.ಎ. ಬಿ.ಎಡ್ ಆಗಿರುತ್ತದೆ.

ರಾಘವೇಂದ್ರ, ಗಂಗಾವತಿ

ಸರ್, ನಾನು ತುಂಬಾ ಬಡವ. ಆರ್ಥಿಕ ತೊಂದರೆಯಿಂದಾಗಿ ಕೇವಲ ಪಿ.ಯು.ಸಿ ಪ್ರಥಮ ವರ್ಷದವರೆಗೆ ಓದಿದೆ. ನಂತರ ಓದಲಾಗಲಿಲ್ಲ. 21 ವರ್ಷವಾಗಿದ್ದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, ಮೂಲಕ ಸ್ನಾತಕೋತ್ತರ ಎಂ.ಎ.ಯನ್ನು ಹಿಂದಿ ವಿಷಯದೊಂದಿಗೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತೇನೆ. ಮುಂದೆ ನನಗೆ ಉಪನ್ಯಾಸಕನಾಗಬೇಕೆಂಬ ಆಸೆ.

1. ಈ ನನ್ನ ಆಸೆ ಈಡೇರುವುದೇ? ಏಕೆಂದರೆ ಕೇವಲ ಪಿ.ಯು.ಸಿ. ಪ್ರಥಮ ವರ್ಷದ ನಂತರ ನೇರವಾಗಿ ಎಂ.ಎ. (ಹಿಂದಿ) ಮಾಡಿರುವುದರಿಂದ ಖಾಸಗಿ/ಸರ್ಕಾರಿ ಕಾಲೇಜುಗಳಲ್ಲಿ ನನ್ನನ್ನು ಉಪನ್ಯಾಸಕನೆಂದು ನೇಮಿಸಿಕೊಳ್ಳುವರೇ? ತಿಳಿಸಿರಿ.

2. ಈ ಎಂ.ಎ. (ಹಿಂದಿ) ಮೂಲಕ ನಾನು Post graduation diploma ಕೋರ್ಸುಗಳಾದ Busines management, hotel management, marketing management ಮುಂತಾದ ಕೋರ್ಸುಗಳನ್ನು ಮಾಡಬಹುದೇ? ತಿಳಿಸಿರಿ.

3. ಸ್ಪರ್ಧಾತ್ಮಕ ಪರೀಕ್ಷೆಗಳಾದ BSRB, RRB, SSC, IAS ಮತ್ತು KAS ನಂತಹ ಪರೀಕ್ಷೆಗಳನ್ನು ಬರೆಯಲು ಈ ಸ್ನಾತಕೋತ್ತರ (ಹಿಂದಿ) ಪದವಿಯಿಂದ ಅರ್ಹತೆ ಬರುವುದೆ? ತಿಳಿಸಿರಿ.

ನೀವು M.A(Hindi) ಮಾಡಿರುವುದರಿಂದ ಉಪನ್ಯಾಸಕರಾಗ ಬಹುದು.

ಖಾಸಗಿಯಾಗಿ (correspondence) post graduation diploma ಕೋರ್ಸ್‌ಗಳನ್ನು ಮಾಡಬಹುದು.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬಹುದು.

ಪಿ.ಬಿ. ಸ್ವಾಮಿ, ಯಲ್ಲಾಪುರ

ಮಾನ್ಯರೆ, ನಾನು 25 ವರ್ಷ ವಯಸ್ಸಿನ ಮುಂದುವರೆದ ಜನಾಂಗದ ಮಧ್ಯಮ ವರ್ಗಕ್ಕೆ ಸೇರಿದವನಾಗಿದ್ದೇನೆ. ಎಂ.ಕಾಂ. ಮಾಡಿದ್ದೇನೆ. ಉಪನ್ಯಾಸಕನಾಗುವ ಆಸೆ ನನ್ನಲ್ಲಿದೆ. ಆದರೆ ಯಾವುದೇ private Co. ನಲ್ಲಿಸೇರಲು ಮನಸ್ಸಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ನನ್ನ ಆಸೆ ಈಡೇರುವ ಲಕ್ಷಣ ಕಾಣಿಸುತ್ತಿಲ್ಲ. ಆದ ಕಾರಣ ಈಗ ನಾನು ವಯಸ್ಸಿನ ಆಧಾರದ ಮೇಲೆ ಪಿ.ಯು.ಸಿ. ಮಾಡಿ ಟಿ.ಸಿ. ಎಚ್. ಮಾಡಿ ಶಿಕ್ಷಕ ವೃತ್ತಿ ಸೇರಿದರೆ, ನನ್ನ ಸ್ನಾತಕೋತ್ತರ (Ist class) ಪದವಿಯು ಶಿಕ್ಷಕ ವೃತ್ತಿಯಿಂದ ಮುಂಬಡ್ತಿಯಾಗಿ ಉಪನ್ಯಾಸಕನಾಗಿ (P.U.C. College) ಬಡ್ತಿಯಾಗುವ ಅವಕಾಶ ಉಂಟೆ? ದಯವಿಟ್ಟು ಇದರ ಬಗ್ಗೆ ಸಂಪೂರ್ಣವಾಗಿ ಶೀಘ್ರದಲ್ಲಿ ಮಾಹಿತಿ ಒದಗಿಸಿಕೊಡಿ.

ನೀವು ಪಿ.ಯು.ಸಿ. ಮಾಡಿ ಟಿ.ಸಿ. ಎಚ್. ಮಾಡಿದ ಮೇಲೆ ಶಿಕ್ಷಕ ಕೆಲಸಕ್ಕೆ ಸೇರಿದರೆ, ನಿಮಗೆ ನೀವು ಆಗಲೇ ಮಾಡಿರುವ ಎಂ. ಕಾಂ. ನಿಮ್ಮ ಪ್ರಮೋಶನ್‌ಗೆ ಖಂಡಿತವಾಗಿ ಅನುಕೂಲವಾಗುತ್ತದೆ. ಶಿಕ್ಷಕ ವೃತ್ತಿಯಲ್ಲಿ ಮುಂದುವರೆಯಬೇಕಾದಲ್ಲಿ ನೀವು ಟಿ.ಸಿ. ಎಚ್. ನಂತರ ಬಿ.ಎ. ನಂತರ ಬಿ.ಎಡ್ ಮಾಡಿದರೆ ಹೈಸ್ಕೂಲಿಗೆ ಬಡ್ತಿ ಪಡೆಯಬಹುದು. ನಂತರ ಪಿ.ಯು.ಸಿ. ಕಾಲೇಜಿಗೆ ಎಂ.ಕಾಂ. ಆಧಾರದ ಮೇಲೆ ಬಡ್ತಿ ಪಡೆಯಬಹುದು.

ರಾಹುಲ, ಬಾಗಲಕೋಟೆ

ಬಿ.ಎಫ್.ಎ. ಇದು ಯಾವ ಕೋರ್ಸ್. ಇದು ಎಲ್ಲಿ ಇದೆ. ಎಷ್ಟು ವರ್ಷದ ಕೋರ್ಸ್, ಇದರ ಪೂರ್ಣ ವಿವರ ತಿಳಿಸಿ.

ಮತ್ತು ನಾನು ಎಸ್.ಎಸ್.ಎಲ್.ಸಿ. ಮಾಡಿದ್ದೇನೆ. ವಿಜ್ಞಾನ ಕಲಿಯಬೇಕೆಂಬ ಆಸೆ ಬಹಳ ಇದೆ. ಆದ್ದರಿಂದ ಯಾವ ಕೋರ್ಸ್ ಮಾಡಬೇಕು ತಿಳಿಸಿರಿ.

B.F.A ಅಂದರೆ Bachelor of fine arts, ಇದಕ್ಕೆ ಕನಿಷ್ಟ ಅರ್ಹತೆ ಎಂದರೆ ಪಿ.ಯು.ಸಿ ಅಥವಾ ತತ್ಸಮಾನ. ಇದು ಸುಮಾರು 4-5 ವರ್ಷದ ಕೋರ್ಸ್ ಆಗಿದ್ದು ಪ್ರವೇಶವನ್ನು ಲಿಖಿತ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.

ನಿಮಗೆ ವಿಜ್ಞಾನದಲ್ಲಿ ಆಸಕ್ತಿ ಇದ್ದರೆ ಪಿ.ಯು.ಸಿ.ಯಲ್ಲಿ ವಿಜ್ಞಾನವನ್ನು ತೆಗೆದುಕೊಂಡು ನಂತರ ವೃತ್ತಿ ಪರ ಕೋರ್ಸ್‌ಗಳನ್ನು ಮಾಡಬಹುದು.

ವಿಶ್ವನಾಥ ರಟ್ಟೀಹಳ್ಳಿ

ನನ್ನ ಹೆಸರು ವಿಶ್ವನಾಥ. ವಿದ್ಯೆ - ಪಿ.ಯು.ಸಿ. ವಯಸ್ಸು 21, (22-7-77) One sitting ಡಿಗ್ರಿ ಮಾಡಬೇಕೆಂದಿದ್ದೇನೆ. ಇದಕ್ಕೆ ಬೇಕಾದ ಅರ್ಹತೆಗಳೇನು? ಯಾವ ವಿಶ್ವವಿದ್ಯಾಲಯಗಳಲ್ಲಿ ಈ ವ್ಯವಸ್ಥೆ ಇದೆ. ಅವರನ್ನು ಸಂಪರ್ಕಿಸುವ ಸಂಪರ್ಕ ವಿಳಾಸ ತಿಳಿಸಿ ಉಪಕರಿಸಿರಿ.

ಈ ರೀತಿ ಪಡೆದ ಡಿಗ್ರಿಗೆ ಉದ್ಯೋಗ ಭರವಸೆ ಇದೆಯೇ? ದಯವಿಟ್ಟು ಉತ್ತರಿಸಿ.

One sitting degree ಯನ್ನು ಉಸ್ಮಾನಿಯ, ವಿಶ್ವವಿದ್ಯಾಲಯ, ಹೈದರಾಬಾದ್‌ನಿಂದ ಮಾಡಬಹುದು. ಇದಕ್ಕೆ ಉದ್ಯೋಗ ಭರವಸೆ ಇರುವುದಿಲ್ಲ.

ರಾಜು ಚ. ಶಾಬಾದಿ, ವಿಜಾಪುರ

ನಿಮ್ಮ ಪತ್ರಿಕೆಯಲ್ಲಿ AMIE ಬಗ್ಗೆ ಸ್ಥೂಲ ಪರಿಚಯ ಮಾಡಿಕೊಟ್ಟರೆ ನನ್ನಂಥ ಬಹಳ ಜನರಿಗೆ ಉಪಯೋಗವಾಗುತ್ತದೆ. ದಯವಿಟ್ಟು AMIE ಪರಿಚಯ ಮಾಡಿಕೊಡಿರಿ.

AMIE ಮಾಡಬೇಕಾದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಗೋಖಲೆ ರಸ್ತೆ, ಕಲ್ಕತ್ತಾ - 700 020. ಇವರನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಇದನ್ನು ದ್ವಿತೀಯ ಪಿ.ಯು.ಸಿ ಆಧಾರದ ಮೇಲೆ ಮಾಡಬಹುದು.

ಸಿ. ಎಸ್. ಪಾಟೀಲ, ಸವಣೂರು

ಸರ್, ನಾನು ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ಬೆಂಗಳೂರು ಇವರು ನಡೆಸುವ ಪ್ರವೀಣ II ಪರೀಕ್ಷೆ ಪಾಸಾಗಿದ್ದೇನೆ. ಈ ಪರೀಕ್ಷೆ ಪಾಸಾದರೆ ಪದವಿ ಮುಗಿದಂತೆ ಎಂದು ಹೇಳುತ್ತಾರೆ. ಹಾಗಾದರೆ ಇದರ ಆಧಾರದ ಮೇಲೆ IAS, KAS ಪರೀಕ್ಷೆ ಬರೆಯಬಹುದೇ (ನನ್ನ ವಯಸ್ಸು 22)

ಇದರಿಂದ ಯಾವುದಾದರೂ ಪದವಿ ಅರ್ಹತೆಯ ಹುದ್ದೆಗೆ ಅರ್ಹನಾಗಬಹುದೇ. ಮತ್ತೆ ಯಾವ ಅವಕಾಶ ಉಂಟು ತಿಳಿಸಿ.

ನೀವು ಆಗತ್ಯವಾಗಿ IAS, KAS ಪರೀಕ್ಷೆಗಳನ್ನು ಬರೆಯಬಹುದು.

ಮಾರುತಿ ಹ. ಹುಲ್ಲಟಿ, ಹುಲ್ಲಟಿ

ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ೫೩% ಅಂಕವನ್ನು ತೆಗೆದುಕೊಂಡು ಪಾಸಾಗಿದ್ದೇನೆ. ನಾನು ಕಡಿಮೆ ಖರ್ಚಿನಲ್ಲಿ ಒಳ್ಳೆಯ ವಿದ್ಯೆಯನ್ನು ಕಲಿಯಬೇಕೆಂದಿದ್ದೇನೆ. ಗಣಿತದಲ್ಲಿ ಆಸಕ್ತಿ ಇದೆ. ಯಾವುದಕ್ಕೆ ಹೆಚ್ಚು ಆಸಕ್ತಿ ಬೇಕು ತಿಳಿಸಿರಿ. ತಿಳಿಸುತ್ತೀರೆಂದು ನಂಬಿದ್ದೇನೆ.

ಕಡಿಮೆ ಖರ್ಚಿನಲ್ಲಿ ಉತ್ತಮವಾದ ಕೋರ್ಸ್ ಮಾಡಬೇಕೆಂಬ ನಿಮ್ಮ ಅಭಿಲಾಷೆ ತುಂಬಾ ಒಳ್ಳೆಯದು. ಆದರೆ ಇಂದಿನ ವಸ್ತುಗಳ ಬೆಲೆ ಹೆಚ್ಚಿರುವುದರಿಂದ ಖರ್ಚು ಸಹ ಹೆಚ್ಚಾಗುತ್ತದೆ. ಇದಕ್ಕೆ ಪರಿಹಾರವೆಂದರೆ ಓದಿನ ಜೊತೆಗೆ ದುಡಿಮೆಯನ್ನು ಮಾಡಬೇಕು. ಅಥವಾ ಬೆಂಗಳೂರಿನ ರಾಜಾಜಿನಗರದ GTTC ಯಲ್ಲಿ ದೊರೆಯುವ Diploma in tool and Die making ನಂತಹ ಉಚಿತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಿ, ವೃತ್ತಿಪರ ಕೋರ್ಸ್‌ಗಳನ್ನು ಮತ್ತುಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿದರೆ ಒಳ್ಳೆಯದು. ■

ಗೌತಮ್ ಅಕಾಡೆಮಿ ಆಫ್ ಮೆಡಿಕಲ್ ಸೈನ್ಸಸ್

ಇತ್ತೀಚಿನ ದಿನಗಳಲ್ಲಿ ವೃತ್ತಿಪರ ಕೋರ್ಸುಗಳಿಗೆ ಬಹಳಷ್ಟು ಬೇಡಿಕೆ ಬರುತ್ತಿದೆ. ಹಾಗೆಯೇ ವ್ಯಾಸಂಗ ಕ್ಷೇತ್ರವೂ ವಿಶಾಲವಾಗುತ್ತ ಹೋಗುತ್ತಿದೆ. ವೈದ್ಯಕೀಯ, ಇಂಜಿನಿಯರಿಂಗ್, ಕಂಪ್ಯೂಟರ್ ಇಂತಹ ಕ್ಷೇತ್ರಗಳನ್ನು ಬಯಸುವ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇವರೆಲ್ಲರ ಬೇಡಿಕೆಗಳನ್ನು ಪೂರೈಸುವ ದಿಸೆಯಲ್ಲಿ ಅನೇಕ ವೃತ್ತಿಪರ ಕಾಲೇಜುಗಳು ತಲೆ ಎತ್ತುತ್ತಿವೆ. ಹಲವಾರು ವರ್ಷಗಳಿಂದಲೇ ಅಸ್ತಿತ್ವವನ್ನು ಕಂಡುಕೊಂಡಿರುವ ಕೆಲವು ಕಾಲೇಜುಗಳು ತಮ್ಮಲ್ಲಿ ಹೊಸ ಹೊಸ ಕೋರ್ಸುಗಳನ್ನು ಆರಂಭಿಸುವುದರೊಂದಿಗೆ ವಿದ್ಯಾರ್ಥಿಗಳ ಗಮನ ಸೆಳೆಯುತ್ತಿವೆ.

1986ರಲ್ಲಿ ವೈದ್ಯಕೀಯ ಕ್ಷೇತ್ರಕ್ಕಾಗಿಯೆ ಆರಂಭವಾದ ಇನ್ನೊಂದು ವೈದ್ಯಕೀಯ ಸಂಸ್ಥೆ 'ಗೌತಮ್ ಅಕಾಡೆಮಿ ಆಫ್ ಮೆಡಿಕಲ್ ಸೈನ್ಸಸ್' ಎಂಬುದು. ಈ ಸಂಸ್ಥೆ ನುರಿತ, ನಿಷ್ಠಾವಂತ ವೃತ್ತಿಪರ ವೈದ್ಯರನ್ನು, ವೈದಕೀಯ ಸಲಹೆಗಾರರನ್ನು ಹಾಗೂ ವಿಶೇಷಜ್ಞರನ್ನು ಹೊಂದಿರುವ ಸಂಸ್ಥೆ. ದಕ್ಷ ವೈದ್ಯರಾದ ಡಾ. ಎ.ಟಿ.ಎಸ್. ಗಿರಿಯಂತಹವರ ದಕ್ಷ ನಿರ್ದೇಶನದಲ್ಲಿ ಸಂಸ್ಥೆ ಮುನ್ನಡೆಯುತ್ತಿದೆ. ಸಂಸ್ಥೆ ತನ್ನದೇ ಸ್ವಂತ ಕಟ್ಟಡದ ಜೊತೆಗೆ ಬೇರೆ ಸೌಲಭ್ಯಗಳನ್ನು ಉದ್ಯಾನ ನಗರಿಯಲ್ಲಿ ಹೊಂದಿದೆ. ಇವರಲ್ಲಿರುವ ಕೆಲವು ವೈದ್ಯಕೀಯ ಕೋರ್ಸುಗಳ ವಿವರ ಈ ಕೆಳಗಂಡಂತಿದೆ.



ವೈದ್ಯಕೀಯ ಡಿಪ್ಲೊಮೊ ಕೋರ್ಸುಗಳು

- ಡಿಪ್ಲೊಮೊ ಇನ್ ನರ್ಸಿಂಗ್
- ಡಿಪ್ಲೊಮೊ ಎಕ್ಸರೇ ಟೆಕ್ನಿಷಿಯನ್ (ಡಿ.ಎಂ.ಆರ್.ಟಿ)
- ಡಿಪ್ಲೊಮೊ ಜೂನಿಯರ್ ಲ್ಯಾಬ್ ಟೆಕ್ನಿಷಿಯನ್ (ಡಿ.ಎಂ.ಎಲ್.ಟಿ)
- ಡಿಪ್ಲೊಮೊ ಇನ್ ಫಿಸಿಯೋ ಥೆರಪಿ (ಡಿ.ಪಿ.ಟಿ)
- ಡಿಪ್ಲೊಮೊ ಇನ್ ಸ್ಯಾನಿಟರಿ ಹೆಲ್ತ್ ಇನ್ಸ್‌ಪೆಕ್ಟರ್ (ಡಿ.ಎಸ್.ಹೆಚ್.ಐ)

ಡಿಗ್ರಿ ಕೋರ್ಸುಗಳು

- ಬಿ.ಸೈನ್ಸ್ ಇನ್ ಫಿಸಿಯೋಥೆರಪಿ (ಬಿಎಸ್ಸಿ.(ಪಿಟಿ))
- ಬಿ.ಇನ್ ಆಕ್ಯುಪೇಷನಲ್ ಥೆರಪಿ

ಸ್ನಾತಕೋತ್ತರ ಪದವಿ

- ಹಾಸ್ಪಿಟಲ್ ನರ್ಸಿಂಗ್ ಅಡ್ಮಿನಿಸ್ಟ್ರೇಷನ್
- ಹೆಲ್ತ್ ಅಡ್ಮಿನಿಸ್ಟ್ರೇಷನ್
- ಪಬ್ಲಿಕ್ ಹೆಲ್ತ್ ಅಡ್ಮಿನಿಸ್ಟ್ರೇಷನ್
- ನ್ಯೂಟ್ರಿಶನ್ ಮತ್ತು ಡೈಟೆಟಿಕ್ಸ್ ಅಡ್ಮಿನಿಸ್ಟ್ರೇಷನ್

ಈ ಸ್ನಾತಕೋತ್ತರ ಪದವಿ ಕೋರ್ಸುಗಳು ಅಂಚೆ ತೆರಪಿನ ಶಿಕ್ಷಣದ ಮೂಲಕವೂ ವ್ಯಾಸಂಗ ಮಾಡಬಹುದು.

ಈ ಶೈಕ್ಷಣಿಕ ವರ್ಷದಿಂದ ಇನ್ನೂ ಕೆಲವು ಕೋರ್ಸುಗಳನ್ನು ಆರಂಭಿಸುತ್ತಿದ್ದಾರೆ.

- ಎಂ.ಬಿ.ಎ.
- ಎಂ.ಸಿ.ಎ.
- ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್)
- ಬಿ.ಎಸ್ಸಿ (ಮೈಕ್ರೋಬಯಾಲಜಿ)
- ಬಿ.ಎಸ್ಸಿ (ನರ್ಸಿಂಗ್)

ಸಂಸ್ಥೆ ಉತ್ತಮ ಗ್ರಂಥಾಲಯ, ಪ್ರಯೋಗಾಲಯ, ಸಂಶೋಧನಾಲಯ ಎಲ್ಲ ರೀತಿಯಿಂದಲೂ ಸುವ್ಯವಸ್ಥೆಯಿಂದ ಕೂಡಿದ್ದು ಇತ್ತೀಚಿನ ದಿನಗಳಲ್ಲಿ ಉತ್ತಮ ಮಾದರಿ ಸಂಸ್ಥೆಗಳಲ್ಲಿ ಒಂದಾಗಿದೆ.

ಹೆಚ್ಚಿನ ವಿವರಗಳಿಗೆ :

ಗೌತಮ್ ಅಕಾಡೆಮಿ ಆಫ್ ಮೆಡಿಕಲ್ ಸೈನ್ಸಸ್
ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
ಮಂಜುನಾಥನಗರ, ರಾಜಾಜಿನಗರ,
ಬೆಂಗಳೂರು - 560 010.
ದೂರವಾಣಿ (080) 3489519/
3303737/ 3498899
ಇವರನ್ನು ಸಂಪರ್ಕಿಸಬಹುದು.

■ ಉತ್ತನೂರು ವ್ಯಾಸ್

ಯಶಸ್ವಿ ಉದ್ಯಮಶೀಲರ ಲಕ್ಷಣಗಳು

ಸ್ವತಂತ್ರ ಉದ್ಯಮ ಸ್ಥಾಪಿಸಿ ಬದುಕಿನಲ್ಲಿ ಯಶಸ್ಸು ಕಾಣಬೇಕೆಂಬ ಕನಸನ್ನು ಅನೇಕರು ಕಾಣುತ್ತಾರೆ. ಕನಸು ಕಾಣಲು ಕಂದಾಯ ಕಟ್ಟಬೇಕಿಲ್ಲವಾದ್ದರಿಂದ ಯಾರು ಬೇಕಾದರೂ ಆಶೆಯ ಗೋಪುರ ಏರಬಹುದು. ಆದರೆ ಅಂದುಕೊಂಡದ್ದನ್ನು ಆಗು ಮಾಡಲು ಎಲ್ಲರಿಗೂ ಸಾಧ್ಯವಿಲ್ಲ. ಹಾಗಾದರೆ ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾಗಲು ಉದ್ಯಮಶೀಲರಲ್ಲಿ ಇರಬೇಕಾದ ಲಕ್ಷಣಗಳು ಯಾವುವು? ನಿಮ್ಮಲ್ಲಿ ಈ ಲಕ್ಷಣಗಳು ಇವೆಯೇ? ಒಮ್ಮೆ ಪರೀಕ್ಷಿಸಿಕೊಳ್ಳಿ.

■ ಬಸವರಾಜ ಪುರಾಣಿಕ

ಉದ್ಯಮಶೀಲರು ಎಲ್ಲೆಡೆಯಲ್ಲೂ ದೊರೆಯುತ್ತಾರೆ. ಹೊರಾಂಗಣ ಉಪಹಾರ ವ್ಯಾನ್ ವ್ಯಕ್ತಿ ಮೊದಲಾಗಿ, ಪ್ರಮುಖ ಕಾರ್ಪೋರೇಟ್ಸ್‌ಗಳೊಳಗೆ ತೊಡಗಿರುವ ನಿಷ್ಣಾತ ಕೊನೆಯಾಗಿ, ಎಲ್ಲರೂ ಉದ್ಯಮಶೀಲರು. ಅವರವರ ಆರ್ಥಿಕ ಅಂತಸ್ತುಗಳಲ್ಲಿ ಹಿರಿದು, ಕಿರಿದು ಇರಬಹುದು. ಆದರೆ ಅವರೆಲ್ಲರನ್ನು ಬಂಧಿಸಿಡುವ ಒಂದು ಸಾಮಾನ್ಯ ನಂಟು ಇದೆ. ಅದೆಂದರೆ, ಒಂದು ಪ್ರಾಜೆಕ್ಟ್ ಅಥವಾ ವಿಚಾರದ ಸಮರ್ಥನೆಗಾಗಿ ಅವರು ಆಪತ್ತುಗಳನ್ನು ತೆಗೆದುಕೊಳ್ಳುತ್ತಾರೆ. ತಮ್ಮ ಹಣವನ್ನು ಹೂಡಿ ದಾಳ ಉರುಳಿಸುತ್ತಾರೆ, ತಮ್ಮ ಅಭಿಮಾನ ಹಾಗು ಪ್ರತಿಷ್ಠೆಗಳನ್ನು ಪಣಕ್ಕೆ ಇಡುತ್ತಾರೆ. ಅವರು ತಮ್ಮ ಸ್ವಂತದ ಕಾಣ್ಕೆ (vision)ಗಳನ್ನು ಅನುಸರಿಸುತ್ತಾರೆ ಹಾಗೂ ಯಶಸ್ಸನ್ನು ಪಡೆಯುವುದಕ್ಕೆ ಅಗತ್ಯವಿರುವ ತ್ಯಾಗಗಳನ್ನು ಮಾಡಲು ನಿರ್ಣಯಿಸಿರುತ್ತಾರೆ. ಹಾಗೂ ಸೃಜನಾತ್ಮಕ ಕ್ರಿಯೆಗಳಲ್ಲಿ ಗಾಢವಾದ ಅನುರಕ್ತಿ ಹೊಂದಿರುತ್ತಾರೆ.

ಯಶಸ್ವಿ ಉದ್ಯಮಶೀಲರ ಕೆಲವು ಪ್ರಮುಖ ಲಕ್ಷಣಗಳನ್ನು ಇಲ್ಲಿ ವಿವರಿಸಲಾಗಿದೆ.

ನಮ್ರ ಮೂಲಗಳು

ಅನೇಕ ದೊಡ್ಡ ಉದ್ಯಮಶೀಲರು ಅತಿ ನಮ್ರ ಮೂಲಗಳಿಂದ ಬೆಳೆದಿರುವರು. ಸಾಮಾನ್ಯ ಜನರಲ್ಲಿ ಅವರ ಬೇರುಗಳು ಇರುತ್ತವೆ. ಆಟೋಮೊಬೈಲ್ ಉದ್ಯಮದ ಜನಕನಾದ ಹೆನ್ರಿ ಫೋರ್ಡ್ ಡೆಟ್ರಾಯಿಟ್‌ದ ಒಂದು ವರ್ಕ್‌ಶಾಪ್‌ನಲ್ಲಿ ಹೆಲ್ಪರ್ ಎಂದು ತನ್ನ ದುಡಿಮೆ ಶುರು ಮಾಡಿದ. ತನ್ನ ಸ್ವಂತದ ಉದ್ಯಮವನ್ನು ಪ್ರಾರಂಭಿಸಲು ಮೂರು ಸಾವಿರ ಡಾಲರ್‌ಗಳನ್ನು ಹಿತೈಷಿಗಳಿಂದ ಸಾಲ ಪಡೆದ. ಪೆಟ್ರೋಲಿಯಮ್‌ದ ಭಾರೀ ವ್ಯಾಪಾರಿ (baron) ಜಾನ್ ರಾಕ್‌ಫೆಲರ್ ಸೀಮೆ ಎಣ್ಣೆಯ ಚಿಲ್ಲರೆ ವ್ಯಾಪಾರದಿಂದ ತನ್ನ ಕೆಲಸ ಆರಂಭಿಸಿದ್ದ. ಜಪಾನಿನ ಖ್ಯಾತ ಉದ್ಯಮಿ ಮತ್ಸುಶಿತಾ ಒಂದು ಸೈಕಲ್ ಅಂಗಡಿಯಲ್ಲಿ ಅಪ್ರೆಂಟಿಸ್ ಎಂದು ದುಡಿಯುತ್ತಿರುವಾಗಲೇ ತನ್ನ ಪುಟ್ಟ ಕೊಠಡಿಯಲ್ಲಿ ಸಮನಾಂತರವಾಗಿ ಅರೆಕಾಲಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು.

ಭಾರತದಲ್ಲಿ ಪ್ರಖ್ಯಾತ ಬಿರ್ಲಾ ಬಂಧುಗಳು ತಮ್ಮ ವ್ಯವಹಾರ ಆರಂಭಿಸಿದ್ದು ಮೊದಲು ಮುಂಬೈಯಲ್ಲಿ ಕಚ್ಚ ಅರಳೆಯ ವಹಿವಾಟಿನಿಂದ; ಬಳಿಕ ಕಲಕತ್ತೆಯಲ್ಲಿ ಅಫುವಿನ ವ್ಯಾಪಾರ ಶುರು ಮಾಡಿದರು. MRF tyres ಸಂಸ್ಥೆಯ ಕೆ.ಐ.ಎಮ್. ನಿಮ್. ಮಾಪಿಳ್ಳೈ ಮದ್ರಾಸಿನಲ್ಲಿ ಒಂಟಿಯಾಗಿ ಆಟದ ಬಲೂನ್ ತಯಾರಕನಾಗಿದ್ದರು. ಖ್ಯಾತ ರಿಲೈಯನ್ಸ್ ಸಂಸ್ಥೆಯ ಧೀರೂಭಾಯಿ ಅಂಬಾನಿ ಮೊದಲು ಎಡನ್‌ದಲ್ಲಿ ಒಬ್ಬ ಕಾರಕೂನನೆಂದು ದುಡಿದು, ಬಳಿಕ ಮಸಾಲೆ ದಿನಸುಗಳ ಸಣ್ಣ ಅವಧಿಯ ವ್ಯಾಪಾರಿ ಆಗಿದ್ದರು.

ಸರಳ ಜೀವನ ಶೈಲಿ

ಬಹಳಷ್ಟು ಉದ್ಯಮಶೀಲರ ಜೀವನ ಶೈಲಿ ನಮ್ರವಾಗಿತ್ತು ಹಾಗೂ ಇರುವುದು. ಹೆನ್ರಿ ಫೋರ್ಡ್ ಅಮೇರಿಕೆಯ ಅತ್ಯಂತ ಶ್ರೀಮಂತನಾಗಿ ಡೆಟ್ರಾಯಟ್‌ದಲ್ಲಿ 56 ಕೋಣೆಗಳುಳ್ಳ ತನ್ನ ಅರಮನೆಯಲ್ಲಿ ವಾಸಿಸುತ್ತಿದ್ದಾಗಲೂ ಸಹ, ಆತನ ಮುಖ್ಯ ಆಹಾರ ಕುದಿಸಿದ ಆಲೂಗಡ್ಡೆ ಹಾಗೂ ಆತ ಟೀಟೋಟಲರ್ (ಮದ್ಯ ವರ್ಜಕ) ಆಗಿದ್ದ. ಜಾನ್ ರಾಕಫೆಲರ್ ಶ್ರೀಮಂತಿಕೆಯ ಶಿಖರ ಮುಟ್ಟಿದ್ದಾಗಲೂ ನ್ಯೂಯಾರ್ಕ ನಗರಕ್ಕೆ ಬಂದರೆ ಹೋಟೆಲಿನ ಅತಿ ಸಾಮಾನ್ಯ ಡಾರ್ಮಿಟರಿಯನ್ನು ಇಷ್ಟ ಪಡುತ್ತಿದ್ದ. ಒಂದು ಸಲ ಆ ಹೋಟೆಲ್ ಮಾಲೀಕ ಆತನನ್ನು ಪ್ರಶ್ನಿಸಿದನಂತೆ, 'ಮಿ। ರಾಕಫೆಲರ್ ನೀವು ಡಾರ್ಮಿಟರಿ ಇಷ್ಟ ಪಡುವಿರಿ. ಅದೇ ನಿಮ್ಮ ಮಗ ಬಂದರೆ ಸೂಪರ್ ಡಿಲಕ್ಸ್ ಸೂಟನ್ನು ಆರಿಸಿಕೊಳ್ಳುತ್ತಾನೆ. ಇದೇನು?. ರಾಕಫೆಲರ್ ನಗುತ್ತ ಉತ್ತರಿಸಿದನಂತೆ, 'ಇದು' ಸಹಜ, ಯಾಕೆಂದರೆ ನನ್ನ ಮಗ ಮಿಲಿಯಾನಿರ್‌ನ ಮಗ. ಅದಕ್ಕೆ ಅವನಿಗೆ ಸೂಪರ್ ಡಿಲಕ್ಸ್ ಸೂಟು ಬೇಕು. ನಾನು ಬಡ ರೈತನ ಮಗ ನನಗೆ ಡಾರ್ಮಿಟರಿ ಅಷ್ಟೇ ಸಾಕು. ತಾತ್ಪರ್ಯವೆಂದರೆ ಉದ್ಯಮಶೀಲ ಹಣದ ಬಳಕೆಯ ಔಚಿತ್ಯವನ್ನು ಚೆನ್ನಾಗಿ ಅರಿತಿರುವುದು. ಇಲ್ಲದ ಚೆಲ್ಲು ಅವನಿಗೆ ಸಲ್ಲದು. ಸರಳ ಜೀವನ ಶೈಲಿಯ ಉದ್ಯಮಶೀಲರ ಉದಾಹರಣೆಗಳಿಗೆ ಕೊರತೆಯಿಲ್ಲ.

ಸವಾಲುಗಳನ್ನು ಸ್ವೀಕರಿಸುವುದು

ನಿಜವಾದ ಉದ್ಯಮಶೀಲ ಯಾವುದೇ ಸವಾಲನ್ನು ಸ್ವೀಕರಿಸಬಲ್ಲ. ಮೊದಲನೆಯ ವಿಶ್ವಯುದ್ಧದಲ್ಲಿ ಬ್ರಿಟನ್ ಅಮೇರಿಕೆಯ ಏರ್‌ಕ್ರಾಫ್ಟ್ ತಯಾರಕರನ್ನು ಹುಡುಕುತ್ತಿತ್ತು. ವಿಮಾನ ರಚನೆಯ ಎಳ್ಳಷ್ಟು ಜ್ಞಾನವಿಲ್ಲದ ಹೆನ್ರಿ ಫೋರ್ಡ್, ಪ್ರತಿ ವರ್ಷ ಸಹಸ್ರಾರು ವಿಮಾನಗಳನ್ನು ಒದಗಿಸುವ ಬ್ರಿಟನ್‌ದ ಅಗತ್ಯವನ್ನು ಒಪ್ಪಿಕೊಂಡ. ಆದರೆ ಒಂದು ಕರಾರು ಹಾಕಿದ; ತನ್ನ ವಶದಲ್ಲಿದ್ದ ಜರ್ಮನ್ ವಿಮಾನದ ಮಾದರಿಯನ್ನು ಬ್ರಿಟನ್ ತನಗೆ ಕೊಡಬೇಕು. ಒಪ್ಪಂದವಾಯಿತು.ತನ್ನ ಹೈಲ್ಯಾಂಡ್ ಪಾರ್ಕ್ ಕಾರು ಕಾರ್ಖಾನೆಯನ್ನು ವಿಮಾನ ಕಾರ್ಖಾನೆಯನ್ನಾಗಿ ಪರಿವರ್ತಿಸಿ ಅಸಾಧ್ಯವಾದ ಆ ಕೆಲಸವನ್ನು ನೆರವೇರಿಸಿದನಲ್ಲದೆ 1930 ರವರೆಗೆ ಅವನು ಪ್ರಮುಖ ಏರಕ್ರಾಫ್ಟ್ ಉತ್ಪಾದಕನಾದ.

ಸತತ ಪ್ರಯತ್ನ

ತಮ್ಮ ಜೀವನಾವಧಿಯ ಮೊದಲ ಘಟ್ಟಗಳಲ್ಲಿ ಅನೇಕ ಉಚ್ಚ ಉದ್ಯಮಶೀಲ ಕನಸಿಗರಾಗಿದ್ದುದು ಕಂಡು ಬರುತ್ತದೆ. ಆದರೆ ಹಗಲುಗನಸಿಗರಾಗಿ ಉಳಿಯದೆ ಅವರು ಸತತ ಪ್ರಯತ್ನದಿಂದ ತಮ್ಮ ಕನಸುಗಳನ್ನು ನನಸನ್ನಾಗಿ ಮಾಡಿಕೊಂಡರು.

1790ರ ದಶಕದಲ್ಲಿ ಅಮೇರಿಕೆಯ

ಕೈತೋಟ ಸ್ಪರ್ಧೆ

ನಗರದ ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿ ಆಗಸ್ಟ್‌ನಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವ ಕೈತೋಟ ಸ್ಪರ್ಧೆ ಮತ್ತು ಫಲ ಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಲಿಚ್ಛಿಸುವವರಿಂದ ಪ್ರವೇಶಗಳನ್ನು ಮೈಸೂರು ಉದ್ಯಾನ ಕಲಾ ಸಂಘದವರು ಆಹ್ವಾನಿಸಿದ್ದಾರೆ.

ತರಕಾರಿ ಅಲಂಕಾರ ತೋಟಗಳ ಸ್ಪರ್ಧೆಗೆ ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಜುಲೈ 30 ಮತ್ತು ಪುಷ್ಪ ಪ್ರದರ್ಶನ, ಇಕೆಬಾನ, ಭಾರತೀಯ ಪುಷ್ಪಕಲೆ, ಬೋನ್ಸಾಯ್ ಪ್ರದರ್ಶನಕ್ಕೆ ಆಗಸ್ಟ್ 6 ಕೊನೆಯ ದಿನ.

ಇನ್ನಿತರ ಮಾಹಿತಿಗಳಿಗೆ:

ಕಾರ್ಯದರ್ಶಿ

ಮೈಸೂರು ಹಾರ್ಟಿಕಲ್ಚರಲ್ ಸೊಸೈಟಿ,
ಲಾಲ್‌ಬಾಗ್, ಬೆಂಗಳೂರು.

ಇವರನ್ನು ಸಂಪರ್ಕಿಸಬಹುದು. ■

ಗ್ರಾಮೀಣ ಪ್ರದೇಶಗಳಲ್ಲಿ ಯಾಂತ್ರಿಕ ಉತ್ಪಾದನೆಯ ಚಟುವಟಿಕೆಗಳನ್ನು ಕೈಕೊಳ್ಳಬೇಕೆಂದು, 14 ವರ್ಷದ ವಿಲಿ ವ್ಹಿಟ್ನಿ ಕನಸು ಕಂಡಾಗ, ಅವನ ಸ್ವಂತ ಊರಿನ ರೈತರು ಹಾಗೂ ಅವನ ಸಮಕಾಲೀನರು ಗೇಲಿ ಮಾಡಿದರು. ಆದರೆ ಅವನು ಮೆಸ್ಸಚ್ಯೂಸೆಚ್‌ದಲ್ಲಿ ಒಂದು ಫಾರ್ಮ್ ವರ್ಕ್ ಶಾಪ್ ಸ್ಥಾಪಿಸಿ ಮೊಳೆ ಹಾಗೂ ಚಾಕೂ ಬ್ಲೇಡ್‌ಗಳನ್ನು (ಅವು ಅಮೇರಿಕೆಯ ಕ್ರಾಂತಿಯ ಅವಧಿಯಲ್ಲಿ ಆಮದುಗಳಿಗೆ ಪ್ರತಿಸ್ಥಾಪಿತ ವಸ್ತು substitute ಆಗಿದ್ದವು.) ತಯಾರಿಸಿ ತನ್ನ ಕನಸನ್ನು ಸಾಕಾರಗೊಳಿಸಿದ. ವ್ಹಿಟ್ನಿಯ ಜೀನೀಯಸ್ (genious) ಅಲ್ಲಿಗೆ ನಿಲ್ಲಲಿಲ್ಲ. ಕಷ್ಟಕರ ಹೋರಾಟಗಳನ್ನೆದುರಿಸಿ ಅವನು ಆ ಕಾಲದಲ್ಲಿ ಅಪರೂಪ ಎನಿಸಿದ್ದ ಇಂಜನಿಯರಿಂಗ್ ಪದವಿಯನ್ನು ಪಡೆದ. ತನ್ನ ಸೈದ್ಧಾಂತಿಕ ಜ್ಞಾನ ಹಾಗೂ ಪ್ರಾಯೋಗಿಕ ಕೌಶಲಗಳನ್ನು ಉಪಯೋಗಿಸಿ ಅವನು ಅರಳೆ ಜಿನ್ನಿಂಗ್ ಯಂತ್ರಗಳನ್ನು ತಯಾರಿಸಿದ. ಆ ಮೂಲಕ ಅಮೇರಿಕೆಯ ಜವಳಿ ಉದ್ಯಮದಲ್ಲಿ ಯಾಂತ್ರೀಕರಣಕ್ಕೆ ಸಹಾಯ ಮಾಡಿದ. ಶಸ್ತ್ರಾಸ್ತ್ರ ತಯಾರಿಕೆಯ ತಾಂತ್ರಿಕತೆಯಲ್ಲಿ ಪರಸ್ಪರ ಬದಲಾಯಿಸಬಲ್ಲ ಬಿಡಿ ಭಾಗಗಳನ್ನು ಬಳಸಿ ಕ್ರಾಂತಿ ತಂದನು. ಅವನು ತೀರಿಕೊಂಡಾಗ ಆ ಕಲ್ಪನೆ ಫಲಕಾರಿಯಾಗಿತ್ತು.

ಭಾರತದಲ್ಲಿ 1880ರ ದಶಕದಲ್ಲಿ ಜಮಶೇದಜಿ ಟಾಟಾ ಬಿಹಾರಿನ ಹಳ್ಳಿಯೊಂದರಲ್ಲಿ ಉಕ್ಕು ತಯಾರಿಸುವ ಕನಸನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಆಗ ಅಮೇರಿಕೆಯಲ್ಲಿ ಕಾರ್ನಾಗಿ ಉಕ್ಕು ಉದ್ಯಮ ಆರಂಭಿಸಿ ಕೇವಲ ಎರಡು ದಶಕಗಳು ಸಂದಿದ್ದವು. ಆದರೆ ಸತತ ಪ್ರಯತ್ನದಿಂದ ಟಾಟಾ ತಾನು ಕಂಡ ಕನಸನ್ನು ಸಾಕಾರಗೊಳಿಸಿದ.

ಇಂದು ಪ್ರಖ್ಯಾತವಾಗಿರುವ "Amul" ಹಾಲು ಉತ್ಪಾದನೆಗಳ ಸಂಸ್ಥೆ ತ್ರಿಭುವನಭಾಯಿ ಪಟೇಲ್ ಕಂಡ ಒಂದು ಕನಸು. ಸ್ವಾತಂತ್ರ್ಯ ಪೂರ್ವದಲ್ಲಿ ಸಹಕಾರಿ ಮಾದರಿಯಲ್ಲಿ ಆರಂಭಗೊಂಡ ಈ ಸಂಸ್ಥೆಗೆ ಮೂಲಧನವನ್ನು ಪಟೇಲ್ ತನ್ನ ಹೆಂಡತಿಯ ಆಭರಣ ಮಾರಿ ತಂದದ್ದು. ಸರದಾರ ಪಟೇಲರ ಮಾರ್ಗದರ್ಶನ, 'ಅಮೂಲ' ಕ್ಕಾಗಿಯೇ ಬಂದನೆಂಬಂತೆ ಅಮೇರಿಕೆಯಿಂದ ಹಿಂದಿರುಗಿದ ಕುರಿಯನ್, ತ್ರಿಭುವನಭಾಯಿಯವರ ಅಚಲ ನಿಷ್ಠೆ - ಇದೆಲ್ಲ ಸೇರಿ Amul ಇಂದು ಒಂದು ಉದ್ಯಮವಾಗಿ ಬೆಳೆದುನಿಂತಿದೆ.

ಅವಕಾಶಗಳ ಗುರುತಿಸುವಿಕೆ

ಇತರರು ಲಕ್ಷಿಸದಿರುವ ಅವಕಾಶಗಳನ್ನು ಉದ್ಯಮಶೀಲ ಗುರುತಿಸುವನಷ್ಟೇ ಅಲ್ಲ, ಅವುಗಳ ಸಾಧಕ-ಬಾಧಕಗಳನ್ನು ಅಭ್ಯಸಿಸಿ ಅವುಗಳನ್ನು ವ್ಯವಹಾರವನ್ನಾಗಿ ಪರಿವರ್ತಿಸುವ ಸಾಧ್ಯತೆಗಳನ್ನು ಇತರರಿಗಿಂತ ಮೊದಲೇ ಊಹಿಸಬಲ್ಲನು. ಹಾಗೂ ಅದು ತನ್ನಿಂದ ಹೇಗೆ ಕಾರ್ಯಸಾಧ್ಯವಾಗಬಲ್ಲದು ಎಂಬುದನ್ನು ಅರಿತುಕೊಳ್ಳುತ್ತಾನೆ.

ಅಮೇರಿಕೆಯ ಸಿವಿಲ್ ಯುದ್ಧದಿಂದಾಗಿ ಇಂಗ್ಲೆಂಡಿನಲ್ಲಿ ಉಂಟಾದ ಅರಳೆಯ ವಿಪ್ಲವವನ್ನು ಬಿರ್ಲಾ ಸಹೋದರರು ಕೇಳಿದಾಕ್ಷಣವೇ ಅವರು ತಮ್ಮ ತಂದೆಯೊಂದಿಗೆ ಪಿಲಾನಿಯಿಂದ ಮುಂಬೈಗೆ ಧಾವಿಸಿದರು. ಭಾರತದ ಕಚ್ಚಾ ಅರಳೆಯನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿ ಅದನ್ನು ಅಧಿಕ ಲಾಭದ ಮೇಲೆ ಬ್ರಿಟಿಶ್ ಗಿರಾಕಿಗಳಿಗೆ ಮಾರಿದರು. ಬಿರ್ಲಾ ಕುಟುಂಬವು ಉದ್ಯಮಶೀಲತೆಯ ಲೋಕದಲ್ಲಿ ಶ್ರೇಷ್ಠವೇ. ಅಗ್ರಸ್ಥಾನವನ್ನು ಪಡೆದುದರ ತಳದಲ್ಲಿ, ಅವಕಾಶಗಳು ಸಿಕ್ಕಿದ ಕೂಡಲೇ ಅವುಗಳನ್ನು ಕೂಡಲೇ ವಶಪಡಿಸಿಕೊಳ್ಳುವ ಕುಶಲತೆ ಅಡಗಿರುತ್ತದೆ.

ಕೆಲವು ವರ್ಷಗಳ ಹಿಂದೆ ಶ್ಯಾಂಪೂ ತುಂಬಿದ ಸ್ಯಾಚೆಟ್‌ಗಳನ್ನು ಒಂದು ರೂಪಾಯಿಗೆ ಒಂದರಂತೆ ಮಾಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಬಳಕೆ ವಸ್ತುಗಳ ಮಾರ್ಕೆಟಿನಲ್ಲಿ ಹೊಸತನ ತಂದ ಡಾ|| ರಾಜಕುಮಾರ ವೃತ್ತಿಯಿಂದ ವೈದ್ಯ. ಪ್ರವಾಸಿಗಳಿಗೆ ಹಾಗೂ ಅಷ್ಟಕಷ್ಟೇ ಹಣ ಇರುವವರಿಗೆ ಸ್ಯಾಚೆಟ್ ಖರೀದಿ ವರವಾಗಿ ಬಂದಿತು. ಇಂದು ರಾಜಕುಮಾರನ ಕಲ್ಪನೆ ಬೇರೆ ವಸ್ತುಗಳ ವಹಿವಾಟಿನಲ್ಲಿಯೂ ಹರಡಿದೆ.

ಆಪತ್ತು ತೆಗೆದುಕೊಳ್ಳುವ ಕ್ಷಮತೆ

ದೊಡ್ಡ ಆಪತ್ತು (risk) ಗಳನ್ನು ತೆಗೆದುಕೊಳ್ಳುವ ಮನೋಧರ್ಮ ಉದ್ಯಮಶೀಲತೆಯ ಪ್ರಧಾನ ಲಕ್ಷಣಗಳಲ್ಲಿ ಒಂದಾಗಿರುತ್ತದೆ. ಧೀರೂಭಾಯಿ ಅಂಬಾನಿ ಅವರ ಉದಾಹರಣೆಯನ್ನೇ ನೋಡಬಹುದು. ಬೃಹತ್ ಪ್ರಮಾಣದ ಸಾರ್ವಜನಿಕ ನಿಧಿ ಹಾಗೂ ಸಾಂಸ್ಥಿಕ ಹಣಕಾಸುಗಳನ್ನು ಉಪಯೋಗಿಸಿಕೊಂಡು ಅಂಬಾನಿ ತಮ್ಮ ಮಹತ್ವಾಕಾಂಕ್ಷೆಯ ಹಾಗೂ ಅತ್ಯಧಿಕ ಆಪತ್ತುಗಳುಳ್ಳ ಉತ್ಪಾದನೆಯ ಸಾಹಸ-ಉದ್ಯಮ (venture) ವನ್ನು ಹೂಡಿದಾಗ, ಉದ್ಯಮಶೀಲತೆಯ ತಲೆಮಾರುಗಳ ದೀರ್ಘ ಇತಿಹಾಸವುಳ್ಳ ಹಾಗೂ ಸುಸ್ಥಾಪಿತರಾಗಿರುವ ದೊಡ್ಡ ವ್ಯವಹಾರಸ್ಥರು ದಿಗ್ಭ್ರಮೆಗೊಂಡರು. ಆದರೆ ದೊಡ್ಡ ಆಪತ್ತುಗಳನ್ನು ತೆಗೆದುಕೊಂಡು ಮುನ್ನುಗ್ಗಿದ್ದ ಅಂಬಾನಿ ತಾವೊಬ್ಬ ಒಳ್ಳೆಯ ಉದ್ಯಮಶೀಲ ಎಂಬುದನ್ನು ಸಿದ್ಧಪಡಿಸಿದ್ದು ಬೇಗನೇ ಕಂಡು ಬಂದಿತು. ಪ್ರಮುಖ ಆಪತ್ತುಗಳನ್ನು ನಿಭಾಯಿಸಿಕೊಳ್ಳುತ್ತ ನ್ಯೂನತೆಯ ಭೇದ್ಯ (vulnerable) ಸ್ಥಾನದಿಂದ ಕಾರ್ಯ ಮಾಡಿಕೊಳ್ಳುತ್ತ ಭವಿಷ್ಯದ ಅನಿಶ್ಚಿತೆಗಳನ್ನು ನಿಯಂತ್ರಿಸುವ ಕ್ಷಮತೆ ಅಂಬಾನಿಯವರಲ್ಲಿ ಹೇರಳವಾಗಿದೆ. ಅಂಬಾನಿ ತೋರಿಸಿದ ' ಒಂದೇ ಎಸೆತದ ಪದೋನ್ನತಿ' (one shot promotion) ಸಹ ಉದ್ಯಮಶೀಲತೆಯ ಇನ್ನೊಂದು ಒಳ್ಳೆಯ ಲಕ್ಷಣವಾಗಿದೆ. ಅದರಂತೆ ಉದ್ಯಮಶೀಲತೆಯ ಇನ್ನೊಂದು ಲಕ್ಷಣವಾಗಿರುವ ಹಣಕಾಸಿನ ಗಾರುಡಿ (wizardry) ಹಾಗೂ ದೊಡ್ಡ ಆಪತ್ತುಗಳನ್ನು ತೆಗೆದುಕೊಳ್ಳುವ ಕ್ಷಮತೆ ಜೊತೆಜೊತೆಯಾಗಿ ಇರುತ್ತದೆ.

ಅಧಿಕಾರ ನಿಯೋಜನೆಗೆ ಸಮ್ಮತಿ

ಸಣ್ಣ ಉದ್ಯಮವೊಂದನ್ನು ಶುರು ಮಾಡಿದ ಉದ್ಯಮಶೀಲ ಪ್ರಾರಂಭದಲ್ಲಿ ಎಲ್ಲ ಕೆಲಸಗಳನ್ನು ತಾನೇ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಆದರೆ ಉದ್ಯಮವು ಅಭಿವೃದ್ಧಿಗೊಂಡಂತೆ ವ್ಯವಹಾರದಲ್ಲಿ ಹೆಚ್ಚಳವಾದಾಗ

ಅಧಿಕಾರ ನಿಯೋಜನೆ (delegation of power)ಮಾಡುವ ಅಗತ್ಯ ಕಂಡು ಬರುತ್ತದೆ. ಅದು ಸಹ ಉದ್ಯಮಶೀಲತೆಯ ಮಹತ್ವದ ಲಕ್ಷಣವಾಗಿರುತ್ತದೆ. ಜಾನ್ ರಾಕ್‌ಫೆಲರ್ ತನ್ನ 'ಜನತಾ ಸಂಘಟನೆ' (people organisation)ಯ ಮೂಲಕ ತನ್ನ ನೇರ ಪ್ರತಿಸ್ಪರ್ಧಿಯಾಗಿದ್ದ ಸ್ಟ್ಯಾಂಡರ್ಡ್ ಆಯಿಲ್ ಕಂಪನಿಯನ್ನು ಬಹಳ ಹಿಂದೆ ಉಳಿಸಿದನು. ಆದರೆ, ಅಧಿಕಾರ ನಿಯೋಜನೆಯಲ್ಲಿ ನಂಬಿಕೆ ಇಲ್ಲದಿದ್ದ ಹೆನ್ರಿ ಫೋರ್ಡ್ ತನ್ನ ಪ್ರತಿಸ್ಪರ್ಧಿ ಹಾಗೂ ಅಧಿಕಾರ ವಿಕೇಂದ್ರೀಕರಣದಲ್ಲಿ ಆಸಕ್ತಿ ಇದ್ದ ಜನರಲ್ ಮೋಟರ್ಸ್ ಕಾರ್ಪೊರೇಶನ್‌ಗಿಂತ ಬಹಳ ಹಿಂದೆ ಬೀಳಬೇಕಾಯಿತು. ಒಮ್ಮೆ ತನ್ನ ಅಗ್ರ ಸ್ಥಾನವನ್ನು ಕಳೆದುಕೊಂಡ ಫೋರ್ಡ್ ಶತಾಯ ಗತಾಯ ಮಾಡಿದರೂ ಅದನ್ನು ಮರಳಿ ಪಡೆಯಲಾಗಲಿಲ್ಲ.

ನಮ್ಮ ದೇಶದಲ್ಲಿ ಸಹ ಬಹಳ ಉದ್ಯಮಗಳ ಒಡೆಯರು ತಮ್ಮ ಕಾರ್ಯನಿರ್ವಾಹಕರಿಗೆ ಹೊಣೆ ಹಾಗೂ ಅಧಿಕಾರಗಳನ್ನು ನಿಯೋಜಿಸಿ ಯಶಸ್ವಿ ಆಗಿದ್ದಾರೆ. ಟಾಟಾ ಕಂಪನಿಗಳ ಉತ್ಕರ್ಷಕ್ಕೆ ಕಾರಣರಾದ ಕಾರ್ಯನಿರ್ವಾಹಕ ಮುಳಗಾಂವಕರ, ದರ್ಬಾರಿ ಸೇಟ್, ಹಾಗೂ ಮೋದಿ ಇವರ ಯಶಸ್ಸಿನ ರಹಸ್ಯ ಅವರು ಪಡೆದಿದ್ದ ಅಧಿಕಾರದ ನಿಯೋಜನೆ.

ಉಚ್ಚ ಗುಣಮಟ್ಟ ಕಡಿಮೆ ಬೆಲೆಗಳು

ಯಶಸ್ವಿ ಉದ್ಯಮಶೀಲರು ತಮ್ಮ ಉತ್ಪಾದನೆಗಳನ್ನು, ಗುಣಮಟ್ಟವನ್ನು ಬಲಿಕೊಡದೆ, ನ್ಯೂನತಮ ಬೆಲೆಗಳಿಗೆ ತಯಾರಿಸಲು ಹೆಸರಾಗಿರುವರು. 1908ರಲ್ಲಿ ಮಾಡಲ್ ಫೋರ್ಡ್ ಕಾರಿನ ಬೆಲೆ ಒಂದು ಸಾವಿರ ಡಾಲರ್ ಇತ್ತು. ಅದೇ ಕಾರನ್ನು 1925ರಲ್ಲಿ 250 ಡಾಲರ್‌ಗಳಿಗೆ ಲಾಭದೊಂದಿಗೆ ಮಾರಲಾಯಿತು. ಇದನ್ನು, ಕಂಪನಿ ನಿರಂತರವಾದ ಉತ್ಪಾದನೆ ಸುಧಾರಣೆ, ಹೆಚ್ಚಿನ ಉತ್ಪಾದಕತೆ ಹಾಗೂ ಬೆಲೆಗಳಲ್ಲಿ ಕಡಿತಗಳ ಮೂಲಕ ಸಾಧಿಸಿತ್ತು. ಅದೇ ಪ್ರಕಾರ, ರಾಕ್‌ಫೆಲರ್ ಪೆಟ್ರೋಲಿಯಮ್ ಉತ್ಪಾದನೆಗಳನ್ನು ಸುಧಾರಿತ ತಾಂತ್ರಿಕತೆಗಳು ಹಾಗೂ ಮಾನವ ಸಂಬಂಧಗಳ ಮೂಲಕ ಮಾಡಲು ಶಕ್ಯವಾಗುತ್ತಿತ್ತು.

ಕಾಲಮಾನ ಬದಲಾಯಿತಾದರೂ, ಉದ್ಯಮಶೀಲರಲ್ಲಿ ತನ್ನ ಗಿರಾಕಿಗಳಿಗೆ ಒಳ್ಳೆಯ ಗುಣಮಟ್ಟದ ಉತ್ಪಾದನೆಯನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಬೆಲೆಗೆ ಕೊಡಬೇಕೆಂಬ ಬದ್ಧತೆ ಇರಬೇಕು. ಅದು ಉದ್ಯಮಶೀಲತೆಯ ಮಹತ್ವದ ಲಕ್ಷಣವಾಗಿದೆ.

ಕಠಿಣ ಪರಿಶ್ರಮ

ಉದ್ಯಮಶೀಲತೆ ಹಾಗೂ ಕಠಿಣ ಪರಿಶ್ರಮದಲ್ಲಿ ಸಂತೋಷ. ಇವೆರಡೂ ಪರಸ್ಪರ ಪೂರಕವಾಗಿರುತ್ತವೆ. ಕಠಿಣ ಪರಿಶ್ರಮದಲ್ಲಿಯ ಸಂತೋಷವನ್ನು ವರ್ಕ್‌ಹಾಲಿಜಮ್ (workaholism) ಎಂದು ವಿಡಂಬನೆಯಿಂದ ಕರೆಯಲಾಗುತ್ತದೆ. ಒಳ್ಳೆಯ ಉದ್ಯಮಶೀಲ ಕೆಲಸದ ತೃಪ್ತಿ ಹಾಗೂ ಮುಂಬರುವ ಪ್ರತಿಫಲಗಳ ನಿರೀಕ್ಷೆಯಲ್ಲಿ ಯಾವುದೇ ಪ್ರಕಾರದ ಪರಿಶ್ರಮಕ್ಕೆ ಸಿದ್ಧ ಇರುತ್ತಾನೆ ಅಥವಾ ಕಠಿಣ ಪರಿಶ್ರಮದಲ್ಲಿ ಸಂತೋಷ ಪಡುತ್ತಾನೆ. ತಿಂಗಳಿಗೆ ಇಷ್ಟೆಂದು ನಿಗದಿತ ಸಂಬಳವಾಗಲೀ, ಇತರ ಖಾತ್ರಿಯಾದ ಸೌಲಭ್ಯಗಳಾಗಲಿ ಇರದ ಉದ್ಯಮಶೀಲ ತನ್ನ ದುಡಿಮೆಯಲ್ಲಿಯೇ ದುಡ್ಡನ್ನು, ಆತ್ಮ ತೃಪ್ತಿಯನ್ನು ಪಡೆಯಬೇಕು. ಅವನು ಎಷ್ಟೋ ಸಲ ಮನೆಗೆ ಊಟಕ್ಕೆ ಹೋಗಲಾರ, ಕುಟುಂಬದ ವಾಡಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವನಿಗೆ ದುಸ್ತರವಾಗುತ್ತದೆ. ತನ್ನ ಕುಟುಂಬದ ಜನರೊಂದಿಗೆ ಪ್ರವಾಸ, ಮನರಂಜನೆ, ಇತ್ಯಾದಿಗಳಿಗೆ ಅವನು ಸಿದ್ಧನಿರಬೇಕು. ಆದರೆ ಪರಸ್ಪರ ತಿಳುವಳಿಕೆಯಿಂದ, ಸೂಕ್ಷ್ಮ ಸಂಬಂಧಗಳಿಂದ ಕುಟುಂಬದ ಸೌಹಾರ್ದತೆ ಕಾಪಾಡಿಕೊಳ್ಳುವುದು ಜಾಣತನ. ಆದ್ದರಿಂದ ವಾರದ ಏಳು ದಿನದಲ್ಲೂ 10-15 ಗಂಟೆ ದುಡಿಯುವ ಭೀತಿ ಅವನಿಗೆ ಇರಬೇಕು. ಅಂಗ ಸೌಷ್ಠವ ಬೆಳೆಸಿಕೊಳ್ಳುವ ಕಸರತ್ತು ಮಾಡುವವರಲ್ಲಿ ಒಂದು ಮಾತು ಬಳಕೆಯಲ್ಲಿದೆ. No pain, no gain'. ಈ ಮಾತು ಪ್ರತಿ ಉದ್ಯಮಶೀಲನ ದೃಢ ನಂಬಿಕೆ (Credo) ಆಗಬೇಕು. ಅವನಿಗೆ ಹತ್ತರಿಂದ ಐದು ಗಂಟೆ ಇರುವುದಿಲ್ಲ. ಅವನಿಗೆ ಇರಬೇಕಾದುದು ಯಾವ ಸಮಯಕ್ಕಾದರೂ ಪರಿಶ್ರಮಕ್ಕೆ ಸನ್ನದ್ಧತೆ.

ಯಾವಾಗಲೂ ಕಲಿಯುವವರು

ತಾವು ಔಪಚಾರಿಕ ಶಿಕ್ಷಣ ಪಡೆದಿರುವರೋ, ಇಲ್ಲವೋ ಎಂಬ ಸಂಗತಿಯ ಪರಿಗಣನೆ ಇಲ್ಲದೆ ಉದ್ಯಮಶೀಲರು ತಮ್ಮ ಜೀವನಾವಧಿ ಕಲಿಯುವುದನ್ನು ಮಾಡುತ್ತಾರೆ. ಇದು ಸರ್ವವಿದಿತ ವಿಷಯ. ಹೆನ್ರಿ ಫೋರ್ಡನ ಕಾರು ರಸ್ತೆಯ ಮೇಲೆ ಬರುವುದಕ್ಕೆ ಸರಿಯಾಗಿ ಒಂದು ಶತಮಾನದ ಮೊದಲು, ಅಮೇರಿಕೆಯ ಉಗಿ-ನಾವೆಯನ್ನು ಅಭಿವೃದ್ಧಿಗೊಳಿಸಿ ದೂರ ಪ್ರಯಾಣಕ್ಕೆ ನಾಂದಿ ಹಾಡಿದ ರಾಬರ್ಟ್ ಫುಲ್ಟನ್, ತನ್ನ ಕೆಲಸಕ್ಕೆ ಸಂಬಂಧಿಸಿದನ್ನು ಕಲಿಯುವುದು, ಬರೆಯುವುದು ಹಾಗೂ ಉದ್ಯಮವನ್ನು ಯಶಸ್ವಿಯಾಗಿ ನಡೆಯಿಸಿಕೊಂಡು ಹೋಗುವುದು- ಇವುಗಳನ್ನು ಒಟ್ಟಿಗೆ ಕೂಡಿಸಿಕೊಂಡು ಬೆಳೆದನು. ಆದಾಗಲೇ ಖ್ಯಾತ ಉದ್ಯಮಶೀಲನೆಂದು ಹೆಸರು ಮಾಡಿದ್ದರೂ ಸಹ ಅವನು ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳಲ್ಲಿ ಒಂಭತ್ತು ವರ್ಷ ನೌಕೆಯ ಮೂಲರೂಪ (prototype)ಗಳ ಸಂಶೋಧನೆ ಹಾಗೂ ಅಭಿವೃದ್ಧಿಗಳನ್ನು ಕಲಿತುಕೊಂಡ.

MRF ಟೈರ್ಸ್‌ನ ಮಾಪಿಳ್ಳೈ ಇಂದಿಗೂ ರಬ್ಬರ್ ತಾಂತ್ರಿಕತೆ ಹಾಗೂ ಟೈರ್ ಉದ್ಯಮಗಳಲ್ಲಿಯ ಇತ್ತೀಚಿನ ವಿಷಯಗಳನ್ನು ಶ್ರದ್ಧೆಯಿಂದ ಕಲಿಯುತ್ತಾರೆ. ಆರಂಭದ ದೆಸೆಯಲ್ಲಿ ಹಣಕಾಸಿನ ತುಜಾಗ್ರತೆಯಿಂದ ಮಾಪಿಳ್ಳೈ ತಮ್ಮ ಮನೆಯಲ್ಲಿದ್ದ ಆಕಳ ಶೆಡ್‌ನಲ್ಲಿ ತಮ್ಮ ಕೆಮಿಸ್ಟ ಹೆಂಡತಿಯ ನೇತೃತ್ವದಲ್ಲಿ ಒಂದು ರಾಸಾಯನಿಕ ಪ್ರಯೋಗಾಲಯ ಸ್ಥಾಪಿಸಿದರು. ದೃಢ ನಿರ್ಧಾರ ಹಾಗೂ ಆತ್ಮ ವಿಶ್ವಾಸಗಳಿಂದ ಇಬ್ಬರೂ ಬಹಳಷ್ಟು ಕಲಿತುಕೊಂಡರು. ಅದೇ ರೀತಿ ಹೆನ್ರಿ ಫೋರ್ಡ್ ತನ್ನ ಅಡಿಗೆ ಮನೆಯನ್ನೇ ರಾತ್ರಿಯ ಹೊತ್ತು ವರ್ಕ್‌ಶಾಪ್ ಮಾಡಿಕೊಂಡು ಪ್ರಯೋಗ ಮಾಡುತ್ತಿದ್ದ.

ಎಡರುಗಳನ್ನು ಎದುರಿಸುವುದು

ಉದ್ಯಮಶೀಲರು ಬೆದರಿಕೆಗಳು, ಎಡರುಗಳು ಹಾಗೂ ವಿಪತ್ತುಗಳನ್ನು ಜಯಿಸಲು ತಮ್ಮ ಉಪಾಯ ಕೌಶಲ (ingenuity) ವನ್ನು ಉಪಯೋಗಿಸುತ್ತಾರೆ. 1980ರ ದಶಕದಲ್ಲಿ ಜಪಾನಿನ ಟೊಯೊಟೊ ಕಾರುಗಳು ಅಮೇರಿಕೆಯ ಕಾರು ಮಾರುಕಟ್ಟೆಯಲ್ಲಿ ಭೀತಿ ಉಂಟು ಮಾಡಿದವು. ಅದನ್ನು ಗ್ರಹಿಸಿದ ಜನರಲ್ ಮೋಟರ್ಸ್‌ನ ಅಧ್ಯಕ್ಷ ಸ್ಮಿತ್, ಜಪಾನಿನ ಕಂಪನಿಯವರು ತಮ್ಮ ಕಾರುಗಳನ್ನು ಜನರಲ್ ಮೋಟಾರ್ಸ್ ಕಾರ್ಖಾನೆಯಲ್ಲಿಯೇ ಹೊಸ ಬ್ರ್ಯಾಂಡ್ ಹೆಸರಿನಲ್ಲಿ ತಯಾರಿಸುವಂತೆ ಅವರ ಮನ ಒಲಿಸಿದ. ಅದರಿಂದ ತನ್ನ ಕಂಪನಿಗೆ ಎರಗಿದ್ದ ಬೆದರಿಕೆಯನ್ನು ನಿವಾರಿಸಿಕೊಂಡ. ಬಿರ್ಲಾ ಕಂಪನಿಗಳು ಭಾರತದ ಅಲ್ಪ ಉತ್ಪಾದಕತೆಯಿಂದಾಗಿ ಜಗತ್ತಿನ ಕಾರ್ಪೆಟ್ ಮಾರ್ಕೆಟ್‌ಗಳಲ್ಲಿ ಪ್ರತಿಸ್ಪರ್ಧಿಸುವುದು ಅಸಾಧ್ಯವೆಂದು ಮನಗಂಡಾಗ, ಆಗ್ನೇಯ ಏಷ್ಯಾದಲ್ಲಿ ನೂಲಿನ ಮಿಲ್ ಶುರು ಮಾಡಿ ಅಡಚಣೆಯನ್ನು ನಿವಾರಿಸಿಕೊಂಡವು. ಭಾರತದ ಪ್ರಥಮ ಕಾರ್ಪೊರೇಟ್ ಮೆಡಿಕಲ್ ಉದ್ಯಮಶೀಲರಾಗಿರುವ ಡಾ. ಪಿ.ಸಿ.ರೆಡ್ಡಿ ಹಣ ಹೂಡುವ ನಿಯಮಾವಳಿಗಳು, ತಮ್ಮ ಅತ್ಯಂತ ಭರವಸೆಯ ಹಾಸ್ಪಿಟಲ್ ಉದ್ಯಮವನ್ನು ಹುಟ್ಟುವ ಮೊದಲೇ ಗರ್ಭಸ್ರಾವ ಮಾಡುವ ಸಾಧ್ಯತೆ ಇದೆ ಎಂಬುದನ್ನು ಮನಗಂಡ

ಕೂಡಲೇ ದಿಲ್ಲಿಗೆ ಧಾವಿಸಿದರು. ಅಲ್ಲಿ ಪ್ರಧಾನ ಮಂತ್ರಿಗಳನ್ನು ಕಂಡು ಅವರಿಗೆ ತಮ್ಮ ಯೋಜನೆಯ ಮಹತ್ವವನ್ನು ಮನದಟ್ಟು ಮಾಡಿಕೊಟ್ಟು ನಿಬಂಧನೆಗಳಲ್ಲಿ ಸೂಕ್ತ ಬದಲಾವಣೆ ಮಾಡುವಂತೆ ಪ್ರಯತ್ನಿಸಿದರು. ಅದರ ಫಲವಾಗಿ ಈಗ ಆಸ್ಪತ್ರೆಗಳು ದೀರ್ಘಾವಧಿ ಹಾಗೂ ಅಲ್ಪಾವಧಿ ಸಾಂಸ್ಥಿಕ ಹಣಕಾಸು ಪಡೆಯಲು ಅರ್ಹವಾಗಿವೆ.

ಯಶಸ್ಸಿನ ವಿವಿಧ ಅಂಶಗಳಿಂದ ಬಲಗಳ ಅಭಿವೃದ್ಧಿ, ದುರ್ಬಲತೆಗಳ ಗುರುತಿಸುವಿಕೆ ಹಾಗೂ ನಿವಾರಣೆ, ವ್ಯವಹಾರದ ಲಾಭಕ್ಕಾಗಿ ಅವಕಾಶಗಳನ್ನು ವಶಪಡಿಸಿಕೊಳ್ಳುವಿಕೆ ಹಾಗೂ ಬೆದರಿಕೆಗಳ ನಿಗ್ರಹ - ಇವು ಉದ್ಯಮಶೀಲತೆಯ ಪ್ರಕ್ರಿಯೆಯಲ್ಲಿಯ ಘಟ್ಟಗಳಾಗಿವೆ. ಉದ್ಯಮಶೀಲತೆಯ ಒಳ್ಳೆಯ ಲಕ್ಷಣಗಳನ್ನು ಹೊಂದಿರುವವರು ಮಾತ್ರ ಆ ಪ್ರಕ್ರಿಯೆಯಲ್ಲಿ ಎಡವದಂತೆ ಹೊರಬರುವರು. ಆದ್ದರಿಂದ ಭಾವಿ ಉದ್ಯಮಶೀಲ ತನ್ನಲ್ಲಿರುವ ಲಕ್ಷಣಗಳನ್ನು ಗುರುತಿಸಿಕೊಂಡು ಅಗತ್ಯವಿರುವ ಇತರ ಲಕ್ಷಣಗಳನ್ನು ಬೆಳೆಯಿಸಿಕೊಳ್ಳುವುದು ಅತಿ ಮುಖ್ಯ. ■

ಕೈಮಗ್ಗ ಡಿಪ್ಲೊಮಾಗೆ ಅರ್ಜಿ ಆಹ್ವಾನ

ಕೈಮಗ್ಗ ಮತ್ತು ಜವಳಿ ಇಲಾಖೆ ಇವರು 3 ವರ್ಷದ ಕೈಮಗ್ಗ ತಂತ್ರಜ್ಞಾನ ಡಿಪ್ಲೊಮಾಗೆ ಎಸ್.ಎಸ್. ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆದಿದ್ದಾರೆ.

ವಯೋಮಿತಿ ಹಾಗೂ ಆದ್ಯತೆ

1-7-98ಕ್ಕೆ 15ರಿಂದ 21 ವರ್ಷದೊಳಗಿರಬೇಕು.

ಕುಲಕಸುಬಾಗಿರುವ ಅಭ್ಯರ್ಥಿಗಳಿಗೆ ಆದ್ಯತೆ.

ತರಬೇತಿ

ಗದಗ-ಬೆಟಗೇರಿಗಳಲ್ಲಿರುವ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗುವುದು.

ಸಂಪರ್ಕಕ್ಕಾಗಿ ವಿಳಾಸ :

ಡಿ.ಕೆ. ಲಿಂಗರಾಜು, ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, 14ನೇ ಕ್ರಾಸ್, ಎಸ್.ಐ.ಟಿ. ಬಡಾವಣೆ, ತುಮಕೂರು ಇವರನ್ನು ಸಂಪರ್ಕಿಸಬಹುದು. ■

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-6

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

ನಾಮಪದ - Noun

ಏಕವಚನ (Singular) ಬಹುವಚನ (Plural)

ಈಗಾಗಲೇ ನಾವು ನಾಮಪದದ ವಿವಿಧ ರೂಪಗಳನ್ನು ಅವುಗಳಿಗೆ ಉಪಯೋಗಿಸಲಾಗುವ ಉಪಪದಗಳ (Articles) ನಿಯಮಗಳನ್ನು ಮತ್ತು ಲಿಂಗಗಳನ್ನು ತಿಳಿದು ಕೊಂಡಿದ್ದೇವೆ. ಪುಲ್ಲಿಂಗದಿಂದ ಸ್ತ್ರೀಲಿಂಗಕ್ಕೆ ಪದ ಪರಿವರ್ತಿಸುವ ನಿಯಮಗಳನ್ನು ರೂಢಿಯಿಂದ ಪರಿಪೂರ್ಣಗೊಳಿಸಬೇಕು. ಈಗ ಏಕವಚನ (Singular) ದಿಂದ ಬಹುವಚನಕ್ಕೆ (Plural) ಪರಿವರ್ತಿಸಲು ಅನುಸರಿಸಬೇಕಾದ ನಿಯಮಗಳಿಲ್ಲಿವೆ-

(ಹಿಂದಿನ ಸಂಚಿಕೆಯಿಂದ)

ಜಾನ್ : ಲಿಂಗಗಳಲ್ಲಿ (Genders) ನಾಲ್ಕು ಪ್ರಕಾರದವು ಎನ್ನುವುದನ್ನು..

ಜಾನಕಿ : ಕಲಿತೆವು.... ಮತ್ತೇ....

ಜಾನ್ : ವಸ್ತು, ಸಂಗತಿ, ಪ್ರಾಣಿ ಮುಂತಾದವು ಒಂದೇ ಇರಬಹುದು ಅಥವಾ ಒಂದಕ್ಕಿಂತ ಹೆಚ್ಚಿರಬಹುದು....

ಜಾನಕಿ : ಒಂದು ಏಕೋ.... ಎಲ್ಲಾ ಹೆಚ್ಚಿಗಿನೇ ಇರೋದಲ್ವೆ?

ಜಾನ್ : ನೀನು ಕಲಿತಿಯೊ? ಒಂದೇ ಇದ್ದಾಗ ಅದನ್ನು 'ಏಕವಚನ' 'Singular' ಅಂತಾ ಮತ್ತು ಒಂದಕ್ಕಿಂತ ಹೆಚ್ಚು ಇದ್ದಲ್ಲಿ ಅವುಗಳನ್ನು 'ಬಹುವಚನ'-'Plural' ಅಂತಾ ಹೇಳ್ತೇವೆ.

ಜಾನಕಿ : ಗೊತ್ತಾತು. ಏಕವಚನದಿಂದ ಬಹುವಚನಕ್ಕೆ ಬದಲಾಯಿಸಲು ಕೆಲವು ರೂಲ್ಸ್‌ಗಳಿವೆ. ಹೌದಲ್ಲೋ?

ಜಾನ್ : ಕರೆಕ್ಟ್, ಧಿನಾಲು ಪೇಪರ ಓದತಾ ಇದ್ದಿಯಲ್ಲಾ. ನೀನು ನೋಡಿರಬೇಕು. ಸಾಮಾನ್ಯವಾಗಿ -s, -es, ಪ್ರತ್ಯಯ ಹಚ್ಚುವುದರಿಂದ ಆ ಶಬ್ದ (ನಾಮಪದ) ಏಕವಚನದಿಂದ ಬಹುವಚನಕ್ಕೆ ಪರಿವರ್ತಿಸಿದಂತೆ.

ಜಾನಕಿ : ಎಷ್ಟು ಸಲ ನಿನಗೆ ಹೇಳಬೇಕಪ್ಪಾ? ಒಂದೊಂದೇ ಹೇಳು......

ಜಾನ್ : ಸಾಮಾನ್ಯವಾಗಿ ನಾಮಪದಕ್ಕೆ -s ಪ್ರತ್ಯಯ ಹಚ್ಚುವುದರಿಂದ, ಉದಾ :

ನಿಯಮ I

Singular	Plural
Boy	Boys
Girl	Girls
Pen	Pens
Book	Books
Name	Names

ಜಾನಕಿ : ಹೀಂಗ ಹೇಳಿದರ ಯಾರಿಗಾದರೂ ಸ್ಪಷ್ಟವಾಗಿ ತಿಳಿತದ....

ಜಾನ್ : ನೀನು ಒಂದರೆಡು ಉದಾಹರಣೆ ಹೇಳು .....

ಜಾನಕಿ : (1) Brother - Brothers
(2) Sister - Sisters
(3) Bird - Birds
(4) Cat - Cats

ಜಾನಕಿ : ಸರಿ. ನಾಮಪದದ ಕೊನೆಗೆ -s, sh, ch, o, x,ಇದ್ದಲ್ಲಿ -es ಪ್ರತ್ಯಯ ಹಚ್ಚಬೇಕು. ಇದಕ್ಕೆ -suffix-ಅಂತಾ ಹೇಳ್ತಾರ. ಉದಾ:

ನಿಯಮ II

Class	Classes
Glass	Glasses
Brush	Brushes
Dish	Dishes
Branch	Branches
Watch	Watches

ಜಾನಕಿ : ಒಂದೊಂದ ಉದಾಹರಣೆ ಸಾಕಪ್ಪಾ - !

ಜಾನ್ : ಒಂದು ಹೆಚ್ಚಿಗೆ ಹೇಳಿದರ ಏನಾದರೂ ತೊಂದರೇನಾ?

Mango	Mangoes
Hero	Heroes
Box	Boxes
Tax	Taxes

ಜಾನಕಿ : ಅಂತ್ಯದಲ್ಲಿ ಜೋಡಿಸಿದ್ದು 'suffix' - x ಇದಕ್ಕೆ -es -suffix

ಜಾನ್ : Very good, ಮುಂದಿನ ರೂಲ್ಸ್ ಬಾಳ ಸಿಂಪಲ್ ಅದ

ನಿಯಮ III

ನಾಮಪದದ ಕೊನೆಯ ಅಕ್ಷರ -y ಇದ್ದಲ್ಲಿ ಅದನ್ನು ತೆಗೆದು -ies ಜೋಡಿಸುವುದು -(suffix)

Baby	-	Babies
Lady	-	Ladies
Story	-	Stories
City	-	Cities

ಇದಕ್ಕೆ ಒಂದು ಅಪವಾದ ಅದ

ಜಾನಕಿ : ಮತ್ತೇನು, ಕರ್‌ಡಿ ಬಿಟ್ಟಂಗ.

ಜಾನ್ : ಕರಡಿ ಅಲ್ಲ ಅಕ್ಷರ -y ಗಿಂತ ಮೊದಲ ಸ್ವರ ಬಂದಿದ್ದರ ಅಲ್ಲಿ ಕೇವಲ -s / suffix ಮಾಡಿದರೆ ಸಾಕು.

Boy	Boys
Toy	Toys

ಜಾನಕಿ : ಎರಡೂ ಒಂದ ರೀತಿಯದಲ್ಲವೇನೋ-?

ಜಾನ್ : ನೆನಪಾಗವಲ್ಲದು. ಮತ್ತೆ ಹೇಳ್ತೇನೆ. ಈಗ ಮುಂದ ಕೇಳು.

ನಿಯಮ IV

ನಾಮಪದದ ಅಂತ್ಯದಲ್ಲಿ -f, -fe ಇದ್ದರ, ಅವನ್ನ ತೆಗೆದು -ves ಜೋಡಿಸುವುದು.

Colf - Calves
Wolf - Wolves
Life - Lives
Wife - Wives

ಜಾನಕಿ : ಇಲ್ಲಿ ಅಪವಾದ ಇಲ್ಲೇನು?

ಜಾನ್ : ಓಡಬೇಡಾ. ಅಪವಾದ ಇರೋದ...

ಉದಾ: Chief - Chiefs
Roof - Roofs
Safe - Safes
Strife - Strifes

ಜಾನಕಿ : ಒಟ್ಟಿನ ಮೇಲೆ ಎಷ್ಟು ರೂಲ್ಸ್‌ಗಳಿವೆ?

ಜಾನ್ : ಹೆದರಬೇಡ. ಒಂದೊಂದ ಕಲಿಯುತ್ತಾ ನಡಿ. ಒಂದೊಂದ ಹೆಜ್ಜೆ ಇಡ್ತಾ ಇಡ್ತಾ ಕ್ರಮೇಣ ವೇಗದಿಂದ ಓಡಬಹುದಲ್ಲಾ...

ಜಾನಕಿ : ತತ್ವ ಹೇಳ ಬೇಡಾ. ಪಾಠ ಹೇಳು.

ಜಾನ್ : **ನಿಯಮ V**

i) ಕೆಲವು ನಾಮಪದದ ಮಧ್ಯದಲ್ಲಿರುವ ಸ್ವರ ಬದಲಾಯಿಸುವುದು.

Man - Men
Foot - Feet
Goose - Geese

ii) ಇನ್ನು ಕೆಲವು ಜೋಡಿ ಇರುವುದರಿಂದ ಅವುಗಳನ್ನು ಬಹುವಚನದಲ್ಲಿಯೆ (Plural) ಉಪಯೋಗಿಸಬೇಕು. ಅವುಗಳಿಗೆ ಏಕವಚನ ಇರುವುದಿಲ್ಲ (Scissors) ಕತ್ತರಿ, ಚಾಳೀಸು (Spectacles) ಹೀಗೆ (Trousers) ಮುಂತಾದವುಗಳು.

iii) ಕೆಲವು ನಾಮಪದಗಳಿಗೆ ಕೊನೆಯಲ್ಲಿ -s ಇದ್ದು ಅವು ಬಹುವಚನದಂತೆ ಕಾಣುತ್ತವೆ. ನಿಜವಾಗಿಯೂ ಅವುಗಳನ್ನು ಏಕವಚನದಲ್ಲಿಯೇ ಉಪಯೋಗಿಸುವುದು.

ಉದಾ : News, Physics, Mathematics, Innings,
News is good, Mathematics is difficult.

(iv) ಏಕವಚನದಲ್ಲಿ (Singular) ಮತ್ತು ಬಹುವಚನದಲ್ಲಿ (Plural) ನಾಮಪದದ ರೂಪ ಒಂದೇ ಇರುವುದು. ಸಂದರ್ಭಕ್ಕೆ ತಕ್ಕಂತೆ ಅರ್ಥ ಮಾಡುವುದು.

Sheep, Deer, Pair, Dozen. ಇತ್ಯಾದಿ

ಜಾನಕಿ : ಇದು ಉದ್ದ ಆಯಿತು. ಚಿಕ್ಕ ಚಿಕ್ಕದಾಗಿ ಹೇಳಪಾ ಮಾರಾಯಾ...

ಜಾನ್ : ಹೌದು ನೀನು ಹೇಳಿದಂತೆ ಮಾಡ್ತೇನಿ.

ನಿಯಮ VI

ಸಾಮೂಹಿಕ ನಾಮಪದಗಳು -s (Collective Nouns) ಬಹುವಚನದಲ್ಲಿಯೆ ಉಪಯೋಗಿಸುವುದು. ಅವು ಕಾಣಲಿಕ್ಕೆ ಏಕವಚನದಂತಿವೆ. Cattle, People, Poultry.

ಲಕ್ಷ್ಯ ಕೊಟ್ಟ ಕೇಳು

ಒಂದೇ ದೇಶದ ಜನರನ್ನು ಹೇಳುವಾಗ People ಎಂತಲೂ ಮತ್ತು ವಿವಿಧ ದೇಶಗಳ ಜನರನ್ನು ಒಟ್ಟಾಗಿ ಹೇಳುವಾಗ Peoples ಅಂತಲೂ ಹೇಳುವುದು.

Peoples of USA, UK, France, assembled in white hall.

ಜಾನಕಿ : ನಿಯಮಗಳೆಲ್ಲ ಮುಗಿದುವೆ.....

ಜಾನ್ : ಇನ್ನೊಂದಿದೆ. Compound word - ಸಂಯುಕ್ತ ನಾಮಪದದ ನೆನಪಿದೆಯೆ ?

ಜಾನಕಿ : ಇದೆ. Mother-in-law, Daughter-in-law ಹೌದಲ್ಲೋ

ನಿಯಮ VII

ಸಂಯುಕ್ತ ಪದಗಳಲ್ಲಿ ಮೊದಲಿನ ಶಬ್ದಕ್ಕೆ -s ಪ್ರತ್ಯಯ ಹಚ್ಚಿದರೆ ಅದು ಬಹುವಚನವೆಂದು ಪರಿಗಣಿಸುವರು.

ಉದಾ : Daughter-in-law - Daughters-in-law
Commander-in-chief - Commanders-in-chief
Man of war - Men of war.

ಕೊನೆಯ ಒಂದು ಮಾತಿದೆ ಕಿವಿಗೊಡು-

Singular ದಲ್ಲಿರುವ ಅರ್ಥ ಒಂದಾದರೆ ಬಹುವಚನದಲ್ಲಿ ಬೇರೆ ಇರುವ ಪದಗಳೂ ಇವೆ.

ಉದಾ : Good (ಒಳ್ಳೇದು, ಉತ್ತಮ) - Goods (ವಸ್ತುಗಳು)
Character (ನಡತೆ, ಶೀಲ) - Characters (ಲಕ್ಷಣಗಳು)
Force (ಶಕ್ತಿ) - Forces (ಸೈನ್ಯದ ತುಕಡಿ)

ಕೊನೆಯ ಹನಿ

ಕೆಲವು ಶಬ್ದಗಳ ಬಹುವಚನ ರೂಪ ಹೇಳು.
i) Janaki ii) Window iii) Passer-by
iv) Knife

ಜಾನಕಿ : i) ಅಂಕಿತನಾಮ - ಬಹುವಚನವಿಲ್ಲ (ii) Windows (iii) Passers-by (iv) Knives.

ಜಾನ್ : ಮುಂದಿನ ಪಾಠ 'ವಿಶೇಷಣ' (Adjective) ಕುರಿತು.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ ೫ ಅರ್ಥಕೊಟ್ಟಿದ್ದು, ಶಬ್ದದ ಸಮಾನಾರ್ಥಪದ ಹುಡುಕಿ, ನಂತರ ಉತ್ತರ ನೋಡಿ.

a. Calamity - ಅ. ಆಪತ್ತು ಬ. ಸುಖ ಕ.ಶಾಂತಿ ಡ. ಆನಂದ ಈ. ಆಶ್ಚರ್ಯ
b. Calibre - ಅ.ಮೂರ್ಖ ಬ. ಅಶಕ್ತ ಕ.ಸಾಮರ್ಥ್ಯ ಡ.ದೈಹಿಕ ಈ.ಕಲ್ಪನೆ
c. Callous - ಅ.ಸುಲಭ ಬ.ಸೂಕ್ಷ್ಮ ಕ. ಉಷ್ಣ ಡ.ದಯೆ ಈ.ಜಡ್ಡುಗಟ್ಟಿದ
d. Deface - ಅ. ಅಲಂಕರಿಸು ಬ.ರಕ್ಷಿಸು ಕ.ಸುಂದರ ಡ.ಸೋಲಿಸು ಈ.ವಿಕಾರ ಮಾಡು
e. Delicious - ಅ.ರುಚಿಯಾದ ಬ.ಕಹಿ ಕ.ವಾಸನೆ ಡ.ಅಂದವಾದ ಈ.ಸಂತೋಷ
f. Deviate - ಅ.ಮುಂದುವರಿ ಬ.ಒತ್ತಾಯಿಸು ಕ. ಅಪನಂಬಿಕೆ ಡ.ಜಾಣ ಈ. ಅಡ್ಡದಾರಿ ಹಿಡಿ

ಉತ್ತರಗಳು:
a. ಅ b.ಕ c. ಈ d. ಈ e. ಅ f. ಈ

ವೃತ್ತಿ ಆಯ್ದುಕೊಳ್ಳುವ ಮುನ್ನ....

ವಾರಾಣಾಸಿಯ ಟಿಕೆಟ್ ಹಿಡಿದು ರಾಮೇಶ್ವರದ ಉಗಿಬಂಡಿಯನ್ನೇರುವುದು ಯೋಚನೆಯ ಅಭಾವವನ್ನು ಸೂಚಿಸಿದರೆ, ಕೊಂಕಣ ಸುತ್ತಿ ಮೈಲಾರಕ್ಕೆ ತಲುಪುವುದು ಯೋಜನೆಯ ಅಭಾವವನ್ನು ಹೊರಗೆಡುವುತ್ತದೆ. ಯುವಕರ ಅಸಮರ್ಥತೆಗೆ ಇವು ಎರಡು ಮುಖ್ಯ ಕಾರಣಗಳು. ಇದರ ಪರಿಣಾಮ?

■ ಡಾ. ಟಿ. ಕೆ. ತಾಪಸ್

ಮಧ್ಯಮ ವರ್ಗದ ಪ್ರಾಥಮಿಕ ಶಾಲಾ ಶಿಕ್ಷಕರೊಬ್ಬರ ಮಗಳಾದ, ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದ ಮಯೂರಿ ತನ್ನ ಸಹಪಾಠಿ, ವೈದ್ಯ ಕುಟುಂಬದ ಶ್ರೀಮಂತ, ಇಂಗ್ಲೀಷ್ ಮಾಧ್ಯಮ ವಿದ್ಯಾರ್ಥಿ ಮಯೂರ್‌ಗೆ ಸವಾಲೆಸೆದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ ೯೦ ಅಂಕ ಗಳಿಸಿ, ೧೦ ಅಂಕಗಳಿಂದ ಮಯೂರ್‌ನನ್ನು ಹಿಂದೆ ತಳ್ಳಿ ಪ್ರಶಂಸೆ ಗಳಿಸಿದ್ದು ನಮ್ಮೂರಲ್ಲಿ ಈಗ ಬಹಳ ಹಳೆಯ ಕಥೆ. ಆದರೆ ಮುಂದೆ ಹತ್ತೇ ತಿಂಗಳಲ್ಲಿ ಮಯೂರಿ ಮಾನಸಿಕ ರೋಗಿಯಾದರೆ ಮಯೂರ ಉಂಡಾಡಿಯಾಗಿ ತಿರುಗಾಡುತ್ತಿದ್ದ. ಕಾರಣ?

ಮಯೂರಿಯ ನೆರಮನೆ ಅರಮನೆ ಯಾಗಿತ್ತು. ಅದೊಂದು ಇಂಜಿನಿಯರರ ಮನೆ. ಮನೆಯಲ್ಲಿ ಆಳು-ಕಾಳು-ಕಾರುಗಳ ವೈಭವ. ಬಂಗಾರ ಹೇರಿಕೊಂಡ ಮಹಿಳೆಯರು; ವಿಲಾಸೀ ಜೀವನದ ಪುರುಷರು; ಸಿರಿವಂತರ ಸಂಗ. ಹದಿಹರೆಯದ ಹುಡುಗಿಯನ್ನಾಕರ್ಷಿಸಲು ಇನ್ನೇನು ಬೇಕು? ಆದರೆ ಇಂಜಿನಿಯರೇ ಆಗಬೇಕೆಂಬ ಅದಮ್ಯ ಬಯಕೆ. ಮನೆಯಲ್ಲಿ ವಿರೋಧ. ಮಯೂರಿ ಛಲಗಾತಿ. ಇಂಜಿನಿಯರಿಂಗ್‌ನಲ್ಲಿ ಸ್ಥಳವೂ ಸಿಕ್ಕಿತು. ಆದರೆ, ಅಸಂಗತ ಆಸಕ್ತಿಗಳಿಂದ ಮಾತ್ರ ಜೀವನದಲ್ಲಿ ಯಶಸ್ಸು ಸಿಗುವಂತಿದ್ದರೆ ಅದು ಅಗ್ಗದ ಸರಕಾಗಿ ಬಿಡುತ್ತಿತ್ತು. ವರ್ಗದಲ್ಲಿ, ವರ್ಗ ಪರೀಕ್ಷೆಗಳಲ್ಲಿ ಆದ ಸರಣಿ ಅಪಮಾನ, ಸೋಲುಗಳಿಂದ ಜರ್ಜರಿತಳಾದ ಮಯೂರಿ ಮಾನಸಿಕ ರೋಗಿಯಾದಳು.

ಮಯೂರ ಸರ್ವಸಮರ್ಥ. ಕುಟುಂಬದ ಎಲ್ಲರೂ ವೈದ್ಯರು. ವೈದ್ಯನಾಗುವುದು ರೋಮಾಂಚಕ ಎಂದು ಭಾವಿಸಿದವನಿಗೆ ಅನಾಯಾಸವಾಗಿ ಸ್ಥಳವೂ ಲಭ್ಯ. ಆದರೆ ಓದಿನ ಶ್ರಮ ಹೆಚ್ಚಿದಂತೆ ಆತನ ಸಾಹಿತ್ಯಾರಾಧನೆಗೆ ಕಲ್ಲು ಬಿತ್ತು. ತನ್ನ ಪ್ರಾಣಕ್ಕೆ ಪ್ರಿಯವಾದುದೇನನ್ನೋ ಕಳೆದುಕೊಂಡ ಭಾವನೆ. ಜೀವನದಲ್ಲಿ ದೊಡ್ಡದೊಂದು ಶೂನ್ಯ. ತಾನು ಕೆಲಸಕ್ಕೆ ಬಾರದವನೆಂಬ ಭಾವನೆ. ಗೈದ ಶ್ರಮ ಮತ್ತು ಗಳಿಸಿದ ಅಂಕಗಳಿಗೆ ವಿಲೋಮಾನುಪಾತ. ಸ್ವಪ್ರತಿಷ್ಠೆಗೆ ಪೆಟ್ಟು, ಆತನ ಒಳಮನಸ್ಸು ಆಗ ಅವನಿಗೆ ತಿಳಿ ಹೇಳಿತು: 'ನೀನು ಸಾಹಿತಿಯಾಗಲು ಮಾತ್ರ ಲಾಯಕ್ಕು!' ತನ್ನ ಭಾವನೆಗಳಿಗೆ, ವಿಚಾರಗಳಿಗೆ ರೂಪ ಕೊಡಲು ಓದಿಗೆ ನಮಸ್ಕಾರ. ಆದರೆ ಓದನ್ನು ಮುಂದುವರೆಯಿಸಲು ಮನೆಯಲ್ಲಿ ಒತ್ತಾಯ. ಬರೆದ ಚುಟುಕನ್ನು-

ನೀನೆನ್ನನೀ ಜಗಕೆ ತಂದೆ
ಅದಕಾಗಿ ನೀನೆನ್ನ ತಂದೆ
ಹೌದು ನೀನೊಬ್ಬ ಖ್ಯಾತ ವೈದ್ಯ
ಆದರೆನಗಿಷ್ಟ ಬರೆಯುವುದು ಪದ್ಯ

ತಂದೆಗೆ ತೋರಿಸುವಷ್ಟು ಧೈರ್ಯವಿಲ್ಲ. ಪರಿಣಾಮ: ದೂರದೂರಿನಲ್ಲಿ ಪುಂಡ ಪೋಕರಿಗಳ ಸಹವಾಸದಲ್ಲಿ ಉಂಡಾಡಿ.

ಸಮಾಜಕ್ಕೆ ಉಪಕಾರಿಯಾಗಬಹುದಾಗಿದ್ದ ಎರಡು ಜೀವಗಳು ಕಾಡಿನ ಮಲ್ಲಿಗೆಯಾಗಿ ಹೋದ ಬಗೆಯಿದು! ಪ್ರೌಢ ಮಾಧ್ಯಮಿಕ ಶಾಲಾಂತ್ಯ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಎಲ್ಲ ಯುವಕ-ಯುವತಿಯರೂ ಎದುರಿಸಬೇಕಾದ ಅಗ್ನಿದಿವ್ಯವಿದು! ಅದುವೇ ಸಮರ್ಪಕ ವೃತ್ತಿ, ವೃತ್ತಿಮೂಲ ಶಿಕ್ಷಣದ ಆಯ್ಕೆ!

ವಂಶಪಾರಂಪರ್ಯವಾಗಿ ರಾಜಕಾರಣಿಯಾಗಿರುವವರನ್ನು ನೀವು ನೋಡಿದ್ದೀರಿ. ಆದರೆ ನಮಗೆ ವೈದ್ಯನಾಗಬೇಕೆಂಬ ಮಹತ್ವಾಕಾಂಕ್ಷೆ ಇದ್ದ ಮಾತ್ರಕ್ಕೆ ಮತ್ತು ನಿಮ್ಮ ತಂದೆ ಖ್ಯಾತ ವೈದ್ಯರೆಂಬುದರಿಂದಲೇ ಒಂದು ಸೊಳ್ಳೆಯನ್ನು ಹಿಂಸಿಸಲು ಹೆದರುವ ನೀವು ದಿನವೂ ಜಿರಲೆಯನ್ನು ತುಂಡರಿಸುವ ವೈದ್ಯಕೀಯ ವಿದ್ಯಾರ್ಥಿಯಾಗಲೇಬೇಕೆಂಬ ತೀರ್ಮಾನ ಎಷ್ಟು ಸರಿ? ಅದರಂತೆ ಸಾಗರದ ಅನಂತ ಜಲರಾಶಿಯನ್ನು ನೋಡಿದಾಗೊಮ್ಮೆ ತಲೆ ಧಿಮ್ ಎನ್ನುವ ನಿಮಗೆ ಹಡಗಿನಲ್ಲಿ ಇಂಜಿನಿಯರ್ ಆಗುವ ಬಯಕೆ ಎಷ್ಟು ತರ್ಕಶುದ್ಧ? ಯೋಚಿಸಿ.

ಮಾಧ್ಯಮಿಕ ಶಾಲಾ ಜೀವನ ಮುಕ್ತಾಯವಾಗುತ್ತಲೇ ನೀವು ನಿರ್ಧಾರ ಕೈಕೊಳ್ಳಬೇಕಾಗುತ್ತದೆ. ನನ್ನ ಜೀವನೋಪಾಯ ಎಂತು ಎಂಬುದರ ಕುರಿತು. ಆದರೆ ದುರ್ದೈವದಿಂದ ನನಗೇನು ಬೇಕು ಎಂಬುದನ್ನು ಕಂಡುಹಿಡಿಯಲು ಬಹಳಷ್ಟು ಯುವಕರು ಅಸಮರ್ಥರಾಗುವರು. ವಾರಾಣಾಸಿಯ ಟಿಕೆಟ್ ಹಿಡಿದು ರಾಮೇಶ್ವರದ ಉಗಿಬಂಡಿಯನ್ನೇರುವುದು ಯೋಚನೆಯ ಅಭಾವವನ್ನು ಸೂಚಿಸಿದರೆ, ಕೊಂಕಣ ಸುತ್ತಿ ಮೈಲಾರಕ್ಕೆ ತಲುಪುವುದು ಯೋಜನೆಯ ಅಭಾವವನ್ನು ಹೊರಗೆಡುವುತ್ತದೆ. ಯುವಕರ ಅಸಮರ್ಥತೆಗೆ ಇವು ಎರಡು ಮುಖ್ಯ ಕಾರಣಗಳು. ಇದರ ಪರಿಣಾಮ?

ನಮ್ಮ ದೇಶದ ಅಮೂಲ್ಯ ಸಂಪತ್ತಾದ ಮಾನವ ಶಕ್ತಿಯ ಪೂರ್ಣ ಪ್ರಮಾಣದ ಸದುಪಯೋಗ ಇಂದು ಆಗುತ್ತಿಲ್ಲ. ಕಲಿತು ಕುಳಿತವರು ಒಂದೆಡೆ ನಿರುದ್ಯೋಗದಿಂದ ನರಳುತ್ತಿದ್ದರೆ, ಇನ್ನೊಂದೆಡೆ ಅರ್ಹ, ನಿಪುಣ ಅಭ್ಯರ್ಥಿಗಳು ದೊರೆಯುತ್ತಿಲ್ಲವೆಂದು ವಾಣಿಜ್ಯೋದ್ಯಮ ಪತಿಗಳು ದೂರುತ್ತಿದ್ದಾರೆ. 'ವರ್ತುಲ ರಂಧ್ರಗಳಲ್ಲಿ ಚೌಕಾಕಾರದ ಗೂಟಗಳನ್ನು ತೂರಿಸುವ' ಮೂರ್ಖ ಪ್ರಯತ್ನ ಬಹಳೆಡೆ ನಡೆಯುತ್ತಿದೆ. ಇವೆಲ್ಲವುಗಳಿಗೂ ಮೂಲ ಕಾರಣ ವೃತ್ತಿ ಮತ್ತು ವೃತ್ತಿ ಮೂಲ ಶಿಕ್ಷಣಗಳನ್ನು ಆಯ್ಕೆ ಮಾಡುವಾಗ ನಾವು ಎಡವಿರುವುದು.

ತಮ್ಮ ವೃತ್ತಿ ನಿರ್ಧರಿಸಬೇಕಾದ ಯುವಕರು ಅನೇಕ ವ್ಯಕ್ತ ಪ್ರಭಾವಗಳಿಗೆ ಒಳಗಾಗುವುದು ಕಂಡುಬರುತ್ತದೆ.

ಪ್ರಾಯದ ಹೆಣ್ಣಿಗೇ 'ಸ್ವಯಂವರದ' ಸ್ವಾತಂತ್ರ್ಯ ನೀಡಿದ ನಾಡಿನಲ್ಲಿ ಇಂದು ಏನು ನಡೆಯುತ್ತಿದೆ? ತಮ್ಮ ಬೇಕು-ಬೇಡಗಳ ಸ್ಪಷ್ಟ ಕಲ್ಪನೆಯಿಂದ ಅಪಕ್ವ ವಯಸ್ಸಿನ ಹಲ ಹದಿ ಹರೆಯದವರು ತಂದೆ-ತಾಯಿಗಳ 'ಆತನಿಗೆ/ ಆಕೆಗೆ ಏನು ತಿಳಿಯುತ್ತದೆ? ಅವರಿಗೆ ಯಾವುದು ಹಿತವೆಂಬುದು ನಮಗೆ ಗೊತ್ತು' ಎಂಬ ನಿರ್ಧಾರದ ಹೇರಿಕೆಗೆ ಬಲಿಯಾಗುತ್ತಾರೆ. 'ತಂದೆ-ತಾಯಿ ಆಟ' ಆಡುತ್ತಿರುವಾಗ ಹರಳು-ಗಟ್ಟಿದ ತಮ್ಮ ಬಾಲ್ಯದ ಕನಸುಗಳನ್ನು ಸಾಕಾರಗೊಳಿಸಲೂ ಯತ್ನಿಸಬಹುದು. ತಂದೆ-ತಾಯಿಗಳು ವೃತ್ತಿಯ ಬಗೆಗಿನ ತಮ್ಮ ಭಗ್ನ ಕನಸುಗಳನ್ನು ಮಕ್ಕಳ ಮುಖಾಂತರ ನನಸಾಗಿಸಲು ಪ್ರಯತ್ನಿಸಬಹುದು.

ಕೆಲವು ಗಟ್ಟಿಗೊಂಡ ಮಿಥ್ಯೆಗಳಿವೆ: ವಿಜ್ಞಾನ ತಾಂತ್ರಿಕವಾದುದು; ಕಲೆ, ವಾಣಿಜ್ಯ ವರ್ಣನಾತ್ಮಕವಾದವು. ಮೇಧಾವಿಗಳಿಗೆ ವಿಜ್ಞಾನದ ಅಭ್ಯಾಸ ಸೂಕ್ತ; ನನಗೆ ಅತ್ಯುತ್ತಮ ಅಂಕಗಳು ಬಂದಿರುವದರಿಂದ ನನ್ನ ಆಯ್ಕೆ ವಿಜ್ಞಾನವೇ, ಮುಂತಾದವು.....

ಹಿರಿಯರಿಂದ ಮಕ್ಕಳಲ್ಲಿ ಹರಿಯುವ ಮೂಢನಂಬಿಕೆಗಳೂ ಇವೆ. ವಿಜ್ಞಾನ ಓದುವುದು ಸಾಧನೆಗೆ ಸೋಪಾನ, ಯಶಸ್ಸಿನ ಹೆಬ್ಬಾಗಿಲು; ಕಲೆ, ವಾಣಿಜ್ಯಗಳಿಗೆ ಬೆಲೆಯೇ ಇಲ್ಲ; ವೃತ್ತಿ ಪ್ರಗತಿಯಲ್ಲಂತೂ ಅವುಗಳಿಗೆ ಸ್ಥಾನವೇ ಇಲ್ಲ. ವಿಜ್ಞಾನ ಸಾಮಾಜಿಕ ಅಂತಸ್ತಿನ ಸಂಕೇತವಾದುದರಿಂದ ನಿನಗದು ಹಿಡಿಸದಿದ್ದರೂ ನೀನು ಅದನ್ನು ಪ್ರೀತಿಸಿ, ಕೈವಶ ಮಾಡಿಕೊಂಡು ಯಶಸ್ವಿಯಾಗಬೇಕು!

ಗುಂಪಿನಿಂದ ಗುಂಪಿಗೆ ವರ್ಗಾಯಿಸಲ್ಪಡುವ ಪೂರ್ವ ನಿರ್ಧಾರಿತ ನಂಬುಗೆಗಳೂ, ಪೂರ್ವಾಗ್ರಹಗಳ ಪಾತ್ರವನ್ನೂ ಕಡೆಗಣಿಸುವಂತಿಲ್ಲ. ಹರಿಯಾಣದ ಕಲ್ಪನಾ ಚಾವ್ಲಾ ಅಮೇರಿಕದಲ್ಲಿ ಆಗಸಕ್ಕೆ ನೆಗೆದು ಹುಡುಗರ ತಲೆಯ ಮೇಲೆ ಹಾರಾಡುತ್ತಿದ್ದರೂ 'ಹುಡುಗಿಯರು ಕಲೆಗೆ ಮಾತ್ರ ಲಾಯಕ್ಕು; ಆದುದರಿಂದ ಹುಡುಗರಿಗೆ ಅದು ನಿಷಿದ್ಧ' ಎಂದೋ 'ಎಲ್ಲೂ ಸಲ್ಲದವ ಕಲೆಗೆ ಸಲ್ಲುತ್ತಾನೆ; ಅಷ್ಟು ಜಾಣನಲ್ಲದವ, ವ್ಯಾಪಾರೋದ್ಯಮಿಗಳ ಮಕ್ಕಳು ವಾಣಿಜ್ಯ ಓದಬೇಕು; ಕಲೆ, ವಾಣಿಜ್ಯ ಪದವಿಗಳನ್ನು (ವಿಜ್ಞಾನ ವಿದ್ಯಾರ್ಥಿಗಳಂತಲ್ಲ) ವಿದ್ಯಾಲಯಗಳಿಗೆ ಹೋಗದೇ ಗಳಿಸಬಹುದು' ಎಂಬ ವಿಚಾರಗಳು ಜನಜನಿತವಾಗಿವೆ. ವಿಜ್ಞಾನ ವಿದ್ಯಾರ್ಥಿಗಳು ಸತತಾಭ್ಯಾಸಿಗಳಾದುದರಿಂದ ಅವರು ತಂತ್ರಜ್ಞಾನ ಆಯ್ದುಕೊಳ್ಳಬೇಕು. ಉತ್ತೀರ್ಣರಾದೊಡನೆ ಅವರಿಗೆ ಕೆಲಸ ಸಿಗುವುದು ಎಂಬುದು ಇನ್ನೊಂದು ಪ್ರಚಲಿತ ತಿಳುವಳಿಕೆ.

ಅನನುಭವಿ ವೃತ್ತಿ ಮಾರ್ಗದರ್ಶನ ಸಂಸ್ಥೆಗಳನ್ನೂ ಕಡೆಗಣಿಸುವಂತಿಲ್ಲ. ನಿನ್ನ ಶಬ್ದಸಂಗ್ರಹ ವಿಶಾಲವಾಗಿದೆ. ನೀನು ಲೇಖಕನಾಗಲು ಅರ್ಹ ಎಂಬ ಅಸಂಬದ್ಧ ಮಾರ್ಗದರ್ಶನ ನೀಡುವವರು, ಶಬ್ದ ಸಂಗ್ರಹಕ್ಕಿಂತ ಹೆಚ್ಚಾಗಿ ಲೇಖಕನಾಗಿ ಯಶಸ್ವಿಯಾಗಲು ವಸ್ತುನಿಷ್ಠ ವೈಚಾರಿಕತೆ, ಸ್ವಾನುಭವದ ಶ್ರೀಮಂತಿಕೆ, ಜೀವನಾದರ್ಶಗಳ ಕಲ್ಪನೆ, ನಂಬುಗೆ ಮುಂತಾದವುಗಳು ಮಹತ್ವವೆಂಬುದರತ್ತ ಲಕ್ಷ್ಯ ಹರಿಸಿರುವುದಿಲ್ಲ.

ಹಾಗಾದರೆ ನೀವು ಅರ್ಹರಾಗುವ, ಯಶಸ್ವಿಯಾಗುವ ವೃತ್ತಿಯನ್ನು ಆಯ್ದುಕೊಳ್ಳುವುದು ಹೇಗೆ? ಈ ವಿಚಾರಗಳನ್ನು ಗಮನಿಸಿ.

ನಿಮ್ಮ ಬಗೆಗೆ ಬೇರೆಯವರಿಗೆ ತಿಳಿಯದಿರಬಹುದು. ಆದರೆ ನಿಮ್ಮ ಬಗೆಗೆ ನಿಮಗೂ ತಿಳಿಯದೇ ಇರಬಹುದು. ಆದುದರಿಂದ 'ಪ್ರಾಮಾಣಿಕ ಆತ್ಮಶೋಧನೆ' ಮೊದಲ ಹೆಜ್ಜೆ. ನಿಮ್ಮ 'ಒಳಧ್ವನಿ'ಯನ್ನು ಹತ್ತಿಕ್ಕಬೇಡಿ.

ನಿಮ್ಮ ನೈಜ ಆಸಕ್ತಿಗಳೇನು ಎಂದು ಕಂಡುಕೊಳ್ಳಿ, ನೀವು ಅನೇಕ ವೃತ್ತಿಗಳಲ್ಲಿ ಯಶಸ್ಸು ಗಳಿಸಬಲ್ಲ ವಿಶಿಷ್ಟ ವ್ಯಕ್ತಿಯಾಗಿರಬಹುದು. ಹಾಗಿದ್ದರೆ, ಆದ್ಯತೆಯ ಮೇರೆಗೆ ಆಸಕ್ತಿಯ ವಿಂಗಡನೆ ಮಾಡಿ.

ಯಾವ ಆಸಕ್ತಿಗಳನ್ನು ವೃತ್ತಿಯಾಗಿ ರೂಪಾಂತರಿಸಲು ಸಾಧ್ಯ ಎಂದು ಗಂಭೀರವಾಗಿ ಚಿಂತಿಸಿ, ಹತ್ತು ವರ್ಷಗಳ ನಂತರ ವೃತ್ತಿ ಬದಲಾವಣೆಯು ಸಾಹಸ, ಅಶಕ್ಯ ಎಂದೆನಿಸುವಾಗ ಸಹ ನಿಮ್ಮ ಮೆಚ್ಚಿನ ಇಂದಿನ ಆಯ್ಕೆ ಲಾಭದಾಯಕವೇ, ಅರ್ಥಪೂರ್ಣವೇ ಎಂದು ಆಲೋಚಿಸಿ. ಆ ಜೀವನ ಸುಖ ಕೊಡುವ

ಕ್ಲರ್ಕ್ ಹುದ್ದೆಗಳಿಗೆ ನೇಮಕಾತಿ

ಸಿಬ್ಬಂದಿ ನೇಮಕಾತಿ ಆಯೋಗ (SSC) ಕ್ಲರ್ಕುಗಳ ನೇಮಕಾತಿಗಾಗಿ 'ಸ್ಪರ್ಧಾತ್ಮಕ ಪರೀಕ್ಷೆಯನ್ನು ಏರ್ಪಡಿಸಿದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಗಿನ ಅರ್ಹತೆಯನ್ನು ಹೊಂದಿರಬೇಕು.

ವಿದ್ಯಾರ್ಹತೆ

ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.

ವಯಸ್ಸು

18ರಿಂದ 25 ವರ್ಷದವರು

2/8/ 1972 ಹಾಗೂ 1/8/79 ರೊಳಗೆ ಜನಿಸಿದವರಾಗಿರಬೇಕು.

ಶುಲ್ಕ

ಅಭ್ಯರ್ಥಿಗಳು ಅರ್ಜಿಯ ಜೊತೆಗೆ 25 ರೂಗಳ 'ಸೆಂಟ್ರಲ್ ರಿಕ್ರ್ಯೂಟ್‌ಮೆಂಟ್ ಫೀ ಸ್ಟಾಂಪ್ಸ್' ಗಳನ್ನು ಅಂಚೆ ಕಚೇರಿಯಲ್ಲಿ ಪಡೆದು ಅಥವಾ ಪೋಸ್ಟಲ್ ಆರ್ಡರ್‌ನ್ನು 'ಸ್ಟಾಫ್ ಸೆಲೆಕ್ಷನ್ ಕಮಿಷನ್' ಇವರ ಹೆಸರಲ್ಲಿ ಪಡೆದು ಕಳುಹಿಸಬೇಕು. ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳಿಗೆ ಶುಲ್ಕವಿಲ್ಲ.

ಪರೀಕ್ಷಾ ವಿಧಾನ

ಲಿಖಿತ ಪರೀಕ್ಷೆ ಮತ್ತು (ವಸ್ತುನಿಷ್ಠಮಾದರಿ)

ಟೈಪ್ ರೈಟಿಂಗ್ ಟೆಸ್ಟ್ (ಹಿಂದಿ ಅಥವಾ ಇಂಗ್ಲಿಷ್)

ಪರೀಕ್ಷಾ ಕೇಂದ್ರಗಳು

ಕರ್ನಾಟಕದಲ್ಲಿ ಬೆಂಗಳೂರು, ಧಾರವಾಡ, ಗುಲಬರ್ಗಾ, ಶಿವಮೊಗ್ಗ, ಮಂಗಳೂರು ಹಾಗೂ ಮೈಸೂರು.

ಭರ್ತಿಮಾಡಿದ ಅರ್ಜಿಗಳು ಜೂನ್ 30 ರೊಳಗಾಗಿ ಸ್ಟಾಫ್‌ಸೆಲೆಕ್ಷನ್ ಕಮಿಷನ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560 034. ಇವರನ್ನು ತಲುಪಬೇಕು. ಹೆಚ್ಚಿನ ವಿವರಗಳಿಗಾಗಿ ಜೂನ್ 6 ರ "Employment News" ನ್ನು ನೋಡಬಹುದು. ■

ಮಾರ್ಗವಿದಾಗಬಹುದೇ?

ನಿಮ್ಮ ಪಾಲಕರೊಡನೆ ನಿಜವಾದ ಮಾರ್ಗದರ್ಶಕ ಸಂಸ್ಥೆಯ ಸಹಾಯ ಪಡೆಯಿರಿ. ಅದನ್ನು ಕಾರ್ಯರೂಪಕ್ಕಿಳಿಸಿ.

ಹೀಗೆ ಜಾಗ್ರತೆಯಿಂದ ಆಯ್ದುಕೊಂಡ ವೃತ್ತಿಯ ಲಕ್ಷಣಗಳು ಕೆಳಗಿನಂತಿವೆ:

೧. ನೀವು 'ಗುಂಪಿನಲ್ಲಿ ಗೋವಿಂದ'ನಾಗಲು ಇಷ್ಟಪಡುವುದಿಲ್ಲ. ಈಗಾಗಲೇ ಸೇವಾವಕಾಶಗಳ ಇಚ್ಛುಕರಿಂದ ತುಂಬಿ ತುಳುಕುತ್ತಿರುವ ವೃತ್ತಿಗಳಿಂದ ಸಾಧ್ಯವಿದ್ದಷ್ಟು ದೂರವಿರಲು ಪ್ರಯತ್ನಿಸುವಿರಿ. ಉದಾಹರಣೆಗೆ : ಅಮೇರಿಕೆಯಲ್ಲಿ ಇಪ್ಪತ್ತು ಸಾವಿರಕ್ಕಿಂತಲೂ ಹೆಚ್ಚು ವೃತ್ತಿ ಮಾರ್ಗಗಳಿವೆಯಂತೆ! ಆದರೆ ಅಲ್ಲಿಯ ಯುವಕ- ಯುವತಿಯರಿಗೆ ಐದಾರು ಮಾತ್ರ ಅತಿ ಪ್ರಿಯವಂತೆ!

೨. ನಿಮ್ಮ ಆಯ್ಕೆಯ ವೃತ್ತಿಗೆ ಅರ್ಹರಾಗಲು ಅವಶ್ಯವಿರುವ ತಯಾರಿ, ತರಬೇತಿ ನಿಮಗೆ ಆನಂದ ಕೊಡುತ್ತವೆ.

೩. ವೃತ್ತಿಯಲ್ಲಿಯ ನಿಮ್ಮ ದುಡಿತ ಮರೆತು ತೃಪ್ತಿ ಹೆಚ್ಚುತ್ತಾ ಹೋಗುತ್ತದೆ.

೪. ನಿಮ್ಮ ವೃತ್ತಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನ ನಿರಂತರವಾಗಿ ಸಾಗುತ್ತದೆ.

೫. ನಿಮಗೆ ಕೆಲವು ಸಾಮಾಜಿಕ ಜವಾಬ್ದಾರಿಗಳಿರುತ್ತವೆಯೆಂಬ ಅರಿವು ನಿಮ್ಮಲ್ಲುಂಟಾಗಿ ಅದನ್ನು ನಿಭಾಯಿಸುತ್ತಿರುವುದಕ್ಕಾಗಿ ಸಮಾಜದಲ್ಲಿ ನಿಮ್ಮ ಬಗೆಗೆ ಅಭಿಮಾನ ಮೂಡುತ್ತದೆ.

೬. ನಿಮ್ಮ ವೃತ್ತಿ ನಿಮಗೆ ಆರ್ಥಿಕ ಸಬಲತೆ, ಸಮೃದ್ಧಿ ನೀಡುತ್ತದೆ.

೭. ನಿಮ್ಮ ಉತ್ತರೋತ್ತರ ಅಭಿವೃದ್ಧಿ ನಿಮ್ಮ ತಂದೆ-ತಾಯಿ ಹಿತೈಷಿಗಳಿಗೆ ಸುಖ, ಸಂತೋಷ ತರುತ್ತದೆ.

೮. ನಿಮ್ಮ ವ್ಯಕ್ತಿತ್ವಕ್ಕೆ ಮೆರುಗು ಬರುತ್ತದೆ.

ವೃತ್ತಿ ಜೀವನಕ್ಕೆ ಕಾಲಿರಿಸುತ್ತಿರುವ ಯುವಕ ಯುವತಿಯರ 'ಬದುಕು', ಸ್ವಪ್ರಯತ್ನ, ಸರಿಯಾದ ಆಯ್ಕೆಯ ಮೂಲಕ 'ಬಾಳುವೆಯಾಗಲಿ'! ■

ಉದ್ಯೋಗ ಹುಡುಕುವ ಬಗೆ?

ಸರಕಾರದ ವಿವಿಧ ಕಾರ್ಯಾಲಯಗಳು, ಕಾರ್ಯಾಗಾರಗಳು, ವಾಣಿಜ್ಯೋದ್ಯಮ ಸಂಸ್ಥೆಗಳಲ್ಲಿ ಸಾಮಾನ್ಯವಾಗಿದ್ದ ಮಾನವ ಶಕ್ತಿಯ ಬದಲು ಬಗೆ ಬಗೆಯ ಯಂತ್ರೋಪಕರಣಗಳನ್ನಿಂದು ಉಪಯೋಗಿಸಲಾರಂಭಿಸಿರುವದರಿಂದ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಆದರೆ ಬೆಳೆಯುತ್ತಿರುವ ಜನಸಂಖ್ಯೆ ಉದ್ಯೋಗವನ್ನು ಮಾತ್ರ ಅವಲಂಬಿಸಬೇಕಾದಂಥವರ ಸಂಖ್ಯೆಯನ್ನು ಒಂದೇ ಸಮನೆ ಹೆಚ್ಚಿಸುತ್ತಲಿದೆ. ಹೀಗಾಗಿ ನೌಕರಿಯೊಂದನ್ನು ದೊರಕಿಸುವದು ಯಶಸ್ವಿಯಾಗಿ ಬೇಟೆಯಾಡಿದಂತಾಗಿದೆ. ಸೂಕ್ತವಾದ ಬಂದೂಕು ಶೋಧ ದೀಪಗಳೊಡನೆ ಅಟ್ಟಣೆಕಟ್ಟಿ ಸಂಗಾತಿಗಳೊಡನೆ ಪ್ರತೀಕ್ಷಿಸುತ್ತ ಬೇಟೆ ಸಿಕ್ಕೊಡನೆ ಗೆಲುವಿನ ಕೇಕೆ ಹಾಕುವಂತೆ ನೌಕರಿ ದೊರಕಿಸುವಲ್ಲಿಯೂ ಯೋಜನಾಬದ್ಧ ಪ್ರಯತ್ನ ಅಗತ್ಯವಾಗಿದೆಯೆಂದು ತರುಣರಿಗೆ ಮನಗಾಣಿಸುವುದೇ ಈ ಲೇಖನದ ಗುರಿ. ಕೆಳಗಿನ ವಿಷಯಗಳ ಕುರಿತು ತಿಳಿಯೋಣ.

ನೌಕರಿಯ ಆಯ್ಕೆ

ಇದು ಉದ್ಯೋಗಾರ್ಥಿಗಳು ಕೈಕೊಳ್ಳಬೇಕಾದ ಮೊಟ್ಟಮೊದಲ ಪ್ರಮುಖ ನಿರ್ಧಾರ.

ಎಲ್ಲರೂ ಎಲ್ಲ ಕೆಲಸಗಳನ್ನೂ ಸಮರ್ಪಕವಾಗಿ ಪೂರೈಸುವುದು ಸಾಧ್ಯವಿದ್ದಿದ್ದರೆ ನಮ್ಮ ಜನಜೀವನದ ಸ್ವರೂಪವು ಇಂದಿನಂತಿರುತ್ತಿರಲಿಲ್ಲ. ಇಂಥ ಸಾಧ್ಯತೆ ಅಪೇಕ್ಷಣೀಯ. ಆದರೆ ಅಲಭ್ಯ. ಲಲಿತೆಯು ಮಾಡಬಹುದಾದ್ದನ್ನು ಕವಿತೆಯು ಮಾಡಲಾರಳು; ಕೆಲ ಕೆಲಸಗಳನ್ನು ಸುರೇಶನು ಮಾತ್ರ ಲಕ್ಷಣವಾಗಿ ನಿರ್ವಹಿಸಬಲ್ಲ, ವೀರೇಶನಲ್ಲ-ಎಂಬುದನ್ನು ನಮ್ಮ ಸುತ್ತ-ಮುತ್ತ ಕಾಣುತ್ತೇವೆ. ಆದುದರಿಂದಲೇ 'ಈ ಕೆಲಸ ಅವನಿಗೇ ಹೇಳಿ ಮಾಡಿಸಿದ್ದು!' ಎಂದು ಉದ್ಗರಿಸುತ್ತೇವೆ. ಈ ವಿಚಾರದ ಜಾಡಿನಲ್ಲಿ ಯೋಚಿಸುತ್ತಾ ಸಾಗಿದರೆ ಸತ್ಯವು ಗೋಚರಿಸತೊಡಗಿ 'ನನ್ನರಿವೇ ನನಗೆ ಮೊದಲ ಗುರು' ಎಂಬುದು ಖಚಿತವಾಗುತ್ತದೆ. ನನ್ನ ಬಗೆಗೆ ನನಗೇ ಎಲ್ಲರಿಗಿಂತ ಹೆಚ್ಚು ತಿಳಿದಿರುವುದು ಸತ್ಯವಾದರೂ, ತಿಳಿದುಕೊಳ್ಳುವುದರತ್ತ ನಾವು ಗಮನವನ್ನು ಹರಿಸದಿರುವುದೂ, ಶಿಕ್ಷಕರು 'ಇದೋ ನಿನ್ನಲ್ಲಿ ಈ ವೈಶಿಷ್ಟ್ಯವಡಗಿದೆ; ಅದನ್ನು ಪ್ರಕಟಿಸು, ವೃದ್ಧಿಸು' ಎಂದು ಸಲಹೆ ನೀಡಿದರೂ ಅದನ್ನು ಉಪೇಕ್ಷಿಸುವುದೂ, ವಾಸ್ತವ ಸತ್ಯ. ಆದುದರಿಂದ ಎಲ್ಲಕ್ಕಿಂತ ಶ್ರೇಷ್ಠ ಹಾಗೂ ಮೊಟ್ಟ ಮೊದಲನೆಯ ಹೆಜ್ಜೆ: ನಮ್ಮನ್ನು ನಾವು ಅರಿತುಕೊಳ್ಳುವುದು! ಈ ಅರಿವು ನೌಕರಿಯ ಆಯ್ಕೆಯಲ್ಲಿ ಮಹತ್ವದ ಪಾತ್ರವಾಗುತ್ತದೆ.

ಒಬ್ಬ ವ್ಯಕ್ತಿ ಇನ್ನೊಬ್ಬನಿಗಿಂತ ಭಿನ್ನವಾಗಿರುವಂತೆಯೇ ಎಲ್ಲ ಬಗೆಯ ಸೇವೆಗಳೂ ವ್ಯಕ್ತಿಗಳಿಂದ ಭಿನ್ನ ಭಿನ್ನ ಗುಣಾರ್ಹತೆಗಳನ್ನು ಬಯಸುತ್ತವೆಂಬುದರತ್ತ ನಮ್ಮ ಲಕ್ಷ್ಯ ಹರಿಯದಿದ್ದುದು ದುರ್ದೈವದ್ದು. ಈ ಅಜ್ಞಾನದಿಂದಾಗಿ, ಕೆಲಸವಿಲ್ಲದವರೆಲ್ಲರೂ ಲಭ್ಯ ಕೆಲಸಗಳತ್ತ ಓಡುತ್ತಿರುವದರಿಂದಲೇ ಗುರಿಮುಟ್ಟದ ಓಟಗಳಲ್ಲಿ ಅದು ಮುಗಿದು ದುಃಖ, ಅಪಮಾನ, ನಿರಾಶೆ ಇತ್ಯಾದಿಗಳಲ್ಲಿ ಪರ್ಯವಸಾನಗೊಳ್ಳುತ್ತಿದೆ. ಮುಕ್ತ ಮನಸ್ಸಿನಿಂದ ಈ ವಿಷಯದತ್ತ ಚಿಂತಿಸೋಣ.

ನಿಮ್ಮಲ್ಲಿ ಅದಮ್ಯ ಆತ್ಮವಿಶ್ವಾಸ ಹಾಗೂ ಮನಸ್ಸಿಗೆ ತಕ್ಕ ಪ್ರಬುದ್ಧತೆಯಿದೆಯೇ? ಹಾಗಿದ್ದರೆ ನೀವು ಉದ್ಯೋಗಿಗಳ ಸಮೂಹದಲ್ಲಿ ಒಡೆದು ಕಾಣುವಿರಿ. ಕಾರ್ಖಾನೆಗಳ ಉದ್ಯೋಗಗಳಿಗೆ ನೀವು ಸರಿ ಹೋಗುತ್ತೀರಿ. ನೀವು ಕಾರ್ಮಿಕ ಮುಖಂಡರಾಗಿ ಯಶಸ್ವಿಯಾಗುವಿರಿ.

ನಿಮ್ಮ ಪ್ರತಿ ಕೆಲಸಗಳಲ್ಲಿ ನೀವು ಶ್ರದ್ಧೆ ವಹಿಸುತ್ತೀರಿ. ಎಲ್ಲ ವಿಷಯಗಳಲ್ಲೂ ನಿಯಮ ಪಾಲನೆಯ ಎಚ್ಚರ ವಹಿಸುವುದು ನಿಮಗೆ ಬಹು ಪ್ರೀತಿಯದು. ಹಾಗಿದ್ದರೆ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ಉದ್ಯೋಗ ಅರಸಿ.

ಸೂಕ್ತ ನಿರ್ಧಾರಗಳನ್ನು ಸಮಯ ಹಾನಿಯಿಲ್ಲದೇ ತೆಗೆದುಕೊಳ್ಳುವದು, ತೆಗೆದುಕೊಳ್ಳುವ ನಿರ್ಧಾರಗಳ ಬಗೆಗೆ ಸಾಕಷ್ಟು ವಿವೇಚಿಸುವದರಲ್ಲಿ ನೀವು ಅತ್ಯಾಸಕ್ತರು. ಹಾಗಾದರೆ ವ್ಯಾಪಾರೋದ್ಯಮ ಕ್ಷೇತ್ರ ನಿಮಗೆ ಸೂಕ್ತವಾದುದು.

ಎಂಥ ಕಠಿಣ ಸಂದರ್ಭಗಳಲ್ಲೂ ಅಥವಾ ತುರ್ತು ಪರಿಸ್ಥಿತಿಯಲ್ಲೂ ನಿಮ್ಮ ಸಮತೋಲ, ಸಹನೆ ನಿಮ್ಮ ಆಧೀನದಲ್ಲಿಯೇ ಉಳಿಯುತ್ತಿದ್ದು ಆಗಲೂ ಸಹ ನೀವು ತಣ್ಣಗಿನ ವ್ಯಕ್ತಿಯಾಗಿ ಸಾರಾಸಾರ ವಿಚಾರ ಮಾಡಬಲ್ಲವರಾಗಿದ್ದರೆ ನೀವು ಉಚ್ಚಸ್ತರದ ಆಡಳಿತ, ಆರಕ್ಷಕ ಹುದ್ದೆಗಳಲ್ಲಿ "ಹೌದೆನ್ನಿಸಿ" ಕೊಳ್ಳುವಿರಿ.

ಜನರ ಸಮಸ್ಯೆಗಳನ್ನು ತಿಳಿಯುವತ್ತ ಆಸಕ್ತಿ ವಹಿಸುವುದು. ನಿಮ್ಮ ವಿಚಾರಧಾರೆಯತ್ತ ಜನರ ಮನವೊಲಿಸಿ ಅವರನ್ನತ್ತಕೊಂಡೊಯ್ಯುವುದು ನಿಮಗೆ ಸಾಧ್ಯವಿದ್ದರೆ ಸಾಮಾಜಿಕ ಸೇವಾ ಸಂಸ್ಥೆಗಳನ್ನು ಸೇರಲು ನೀವು ಲಾಯಕ್ಕು.

ಅಪರಿಚಿತರನ್ನು ಕೂಡಲೇ ಮಿತ್ರರನ್ನಾಗಿಸಿಕೊಳ್ಳುವ ಕಲೆ ನಿಮಗೆ ಸಿದ್ಧಿಸಿದ್ದರೆ, ಯಾರೊಡನಾದರೂ ಹೊಂದಿಕೊಂಡು ನಗುನಗುತ್ತಾ ಜೀವಿಸವುದು ನಿಮಗೆ ಸಾಧ್ಯವಿದ್ದರೆ ಹೊಸ ಹೊಸ ವಸ್ತುಗಳನ್ನು ಮಾರುವ ಉದ್ಯೋಗದಲ್ಲಿ ಖ್ಯಾತನಾಮರಾಗುವಿರಿ.

ಇತರರನ್ನು ನಿಮ್ಮತ್ತ ಆಕರ್ಷಿಸಿ ನಿಮ್ಮ ವಿಚಾರಗಳನ್ನು ಅವರು ಸ್ವಪ್ರೇರಣೆಯಿಂದಲೇ ಒಪ್ಪುವಂತೆ ಮಾಡುವ ತರ್ಕಬದ್ಧ ಕಲೆ ನಿಮ್ಮಲ್ಲಿದ್ದರೆ ಬ್ಯಾಂಕ್ ಅಥವಾ ವಿಮಾ ಕ್ಷೇತ್ರಗಳಂಥವನ್ನು ನೀವು ಪ್ರವೇಶಿಸಿ ಯಶಸ್ಸು ಕಾಣಬಹುದು.

ನಿಮಗೆ ಹಗಲು-ರಾತ್ರಿ ಕೆಲಸ ಮಾಡುವ ಆರೋಗ್ಯ ಸಂಪತ್ತು ಇದೆ. ನಿಮ್ಮ ಸಹೋದ್ಯೋಗಿಯಿಂದ ಬಿಡುಗಡೆಯಾಗುವ ತನಕವೂ ನೀವು ಒಂದೇ ಬಗೆಯ ಪರಿಣತಿಯಿಂದ ಕೆಲಸ ಮಾಡಬಲ್ಲಿರಿ. ಅಕಾಲಿಕ, ಆಕಸ್ಮಿಕ ಕರೆಗಳಿಗೂ ನೀವು ಮುಖ ಚಿಕ್ಕದು ಮಾಡಿಕೊಳ್ಳುವುದಿಲ್ಲ. ಜೀವನೋತ್ಸಾಹ, ಮಾನವ ಸೇವೆಗಳಲ್ಲಿ ನಿಮಗೆ ಸಾರ್ಥಕತೆ ಎನಿಸುತ್ತದೆ. ನೀವು ಆರೋಗ್ಯ ಸೇವೆ, ಅತ್ಯಾವಶ್ಯಕ ಸೇವೆಗಳು, ಪ್ರಸಾರಮಾಧ್ಯಮಗಳಲ್ಲಿ ಹೆಸರು ಗಳಿಸುತ್ತೀರಿ.

ತೆಳ್ಳಗಿದ್ದ, ಉದ್ದನೆಯ ನಿಮ್ಮ ಕೈ ಬೆರಳುಗಳು ನೋಡಲು ಅತ್ಯಂತ ಆಕರ್ಷಕವಾಗಿವೆ! ಅವುಗಳನ್ನು ಹಾಗೆಯೇ ವ್ಯರ್ಥಗೊಳಿಸಬೇಡಿ. ಸೂಕ್ಷ್ಮ ಯಂತ್ರಗಳ ಜೋಡಣೆ ಅವಶ್ಯಕವಾದ (ಗಣಕ ಯಂತ್ರ, ಗಡಿಯಾರ ಇತ್ಯಾದಿ) ಉದ್ದಿಮೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡು ಅಲ್ಲಿ ಎಲ್ಲರಿಂದಲೂ 'ಶಹಭಾಸ್' ಎನ್ನಿಸಿಕೊಳ್ಳಿ.

ಸರಸ್ವತಿ ನಿಮಗೆ ಒಲಿದಿದ್ದಾಳೆ; ಅಪ್ರತಿಮ ಕಲ್ಪಕತೆಯೂ ನಿಮ್ಮಲ್ಲಿದೆ; ಬೇರೆಯವರ ಮನದಲ್ಲಿ ನಿರಾಯಾಸವಾಗಿ ಇಣುಕಬಲ್ಲಿರಿ; ಮುಕ್ತ ಮನಸ್ಸಿನಿಂದ ಸುತ್ತಲಿನವರ ಜೀವನದ ಆಗುಹೋಗುಗಳನ್ನು ಗಮನಿಸಬಲ್ಲಿರಿ. ಹಾಗಾದರೆ ನೀವು ರಚನಾತ್ಮಕ ಲೇಖಕರಾಗಿ ಪ್ರಕಾಶಿಸುವಿರಿ.

ಈಗ ಉತ್ತರಿಸಿ : ನಿಮ್ಮನ್ನು ನೀವು ಅರಿತುಕೊಂಡಿರುವಿರಾ?

ನೌಕರಿಯ ಆಯ್ಕೆಯಲ್ಲಿ ಶಿಕ್ಷಣದ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಶಿಕ್ಷಣವನ್ನು ನಿರ್ಲಕ್ಷಿಸುವುದೂ, ಅದನ್ನು ಅರ್ಧಕ್ಕೇ ನಿಲ್ಲಿಸುವುದೂ ಪ್ರಮಾದಗಳು. ಆದರೆ ಕೇವಲ ಪರೀಕ್ಷೆಯ ಅಂಕಪಟ್ಟಿಗಳು, 'ಡಿಗ್ರಿ'ಗಳನ್ನು ಸಂಗ್ರಹಿಸುವದೂ ಸಹ ಶಿಕ್ಷಣದ ಗುರಿಯಲ್ಲ. ಜೀವನ ನಿರ್ವಹಣೆಯ ವಿವಿಧ ಮಾರ್ಗೋಪಾಯಗಳನ್ನು ಶಿಕ್ಷಣ ನಮ್ಮೆದುರು ತೆರೆಯಬೇಕು. ನಮ್ಮ ನಿಲುವುಗಳಂತೆಯೇ ನಮ್ಮ ಒಲವುಗಳನ್ನೂ ಶಿಕ್ಷಣವು ಬದಲಾಯಿಸಬಹುದಾದಷ್ಟು ಬಲಯುತವಾಗಿದೆ.

ಪ್ರೌಢಶಾಲಾಂತ್ಯ ಪರೀಕ್ಷೆಗೆ ಅಣಿಯಾಗುವ ಹಂತದಲ್ಲಿಯೇ ನೀವು 'ನಾನು ಯಾವ ರಂಗದಲ್ಲಿ ಸೇವೆ ಸಲ್ಲಿಸಬೇಕು' ಎಂಬುದನ್ನು ನಿರ್ಧರಿಸಿ. ಅದಕ್ಕನುಗುಣವಾಗಿ ವಿಷಯಗಳನ್ನು ಆಯ್ದುಕೊಂಡಿರಬೇಕು. ಆ ದಿಶೆಯಲ್ಲಿ ಯೋಜನಾಬದ್ಧವಾಗಿ ಹೆಜ್ಜೆಯಿರಿಸಬೇಕು. ಅಂದರೆ ನಿಮ್ಮ ಪರೀಕ್ಷಾ ಪರಿಣಾಮಗಳು ಎಷ್ಟರ ಮಟ್ಟಿಗೆ ನಿಮ್ಮ ಗುರಿಯತ್ತ ನಿಮ್ಮನ್ನು ಕೊಂಡೊಯ್ದಿವೆಯೆಂಬ ವಸ್ತುನಿಷ್ಠ ಕಲ್ಪನೆ ನಿಮಗುಂಟಾಗುವುದು. ಇಂಥ ಅರಿವು ನಿಮಗೆ ಇರುವುದು ಅವಶ್ಯಕ. ಏಕೆಂದರೆ ಉದ್ಯೋಗದಾತರು ತಮ್ಮ ಅರ್ಜಿ ನಮೂನೆಗಳಲ್ಲಾಗಲೀ, ಸಂದರ್ಶನಗಳಲ್ಲಾಗಲೀ, 'ನಿಮ್ಮ ಓದಿನ ಗುರಿ ಏನು?', 'ನೀವು ವೈದ್ಯಕೀಯ ವಿಭಾಗಕ್ಕೇ ಸೇರಿದ್ದೇಕೆ?', 'ನಿಮ್ಮ ಶಿಕ್ಷಣ ನಮ್ಮ ಸಂಸ್ಥೆಗೆ ಸಲ್ಲಿಸಬಹುದಾದ ವಿಶಿಷ್ಟ ಕೊಡುಗೆ ಯಾವುದು?' ಮುಂತಾದ ಪ್ರಶ್ನೆಗಳನ್ನು ಕೇಳಬಹುದು. ಇವುಗಳ ಬಗೆಗೆ ನೀವು ಪೂರ್ಣ ಚಿಂತನೆ ಮಾಡಿರಲೇಬೇಕು.

ನೀವು ಸೇರಬೇಕಾದ ಸೇವಾರಂಗವನ್ನು ದುಡುಕಿನಿಂದ, ಅಶಾಸ್ತ್ರೀಯವಾಗಿ ನಿರ್ಧರಿಸುವದು ಸಲ್ಲ. ನಿಮ್ಮ ತಂದೆ, ತಾಯಿ ಅಥವಾ ನೀವು ಮನಸೋತಿರುವ ವ್ಯಕ್ತಿ ಮಾಡುತ್ತಿರುವದನ್ನೇ ನೀವೂ ಅನುಕರಿಸಬೇಕಿಲ್ಲ. ವಿಧವಿಧದ ನೌಕರಿಗಳನ್ನು ಪ್ರಚುರಪಡಿಸುವ ಜಾಹೀರಾತು, ಪುಸ್ತಕ, ಸಾಕ್ಷ್ಯಚಿತ್ರಗಳ ಬಲೆಗೆ ನೀವು ಬೀಳಬೇಕಿಲ್ಲ. ನಿಮಗೆ ಆಸಕ್ತಿಯಿರುವ ರಂಗದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಿರಿ. ನಿಮ್ಮ ವಿದ್ಯಾಸಂಸ್ಥೆಗಳಲ್ಲಿ ದೊರೆಯುತ್ತಿರುವ ಮಾಹಿತಿಯನ್ನೂ ನಿಮ್ಮದಾಗಿಸಿಕೊಳ್ಳಿ. ಉದ್ಯೋಗ ವಿನಿಮಯ ಕೇಂದ್ರಗಳಿಂದ ಮಾರ್ಗದರ್ಶನ ಪಡೆಯಿರಿ. ವಿಳಂಬವಾಗಲಿ, ಪರವಾಗಿಲ್ಲ, ನಿಮಗೇನು ಬೇಕು ಎಂಬುದನ್ನು ಕಂಡುಕೊಳ್ಳಿ. ಬಲವಂತದ ಅಸಾಮಯಿಕ ಮಾಘ ಸ್ನಾನ ಮಾಡಿ ಅಪಯಶಸ್ಸು ಎಂಬ ನಡುಕವನ್ನು ಎದುರಿಸಬೇಡಿ.

ನಿಮ್ಮ ಮೆಚ್ಚಿನ ನೌಕರಿಯೂ ಹೂ ಹಾಸಿಗೆಯಾಗಿರಬೇಕಿಲ್ಲ. ಇದ್ದಕ್ಕಿದ್ದಂತೆ ನೀವು ನಿಮ್ಮ ನೌಕರಿಯನ್ನು ಕಳೆದುಕೊಳ್ಳಬಹುದು,

ಬ್ಯೂಟಿ ಪಾರ್ಲರ್ ತರಬೇತಿ

ನೆಲಮಂಗಲದ ಸಮೀಪ ಅರಿಶಿನಕುಂಟೆಯಲ್ಲಿ ಸ್ಥಾಪಿತವಾಗಿರುವ ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ (ರುಡ್‌ಸೆಟ್)ಯು ಬರುವ ಆಗಸ್ಟ್ ತಿಂಗಳಲ್ಲಿ ಮಹಿಳೆಯರಿಗಾಗಿ ಒಂದು ತಿಂಗಳ 'ಬ್ಯೂಟಿ ಪಾರ್ಲರ್' ತರಬೇತಿಯನ್ನು ನಡೆಸಲಿದೆ. 18 ರಿಂದ 35 ವಯಸ್ಸಿನ ಮಿತಿಯಲ್ಲಿರುವ ಕನ್ನಡ 'ಓದು ಬರಹ ಬಲ್ಲ ಮಹಿಳೆಯರು' ಅರ್ಜಿ ಸಲ್ಲಿಸಬಹುದು. ತರಬೇತಿಯು ಪೂರ್ಣವಾಗಿ ಉಚಿತವಾಗಿದ್ದು ಉಚಿತ ಊಟ ವಸತಿ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಆಸಕ್ತರು ಅರ್ಜಿ ಸಲ್ಲಿಸಬೇಕಾದ ವಿಳಾಸ ನಿರ್ದೇಶಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಚೆಕ್ ಪೋಸ್ಟ್ ಹಿಂಭಾಗ, ಅರಿಶಿನಕುಂಟೆ, ನೆಲಮಂಗಲ - ೫೬೨ ೧೨೩. ದೂರವಾಣಿ : (೦೮೧೧೮) ೨೩೧೬೬ ■

ಅಂಗವಿಕಲರಿಗೆ ತರಬೇತಿ

ನೆಲಮಂಗಲದ ಸಮೀಪ ಅರಿಶಿನಕುಂಟೆಯಲ್ಲಿರುವ ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆಯು (ರುಡ್‌ಸೆಟ್) ಬರುವ ಆಗಸ್ಟ್ ತಿಂಗಳಲ್ಲಿ ಅಂಗವಿಕಲರಿಗೆ 6 ತಿಂಗಳ ಸ್ವ-ಉದ್ಯೋಗ ತರಬೇತಿಯನ್ನು ನಡೆಸಲಿದೆ. ಇದರಲ್ಲಿ ಶೇಕಡಾ 40 ಕ್ಕೂ ಹೆಚ್ಚು ಅಂಗವಿಕಲತೆಯುಳ್ಳ ಕನ್ನಡ 'ಓದು ಬರಹ ಬಲ್ಲ ಅಂಗವಿಕಲರಿಗೆ' ಆದ್ಯತೆ ನೀಡಲಾಗುತ್ತದೆ.

ತರಬೇತಿಯು ಪೂರ್ಣವಾಗಿ ಉಚಿತವಾಗಿದ್ದು ತರಬೇತಿ ಸಮಯದಲ್ಲಿ ಉಚಿತ ಊಟ ಹಾಗೂ ವಸತಿ ವ್ಯವಸ್ಥೆ ಮಾಡಲಾಗುತ್ತದೆ. ಈ ತರಬೇತಿಯಲ್ಲಿ ಒಂದು ತಿಂಗಳ ಮೂಲ ತರಬೇತಿ ಹಾಗೂ 5 ತಿಂಗಳ ಕಾರ್ಯನಿರತ ತರಬೇತಿಯನ್ನು ನೀಡಲಾಗುತ್ತದೆ. ಕಾರ್ಯನಿರತ ತರಬೇತಿಯ ಅವಧಿಯಲ್ಲಿ ಸ್ಟೈಪಂಡ್ ನೀಡಲಾಗುತ್ತದೆ. ಆಸಕ್ತ ಅಂಗವಿಕಲರು ' ನಿರ್ದೇಶಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಚೆಕ್ ಪೋಸ್ಟ್ ಹಿಂಭಾಗ, ಅರಿಶಿನಕುಂಟೆ, ನೆಲಮಂಗಲ, ಪಿನ್ 562123. (ಫೋನ್ : 081180-23166) ಇವರಿಗೆ ಬರೆಯಬಹುದು. ■

ನೀವು ಸಂಪೂರ್ಣ ನಿರಪರಾಧಿಯಾಗಿದ್ದರೂ. ಹಾಗಾದಾಗ ಯಾವುದೋ ಚಮತ್ಕಾರ ಸಂಭವಿಸಬಹುದೆಂಬ ಆಶೆಯಲ್ಲಿ ಆಲಸಿಯಾಗಿ ಕಾಲ ತಳ್ಳದಿರಿ. ಯಾವುದಾದರೂ ರಚನಾತ್ಮಕ ಚಟುವಟಿಕೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ, ಅದರಿಂದ ಯಾವ ಸಂಭಾವನೆ ದೊರೆಯದಿದ್ದರೂ ಅಷ್ಟೇ. ನಿಮ್ಮ ಬಗೆಗೆ ಭಾವೀ ಮಾಲೀಕರ ಸಹಾನುಭೂತಿ ಹೆಚ್ಚುವಂತೆ ಯೋಜಿಸಿ.

ಉದ್ಯೋಗಕ್ಕೆ ಅರ್ಜಿ ಹಾಕುವ ವಿಧಾನ

ವೃತ್ತ ಪತ್ರಿಕೆ, ನಿಯತಕಾಲಿಕೆ, ಕೈಗಾರಿಕೆ-ವಾಣಿಜ್ಯ ಸಂಬಂಧೀ ವಿವರಣಾ ಪುಸ್ತಿಕೆಗಳು ಲಭ್ಯವಿರುವ ಸೇವಾವಕಾಶಗಳನ್ನು ಜಾಹೀರುಪಡಿಸುತ್ತವೆ. ಜಾಹೀರುಗೊಳಿಸದ ಕೆಲ ನೌಕರಿಗಳ ಬಗೆಗೆ ನಿಮಗೆ ಹಿತೈಷಿಗಳಿಂದ ಮಾಹಿತಿ ದೊರಕಬಹುದು. ಆಕಾಶವಾಣಿ, ದೂರದರ್ಶನಗಳೂ ಸಹ ನಿಮ್ಮ ಸಹಾಯಕ್ಕಿವೆ. ಕೆಲವೊಮ್ಮೆ ಜಾಹೀರಾತು ಸಂಸ್ಥೆಗಳೂ ಉದ್ಯೋಗದಾತರ ಪರವಾಗಿ ಕರ್ತವ್ಯ ನಿರ್ವಹಿಸಬಹುದು. ಇವು ಉದ್ಯೋಗ ಮೂಲಗಳು.

ಉದ್ಯೋಗಾವಕಾಶಗಳು ಲಭ್ಯವಾದಾಗ ನೀವು ನಿಮ್ಮ ಅಭ್ಯರ್ಥಿತನದ ಬಗೆಗೆ ತಿಳಿಸಿ ಲಿಖಿತ ಮನವಿ (ನೌಕರಿಗಾಗಿ ಅರ್ಜಿ) ಸಲ್ಲಿಸುವುದು ವಾಡಿಕೆ. ಆದರೆ ಉದ್ಯೋಗ ನೀಡಬಹುದಾದವರು ನಿಗದಿಪಡಿಸಿದಂತೆ ಮನವಿಯನ್ನು ತಯಾರಿಸಿ ಸಲ್ಲಿಸುವುದು ಜರೂರಿನದು.

ಅರ್ಜಿಗಳನ್ನು ನೀವೇ ಬರೆದು ಸಲ್ಲಿಸಬೇಕಾಗಬಹುದು; ಉದ್ಯೋಗದಾತರು ತಲೆಬರಹಗಳನ್ನು ನೀಡಿ ನಿಮ್ಮಿಂದ ಮಾಹಿತಿ ಬಯಸಬಹುದು; ನೀವು ನಿಗದಿತ ಮುದ್ರಿತ ಅರ್ಜಿ ನಮೂನೆಗಳಲ್ಲಿಯ ಅಂಕಣಗಳನ್ನು ಭರ್ತಿ ಮಾಡಿ ಸಲ್ಲಿಸಬೇಕಾಗಬಹುದು; ಹಲವು ಸಲ ಮಾಧ್ಯಮಗಳಲ್ಲಿ ಮುದ್ರಿತವಾದ ನಮೂನೆಗಳ ಛಾಯಾ/ಬೆರಳಚ್ಚಿನ ಪ್ರತಿಗಳಲ್ಲೂ ಸಲ್ಲಿಕೆ ನಿಗದಿತವಾಗಿರಬಹುದು. ಅಭ್ಯರ್ಥಿಗಳು ನೀಡುವ ಮಾಹಿತಿಯನ್ನು ಶಿಸ್ತುಬದ್ಧವಾಗಿ ಮತ್ತು ಏಕರೂಪವಾಗಿ ಪಡೆಯಲು ಈ ನಮೂನೆಗಳು ಸಹಾಯ ಮಾಡುತ್ತವೆ.

"Apply without reply" ಆಗುವುದು ಯಾವಾಗ? ನೀವು ಮನವಿಯ ನಿಜ ಮರ್ಮವರಿಯದೆ ಕೇವಲ 'ಅರ್ಜಿ ಗುಜರಾಯಿಸುವದು ನನ್ನ ಧರ್ಮ' ವೆಂದು ಆ ಕೆಲಸವನ್ನು ಯಾಂತ್ರಿಕವಾಗಿ ಶ್ರದ್ಧೆಯಿಲ್ಲದೆ ಮಾಡುತ್ತಿರುವಾಗ. ಅರ್ಜಿಗಳನ್ನು ಸಲ್ಲಿಸುವ ಮುಖ್ಯ ಉದ್ದೇಶವಾವುದು? ನಿಮ್ಮ ಅರ್ಜಿ ಉದ್ಯೋಗದಾತನ ಮನವೊಲಿಸಿ ನಿಮ್ಮನ್ನು ಸಂದರ್ಶಿಸಲೇಬೇಕೆಂಬ ತವಕವನ್ನು ಆತನಲ್ಲಿ ಮೂಡಿಸಬೇಕು. ಸ್ವಹಸ್ತಾಕ್ಷರಗಳಲ್ಲಿ ನೀವು ಅರ್ಜಿ ಸಲ್ಲಿಸುವ ಅವಕಾಶವೊದಗಿದರೆ ಅದನ್ನು 'ಯುದ್ಧದ ಅರ್ಧ ವಿಜಯ' ಎಂದು ತಿಳಿಯಿರಿ. ಶುಭ್ರವಾದ ಕಾಗದದ ಮೇಲೆ ಮುದ್ದಾದ ಅಕ್ಷರಗಳನ್ನು ಮೂಡಿಸಿ. ತಮ್ಮ ಬರಹವನ್ನು ತಾವೇ ಓದಲು ಅಸಾಧ್ಯವಾದ, ಬೇರೊಬ್ಬರು ಓದಿ ಅರ್ಥ ಮಾಡಿಕೊಳ್ಳಲು ಅಸಾಧ್ಯವಾದ ಬರಹ ವೈಖರಿಯನ್ನು ಕೈವಶಪಡಿಸಿಕೊಂಡ ತಜ್ಞರು(?!) ಬಹಳಷ್ಟಿದ್ದಾರೆ. ಅವರಲ್ಲೊಬ್ಬರಾಗದಿರಿ! ನಿಮ್ಮ ಕೈ ಬರಹ ನಿಮ್ಮ ಶಿಕ್ಷಣದ ನೈಜ ಗುಣಾತ್ಮಕತೆಯ ಕನ್ನಡಿಯೆಂಬ ಗಾಂಧೀಜಿಯ ವಿಚಾರವನ್ನು ನೆನಪಿಡಿ. ಹಾಗೆಯೇ, ನಿಮ್ಮ ಅರ್ಜಿ ಸುಲಲಿತವಾಗಿ ಓದಿಸಿಕೊಂಡು ಹೋಗುವ, ಆಕರ್ಷಕವಾಗಿ ರಚಿತವಾದ, ಮನವೊಲಿಸುವ ತಂತ್ರವನ್ನೊಳಗೊಂಡ, ಮಾಹಿತಿ ಪೂರ್ಣವಾದ, ಹಿತವಾದಷ್ಟು ಮಾತ್ರ ದೀರ್ಘವಾದ ದಾಖಲೆಯಾಗಿರಬೇಕೆಂಬುದೂ ನಿಮಗೆ ತಿಳಿದಿರಲಿ. ಇಂಥ ಅರ್ಜಿಯನ್ನೋದಿದ ಮೇಲೆ ನಿಮ್ಮನ್ನು ಕಾಣಬೇಕೆಂಬ ಕುತೂಹಲ ಉದ್ಯೋಗ ನೀಡುವಾತನಿಗೆ ಉಂಟಾಗುವದು ಸಹಜ.

ನೌಕಾದಳ ಸೇರಲು ಅವಕಾಶ

ಪ್ರತಿವರ್ಷವು ಭಾರತೀಯ ನೌಕಾದಳ ಬುದ್ಧಿವಂತ, ಸಾಹಸ ವಿದ್ಯಾರ್ಥಿಗಳನ್ನು ತನ್ನ ಇಂಜಿನಿಯರಿಂಗ್ ಕಾಲೇಜಿನಲ್ಲಿ ವೃತ್ತಿಪರ ವ್ಯಾಸಂಗಕ್ಕಾಗಿ ಅವಕಾಶ ನೀಡಲಾಗುತ್ತಿದೆ. ಅದರಂತೆ ಈ ವರ್ಷವು ಪ್ರವೇಶವನ್ನು ಬಯಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಈ ಕೋರ್ಸುಗಳಲ್ಲಿ ಅಂತಿಮವಾಗಿ ಉತ್ತೀರ್ಣರಾದ ಬುದ್ಧಿವಂತ ಸಾಹಸ ವಿದ್ಯಾರ್ಥಿಗಳನ್ನು ನೌಕಾದಳದಲ್ಲಿರುವ ಟೆಕ್ನಿಕಲ್ ಆಫೀಸರ್ಸ್ ಹುದ್ದೆಗಳಿಗೆ ನೇಮಿಸಿಕೊಳ್ಳಲಾಗುತ್ತದೆ.

ವಯಸ್ಸು

ಅವಿವಾಹಿತ ಪುರುಷ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ.

2 ಡಿಸೆಂಬರ್ 79 ಹಾಗೂ 1 ಜುಲೈ 82ರ ನಡುವೆ ಜನಿಸಿರಬೇಕು.

ವಿದ್ಯಾರ್ಹತೆ

ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಶೇ 70 ರಷ್ಟು ಅಂಕಗಳನ್ನು ಫಿಜಿಕ್ಸ್, ಕೆಮಿಸ್ಟ್ರಿ ಗಣಿತದಲ್ಲಿ ಪಡೆದಿರಬೇಕು ಜೊತೆಗೆ ಶೇ 50 ರಷ್ಟು ಅಂಕಗಳನ್ನು ಇಂಗ್ಲೀಷ್‌ನಲ್ಲಿ ಪಡೆದಿರಬೇಕು.

ದೈಹಿಕ ಅರ್ಹತೆ

ಎತ್ತರ 157 ಸೆಂ.ಮೀ ಅದಕ್ಕೆ ತಕ್ಕ ಎದೆ ಹಾಗು ದೇಹ ತೂಕವನ್ನು ಹೊಂದಿರಬೇಕು. ಎದೆವಿಸ್ತರಿಸಿದಾಗ 5 ಸೆಂ.ಮೀ ನಷ್ಟು ವಿಸ್ತಾರಗೊಳ್ಳಬೇಕು, ದೃಷ್ಟಿದೋಷವಿರಬಾರದು.

ಭರ್ತಿ ಮಾಡಿದ ಅರ್ಜಿಯನ್ನು ಜುಲೈ 9ರೊಳಗೆ

ಡೈರಕ್ಟೋರೇಟ್ ಆಫ್ ಮ್ಯಾನ್ ಪವರ್ ಪ್ಲಾನಿಂಗ್ ಅಂಡ್ ರಿಕ್ರ್ಯೂಟ್‌ಮೆಂಟ್,
ನಾವಲ್ ಹೆಡ್‌ಕ್ವಾರ್ಟರ್ಸ್, ರೂಮ್ ನಂ. 204, 'ಬಿ'ವಿಂಗ್, ಸೇನಾ ಭವನ,
ನವದೆಹಲಿ - 110 011, ಇವರಿಗೆ ತಲುಪಬೇಕು.

ಸೂಚನೆಗಳು

ನಿಗದಿತ ನಮೂನೆಯ ಅರ್ಜಿಯನ್ನು ಕಳುಹಿಸಬೇಕು.

ಅರ್ಜಿಯ ಜೊತೆಗೆ ಜನನ ಧೃಡೀಕರಣ ಹಾಗೂ ಇಂಗ್ಲೀಷ್ ಮತ್ತು (ಪಿ.ಸಿ.ಎಮ್) ಫಿಜಿಕ್ಸ್, ಕೆಮಿಸ್ಟ್ರಿ ಮ್ಯಾಥಮೆಟಿಕ್ಸ್‌ನಲ್ಲಿ ಪಡೆದ ಅಂಕಗಳನ್ನು ನಮೂದಿಸಿ ಗೆಜೆಟೆಡ್ ಅಧಿಕಾರಿಯ ಸಹಿ ಮಾಡಿಸಿ ಕಳುಹಿಸಿ ಕೊಡಬೇಕು. ಒರಿಜಿನಲ್ ಸರ್ಟಿಫಿಕೇಟ್‌ಗಳನ್ನು ಕಳುಹಿಸುವುದುಬೇಡ.

200 ಪದಗಳಿಗೆ ಮೀರದಂಥ ಕಿರು ಲೇಖನವನ್ನು 'ನಾನು ಭಾರತೀಯ ನೌಕೆಯನ್ನು ಏಕೆ ಸೇರುತ್ತಿದ್ದೇನೆ' ಎಂಬ ವಿಷಯದಲ್ಲಿ ಸ್ವತಂತ್ರವಾಗಿ ಬರೆದು ಅರ್ಜಿಯ ಜೊತೆಗೆ ಕಳುಹಿಸಬೇಕು.

ಜುಲೈ ಆಗಸ್ಟ್‌ನಲ್ಲಿ ನಡೆಯುವ ಸಂದರ್ಶನಕ್ಕೆ ನಂತರ ತಿಳಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಇತ್ತೀಚಿನ ಪ್ರಮುಖ ದಿನ ಪತ್ರಿಕೆ ನೋಡಿರಿ. ■

ಅರ್ಜಿಯಲ್ಲಿರಬೇಕಾದ ಅಂಶಗಳು

ನಿಮ್ಮ ಅರ್ಜಿ ಕೆಳಗೆ ಪ್ರಸ್ತಾಪಿಸಿದ ಅಂಶಗಳನ್ನು ಒಳಗೊಂಡಿರಬೇಕು :

೧. ನಿಮ್ಮ ಸಂಕ್ಷಿಪ್ತ ಹೆಸರು, ಪತ್ರ ಬರೆಯುವಾಗಿನ ವಿಳಾಸ
೨. ಪತ್ರ ಬರೆದ ಸ್ಥಳ, ದಿನಾಂಕ
೩. ಉದ್ಯೋಗದಾತೃ ಸಂಸ್ಥೆಯ ಅಧಿಕಾರಿ ಸಹಿತ ಸರಿಯಾದ ವಿಳಾಸ
೪. ವಿಷಯ ಮತ್ತು ಉಲ್ಲೇಖ
೫. ಚಿಕ್ಕ ಪ್ರಸ್ತಾವನೆ; ವಿವರಗಳ ಬಗೆಗೆ ಲಕ್ಷ್ಯ ಸೆಳೆಯುವಿಕೆ ಹಾಗೂ ಮನವೊಲಿಸುವ, ಆಶಾಭಾವದ ಮುಕ್ತಾಯ
೬. ವಿವರಗಳ ಪಟ್ಟಿಯಲ್ಲಿ ಕೆಳಗಿನವುಗಳು ಅತ್ಯಾವಶ್ಯಕ -
   ಅ. ಹುದ್ದೆಯ ಹೆಸರು
   ಆ. ನಿಮ್ಮ ಪೂರ್ಣ ಹೆಸರು
   ಇ. ಪತ್ರ ವ್ಯವಹಾರಕ್ಕಾಗಿ ವಿಳಾಸ
   ಈ. ಜನ್ಮ ದಿನಾಂಕ (ನಿಗದಿತಪಡಿಸಿದ ದಿನಾಂಕದಂದು) ಪೂರ್ತಿಗೊಳಿಸಿದ ವರ್ಷಗಳು
   ಉ. ರಾಷ್ಟ್ರೀಯತೆ
   ಊ. ಶಿಕ್ಷಣಾರ್ಹತೆಗಳು : ಎಲ್ಲಕ್ಕಿಂತ ಹೆಚ್ಚಿನ ಸ್ತರದಿಂದ....
   ಎ. ಸಾಧನೆಗಳು
   ಏ. ಪೂರ್ವಾನುಭವ
   ಐ. ಹವ್ಯಾಸಗಳು
   ಒ. ಹುದ್ದೆಗಾಗಿ ನಿಮ್ಮ ವಿಶೇಷ ಅರ್ಹತೆ
   ಓ. ಸಂಸ್ಥೆಗೆ ನಿಮ್ಮ ವಿಶಿಷ್ಟ ಕೊಡುಗೆ
   ಔ. ನೀವು ಬಯಸುವ ಸಂಭಾವನೆ
   ಅಂ. ನಿಮ್ಮ ಬಗೆಗೆ ಮಾಹಿತಿಯಿರುವವರ ವಿಳಾಸ
   ಅಃ. ವಿವರಗಳನ್ನು ಪುಷ್ಟೀಕರಿಸಲು ನೀವು ಲಗತ್ತಿಸಿರುವ ದಾಖಲೆಗಳ ಮಾಹಿತಿ.
೭. ಅಡಕಗಳ ಸಂಖ್ಯೆ, ನಿಮ್ಮ ರುಜು.

ಸ್ವ-ವಿವರ ಸಿದ್ಧಪಡಿಸುವುದು

ಪಾರಂಪರಿಕವಾದ ಮನವಿ ಪತ್ರವನ್ನು ಓದಿ ಜೀರ್ಣಿಸಿಕೊಳ್ಳುವಷ್ಟು ಸೈರಣೆ ಬಹಳಷ್ಟು ಉದ್ಯೋಗ ನೀಡಿಕೆದಾರರಿಗೆ ಇಂದು ಇಲ್ಲ. ಆದುದರಿಂದ ಉದ್ಯೋಗಾವಕಾಶಗಳನ್ನು ಪ್ರಚುರ ಪಡಿಸುವಾಗ ಅವರು ಅಭ್ಯರ್ಥಿಗಳಿಗೆ ತಮ್ಮ ಜೊತೆಗೆ 'ಬಯೋ-ಡಾಟಾ' ಅಥವಾ 'ಕರಿಕ್ಯುಲಮ್ ವೈಟೇ' ತಂದು ಸಂದರ್ಶನಕ್ಕೆ

ಹಾಜರಾಗಬೇಕೆಂದೋ ಅಥವಾ ಕನ್ನಡದಲ್ಲಿ ಇದರ ಬದಲು 'ಸ್ವ-ವಿವರಣಾಪಟ್ಟಿ'ಯನ್ನು ತಮ್ಮ ವಿಳಾಸಕ್ಕೆ ಕಳಿಸಬೇಕೆಂದೋ ನಿರ್ದೇಶಿಸಬಹುದು.

ಸ್ವಂತದ ಇತಿಹಾಸ, ಶಿಕ್ಷಣ, ತರಬೇತಿ ಮತ್ತು ಪೂರ್ವಾನುಭವಗಳ ವಿವರಗಳನ್ನು ಬಿಂಬಿಸುವ ಈ 'ಪಟ್ಟಿ', ನಿಮ್ಮ 'ಸೇವೆ'ಯನ್ನು ಭಾವೀ ಉದ್ಯೋಗದಾತನಿಗೆ ಯಶಸ್ವಿಯಾಗಿ ಮಾರಲು ನಿಮಗೆ ಸಹಾಯ ಮಾಡುತ್ತದೆ. ಮಾರಾಟದ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಆಕರ್ಷಕವಾಗಿ ಪ್ರದರ್ಶಿಸುತ್ತಾರಲ್ಲವೇ? ಹಾಗೆಯೇ ನಿಮ್ಮ ಉಮೇದುವಾರಿಕೆಯನ್ನು ಗ್ರಾಹ್ಯವಾಗುವಂತೆ ಸಿಂಗರಿಸಿ ಪ್ರಸ್ತುತಪಡಿಸುವುದೂ ಒಂದು ಕಲೆ. ನೀವು ಸಲ್ಲಿಸಬೇಕಾದ ಲಿಖಿತ ಮನವಿಯನ್ನು ಸಹ ಅತಿ ಸಂಕ್ಷಿಪ್ತಗೊಳಿಸಿ ಈ ಪಟ್ಟಿಯನ್ನು ಅದರೊಡನೆ ಸರಿಯಾಗಿ, ಸಲೀಸಾಗಿ ಸಲ್ಲಿಸಲೂ ಸಹ ಇದು ಸಹಾಯಕಾರಿ. ನೀವು ನೌಕರಿಯ ಮಾರುಕಟ್ಟೆಯಲ್ಲಿ ದಾಖಲಾಗುವ ಮುಂಚಿನಿಂದಲೂ ನಿಮ್ಮ ಬಗೆಗಿನ ವಿವರಗಳನ್ನು ಕಾಲಾನುಕ್ರಮವಾಗಿ ಸಂಗ್ರಹಿಸುತ್ತಾ, ಅವಶ್ಯವಿದ್ದವುಗಳಿಗೆ ಒತ್ತುಕೊಡುತ್ತಾ, ಹೊಸ ವಿವರಗಳನ್ನು ಜೋಡಿಸುತ್ತ, ಅಸಾಂದರ್ಭಿಕ ಮತ್ತು ನಿರುಪಯುಕ್ತವಾದವುಗಳನ್ನು ತೆಗೆದುಹಾಕುತ್ತ ಪಟ್ಟಿಯನ್ನು ಅತ್ಯಂತ ಪ್ರಸ್ತುತವೂ ಇತ್ತೀಚಿನದೂ ಆಗಿರುವಂತಿಡುವದು ನಿಮ್ಮನ್ನು ಸೇರಿದೆ. ಈ ಪಟ್ಟಿಯ ಬುನಾದಿ ನಿಮ್ಮ ಜೀವನದ ಸಾಧನೆಗಳ ಮೇಲೆ ಬೆಳಕು ಚೆಲ್ಲುವದು. ಅದು ಮುಖ್ಯವಾಗಿ ಕೆಳಗಿನ ಅಂಶಗಳನ್ನೊಳಗೊಂಡಿರಬೇಕು.

ಅ. ವೈಯಕ್ತಿಕ ವಿವರಗಳು : ಹೆಸರು, ವಿಳಾಸ, ಜನ್ಮತಾರೀಖು, ಶಿಕ್ಷಣ ನೀಡಿದ ಸಂಸ್ಥೆಗಳು ಇತ್ಯಾದಿ.

ಆ. ಶಾಲೆಯಲ್ಲಿಯ ನಿಮ್ಮ ಸಾಧನೆಗಳು

ಇ. ಶೈಕ್ಷಣಿಕ ಅರ್ಹತೆಗಳು ಹಾಗೂ ಉಚ್ಚ ವಿದ್ಯಾಸಂಸ್ಥೆಗಳಲ್ಲಿ ನಿಮ್ಮ ಸಾಧನೆಗಳು.

ಈ. ಕಾರ್ಯಾನುಭವ - ತಾತ್ಕಾಲಿಕ ಸೇವೆ, ವೃತ್ತಿ ತರಬೇತಿ ಇತ್ಯಾದಿ

ಉ. ಹವ್ಯಾಸಗಳು: ಈಜು, ನೃತ್ಯ, ಚದುರಂಗ, ಕ್ರಿಕೆಟ್ ಇತ್ಯಾದಿ

ಊ. ಕೌಶಲ್ಯ ಸಂಪಾದನೆ : ಗಣಕ ಯಂತ್ರಚಾಲನೆ, ಬರಹ, ವಾಹನ ಚಾಲನೆ, ಛಾಯಾಚಿತ್ರಗ್ರಹಣ ಇತ್ಯಾದಿ.

ಎ. ಸಂಬಂಧಿಸಿದ ಸೇವಾನುಭವ - ವಿವರಗಳೊಂದಿಗೆ

ಏ. ಪ್ರಶಸ್ತಿ, ಪದಕ, ಪ್ರಮಾಣಪತ್ರಗಳ ಸಂಪಾದನೆ ವಿವರ.

ಐ. 'ನೀವು ವಿವಾಹಿತರೇ - ಮಕ್ಕಳೊಂದಿಗರೇ' ಎಂಬವುಗಳನ್ನು ಅವು ನೀವು ಸೇರಬೇಕಾದ ಹುದ್ದೆಗಳಿಗೆ ನೇರವಾಗಿ ಸಂಬಂಧಿಸಿದ್ದರೆ ಮಾತ್ರ ಸೇರಿಸಬೇಕು.

ಒ. ನಿಮ್ಮ ಬಗೆಗೆ ಮಾಹಿತಿ ನೀಡಲಿಚ್ಛಿಸುವ ಸಂಘ-ಸಂಸ್ಥೆಗಳ ಮತ್ತು ವ್ಯಕ್ತಿಗಳ ಬಗೆಗಿನ ವಿವರಗಳು

ಓ. ದಿನಾಂಕದೊಂದಿಗೆ ನಿಮ್ಮ ಸಹಿ.

ಸಂದರ್ಶನ

'ಕನ್ಯಾ-ಸಂದರ್ಶನ' ಎಂಬುದು ಕಳೆದು ಹೋದ ಹಳೆಯ ಸಂಪ್ರದಾಯವಾಯಿತು. ಆದರೆ ಸಂದರ್ಶನವಿಲ್ಲದೆ ನೌಕರಿ ದೊರೆಯುವದು ಅಸಂಭವ! ಒಂದು ತೆರನಲ್ಲಿ ಇದೂ ಸಹ ಕನ್ಯಾ-ಸಂದರ್ಶನದಂತೆಯೇ. ಎಲ್ಲ ಬಗೆಯಿಂದಲೂ ನೀವು ಉದ್ಯೋಗದಾತರಿಗೆ ಒಪ್ಪಿಗೆಯಾಗಬೇಕು. ಈ ಉದ್ದೇಶ ಫಲಿಸಬೇಕಾದರೆ ಪೂರ್ವಸಿದ್ಧತೆ ಅತ್ಯಂತ ಆವಶ್ಯಕ.

ನಿಮ್ಮ ಪಾಲಕರು, ಇತರ ಹಿರಿಯರು-ಅನುಭವಿಗಳು, ಶಿಕ್ಷಕರಿಂದ ಸಂದರ್ಶನದ ಮರ್ಮವನ್ನರಿಯಿರಿ. ನೀವು ಧೈರ್ಯಹೀನರಾಗಿದ್ದರೆ ನಿಮಗೆ ಯಾರಲ್ಲಿ ವಿಶ್ವಾಸವಿದೆಯೋ ಅವರೊಡನೆ ಹಿಂದಿನ ದಿನ ಸಂದರ್ಶನದ ರಂಗ ತಾಲೀಮು ಮಾಡಿ. ನೆನಪಿಡಿ; ಇತರರು ಮೊದಲು ನಿಮ್ಮನ್ನು ನೋಡುತ್ತಾರೆ; ನಂತರ ನಿಮ್ಮೊಡನೆ ಮಾತನಾಡುತ್ತಾರೆ. ನಿಮ್ಮ ಬಟ್ಟೆಗಳು ಬೆಲೆಯುಳ್ಳವೇ ಇರಬೇಕೆಂದಿಲ್ಲ. ಆದರೆ ಅವು ಚೊಕ್ಕಟವಾಗಿರಲೇಬೇಕು. ಯಾವ ಬಟ್ಟೆಗಳಿಂದ ನಿಮ್ಮಲ್ಲಿ ಆತ್ಮವಿಶ್ವಾಸ ಮೂಡುವುದೆಂದು ನೀವು ಭಾವಿಸುವಿರೋ ಅವುಗಳನ್ನೇ ಧರಿಸಿ.

ನೀವು ಹಸ್ತಲಾಘವ ನೀಡಬೇಕಾಗಬಹುದಾದ್ದರಿಂದ ಇತರರ ತೀರ ಹತ್ತಿರಕ್ಕೆ ಹೋಗುವಿರಿ. ಆದುದರಿಂದ ಶರೀರ ನೈರ್ಮಲ್ಯ ಅತ್ಯಂತ

ಬಿ.ಬಿ.ಎ ಮತ್ತು ಬಿ.ಸಿ.ಎಸ್ ಕೋರ್ಸಿಗೆ ಅರ್ಜಿ ಆಹ್ವಾನ

ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರು ಮ್ಯಾನೇಜ್‌ಮೆಂಟ್ ಕೋರ್ಸುಗಳಿಗೆ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕೋರ್ಸುಗಳು

- ಬ್ಯಾಚುಲರ್ ಆಫ್ ಬ್ಯುಸಿನೆಸ್ ಆಡ್ಮಿನಿಸ್ಟ್ರೇಷನ್ (ಬಿ.ಬಿ.ಎ)
  ಹಾಗೂ
- ಬ್ಯಾಚುಲರ್ ಆಫ್ ಕಾರ್ಪೋರೇಟ್ ಸೆಕ್ರೆಟರಿಶಿಪ್ (ಬಿ.ಸಿ.ಎಸ್)

ಉಪಯೋಗ

- ಈ ಕೋರ್ಸುಗಳಲ್ಲಿ ಉತ್ತೀರ್ಣರಾದವರಿಗೆ ಕಂಪನಿ ಸೆಕ್ರಟರಿ, ಚಾರ್ಟೆಡ್ ಅಕೌಂಟೆಂಟ್, ವಿತ್ತ ವಿಶ್ಲೇಷಕ (ಫೈನಾನ್ಸಿಯಲ್ ಅನಾಲಿಸ್ಟ್) ಅಷ್ಟೇ ಅಲ್ಲದೇ ಖಾಸಗಿ ಕಂಪನಿಗಳಲ್ಲಿ ಉದ್ಯೋಗವಕಾಶಗಳಿರುತ್ತವೆ.
- ಈ ಕೋರ್ಸುಗಳನ್ನು ಮಾಡಲಿಚ್ಛಿಸುವ ವಿದ್ಯಾರ್ಥಿಗಳು ಪ್ರಾಂಶುಪಾಲರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರಿಂದ 100 ರೂ. ಅರ್ಜಿ ಶುಲ್ಕ (ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ 75) ಸಲ್ಲಿಸಿ ಪಡೆದುಕೊಳ್ಳಬಹುದು.
- ಅಂಚೆ ಮೂಲಕ ಪಡೆಯಲಿಚ್ಛಿಸುವವರು 110 ರೂಗಳ ಡಿ.ಡಿಯನ್ನು ಮೇಲಿರುವ ಹೆಸರಲ್ಲಿ ಪಡೆದು (ಎಸ್‌ಸಿ/ಎಸ್‌ಟಿ. 85 ರೂ) ಸ್ವವಿಳಾಸದ ಲಕೋಟೆಗೆ ಸಾಕಷ್ಟು ಅಂಚೆ ಚೀಟಿ ಹಚ್ಚಿ ಕಳುಹಿಸಿ ಪಡೆಯಬಹುದು.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಜುಲೈ 13 ರಂದು ನಡೆಯುವ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.

ಅರ್ಜಿ ಸಲ್ಲಿಸಲು ಕಡೆಯ ದಿನಾಂಕ 8.7.1998 ಹೆಚ್ಚಿನ ವಿವರಗಳಿಗೆ ಮೇಲಿನ ವಿಳಾಸವನ್ನು ಸಂಪರ್ಕಿಸಿ.

ಮಹತ್ವದ್ದು. ಸಾಧ್ಯವಿದ್ದರೆ ಸೂಕ್ಷ್ಮ ಸುಗಂಧವನ್ನು ಪಯೋಗಿಸಿ. ನಿಮ್ಮ ತಲೆಗೂದಲು ಇತರರಿಗೆ ಚಾಮರವಾಗದಂತೆ, ಉಗುರುಗಳು ಗಾಯಗೊಳಿಸದಂತೆ, ಅವರ ಕೈ ಕೊಳೆಯಾಗದಂತೆ ಎಚ್ಚರ ವಹಿಸಿ.

ನಿಮಗಿಂತ ಮೊದಲಿನ ಅಭ್ಯರ್ಥಿ ಸಂದರ್ಶನ-ಕೋಣೆಗೆ ತೆರಳುತ್ತಿರುವಂತೆಯೇ ಅರ್ಧ ಏಲಕ್ಕಿಯನ್ನು ಅಗಿದು ಮುಗಿಸಿ. ಸಂದರ್ಶನ ನಡೆದಾಗ ನೀವು ಬಾಯಾಡಿಸುತ್ತಿರುವುದು ಅಸೌಜನ್ಯಕರ. 'ಚ್ಯೂಯಿಂಗ್ ಗಮ್' ಕ್ರಿಕೆಟ್‌ನಲ್ಲಿ ನಿಮ್ಮ ಶಾಂತ ಮನಸ್ಥಿತಿಯನ್ನು ಕಾಪಾಡಿ ಉತ್ತೇಜಿತಗೊಳಿಸಬಹುದು; ಧೈರ್ಯ ತುಂಬಬಹುದು. ಸಂದರ್ಶನದಲ್ಲಿ ಅದು ಪ್ರತಿಕೂಲವಾಗುತ್ತದೆ. ಉದ್ವೇಗಕ್ಕೆ ಒಳಗಾಗದಿರಲು ಸಂದರ್ಶನ ಸ್ಥಳದಲ್ಲಿ ನಿಗದಿತ ಸಮಯಕ್ಕಿಂತ ಐದು ನಿಮಿಷ ಮೊದಲೇ ಉಪಸ್ಥಿತರಾಗಿರಿ. ಸಮಯಪಾಲನೆಯಲ್ಲಿ ವಿಫಲವಾಗುವದು ತರವಲ್ಲ.

ಸಂದರ್ಶಕರನ್ನು ಕಣ್ಣಲ್ಲಿ ಕಣ್ಣಿರಿಸಿ, ಹಸನ್ಮುಖರಾಗಿ ನೇರವಾಗಿ ಎದುರಿಸಿ. ಸ್ವಂತದ ಬಗೆಗೆ, ಯೋಜನೆಗಳ ಬಗೆಗೆ ತರ್ಕಬದ್ಧವಾಗಿ, ಮುಕ್ತವಾಗಿ ಆದರೆ ಹಿತಮಿತವಾಗಿ ಮಾತನಾಡಿ. ನಿಮ್ಮ ಬಗೆಗೆ ಹೇಳಿಕೊಳ್ಳುವಂತೆ ನೀವು ಸೇರಲಿರುವ ಸಂಘಟನೆಯ ಬಗೆಗೆ ನಿಮಗೆ ಏನನ್ನಾದರೂ ತಿಳಿಯಲಿಕ್ಕಿದ್ದರೆ ಅಪ್ಪಣೆ ಪಡೆದು ಪ್ರಶ್ನೆ ಕೇಳಿ. ಸಂದರ್ಶಕರೇ ನಿಮಗೆ ಅವಕಾಶವನ್ನಿತ್ತಿದ್ದರೂ ನಿಮಗೆ ಏನನ್ನೂ ಕೇಳುವುದಿರದಿದ್ದರೆ ಅವಕಾಶಕ್ಕಾಗಿ ಕೃತಜ್ಞತೆ ಸಲ್ಲಿಸಿ ಹಾಗೆ ತಿಳಿಸಿ. ವಂದನೆಯೊಂದಿಗೆ ಸಂದರ್ಶನ ಮುಕ್ತಾಯಗೊಳಿಸಿ, ಅನುಮತಿಯೊಂದಿಗೆ ಹೊರಗೆ ಬನ್ನಿ.

■ ಡಾ. ಟಿ.ಕೆ. ತಾಪಸ್

ಬೆಳವಣಿಗೆ

ಇದ್ದಷ್ಟೇ ಇದೆ
ಬಾಬಾ ಬುಡನ್ ಗಿರಿ
ಕಲ್ಲಹತ್ತಗಿರಿ
ಮುಳ್ಳಯ್ಯನಗಿರಿ.
ನಿತ್ಯ ಬೆಳೆಯುತ್ತಿದೆ
ದಾದಾಗಿರಿ
ಚಮಚಾಗಿರಿ!

– ಎಚ್. ಎನ್. ಸೋಮಶೇಖರ್

ಕೃಷಿ ವಿಶ್ವವಿದ್ಯಾಲಯದ ಕೋರ್ಸುಗಳು

ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಬೆಂಗಳೂರು ಇವರು 1998-99ರ ಶೈಕ್ಷಣಿಕ ವರ್ಷದ ಪ್ರವೇಶಕ್ಕೆ ಅಂಡರ್ ಗ್ರಾಜ್ಯುಯೇಟ್ ಕೋರ್ಸುಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕರೆದಿದ್ದಾರೆ. ಕೋರ್ಸುಗಳು ಹಾಗೂ ಕೇಂದ್ರಗಳ ವಿವರ:

ಪ್ರೋಗ್ರಾಮ್	ಕೇಂದ್ರಗಳು
ಅ) ಬಿ.ಎಸ್ಸಿ. (ಅಗ್ರಿಕಲ್ಚರಲ್)	ಬೆಂಗಳೂರು, ಶಿವಮೊಗ್ಗ, ಮಂಡ್ಯ, ಹಾಸನ.
ಆ) ಬಿ.ಎಸ್ಸಿ (ಹಾರ್ಟಿಕಲ್ಚರಲ್)	ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.
ಇ) ಬಿ.ಎಸ್ಸಿ (ಫಾರೆಸ್ಟ್ರಿ)	ಪೊನ್ನಪೇಟೆ, ಕೊಡಗು ಜಿಲ್ಲೆ.
ಈ) ಬಿ.ಎಸ್ಸಿ. (ಸಿರಿಕಲ್ಚರ್)	ಚಿಂತಾಮಣಿ, ಕೋಲಾರ ಜಿಲ್ಲೆ.
ಉ) ಬಿ.ಎಸ್ಸಿ (ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಮತ್ತು ಕೋ ಆಪರೇಷನ್)	ಬೆಂಗಳೂರು.
ಊ) ಬಿ.ಟೆಕ್ (ಡಿ.ಟೆಕ್)	ಬೆಂಗಳೂರು
ಋ) ಬಿ.ವೆಟರನರಿ ಸೈನ್ಸ್ ಅಂಡ್ ಅನಿಮಲ್ ಹೆಲ್ತ್	ಬೆಂಗಳೂರು.
ೠ) ಬಿ.ಟೆಕ್ (ಅಗ್ರಿಕಲ್ಚರಲ್ ಇಂಜನಿಯರಿಂಗ್)	ಬೆಂಗಳೂರು
ಎ) ಬಿ.ಫಿಶರೀಸ್ ಸೈನ್ಸ್	ಮಂಗಳೂರು

ವಿದ್ಯಾರ್ಹತೆ :

ಕ) ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಫಿಜಿಕ್ಸ್, ಕೆಮಿಸ್ಟ್ರಿ, ಗಣಿತದ ವಿಷಯದ ಜೊತೆಗೆ ಬಯಾಲಜಿ, ಬಾಟನಿ, ಜುಲಾಜಿ, ಅಗ್ರಿಕಲ್ಚರ್ ಅಥವಾ ಹೋಮ್‌ಸೈನ್ಸ್ ಈ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಅಭ್ಯಸಿಸಿರಬೇಕು.

ಖ) ಬಿ. ವೆಟರನರಿ ಸೈನ್ಸ್ ಪದವಿಯನ್ನು ಬಯಸುವ ವಿದ್ಯಾರ್ಥಿಗಳು ಫಿಜಿಕ್ಸ್, ಕೆಮಿಸ್ಟ್ರಿ ಬಯಾಲಜಿಯ ಜೊತೆಗೆ ಇಂಗ್ಲೀಷ್ ವಿಷಯವನ್ನು ಅಭ್ಯಸಿಸಿರಬೇಕು.

ಮೇಲೆ ಹೇಳಿದ ಪರೀಕ್ಷೆಯಲ್ಲಿ ಸಾಮಾನ್ಯವರ್ಗದ ವಿದ್ಯಾರ್ಥಿಗಳು ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟಜಾತಿ/ಪಂಗಡ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ಸಾಕು.

ಅರ್ಜಿಗಳನ್ನು ಪಡೆಯುವ ಬಗೆ :

ಅರ್ಜಿಗಳನ್ನು, ರಿಜಿಸ್ಟ್ರಾರ್, ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಜಿ.ಕೆ.ವಿ.ಕೆ ಕ್ಯಾಂಪಸ್, ಬೆಂಗಳೂರು -560 065. ಇವರಿಗೆ 100 ರೂಗಳ ಕ್ರಾಸ್ಡ್ ಪೋಸ್ಟಲ್ ಆರ್ಡರ್‌ನ್ನು 'ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಬೆಂಗಳೂರು'' ಈ ಹೆಸರಿನಲ್ಲಿ ಪಡೆದು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಲಕೋಟೆಯಲ್ಲಿರಿಸಿ ಅಂಚೆ ಮೂಲಕ ಪಡೆದುಕೊಳ್ಳಬಹುದು.

ನೇರವಾಗಿ ಪಡೆಯಲಿಚ್ಚಿಸುವವರು ಆಯಾ ಕೇಂದ್ರಗಳಲ್ಲಿ ಅವಶ್ಯಕ ಅರ್ಜಿಗಳನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಪರಿಶಿಷ್ಟ ಜಾತಿ/ಪಂಗಡದವರಿಗೆ ಈ ಅರ್ಜಿ ಶುಲ್ಕದಲ್ಲಿ 50.00 ರೂ.ಗಳ ರಿಯಾಯಿತಿ ಇರುತ್ತದೆ. ಅರ್ಜಿ ಪಡೆಯಲು ಕಳುಹಿಸುವ ಪೋಸ್ಟಲ್ ಆರ್ಡರ್ ಜೊತೆಯಲ್ಲಿ ನಿಮ್ಮ ಮೀಸಲಾತಿಯನ್ನು ದೃಢೀಕರಿಸುವ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು.

ವಿದ್ಯಾರ್ಥಿಗಳು ಅರ್ಜಿಗಳನ್ನು ಪಡೆಯಲು ಕೊನೆಯ ದಿನಾಂಕ 15-7-1998

ಭರ್ತಿ ಮಾಡಿದ ಅರ್ಜಿಗಳು 22-7-1998 ರೊಳಗಾಗಿ ರಿಜಿಸ್ಟ್ರಾರ್, ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಜಿ.ಕೆ.ವಿ.ಕೆ ಕ್ಯಾಂಪಸ್, ಬೆಂಗಳೂರು - 560 065. ಇವರನ್ನು ತಲುಪಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೇಲೆ ಹೇಳಿದ ವಿಳಾಸವನ್ನು ಸಂಪರ್ಕಿಸಬಹುದು.

ಕರ್ನಾಟಕ ವಿ.ವಿ. ಯಲ್ಲಿ ಉದ್ಯೋಗಾವಕಾಶಗಳು

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಇವರು ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆದಿದ್ದಾರೆ.
ಹುದ್ದೆಗಳ ವಿವರ ಈ ರೀತಿ ಇದೆ.

ಸಹಾಯಕ ನಿರ್ದೇಶಕರು, ಜ್ಯೂನಿಯರ್ ಇಂಜಿನಿಯರ್, ಇಲೆಕ್ಟ್ರಿಕಲ್ ಸೂಪರ್‌ವೈಸರ್, ಮಕಾದಮ್, ಗ್ಲಾಸ್ ಬ್ಲೋವರ್, ಮೆಕ್ಯಾನಿಕ್, ಇಲೆಕ್ಟ್ರಿಶಿಯನ್, ವೆಲ್ಡರ್, ಮೌಲ್ಡರ್, ಟರ್ನರ್, ಕಾರ್ಪೆಂಟರ್, ಹೆಲ್ಪರ್, ಮಾಲಿ, ಸ್ಟಾಟಿಸ್ಟಿಕಲ್ ಅಸಿಸ್ಟೆಂಟ್, ಹಿರಿಯ ಸಹಾಯಕ, ಶೀಘ್ರ ಲಿಪಿಗಾರರು, ಸಿಪಾಯಿ, ಸಹಾಯಕ ಗ್ರಂಥಪಾಲರು, ಸಹಾಯಕ ಶಿಕ್ಷಕರು, ಸಂಗೀತ ಶಿಕ್ಷಕ, ಪ್ರಯೋಗಾಲಯ ಶಿಕ್ಷಕ, ಡ್ರಾಫ್ಟ್ಸ್‌ಮನ್ -ಕಮ್ ಫೋಟೋಗ್ರಾಫರ್, ಪ್ರಯೋಗಾಲಯ ಸಹಾಯಕ ಕಮ್ ಛಾಯಾಗ್ರಾಹಕ, ತರಬೇತಿದಾರರು, ಸ್ಪೋರ್ಟ್ಸ್ ಸೂಪರ್‌ವೈಸರ್.

ಅರ್ಜಿ ನಮೂನೆಗಳನ್ನು ನೇರವಾಗಿ ಪಡೆಯಲಿಚ್ಛಿಸುವವರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಬ್ಯಾಂಕಿನಲ್ಲಿ 50.00 ರೂ.ಗಳನ್ನು ಚಲನ್ ಮೂಲಕ ತುಂಬಿ ಪಡೆಯಬಹುದು. ಅಂಚೆ ಮೂಲಕ ಪಡೆಯಲಿಚ್ಛಿಸುವವರು 50.00 ರೂಪಾಯಿಗಳ ಕ್ರಾಸ್ಡ್ ಡಿಮಾಂಡ್ ಡ್ರಾಫ್ಟನ್ನು ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಲ್ಲಿ ಪಡೆದು ಸ್ವ ವಿಳಾಸದ ಲಕೋಟೆಗೆ 16 ರೂ. ಗಳ ಅಂಚೆ ಚೀಟಿ ಹಚ್ಚಿ ಕಳುಹಿಸಿ ಪಡೆಯಬಹುದು.

ಹುದ್ದೆಗೆ ತಕ್ಕ ವಿದ್ಯಾರ್ಹತೆ, ಮೀಸಲಾತಿ, ವೇತನ ಶ್ರೇಣಿ ಇತ್ಯಾದಿ ವಿವರಗಳನ್ನು ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಂದ ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು - ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ 15-7-1998ರ ಸಂಜೆ 6.00 ಘಂಟೆಯೊಳಗೆ ರಿಜಿಸ್ಟರ್ಡ್ ಪೋಸ್ಟ್ ಎ.ಡಿ.ಮೂಲಕ ತಲುಪಬೇಕು.

ಮಾಹಿತಿಗೆ ಬದುಕು

ಮನರಂಜನೆಗೆ ಮನೆ

ಬದುಕು ಮಾಸಿಕದ ಹೂರಣವನ್ನೆಲ್ಲ ಮೆಚ್ಚಿ ಬೆನ್ನು ತಟ್ಟಿದ ಬಹುಪಾಲು ಓದುಗರು ಈ ಮಾಸಿಕದಲ್ಲಿ ಕಥೆ, ಕವನ, ಧಾರಾವಾಹಿ ಪ್ರಕಟವಾಗಬೇಕೆಂದು ಆಗ್ರಹಿಸಿದ್ದರು. ಓದುಗರು ಗುರುತಿಸಿದ ಕೊರತೆಯನ್ನು ತುಂಬಲೆಂದೇ **ಮನೆ** ಮಾಸಪತ್ರಿಕೆ ಬಿಡುಗಡೆಯಾಗಲಿದೆ. ಇದರೊಂದಿಗೆ ನಿಮಗೆ ಒಂದು ಆಶ್ಚರ್ಯ ಹಾಗೂ ಇನ್ನೊಂದು ಆಘಾತವನ್ನು ತಂದೊಡ್ಡಲಿದೆ!

ಒಂದು ಆಶ್ಚರ್ಯ : ಮನರಂಜನೆಯನ್ನೇ ಗುರಿಯಾಗಿರಿಸಿಕೊಂಡು ಸಮೃದ್ಧವಾಗಿ ಹೊರಬರಲಿರುವ 'ಮನೆ' ಮಾಸಿಕದ ಬೆಲೆ ಕೇವಲ **2 ರೂಪಾಯಿ!**

ಒಂದು ಆಘಾತ : ಕುಟುಂಬದ ಎಲ್ಲ ಸದಸ್ಯರನ್ನು ಸಮಾನವಾಗಿ ಆಕರ್ಷಿಸುವ ಈ ಮಾಸಿಕ 'ಬಿಸಿಲ ಬದುಕು' ಓದುಗರಿಗೆ **ಉಚಿತವಾಗಿ** ಲಭಿಸಲಿದೆ. ಅಂದರೆ ನೀವು ಮಾಹಿತಿಗಾಗಿ 'ಬದುಕು' ಕೊಂಡರೆ ಸಾಕು. ಮನರಂಜನೆಯ ಮಾಸ ಪತ್ರಿಕೆಯಾದ **ಮನೆ** ಉಚಿತವಾಗಿ ಸಿಗುತ್ತದೆ!

ಬಿಡುಗಡೆ ದಿನಾಂಕ ನಿರೀಕ್ಷಿಸಿ!

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ

೧. ಈ ಬಾರಿಯ ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಬಂದ ಅಧ್ಯಕ್ಷರು ಯಾವ ದೇಶಕ್ಕೆ ಸೇರಿದವರು?

೨. ಅಸ್ಸಾಂನ ನೂತನ ರಾಜ್ಯಪಾಲರು ಯಾರು?

೩. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್‌ನ ನಿರ್ದೇಶಕರು?

೪. ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ ಮೊದಲ ಸೇನಾಪಡೆಯ ಮುಖ್ಯಸ್ಥ ಯಾರು?

೫. ೧೯೯೭ರ ಇಂದಿರಾಗಾಂಧಿ ಶಾಂತಿ ಬಹುಮಾನ ಪಡೆದವರು ಯಾರು?

೬. ಬಂದ್‌ಗೆ ಕರೆಕೊಡುವುದು ಸಂವಿಧಾನ ಬಾಹಿರವೆಂದು ಯಾವ ರಾಜ್ಯದ ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿದೆ?

೭. ಕೊಲಂಬಿಯಾ ನೌಕೆಯೊಂದಿಗೆ ಅಂತರಿಕ್ಷದಲ್ಲಿ ವಿಹರಿಸಿದ ಮೊದಲ ಭಾರತೀಯ ಮಹಿಳೆ ಯಾರು?

೮. ಒಂದು ರಾಜಕೀಯ ಪಕ್ಷ ರಾಷ್ಟ್ರ ಮಟ್ಟದ ಮಾನ್ಯತೆ ಪಡೆಯಬೇಕೆಂದರೆ ಎಷ್ಟು ಓಟು ಪಡೆದಿರಬೇಕು?

೯. ಪ್ರಥಮಬಾರಿ ಸಂಗೀತ ಕ್ಷೇತ್ರದಲ್ಲಿ 'ಭಾರತ ರತ್ನ' ಪ್ರಶಸ್ತಿ ಪಡೆದವವರು?

೧೦. ಇತ್ತೀಚೆಗೆ ಗೋವಾದ ರಾಜ್ಯಪಾಲರಾಗಿ ನೇಮಕ ಹೊಂದಿದವರ ಹೆಸರೇನು?

೧೧. ಭಾರತದ ಕಾನೂನು ಆಯೋಗದ ಅಧ್ಯಕ್ಷರಾಗಿ ನೇಮಕ ಹೊಂದಿದವರು ಯಾರು?

೧೨. ಸಪ್ತ ಪರ್ವತಗಳನಗರ ಎಂದು ಯಾವುದಕ್ಕೆ ಕರೆಯುತ್ತಾರೆ?

೧೩. ಭಾರತದ ಸ್ವಿಟ್ಜರ್ ಲ್ಯಾಂಡ್ ಎಂದು ಯಾವ ರಾಜ್ಯಕ್ಕೆ ಕರೆಯುತ್ತಾರೆ?

೧೪. ಕಳೆದ ಡಿಸೆಂಬರ ೮ ರಂದು ಪ್ರಾರಂಭವಾದ ೧೭ ಅಂಟಾರ್ಟಿಕಾ ಯಾತ್ರಾ ತಂಡಕ್ಕೆ ನಾಯಕತ್ವ ವಹಿಸಿದವರುಯಾರು?

೧೫. ಭಾರತದ ಯಾವ ಕೇಂದ್ರಾಡಳಿತ ಪ್ರದೇಶ ಹೆಚ್ಚು ಸಾಕ್ಷರತೆಯನ್ನು ಹೊಂದಿದೆ?

೧೬. 'ಇಂಡಿಯಾ ಡಿವೈಡೆಡ್' ಪುಸ್ತಕವನ್ನು ಬರೆದವರು ಯಾರು?

೧೭. ದ್ರಾವಿಡ ವಿಶ್ವ ವಿದ್ಯಾಲಯವನ್ನು ಎಲ್ಲಿ ಸ್ಥಾಪಿಸಲಾಗುತ್ತಿದೆ?

೧೮. 'ರಾಷ್ಟ್ರೀಯ ಯುವದಿನ'ವನ್ನು ಎಂದು ಆಚರಿಸಲಾಗುತ್ತದೆ?

೧೯. 'ಇಂಡಿಯನ್ ನೆಪೋಲಿಯನ್' ಎಂದು ಯಾರನ್ನು ಕರೆಯಲಾಗುತ್ತದೆ?

೨೦. ಕೊರಿಯೋಗ್ರಫಿ ಎಂದು ಯಾವುದಕ್ಕೆ ಕರೆಯುತ್ತಾರೆ?

೨೧. ಸಿ.ಐ.ಎ. ವಿಸ್ತೃತ ರೂಪ?

೨೨. ಶ್ರಮ ವಿಭಜನೆಯ ಸಿದ್ಧಾಂತದ ಕರ್ತರು ಯಾರು?

೨೩. 'ಖಲ್ಸಾ ಪಂಥ'ವನ್ನು ಯಾರು ಸ್ಥಾಪಿಸಿದರು?

೨೪. ಪಾಕ್ ಜಲಸಂಧಿ ಎಲ್ಲಿದೆ?

೨೫. ರಾಷ್ಟ್ರಪತಿ ಆಡಳಿತ ಜಾರಿಗೆ ತರಲು ಸಂವಿಧಾನದ ಯಾವ ವಿಧಿ ಅವಕಾಶ ಮಾಡಿಕೊಡುತ್ತದೆ?

೨೬. ವಿಶ್ವ ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸಲಾಗುತ್ತದೆ?

೨೭. ವಿಶ್ವ ಸಂಸ್ಥೆಯ ಶಾಂತಿ ಸೈನ್ಯದ ಹೆಸರು?

೨೮. 'ಚಿಲ್ಕಾ ಸರೋವರ' ಯಾವ ರಾಜ್ಯದಲ್ಲಿದೆ?

೨೯. 'ಆಪರೇಷನ್ ಫ್ಲಡ್' ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದು?

೩೦. ಮ್ಯಾಗ್ಸಸೆ ಪ್ರಶಸ್ತಿ ಪಡೆದ ಭಾರತದ ವ್ಯಂಗ್ಯ ಚಿತ್ರಕಾರ ಯಾರು?

೩೧. ಅಕ್ಷರಗಳನ್ನು ಕಲಾತ್ಮಕವಾಗಿ ಬರೆಯಲು ಏನೆಂದು ಕರೆಯುತ್ತಾರೆ?

೩೨. ಸುಭಾಸ್ ಚಂದ್ರ ಬೋಸ್ ಯಾವ ಪತ್ರಿಕೆಗೆ ಸಂಪಾದಕರಾಗಿ ಕೆಲಸ ಮಾಡಿದ್ದರು?

೩೩. ಮೊದಲ ಗಾಂಧಿ ಶಾಂತಿ ಪ್ರಶಸ್ತಿ ಪಡೆದುಕೊಂಡ ಜ್ಯೂಲಿಯಸ್ ನೈರೆರೆ ಯಾವ ದೇಶಕ್ಕೆ ಅಧ್ಯಕ್ಷರಾಗಿದ್ದರು?

೩೪. 'ಮಿಡ್‌ನೈಟ್ ಚಿಲ್ಡ್ರನ್' ಕಾದಂಬರಿ ಬರೆದವರು ಯಾರು?

೩೫. 'ಗ್ರಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ' ಎಂದು ಯಾರನ್ನ ಕರೆಯುತ್ತಾರೆ?

೩೬. ನ್ಯಾಷನಲ್ ಬೊಟಾನಿಕಲ್ ಗಾರ್ಡನ್ ಎಲ್ಲಿದೆ?

೩೭. ಇಂಗ್ಲಿಷ್ ಭಾಷೆ ಯಾವ ರಾಜ್ಯದ ಆಡಳಿತ ಭಾಷೆಯಾಗಿದೆ?

೩೮. ಏಷ್ಯಾ ಖಂಡದ ಅತಿ ದೊಡ್ಡ ಮರುಭೂಮಿ ಯಾವುದು?

೩೯. ಅಮ್ನೆಸ್ಟಿ ಇಂಟರ್ ನ್ಯಾಷನಲ್ ಯಾವ ವರ್ಷ ಸ್ಥಾಪಿಸಲಾಗಿದೆ?

೪೦. ವೈದ್ಯ ಪಿತಾಮಹ ಎಂದು ಯಾರನ್ನ ಕರೆಯಲಾಗುತ್ತದೆ?

೪೧. ದಕ್ಷಿಣ ಭಾರತದ ದೊಡ್ಡ ನದಿ ಯಾವುದು?

೪೨. 'ಪ್ರೇಮ ಭಾಟಿಯಾ' ಪ್ರಶಸ್ತಿ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದು?

೪೩. ಪ್ರಖ್ಯಾತ ಸರೋದ್ ವಿದ್ವಾಂಸ ಉಸ್ತಾದ್ ಅಲಿ ಅಕ್ಬರ್‌ಖಾನ್‌ರಿಗೆ ಅಮೆರಿಕಾ ನೀಡಿದ ಪ್ರಶಸ್ತಿ ಯಾವುದು?

೪೪. ಯುನೆಸ್ಕೊದಲ್ಲಿ ಇತ್ತೀಚೆಗೆ ಸೇರಿದ ದೇಶ ಯಾವುದು?

೪೫. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಕಛೇರಿ ಇರುವುದು ಎಲ್ಲಿ?

೪೬. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಎಂ. ಚಿದಾನಂದ ಮೂರ್ತಿಯವರ ಕೃತಿ ಯಾವುದು?

೪೭. ರಾಷ್ಟ್ರಪತಿಯವರು ಲೋಕಸಭೆಗೆ ಎಷ್ಟು ಜನ ಸದಸ್ಯರನ್ನ ನೇಮಕ ಮಾಡುತ್ತಾರೆ?

೪೮. 'ಉತ್ತರ ಖಂಡ' ಪ್ರತ್ಯೇಕ ರಾಜ್ಯ ಹೋರಾಟ ಯಾವ ರಾಜ್ಯಕ್ಕೆ ಸಂಬಂಧಿಸಿದ್ದು?

೪೯. ಭಾರತದಲ್ಲಿ ಉಪಗ್ರಹ ಉಡಾವಣಾ ಕೇಂದ್ರ ಎಲ್ಲಿದೆ?

ಉತ್ತರಗಳು :

೧. ಫ್ರಾನ್ಸ್, ೨. ಎಸ್. ಕೆ. ಸಿನ್ಹಾ, ೩. ರೊದ್ದಂ ನರಸಿಂ, ೪. ಬಿ.ಸಿ. ಜೋಶಿ ೫. ಜಿಮ್ಮಿ ಕಾರ್ಟರ್, ೬. ಕೇರಳ, ೭.ಕಲ್ಪನಾ ಚಾವ್ಲಾ, ೮. ಚಲಾವಣೆಯ ಶೇಕಡಾ ೪ ರಷ್ಟು, ೯. ಎಂ.ಎಸ್. ಸುಬ್ಬಲಕ್ಷ್ಮಿ, ೧೦. ಟಿ. ಆರ್. ಸತೀಶ್ ಚಂದ್ರನ್, ೧೧. ನ್ಯಾಯಮೂರ್ತಿ ಜೀವನ ರೆಡ್ಡಿ, ೧೨. ರೋಮ್, ೧೩. ಕಾಶ್ಮೀರ, ೧೪. ಡಾ. ಕೆ. ಆರ್. ಶಿವನ್, ೧೫. ಚಂಡೀಗಡ, ೧೬. ಎಸ್. ರಾಧಾಕೃಷ್ಣನ್, ೧೭. ಕುಪ್ಪಂ (ಆಂಧ್ರಪ್ರದೇಶ), ೧೮. ಜನವರಿ ೧೨, ೧೯. ಸಮುದ್ರ ಗುಪ್ತ, ೨೦. ನೃತ್ಯಕ್ಕೆ ರೂಪಕೊಡುವ ಕಲೆ, ೨೧. ಸೆಂಟ್ರಲ್ ಇಂಟಲಿಜೆನ್ಸ್ ಏಜೆನ್ಸಿ, ೨೨. ಆಡಮ್ ಸ್ಮಿತ್, ೨೩. ಗುರುಗೋವಿಂದ ಸಿಂಗ್, ೨೪. ಭಾರತ ಶ್ರೀಲಂಕಾದ ಮಧ್ಯ, ೨೫. ೩೫೬, ೨೬. ಡಿಸೆಂಬರ ೧೦, ೨೭. ಬ್ಲೂ ಹೆಲ್ಮೆಟ್ಸ್, ೨೮. ಒರಿಸ್ಸಾ, ೨೯. ಹಾಲು ಉತ್ಪಾದನಾಕ್ಷೇತ್ರ, ೩೦. ಆರ್. ಕೆ. ಲಕ್ಷ್ಮಣ, ೩೧. ಕಾಲಿಗ್ರಾಫಿ, ೩೨. ಬಂಗ್ಲಾರ್ ಕಥಾ ಫಾರ್ವರ್ಡ್, ೩೩. ಫಾರ್ವರ್ಡ್ ಬ್ಲಾಕ್, ೩೪. ಟಾಂಜಾನಿಯಾ, ೩೫. ಸಲ್ಮಾನ್ ರಶ್ದಿ, ೩೬. ದಾದಾಬಾಯಿ ನವರೋಜಿ, ೩೭. ಲಕ್ನೊ, ೩೮. ನಾಗಲ್ಯಾಂಡ್, ೩೯. ಗೋಬಿ, ೪೦. ೧೯೬೧, ೪೧. ಹಿಪ್ಪೊಕ್ರಟಿಸ್, ೪೨. ಗೋದಾವರಿ, ೪೩. ಪತ್ರಿಕೋದ್ಯಮ, ೪೪. ನ್ಯಾಷನಲ್ ಹೆರಿಟೇಜ್, ೪೫. ಬ್ರಿಟನ್, ೪೬ ಮನಿಲಾ, ೪೭. ಹೊಸತು ಹೊಸತು, ೪೮. ಇಬ್ಬರು, ೪೯. ಉತ್ತರ ಪ್ರದೇಶ, ೫೦. ಶ್ರೀಹರಿ ಕೋಟ.

ರಹಸ್ಯ ಶೋಧಕರ ಗುರು ④



ಆಕಾಶದಿಂದ ಹಾವು, ಇರುವೆ, ಹುಳ, ತರಕಾರಿಗಳು, ಉಪ್ಪು, ಅರ್ಧ ಉರಿದ ಇದ್ದಲು ಮುಂತಾದವುಗಳು ಸುರಿದ ಬಗ್ಗೆ ಆತ ದಾಖಲಿಸಿದ್ದಾನೆ. ತಿಳಿ ಶುಭ್ರವಾದ ಆಗಸದಿಂದ ಒಂದೇ ಸಮನೆ ಕಪ್ಪೆಗಳ ಸುರಿಮಳೆಯಾಗಿದೆ ಎಂದರೆ ಯಾರಾದರೂ ನಂಬಲು ಸಾಧ್ಯವೇ?

■ **ನಾರಾಯಣ ಎಂ. ಭಟ್**



ನಿಗೂಢಜಗತ್ತಿನ ರಹಸ್ಯಗಳನ್ನು ಭೇದಿಸುವುದು ಸುಲಭದ ಕೆಲಸವಲ್ಲ. ಮೊಟ್ಟ ಮೊದಲನೆಯದಾಗಿ ನಿಗೂಢ ವಿಷಯ ಹಾಗು ವಿದ್ಯಮಾನಗಳನ್ನು ಆಮೂಲಾಗ್ರವಾಗಿ ಅರಿಯಬೇಕಾಗುತ್ತದೆ. ಅವುಗಳನ್ನು ಯಾವ ಮೂಲದಿಂದ ಪಡೆಯಲಾಗಿದೆ ಎನ್ನುವುದನ್ನು ಪತ್ತೆಹಚ್ಚಬೇಕಾಗುತ್ತದೆ. ಅದು ಕೇವಲ ಗಾಳಿಸುದ್ದಿಯೋ ಅಥವಾ ನಂಬಲರ್ಹವಾದ ಸಾಕ್ಷ್ಯಾಧಾರಗಳಿಂದ ಕೂಡಿದ ಮಾಹಿತಿಯೋ ಎನ್ನುವುದನ್ನು ಶ್ರಮ ವಹಿಸಿ ದೃಢ ಪಡಿಸಿಕೊಳ್ಳಬೇಕಾಗುತ್ತದೆ.

ಇಷ್ಟೆಲ್ಲಾ ಮಾಡಲು, ನಿಗೂಢ ಜಗತ್ತಿನ ಕರಾಳ ಅಂಚಿಗೆ ಹೋಗುವ ಧೈರ್ಯ ತೋರಬೇಕು; ಎದೆಗುಂದದೆ ತಾಳ್ಮೆಯಿಂದ ವರ್ತಿಸುವ ಮನಸ್ಥಿತಿಬೇಕು. ಈ ಕೆಲಸವನ್ನು ಮೊದ ಮೊದಲಿಗೆ ಕೇವಲ ಹವ್ಯಾಸವೆಂದು ಪರಿಗಣಿಸಿದರೂ, ಮುಂದೆ ಇದೇ ಒಂದು ಗೀಳಾಗಿ ಜೀವನದ ಪರಮ ಉದ್ದೇಶವಾಗಿ ಮಾರ್ಪಾಡಾಗುವ ಅಪಾಯವೂ ಇದೆ!

ಇಷ್ಟೆಲ್ಲ ಪೀಠಿಕೆ, ಯಾಕೆಂದರೆ ಇಂದು ನಾನು ಹೇಳ ಹೊರಟಿರುವುದು ನಿಗೂಢ ಜಗತ್ತಿನ ರಹಸ್ಯಗಳನ್ನು ಭೇಧಿಸುವ ಛಲ ಹೊತ್ತ ಮೂಲಪುರುಷನೊಬ್ಬನ ಬಗ್ಗೆ.

1874ರಲ್ಲಿ ನ್ಯೂಯಾರ್ಕ್‌ನ ಬಳಿ ಜನಿಸಿದ ಚಾರ್ಲ್ಸ್ ಫೋರ್ಟ್ (Charles Fort)ನಿಗೆ ತಾನು ಮುಂದೊಂದು ದಿನ ನಿಗೂಢ ಜಗತ್ತಿನ ಅನ್ವೇಷಕರ ಪಾಲಿಗೆ ಆರಾಧ್ಯದೈವನಾಗುತ್ತೇನೆಂದು ಬಹುಶಃ ಗೊತ್ತಿರಲಿಕ್ಕಿಲ್ಲ. ಪತ್ರಿಕಾವರದಿಗಾರನಾಗಿ ತನ್ನ ವೃತ್ತಿ ಜೀವನ ಆರಂಭಿಸಿದ ಚಾರ್ಲ್ಸ್‌ನಿಗೆ ಆ ರಂಗದಲ್ಲಿ ಗೆಲುವಿಗಿಂತ ಸೋಲೇ ಅಧಿಕವಾಗಿ ಲಭಿಸಿತ್ತು. ಆದರೆ, ಅವನಿಗೆ 42 ವರ್ಷ ತುಂಬಿದಾಗ, ಹಿರಿಯರ ಆಸ್ತಿಯಲ್ಲಿ ಬಂದ ಪಾಲು ಅವನ ಜೀವನದ ದಿಸೆಯನ್ನು ಬದಲಿಸಿತು.

ಹೆಚ್ಚು ಕಷ್ಟ ಪಡದೆ ಬದುಕುವ ಪರಿಸ್ಥಿತಿ ಈಗ ಉಂಟಾದ್ದರಿಂದ, 'ಚಾರ್ಲ್ಸ್' ಈಗ ತನ್ನ ಹೆಜ್ಜೆಯನ್ನು ನಿಗೂಢ ಜಗತ್ತಿನೊಳಕ್ಕೆ ಇರಿಸಿದ. ತನ್ನ ಜೀವನದ ಮುಂದಿನ ಕಾಲಶತಮಾನವನ್ನು ನಿಗೂಢಜಗತ್ತಿನ ಅನ್ವೇಷಣೆಗಾಗಿ ಮೀಸಲಿಟ್ಟ.

ನ್ಯೂಯಾರ್ಕ್‌ನ ಪಬ್ಲಿಕ್ ಲೈಬ್ರರಿಯಲ್ಲಿ ಪ್ರತಿಯೊಂದು ಪುಸ್ತಕ ಹಾಗು ಪತ್ರಿಕೆಯನ್ನು ತಿರುವಿ ಹಾಕಿ, ನಿಗೂಢ ವಿಷಯಗಳನ್ನು ಸಂಗ್ರಹಿಸಿದ. ರಾತ್ರಿ ಹಗಲೆನ್ನದೇ ವಿಷಯ ಸಂಗ್ರಹಣೆಯಲ್ಲಿ ತೊಡಗಿದ ಈತನಿಗೆ ನಿಗೂಢ ಜಗತ್ತಿನ ಹುಚ್ಚು ಹಿಡಿದಿತ್ತು ಎಂದರೂ ತಪ್ಪಿಲ್ಲ. ಮುಂದೆ ತಾನು ಲಂಡನ್‌ನಲ್ಲಿ ವಾಸವಾಗಿದ್ದಾಗ್ಯೂ ಅಂದಿನ ಎಲ್ಲಾ ಪ್ರಸಿದ್ಧ ಪತ್ರಿಕೆ ಹಾಗೂ ವಿಜ್ಞಾನದ ನಿಯತಕಾಲಿಕಗಳನ್ನು ಕಣ್ಣಲ್ಲಿಕಣ್ಣಿಟ್ಟು ಓದಿ, ಅವುಗಳಲ್ಲಿ ಬಂದ ಅನೇಕಾನೇಕ ನಿಗೂಢಮಯ ವಿಷಯ ಹಾಗೂ ವಿದ್ಯಮಾನಗಳನ್ನು ದಾಖಲು ಮಾಡಿಟ್ಟುಕೊಂಡ.

ನಿನ್ನಂಥ ಅಪ್ಪ ಇಲ್ಲ....



ಬೆಕ್ಕಿನ ಮೋರೆಯಂತೆ ಕಾಣುವ ಕೆಲವು ಮೀನುಗಳು Cat fish ಜಾತಿಗೆ ಸೇರಿದವು.

ಈ ಮೀನುಗಳಲ್ಲಿ ವಿಸ್ಮಯವೊಂದು ಕಂಡು ಬರುತ್ತದೆ.

ಕಡಲಲ್ಲಿ ವಾಸಿಸುವ ಬೆಕ್ಕು ಮೀನುಗಳ ವೈಶಿಷ್ಟ್ಯವೇನೆಂದರೆ ಗಂಡು ಮೀನು ತಾನು ಫಲಭರಿತ ಮಾಡಿದ ಮೊಟ್ಟೆಗಳನ್ನು ತನ್ನ ಬಾಯಿಯೊಳಗೆ ಇಟ್ಟುಕೊಂಡು, ಅವುಗಳಿಂದ ಮರಿಗಳು ಹೊರಬಂದು, ಸ್ವತಂತ್ರವಾಗುವ ವರೆಗೂ ಕಾಳಜಿ ವಹಿಸುತ್ತದೆ.

ಹೀಗಾಗಿ, ಅಪ್ಪನ ಬಾಯಿಯೇ ಮರಿಗಳ ಆಟದ ಮೈದಾನ. ಅವುಗಳು ಆ ಬಾಯಿಯೊಳಕ್ಕೆ ಸದಾ ಇರುವುದರಿಂದ ಗಂಡು ಮೀನು ಏನನ್ನು ಸೇವಿಸಲಾಗದೆ ಉಪವಾಸ ದಿಂದ ಬಡಕಲಾಗಿ ಬಿಡುತ್ತದೆ.

ಹೆಣ್ಣು ಮೀನು ಮಾತ್ರ ಉಂಡು... ತಿಂದು ಮುಂದಿನ ಹೆರಿಗೆಗೆ ತಯ್ಯಾರಿ ನಡೆಸಿರುತ್ತದೆ.

ಇದು ! ವಿಸ್ಮಯವಲ್ಲದೆ ಇನ್ನೇನು! ಯಾಕೆ ಕೆಲವು ಪ್ರಾಣಿಗಳು ಈ ರೀತಿ ಮಾಡುತ್ತವೆ ಎನ್ನುವುದು ಇಂದಿಗೂ ಸಂಪೂರ್ಣವಾಗಿ ತಿಳಿದಿಲ್ಲ.

ಕಡಲ ಕುದುರೆ (Sea Horse)

ಈ ಜಾತಿಯ ಮೀನುಗಳಲ್ಲಿ ಯೂ ಸಹ ತಂದೆಯೇ ಮರಿಗಳ ಪಾಲಿನ care taker.

ಗಂಡು ಕಡಲ ಕುದುರೆಗಳಲ್ಲಿ ಕಾಂಗ ರೂಗಿರುವಂತೆ ಹೊಟ್ಟೆಯಲ್ಲಿ ಒಂದು ಚೀಲವಿರುತ್ತದೆ. ಈ ಚೀಲದಲ್ಲಿ ಮೊಟ್ಟೆಹಾಕಿ



ತಾಯಿ ದೂರ ಹೊರಟು ಹೋಗುತ್ತಾಳೆ. ಆಮೇಲೆ ಮರಿಗಳಿಗೆ ತಂದೆಯೇ ಗತಿ! ■

ಅವನು ದಾಖಲಿಸಿಟ್ಟುಕೊಂಡ ವಿಷಯಗಳಿಗೆ ಅಲ್ಲಿಯ ತನಕ ಯಾರ ಬಳಿಯು ಉತ್ತರವಿರಲಿಲ್ಲ ಹಾಗು ಸಮರ್ಪಕವಾದ ವಿವರಣೆಯೂ ಇರಲಿಲ್ಲ!

ಉತ್ತರ ಕಂಡುಕೊಳ್ಳುವ ಉತ್ಸಾಹವಿದ್ದ ಕೆಲವರಿಗೆ ಈ ನಿಗೂಢ ವಿಷಯಗಳನ್ನು ವೈಜ್ಞಾನಿಕ ವಾಗಿ ವಿಶ್ಲೇಷಿಸುವುದೇ ಅಥವಾ ಇವುಗಳನ್ನು ಮಾಯಾ ಮಂತ್ರಗಳ ಗುಂಪಿಗೆ ಸೇರಿಸಿ ಬಿಡಬೇಕೆ? ಎನ್ನುವುದನ್ನು ನಿರ್ಣಯಿಸಲಾಗದೇ ಒದ್ದಾಡುವಂತಹ ಪರಿಸ್ಥಿತಿ ಇತ್ತು. ಕಾರಣ, ಇಂತಹ ವಿಷಯಗಳ ಬಗ್ಗೆ ಸರಿಯಾದ ಮತ್ತು ಅಧಿಕೃತವಾದ ಮಾಹಿತಿ ಹಾಗೂ ದಾಖಲೆಗಳು ಸುಲಭವಾಗಿ ಲಭ್ಯವಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಚಾರ್ಲ್ಸ್ ಮಾಡಿದ ಮಹಾನ್ ಕೆಲಸವೆಂದರೆ ತಾನು ಕಷ್ಟಪಟ್ಟು ಕಲೆ ಹಾಕಿದ್ದ ಮಾಹಿತಿಗಳನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು. ಈ ಪುಸ್ತಕಗಳನ್ನು ಓದಿದ ಯಾರನ್ನೇ ಆಗಲಿ, ಅವರು ನಿಗೂಢ ಜಗತ್ತಿನ ರಹಸ್ಯಗಳನ್ನು ಭೇಧಿಸುವ ಛಲ ತೊಡುವಂತೆ ಪ್ರೇರೇಪಿಸುತ್ತವೆ ಎಂದರೆ ಉತ್ಪ್ರೇಕ್ಷೆ ಇಲ್ಲ. ಇಂದಿಗೂ ಅಮೇರಿಕದಲ್ಲಿ ಚಾರ್ಲ್ಸ್ ಫೋರ್ಟ್‌ನನ್ನು 'ನಿಗೂಢ ಜಗತ್ತಿನ ಅನ್ವೇಷಕರ ಮಹಾನ್ ಗುರು' ಎಂದು ಆರಾಧಿಸುವ ಜನ ಇದ್ದಾರೆ. ಅವನು ಸಂಗ್ರಹಿಸಿದ್ದ ಮಾಹಿತಿಗಳೊಂದಿಗೆ ಇಂದಿನ ತನಕ ನಡೆದ ನಿಗೂಢ ಸಂಗತಿಗಳನ್ನು ಸೇರಿಸಿ ಕಂಪ್ಯೂಟರ್‌ನಲ್ಲಿ ಸುರಕ್ಷಿತವಾಗಿಟ್ಟುಕೊಳ್ಳಲಾಗಿದೆ.

ಚಾರ್ಲ್ಸ್‌ನು 4 ಪುಸ್ತಕಗಳನ್ನು ಪ್ರಕಟಣೆಗೊಳಿಸಿದ. ಅವುಗಳೆಂದರೆ The Book of the Damned, Newlands, Wild Talents' ಹಾಗು ತುಂಬಾ ವಿಚಿತ್ರ ಹೆಸರಿರುವ ಪುಸ್ತಕ LO!

The Book of the Damned ನ ಮೊದಲಲ್ಲಿ ಮೂಡಿ ಬಂದಿರುವ ಆತನ ನುಡಿಗಳು, ಅವನ ಕಾರ್ಯದ ಮೇಲೆ ಬೆಳಕು ಚೆಲ್ಲುವಂತಿವೆ. ನಾನು ಮಾಡುತ್ತಿರುವ ಕಾರ್ಯವು ವೈಜ್ಞಾನಿಕ ಹಾಗು ಆಧ್ಯಾತ್ಮಿಕ ಚೌಕಟ್ಟಿನ ಹೊರ ವಲಯದಲ್ಲಿರುವ ಕತ್ತಲ ಲೋಕದ ಮೇಲೆ ಬೆಳಕು ಚೆಲ್ಲುವ ಆಸೆಯಿಂದ ಕೂಡಿದೆ. 'ನನ್ನ ಪಾಲಿಗೆ ಇದು ಬಹಳ ಗೌರವ ಪೂರ್ಣ ಕೆಲಸವಾಗಿದ್ದರೂ, ಬಹಳಷ್ಟು ಜನ ಇದನ್ನು ಕಸಕ್ಕಿಂತ ಕಡೆ ಎಂದು ಪರಿಗಣಿಸುತ್ತಾರೆ ಎಂದು ನಾನು ಬಲ್ಲೆ. ಆದರೆ ಈ ವಿಷಯಗಳ ಮೇಲೆ ಮುಸುಕಿರುವ ಧೂಳನ್ನು ಒರಸಿದಾಗ ದೊರೆಯುವ ಸಂಗತಿಗಳು ನಿಜಕ್ಕೂ ವಿಚಾರ ಯೋಗ್ಯ'.

ಚಾರ್ಲ್ಸ್ ಫೋರ್ಟ್‌ನು ಸಂಗ್ರಹಿಸಿದ ನಿಗೂಢ ಸಂಗತಿಗಳು ನಿಜಕ್ಕೂ ತುಂಬಾ ವಿಚಿತ್ರ ಹಾಗು ವಿಕೃತವಾಗಿವೆ. ಉದಾಹರಣೆಗೆ The Book of the Damned ನಲ್ಲಿ ಆತ ಆಕಾಶದಿಂದ ಭೂಮಿಗೆ ಸುರಿದ ವಸ್ತುಗಳ ಬಗ್ಗೆ ರೋಚಕವಾಗಿ ವಿವರಣೆ ನೀಡಿದ್ದಾನೆ.

ಆಕಾಶದಿಂದ ಹಾವು, ಇರುವೆ, ಹುಳ, ತರಕಾರಿಗಳು, ಉಪ್ಪು, ಅರ್ಧ ಉರಿದ ಇದ್ದಲು ಮುಂತಾದವುಗಳು ಸುರಿದ ಬಗ್ಗೆ ಆತ ದಾಖಲಿಸಿದ್ದಾನೆ. ತಿಳಿ ಶುಭ್ರವಾದ ಆಗಸದಿಂದ ಒಂದೇ ಸಮನೆ ಕಪ್ಪೆಗಳ ಸುರಿಮಳೆಯಾಗಿದೆ ಎಂದರೆ ಯಾರಾದರೂ ನಂಬಲು ಸಾಧ್ಯವೇ? ಆದರೆ ಚಾರ್ಲ್ಸ್ ಪುಸ್ತಕದ ತುಂಬೆಲ್ಲಾ ಇಂತಹ ಅನೇಕಾನೇಕ ನಿಗೂಢಗಳೇ ತುಂಬಿವೆ.

(ಮುಂದಿನ ಪುಟಕ್ಕೆ)

ಬಡ್ಡಿ ಎಷ್ಟಾಗುತ್ತೆ ಗೊತ್ತೆ?

'ಹನುಮಯ್ಯ ನೀನು ಈ ರೀತಿ ಬಡ್ಡಿ ಕೊಡ್ತಾ ಇದ್ರೆ ಸಾಲ ಹಾಗೇ ಉಳ್ಕೊಂಡು, ಬಡ್ಡಿ ಕೊಡ್ತಾ ಇರಬೇಕಾಗುತ್ತೆ ಯಾವಾಗ್ಲೂ' ಅಂಜನಯ್ಯ ಸ್ನೇಹಿತನಿಗೆ ಹೇಳಿದ.

'ಏನು ಮಾಡೋದು ಹೇಳು? ಖರ್ಚು ಸರಿತೂಗಿಸೋಕೆ ಸಾಲ ಮಾಡಲೇ ಬೇಕಾಗುತ್ತೆ. ನಿನಗೇ ಗೊತ್ತಿದೆಯಲ್ಲ, ಬೆಲೆಗಳು ಹೇಗೆ ಏರ್ತಾ ಇವೇಂತ? ಹನುಮಯ್ಯ ಹೇಳಿದ.

'ಅದ್ಸರಿ, ಸಾಲಮಾಡಬೇಕಾಗುತ್ತೆ, ಎಷ್ಟೋ ಸಂದರ್ಭಗಳಲ್ಲಿ. ಆದರೆ ಬಡ್ಡಿ ವ್ಯಾಪಾರಿ, ಈಗ ನಿನಗೆ ಹೇಳಿರೋ ರೀತಿ ಕೊಡ್ತಾ ಹೋದ್ರೆ ಬರೀ ಬಡ್ಡೀನೆ ಕೊಡ್ತಾ ಹೋಗ್ತಿ... ಏಳು ತಿಂಗಳಲ್ಲಿ ಅಸಲಿಗಿಂತ ಬಡ್ಡೀನೆ ಜಾಸ್ತಿ ಕೊಟ್ಟಿರ್‍ತೀಯ, ಅಷ್ಟೆ'

'ಅದೇನಯ್ಯ ಹಾಗೆ ಹೇಳ್ತೀಯ? ಈಗ ಕೊಟ್ಟಿರೋ ಒಂದು ಸಾವಿರವನ್ನ ಏಳನೇ ತಿಂಗಳು ಕೊಟ್ಬಿಡು ಅಂತ ಹೇಳಿದ್ದಾನೆ. ಬಡ್ಡಿ ಕೂಡ ಎಷ್ಟು ಕಡಿಮೆ' ಹನುಮಯ್ಯ ಮತ್ತೆ ಹೇಳಿದ.

'ಅದೇ ಅವ್ನ ಬುದ್ಧಿವಂತಿಕೆ. ಏಳನೇ ತಿಂಗಳು ಕೊಡೋ ಬಡ್ಡಿ ಸಂಖ್ಯೆ ನೋಡಿದರೆ ಜ್ವರ ಬರುತ್ತೆ, ಎಂಟನೇ ತಿಂಗಳೂ ಬಡ್ಡಿ ಎಷ್ಟೂಂತ ಲೆಕ್ಕ ಹಾಕಿದ ತಕ್ಷಣ ಎದೆ ಒಡೆದು ಹೋಗುತ್ತೆ, ಅಷ್ಟೆ' ಅಂಜನಯ್ಯ ಹೇಳಿದ.

'ನೀ ಹೇಳಿದ್ದೇ ಅರ್ಥವಾಗ್ಲಿಲ್ಲಪ್ಪ'

'ಅದೇ ಅವ್ನ ಬುದ್ಧಿವಂತಿಕೇಂತ ನಾನು ಆಗ್ಲೇ ಹೇಳಿದ್ನಲ್ಲಪ್ಪ. ಈಗ ನೋಡು ಬರೆದು ತೋರಿಸ್ತೀನಿ. ಅವನು ಬಡ್ಡಿ ಕೇಳಿದ್ದು ನಿನ್ನ ಹೀಗೆ-'

ಮೊದಲನೇ ತಿಂಗಳು............... 1 ರೂ

ಎರಡನೇ ತಿಂಗಳು ಇದರ ಮೂರರಷ್ಟು -

1x3 = 3 ರೂ

ಮೂರನೇ ತಿಂಗಳು ಇದರ ಮೂರರಷ್ಟು

3x3 = 9 ರೂ

ನಾಲ್ಕನೇ ತಿಂಗಳು ಇದರ ಮೂರರಷ್ಟು -

9x3 = 27 ರೂ

ಐದನೇ ತಿಂಗಳು ಇದರ ಮೂರರಷ್ಟು -

27x3 = 81 ರೂ

ಆರನೇ ತಿಂಗಳು ಇದರ ಮೂರರಷ್ಟು -

81x3 = 243 ರೂ

ಅವನು ಕೇಳಿದ್ದು ಮೊದಲನೇ ತಿಂಗಳು ಒಂದು ರೂಪಾಯಿ. ಆರನೇ ತಿಂಗಳು ಅವನು ಕೇಳೋದು 243 ರೂಪಾಯಿ! ಏಳನೇ ತಿಂಗಳು ಎಷ್ಟಾಗುತ್ತೆ, ಗೊತ್ತಾ?

243X 3= 729ರೂ

ಆಗ ಅವನ ಬುದ್ಧಿವಂತಿಕೆ ನಿನಗೆಲ್ಲಿ ಗೊತ್ತಾಗ್ಬಿಡುತ್ತೋ ಅಂತ, ಏಳನೇ ತಿಂಗಳು ಅಸಲು ಹಣವನ್ನು ವಾಪಸ್ ಕೊಟ್ಬಿಡು ಸಾಕು ಅಂತ ಹೇಳಿದಾನೆ. ಯಾಕೆಂದ್ರೆ, 1000 ರೂಗಳಿಗೆ 729 ರೂ ಬಡ್ಡಿ ಕೊಡ್ಬೇಕಾಯ್ತಲ್ಲಾಂತ ನೀನು ಯೋಚ್ನೆ ಮಾಡ್ತಿ ಅಂತ'

'ಏನು? ಏಳನೇ ತಿಂಗಳು 729 ರೂ ಬಡ್ಡಿ ಆಗುತ್ತಾ?

'ಹೌದಪ್ಪಾ, ಈಗ ನೋಡು ಒಂದು ಲೆಕ್ಕ ತೋರಿಸ್ತೀನಿ... ಅದರಲ್ಲಿ ನೀನು ಪ್ರತೀ ತಿಂಗಳು ಬಡ್ಡೀ ಕೊಡೋದಷ್ಟೇ ಅಲ್ಲ, ಈ ಸಂಖ್ಯೆಗಳು ಹೇಗಿವೆ? ಅವುಗಳನ್ನು ಕೂಡೋದು ಹೇಗೆ? ಇವೆಲ್ಲಾ ಗೊತ್ತಾಗುತ್ತೆ'

'ಆಯ್ತು ಹೇಳಪ್ಪ'

'ಈ ಸಂಖ್ಯೆಗಳು ಹೀಗಿವೆ-

1, 3, 9, 27, 81...

ಇವುಗಳ ಮೊತ್ತ ಏನು? ಅಂದರೆ

$1+3+(3X3)+(3X3X3)+(3X3X3X3)+....$

ಈ ರೀತಿ ಸಂಖ್ಯೆಗಳ ಗುಣ ವಿಶೇಷ ತಿಳ್ಕೊ.....

$1 = 1$

$3 = 1X2+1$

$9 = (1+3)X2+1$

$27 = (1+3+9)X2+1$

$81 = (1+3+9+27)X2+1$

ಇದರಿಂದ ಏನು ಗೊತ್ತಾಗುತ್ತೆ?'

'ಏನು?'

'ಇದರಲ್ಲಿರುವ ಪ್ರತಿಯೊಂದು ಸಂಖ್ಯೆಯೂ ಅದರ ಹಿಂದಿನ ಸಂಖ್ಯೆಗಳ ಮೊತ್ತದ ಎರಡರಷ್ಟಕ್ಕೆ ಒಂದನ್ನು ಸೇರಿಸಿದಷ್ಟು.....

ಉದಾಹರಣೆಗೆ: $27 = (1+3+9)X2+1$

= ಇದರ ಹಿಂದಿನ ಸಂಖ್ಯೆಗಳ ಮೊತ್ತ X2+1

ಗೊತ್ತಾಯ್ತ?'

'ಗೊತ್ತಾಯ್ತು?'

'ಈಗ ಇಂತಹ ಸಂಖ್ಯೆಗಳ ಮೊತ್ತ ಕಂಡು ಹಿಡೀಬೇಕು. ಅಂದ್ಕೊಳ್ಳೋಣ.

ಉದಾಹರಣೆಗೆ:-

1+3+9+27+81+243+729

ಆಗ ಹೀಗೆ ಮಾಡ್ಬೇಕು

ಕೊನೆಯ ಸಂಖ್ಯೆ - 729

ಈ ಸಂಖ್ಯೆಯಲ್ಲಿ ಒಂದನ್ನು ಕಳೆದರೆ

- (729- 1) - 728

ಇದರ ಅರ್ಧದಷ್ಟು ಅಂದರೆ,

-728/2 = 364

ಈಗ, ಒಟ್ಟು ಮೊತ್ತ ಇಷ್ಟು ಬರುತ್ತೆ

- 729 + 364 = 1093

ಅಂದರೆ,

1+3+9+27+81+243+729= 1093

ಗೊತ್ತಾಯ್ತ ನಿನಗೆ, ಏಳು ತಿಂಗಳಲ್ಲಿ ಎಷ್ಟು ಬಡ್ಡಿ ಕೊಡ ಬೇಕಾಗುತ್ತೇಂತ? ಒಂದು ಸಾವಿರ ರೂಪಾಯಿ ಸಾಲ.. ಏಳು ತಿಂಗಳಿಗೆ ಬಡ್ಡಿ ೧೯೯೩. ಆದರೆ ಅಸಲು ಮಾತ್ರ ಹಾಗೆ ಉಳಿದಿರುತ್ತೆ. ಬುದ್ಧಿವಂತರು ನಿಜಕ್ಕೂ ಈ ಬಡ್ಡಿ ವ್ಯವಹಾರದವರು!

- ಸಂಗ್ರಹ : ರವಿರಾಜು

(ಹಿಂದಿನ ಪುಟದಿಂದ)

ಆಕಾಶದಿಂದ ಬೀಳುವ ವಸ್ತುಗಳಂತೆಯೇ, ಭೂಮಿಯನ್ನು ಅಗೆದಾಗ ದೊರೆತ ರಹಸ್ಯಮಯ ವಸ್ತುಗಳ ಬಗ್ಗೆಯೂ ಅವನಲ್ಲಿ ದಾಖಲೆಗಳಿವೆ. ಈ ಎಲ್ಲದರ ಬಗ್ಗೆ ನಾನು ನಿಗೂಢಜಗತ್ತಿನಲ್ಲಿ ಮುಂದೆ ವಿವರವಾಗಿ ಬರೆಯುತ್ತೇನೆ.

ಇಂದಿಗೂ Newyorkನ Public library ಯಲ್ಲಿ ಆತನ ಕೈಬರಹಗಳನ್ನು ಸಂರಕ್ಷಿಸಿ ಇಡಲಾಗಿದೆ.

'ಚಾರ್ಲ್ಸ್‌ನ ಸಂಗ್ರಹಣೆಯಲ್ಲಿ ಅದೆಷ್ಟೋ ರಹಸ್ಯಗಳು ಇವೆ. ಇವತ್ತು ಇದೇ ವಿಶ್ವದಲ್ಲಿ ಅತ್ಯಂತ ಕುತೂಹಲ ಕೆರಳಿಸಿರುವ ಹಾರುವ ತಟ್ಟೆಗಳ ಬಗ್ಗೆಯೂ ಅಲ್ಲಿ ವಿವರಗಳು ಲಭ್ಯವಿವೆ! ಇಲ್ಲಿ ಒಂದು ವಿಷಯವನ್ನು ನಾವು ಗಮನಿಸಬೇಕು. ಚಾರ್ಲ್ಸ್ ಫೋರ್ಟ್ ಕಾರ್ಯನಿರ್ವಹಿಸುತ್ತಿರುವಾಗ ಯಾರಿಗೂ ಹಾರುವ ತಟ್ಟೆಗಳೆಂದರೇನು ಅಂತ ತಿಳಿದಿರಲಿಲ್ಲ! ಅಷ್ಟೇಏಕೆ ಅದಕ್ಕೆ 'U.F.O.' ಎಂದು ನಾಮಕರಣವೂ ಆಗಿರಲಿಲ್ಲ! ಆದರೂ ಚಾರ್ಲ್ಸ್ ಅವುಗಳ ಬಗ್ಗೆ ತುಂಬಾ ನಿಖರವಾಗಿ ವಿವರಣೆಯನ್ನು ನೀಡಿದ್ದಾನೆ ಎಂದರೆ ಅವನ ಅನ್ವೇಷಕ ಬುದ್ಧಿಯು ಎಷ್ಟೊಂದು ಚುರುಕಾಗಿತ್ತು ಹಾಗು ಅಸಾಮಾನ್ಯವಾಗಿತ್ತು ಎಂದು ತಿಳಿಯುತ್ತದೆ.

1932ರಲ್ಲಿ ಚಾರ್ಲ್ಸ್ ಫೋರ್ಟ್ ನಿಗೂಢ ಜಗತ್ತಿನೊಳಗೆ ಕಣ್ಮರೆಯಾದ. ಅವನ ಮರಣಾನಂತರವೂ, ಸಾವಿರಾರು ಜನ ಆತನ ಕೆಲಸವನ್ನು ಮುಂದುವರೆಸಿದ್ದಾರೆ. ಇಂದಿಗೂ ನಿಗೂಢ ಜಗತ್ತಿನ ವಿದ್ಯಮಾನಗಳನ್ನು 'Forteana' ರೀತಿಯಲ್ಲಿ ಸಂಗ್ರಹಿಸುವ ಕೆಲಸ ನಡೆಯುತ್ತಲೇ ಇದೆ. ನೂರಾರು ಪತ್ರಿಕೆಗಳು ಅವುಗಳನ್ನು ಪ್ರಕಟಿಸುತ್ತಲೇ ಇವೆ. ■

ಮುಜರಾಯಿ ಇಲಾಖೆಯ ಅವಜ್ಞೆಗೆ ಸಂಕೇತ!

ಮುದುಗಂದೂರಿನ ಬನಶಂಕರಿ

ಮಂಡ್ಯ ಜಿಲ್ಲೆಯು ಶಿಲ್ಪಕಲೆಗಳ ಸಂಕುಲವಾದ ಅನೇಕ ಸುಂದರ ಗುಡಿದೇಗುಲಗಳ ಪುಣ್ಯಕ್ಷೇತ್ರಗಳಿಂದ ಕೂಡಿರುವುದು ಸರ್ವವೇದ್ಯ. ಆದರೆ ಶಿಲ್ಪಕಲಾ ಕರಂಡಿಕೆಗಳಂತಿರುವ ಅಮೂಲ್ಯ ಕಲಾ ಕುಸುಮಗಳಾದ ದೇಗುಲಗಳಿಂದು ಸರಕಾರದ ಮುಜರಾಯಿ ಇಲಾಖೆಯಿಂದಲೂ ಜನರಿಂದಲೂ ಕಣ್ಮರೆಯಾಗಿ ಕುಗ್ರಾಮದಲ್ಲಿ ಗತ ಇತಿಹಾಸದ ಮೂಕಸಾಕ್ಷಿಗಳಾಗಿ ಇದ್ದೂ ಇಲ್ಲದಂತಿವೆ.

ಸಪ್ತಮಾತೃಕೆಯರ ದೇವಸ್ಥಾನಗಳು ಇರುವುದೇ ತೀರಾ ಅಪರೂಪ. ಮಂಡ್ಯ ಜಿಲ್ಲೆಯಲ್ಲಿ ಸಪ್ತಮಾತೃಕೆಯರ ಸಂಗಮವಾದ ದೇಗುಲಗಳೆರಡು ಇರುವುದು ಇಂದು ಅದೆಷ್ಟೋ ಜನರಿಗೆ ತಿಳಿದಿಲ್ಲದಿರಬಹುದು. ಆದರೆ ಇವೆರಡೂ ದೇವಸ್ಥಾನಗಳು ಭವ್ಯ ಗತ ಇತಿಹಾಸವನ್ನು ಹೊಂದಿರುವ ದಾಖಲೆಗಳಿವೆ.

ಮಂಡ್ಯ ತಾಲೂಕಿನ ಹೊಸಬೂದನೂರಿನ ಬಳಿ ಇಂತಹ ಗುಡಿಯೊಂದಿರುವುದಾದರೆ, ಇನ್ನೊಂದು ಇದೇ ತಾಲೂಕಿನ ಮುದುಗಂದೂರು ಎಂಬಲ್ಲಿದೆ. ಈ ಎರಡೂ ಗುಡಿಗಳ ದೂರದ ಅಂತರ ಸುಮಾರು ಮೂವತ್ತು ಕಿ.ಮೀಟರುಗಳು.

ಮಂಡ್ಯನಗರದಿಂದ ಹೊಳಲು, ವಿ.ಸಿ. ಫಾರಂ ಮೂಲಕ ದುದ್ದ ಬಸರಾಳು ರಸ್ತೆಯಲ್ಲಿ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ ಇಂದು ಮುದುಗಂದೂರು ಎಂದು ಹೆಸರಾದ ಪ್ರಾಚೀನ 'ಮುಚುಕುಂದಪುರ' ವಿದೆ.

ಒಂದು ಕಾಲದಲ್ಲಿ ಧರ್ಮರಕ್ಷಣೆ ಜ್ಞಾನ ಪ್ರಸಾರ, ಅನ್ನದಾನಕ್ಕೆ ಹೆಸರಾದ ಬ್ರಾಹ್ಮಣರ ಅಗ್ರಹಾರವಾಗಿದ್ದ ಮುಚುಕುಂದಪುರಿಯು ಗಂಗರ ಕಾಲದಲ್ಲಿ ಎಲ್ಲರಿಗೂ ಮುದ ನೀಡುವ, ಗಂಗರಾಜರ ಆಳ್ವಿಕೆಗೆ ಒಳಪಟ್ಟ 'ಮುದಗಂಗೂರ' ಎಂದು ಬದಲಾಯಿತು ಮುಂದೆ 'ಮುದಕಂದೂರ' ಎಂದು ಸ್ಥಳನಾಮ ಬಂತೆಂದು ಕರ್ನಾಟಕ ಎಪಿ ಗ್ರಾಫಿಯಾದಲ್ಲಿ ಉಲ್ಲೇಖವಿದೆ.

ರಸ್ತೆಯ ಪಕ್ಕದಲ್ಲಿಯೇ ಸಪ್ತಮಾತೃಕೆಯರನ್ನೊಳಗೊಂಡ ಬನಶಂಕರಿ ದೇವಸ್ಥಾನ ಇದೆ. ದೇಗುಲವು ಪೂರ್ವದಿಕ್ಕಿಗೆ ಮುಖಮಾಡಿದೆ. ದೇವಸ್ಥಾನದ ಹಿಂದುಗಡೆಯೇ ರಸ್ತೆ ಹಾದು ಹೋಗುತ್ತದೆ. (ಉತ್ತರದಿಕ್ಕಿಗೆ ಮುಂದುವರಿಯುವ ಈ ರಸ್ತೆಯಲ್ಲೇ ಸುಮಾರು ೮-೧೦ ಮೈಲು ಮುನ್ನಡೆದರೆ ಇತಿಹಾಸಪ್ರಸಿದ್ಧ ಸುಂದರ ಶಿಲ್ಪಕಲಾ ವೈಭವದೇಗುಲ ಸಿಗುತ್ತದೆ) ಈ ಬನಶಂಕರಿ ದೇವಸ್ಥಾನದ ಪೂರ್ವದಲ್ಲಿ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಪಂಚಲಿಂಗೇಶ್ವರ ಗುಡಿ ಇರುವುದು ಗೋಚರಿಸುತ್ತದೆ. ದಕ್ಷಿಣಕ್ಕೆ ವಿಸ್ತಾರವಾದ ನಿಂಗಣ್ಣಯ್ಯನ ಕೆರೆ ಇದ್ದರೆ, ಉತ್ತರಕ್ಕೆ ಹರಿಕೆರೆ ಇದೆ. ದೇವಸ್ಥಾನದ ವಾಯವ್ಯ ದಿಕ್ಕಿನಲ್ಲಿ ಸುಮಾರು ಅರ್ಧ ಕಿ.ಮೀ ದೂರದಲ್ಲಿರುವ ಬೆಟ್ಟದ ತಪ್ಪಲಲ್ಲಿರುವ ಬನದಲ್ಲಿ ಈ ಬನಶಂಕರಿ ದೇವಳದ 'ಬನದಮ್ಮ' ವಾಸಿಸುತ್ತಾಳೆ ಎಂಬುದು ಪ್ರತೀತಿ. ಈ ಬನಶಂಕರಿಯನ್ನು 'ದೊಡ್ಡಮ್ಮ' ಎಂಬ ಹೆಸರಿನಿಂದಲೂ ಕರೆಯುವ ವಾಡಿಕೆ ಇದೆ.

ಗಂಗರ ಕಾಲದ ಶಿವಮಾರನೆಂಬ ಪಾಳೇಗಾರನ ಆಳ್ವಿಕೆಗೆ ಒಳಪಟ್ಟ ಈ ಮುಚುಕುಂದಪುರದಲ್ಲಿ ಚೆನ್ನಿಗಾಯ, ರಾಮೇಶ್ವರ, ಪಟ್ಟಲದಮ್ಮ, ಹುಚ್ಚಮ್ಮ, ದೇಗುಲಗಳೂ ಬನಶಂಕರಿಯ ಸುತ್ತ ಮುತ್ತ ಕೇವಲ ಒಂದು ಚ. ಕಿ.ಮೀ ವಿಸ್ತೀರ್ಣದೊಳಗೇ ಇರುವುದು ಇಲ್ಲಿಯ ಧರ್ಮಸಂಸ್ಕೃತಿ ಶಿಲ್ಪಕಲೆಗಳ ವಿಶಿಷ್ಟ ಸಂಗಮಕ್ಕೆ ಕುರುಹಲ್ಲವೆ!

ತಲಕಾಡಿನಲ್ಲಿ ಪಂಚಲಿಂಗದರ್ಶನವಾಗಬೇಕಾದರೆ ನಾಲ್ಕಾರು ಚ. ಕಿ.ಮೀ ಸುತ್ತಾಡಬೇಕು. ಆದರೆ ತಲಕಾಡು ಇತಿಹಾಸ ಸಂಬಂಧವುಳ್ಳ ಮುದುಗಂದೂರಿನಲ್ಲಿ ಪಂಚಲಿಂಗಗಳುಳ್ಳ ದೇವಸ್ಥಾನವಿರುವುದು ವಿಶೇಷ. ಹುತ್ತದ ಅಮ್ಮನೇ 'ಹುಚ್ಚಮ್ಮ' ಇಲ್ಲವೇ 'ಹುಂಚಮ್ಮನ' ದೇವಸ್ಥಾನ.

ಇಂದು ಸುಮಾರು ಎರಡು ಸಾವಿರ ಜನಸಂಖ್ಯೆಯುಳ್ಳ ಮುದುಗಂದೂರಿನ ರಾಮೇಶ್ವರ ದೇವಸ್ಥಾನದಲ್ಲಿರುವ ಶಿಲಾಶಾಸನದ ಪರಾಮರ್ಶೆಯಿಂದ ಸ್ಥಳದ ಗತ ಇತಿಹಾಸದ ಸ್ಪಷ್ಟ ಚಿತ್ರಣ ಬೆಳಕಿಗೆ ಬರಬೇಕಾದ ಅಗತ್ಯವಿದೆ. ಒಂದು ಕಾಲದಲ್ಲಿ ಬ್ರಾಹ್ಮಣರ ಅಗ್ರಹಾರವಾಗಿದ್ದ ಈ ಪ್ರದೇಶದಲ್ಲಿ ಶ್ರೀಕಂಠಭಟ್ಟ, ನಾರಾಯಣ ಭಟ್ಟ ಹಾಗೂ ಶ್ಯಾಮ ಭಟ್ಟರ ಪರಂಪರೆ ಹೆಸರಾಗಿದೆ.

ಶೃಂಗೇರಿಯ ಜಗದ್ಗುರುಗಳಾದ ಶ್ರೀ ನರಸಿಂಹ ಭಾರತಿಯವರು ಮತ್ತು ಜ. ಶ್ರೀ ಚಂದ್ರಶೇಖರ ಭಾರತಿಯವರು ಈ ಪುಣ್ಯಕ್ಷೇತ್ರಕ್ಕೆ ಭೇಟಿ ನೀಡಿ ಬನಶಂಕರಿಗೆ ಪೂಜೆಗೈದ ಇತಿಹಾಸವಿದೆ. ನಾರಾಯಣ ಭಟ್ಟರು ಶ್ರೀಮಠದ ಮುದ್ರೆಯುಳ್ಳವರಂತೆ.

ಬನಶಂಕರಿ ದೇವಸ್ಥಾನ

ಚಚ್ಚೌಕಾಕಾರದ ಕಗ್ಗಲ್ಲಿನ ಕಂಬಗಳ ಮೇಲೆ ಕಲ್ಲು ಚಪ್ಪಡಿಗಳನ್ನು ಹಾಸಿ ಮಾಡಿದ ಛಾವಣಿಯುಳ್ಳ ಈ ಗುಡಿಯ ಮುಖಮಂಟಪದ ಕುರುಹಾದ ನಾಲ್ಕು ಕಂಬಗಳು ಈಗಲೂ ಗಾಳಿಮಳೆ ಬಿಸಿಲಿಗೆ ಮೈಯೊಡ್ಡಿ ನಿಂತಿವೆ. ಚೌರಸ ಆಕಾರವುಳ್ಳ ಈ ಕಂಬಗಳಲ್ಲಿ ಹೇಳುವಂತಹ ಕೆತ್ತನೆ ಶಿಲ್ಪಕಲೆಯೇನೂ ಮಾಡಿಲ್ಲ.

ಗುಡಿಯೊಳಗಿರುವ ಪಶ್ಚಿಮದಿಕ್ಕಿನ ಗೋಡೆಗೆ ಅಂಟಿಕೊಂಡಂತೆ ಬನಶಂಕರಿಯ ಉಜ್ವಲವಾದ ಮೂರ್ತಿ ಇದೆ. ಅಕ್ಕಪಕ್ಕಗಳಲ್ಲಿ ಸಪ್ತಮಾತೃಕೆಯರ ಪ್ರತಿಮೆಗಳೂ ಶೋಭಿಸುತ್ತಿವೆ. ಗೋಡೆಯ ತುದಿಯವರೆಗೂ ಸಾಲಾಗಿ ಶೋಭಿಸುವ ಮೂರ್ತಿಗಳಲ್ಲಿ ಒಟ್ಟು ಹತ್ತು ಮೂರ್ತಿಗಳಿದ್ದು ಎರಡೂ ತುದಿಗಳಲ್ಲಿರುವ ಮೂರ್ತಿಗಳು ಪುರುಷ ವಿಗ್ರಹಗಳು.

ಬನಶಂಕರಿಯ ಬಲಭಾಗದಲ್ಲಿ ಮೊದಲು ಕಾಣುವ ಸ್ಫೂರ್ತಿಯುತವಾದ ಶಿವಮೂರ್ತಿ ತ್ರಿಶೂಲಪಾಣಿ, ಡಮರುಗ ಹಸ್ತನಾಗಿ ನಂದಿ ವಾಹನನಿದ್ದಾನೆ. ರುದ್ರವೀಣೆ ನುಡಿಸುವ ಈ ಶಿವನ ಆಕರ್ಷಕವಾದ ನಿಲುವಿನ ಭಂಗಿ ಮನಮೋಹಕವಾಗಿದೆ.

ಎರಡನೆಯ ವಿಗ್ರಹ ಬ್ರಹ್ಮ. ಮೂರು ಮುಖಗಳು ಎದ್ದು ಕಾಣುತ್ತವೆ. ಸಪ್ತಮಾತೃಕೆಯರ ಅಭಯಹಸ್ತ ಜನಜನಿತ. ಹಾರವೊಂದು ಯಜ್ಞೋಪವೀತವನ್ನು ಧರಿಸಿರುವಂತೆ ಎಡಭುಜದಿಂದ ಬಲಕಂಕುಳೆಡೆಗೆ ಹಾದುಹೋಗಿರುತ್ತದೆ. ಬಲಗಾಲು ಕೊಂಚ ಎತ್ತಿ ಎಡಗಾಲು ಮಡಚಿ ಕುಳಿತ ಭಂಗಿ ಆಕರ್ಷಕವಿದೆ!

ನಂದಿವಾಹನೆಯಾದ ಮಹೇಶ್ವರಿ ಡಮರುಗ ತ್ರಿಶೂಲ ಪಾಣಿನಿಯಾಗಿದ್ದರೆ, ಕೌಮಾರೀ

ವಿಗ್ರಹದ ಎಡಸ್ಥಾನವು ಭಗ್ನವಾಗಿದೆ. ಶೂಲ ಹಾಗೂ ಪವಿತ್ರಗಳು ಆಯುಧಗಳು.

ಪ್ರಧಾನದೇವಿ ಬನಶಂಕರಿಯ ವಿಗ್ರಹವು ಅತ್ಯಂತ ಸ್ಫೂರ್ತಿಯುತವಾಗಿದೆ. ಉನ್ನತಸ್ತನ ಮಂಡಲದಿಂದೊಪ್ಪುವ ಶಂಕರಿ ಶಂಖ ಚಕ್ರ, ಖಡ್ಗ ಕಲಶಪಾಣಿನಿಯಾಗಿ ಹಸನ್ಮುಖಿಯಾಗಿದ್ದಾಳೆ! ಹಾರಕೇಯೂರ ಕುಂಡಲಗಳು, ನಯನ ಮನೋಹರವಾಗಿದೆ. ಎರಡಂತಸ್ತಿನ ಪಾದ ಪೀಠದ ಮೇಲೆ ವೀರಾಸನದಲ್ಲಿ ಮಂಡಿತೆಯಾದ ತಾಯಿಯ ಪ್ರಭಾವಳಿಯೂ ಸೇರಿದಂತೆ ಮೂರ್ತಿ ೨.೫ ಅಡಿ ಎತ್ತರವಿರಬೇಕು. ನಿಜಕ್ಕೂ ಈ ಅಮ್ಮನ ಮೂರುತಿ ಮಂಗಳದಾಯಕವಿದೆ.

ಶಂಕರಿಯ ಎಡಭಾಗದಲ್ಲಿ ಕೊನೆಯ ವಿಗ್ರಹವು ಡಮರುಗ ಹಸ್ತ, ಖಡ್ಗೊಪಾಣಿ, ಕಲಶಹಸ್ತನಾದ ಓರ್ವ ಗಣಪ್ರವರನದಿರಬೇಕು. ವೀರಾಸನದಲ್ಲಿ ಕುಳಿತ ಭಂಗಿ ಆಕರ್ಷಕವಿದೆ.

ಕಾರ್ತೀಕ ಹಬ್ಬ

ಪ್ರತೀ ವರ್ಷ ಕಾರ್ತೀಕ ಮಾಸದ ಮೊದಲು ಬುಧವಾರ ಬನಶಂಕರಿಯ ಹಬ್ಬ ನಡೆಯುತ್ತದೆ.

ಹಬ್ಬಕ್ಕೆ ಒಂದು ವಾರ ಕೆಲವು ಕಟ್ಟಳೆಗಳನ್ನು ಪಾಲಿಸಲಾಗುತ್ತದೆ.

ಬ್ರಾಹ್ಮಣರ ಮನೆಗಳಲ್ಲಿ ಘಾಟುಪದಾರ್ಥ ಗಳನ್ನು ತಯಾರಿಸುವಂತಿಲ್ಲ.

ಬಾಳೆಹಣ್ಣನ್ನು ಮನೆಗಳಲ್ಲಿ ಬಳಸುವಂತಿಲ್ಲ. ಹಬ್ಬದ ದಿನ ದೇವಿಗೆ ಬಾಳೆಹಣ್ಣು ಪ್ರಧಾನ ನೈವೇದ್ಯ.

ಹೊನ್ನೇನಹಳ್ಳಿ ಊರಗ್ರಾಮಸ್ಥರಾದ ಕುಂಬಾರ ಶೆಟ್ರು ರಂಗ ಕುಣಿತ ನಡೆಸಿಕೊಡುತ್ತಾರೆ. ಎಂ. ಹೊಸಹಳ್ಳಿಯ ಒಕ್ಕಲಿಗರು ಬುಧವಾರ ಉತ್ಸವ ನಡೆಸಲು ಸಹಕರಿಸಿದರೆ, ಮುದು ಗಂದೂರು ಗ್ರಾಮದ ಗಂಗಮತಸ್ಥರ ಸಹಕಾರ ದಿಂದ ಉತ್ಸವ ನಡೆಯುತ್ತದೆ.


ಹಬ್ಬಕ್ಕೆ ಮದ್ದೂರುಕೊಪ್ಪದಿಂದ ಬಾಳೆಹಣ್ಣಿನ ಗೊನೆ ಮತ್ತು ಅಡಿಕೆಹೊಂಬಾಳೆ ಬರುತ್ತದೆ. ಹೆಡಿಗೆ ಅರ್ಪಣೆಯೂ ನಡೆಯುತ್ತದೆ.

ಜನರಿಂದ ಕಣ್ಮರೆಯಾಗಿ ಪ್ರವಾಸೋದ್ಯಮ ಇಲಾಖೆ ಹಾಗೂ ಮುಜರಾಯಿ ಇಲಾಖೆಗಳ ತೀರಾ ಅವಜ್ಞೆಗೊಳಪಟ್ಟಿರುವ ಈ ಬನಶಂಕರಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾದ ಅಗತ್ಯ ಅನಿವಾರ್ಯವಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್‌ನ ನೆರವನ್ನೂ ಪಡೆದು ಸ್ಥಳೀಯ ಜನತೆ, ಸಂಘಸಂಸ್ಥೆಗಳು ಈ ದೇಗುಲದ ಪುನಾನಿರ್ಮಾಣಕ್ಕೆ ತೊಡಗುವ ಸತ್ಕಾರ್ಯಕ್ಕೆ ತೊಡಗಬೇಕಾಗಿದೆ ಎಂದೆನ್ನಿಸುತ್ತದೆ. ಶೃಂಗೇರಿ ಮಠದ ಸಂಪರ್ಕ ವಿರುವುದರಿಂದ ಶೃಂಗೇರಿಯಂತಹ ಧರ್ಮಪೀಠ ಗಳು ಈ ದಿಸೆಯಲ್ಲಿ ಖಂಡಿತಾ ಮಾರ್ಗದರ್ಶನದ ಕರಪಿಡಿಯುವುದರಲ್ಲಿ ಸಂದೇಹವಿಲ್ಲ.

ಕೊಕ್ಕಡ ವೆಂಕಟ್ರಮಣ ಭಟ್
ಎಂ. ಎ., ಬಿ.ಎಡ್.
ಸಂಸ್ಕೃತಾಧ್ಯಾಪಕ, 'ವಿನಾಯಕ ನಿಲಯ'
೨೫೭೨, ೧ನೇ ತಿರುವು, ಗಾಂಧಿನಗರ,
ಮಂಡ್ಯ- ೫೭೧ ೪೦೧.

ಮಾಗಿಯ ಚಳಿಯಲ್ಲಿ ಸೌಂದರ್ಯ

■ ಡಾ. ಆರತಿ ವೆಂಕಟೇಶ್



ಈ ಋತುವಿನಲ್ಲಿ ಚರ್ಮದ ತೊಂದರೆಗಳು ಬಹಳ! ಚಳಿಗಾಲದಲ್ಲಿ ಚರ್ಮವು ಶುಷ್ಕವಾಗುವುದಲ್ಲದೇ, ಒಡೆದು ಸುಕ್ಕುಗಳು ಮೂಡುತ್ತವೆ. ಇದಕ್ಕೆ ಅತ್ಯಂತ ಸೂಕ್ತ ಪರಿಹಾರವೆಂದರೆ ಚಳಿಗಾಲ ಕಳೆಯುವವರೆಗೂ ಸಾಬೂನಿನ ಬಳಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕು. ಸಾಬೂನಿನಲ್ಲಿರುವ ರಾಸಾಯನಿಕ ದ್ರವ (alkali) ಚರ್ಮದ ಸಮತೋಲನತೆಯನ್ನು ಕಾಪಾಡುವುದಿಲ್ಲ. ಇದಕ್ಕೆ ಬದಲಾಗಿ ಒಂದು ಕೆ.ಜಿ.ಯಷ್ಟು ಹೆಸರುಬೇಳೆಯಲ್ಲಿ ಸುಮಾರು ನಾಲ್ಕು ಮೊಟ್ಟೆಗಳನ್ನು ಒಡೆದು ಅದರ ಹಳದಿ ಮತ್ತು ಬಿಳಿ ಭಾಗವನ್ನೂ ಸೇರಿಸಿ ಕಲೆಸಬೇಕು. ಅದನ್ನು ಎರಡು ದಿನ ಬಿಸಿಲಿನಲ್ಲಿ ಒಣಗಿಹಾಕಿ ನಂತರ ಪುಡಿ ಮಾಡಿಟ್ಟುಕೊಳ್ಳಿ, ಪ್ರತಿದಿನ ಸ್ನಾನ ಮಾಡುವಾಗ ಒಂದು ದೊಡ್ಡ ಚಮಚ ಹಾಲಿನಲ್ಲಿ ಈ ಪುಡಿ ಮಿಶ್ರಣ ಮಾಡಿ ಮೈಗೆ, ಮುಖಕ್ಕೆ ಬಳಸಿ. ಇದರಿಂದ ದೇಹಕಾಂತಿ ವೃದ್ಧಿಸುವುದಲ್ಲದೇ ಮೊಟ್ಟೆಯ ಬಿಳಿ ಭಾಗವು ಚರ್ಮ ಸುಕ್ಕುಗಟ್ಟುವುದನ್ನು ತಡೆಗಟ್ಟುತ್ತದೆ. ಇಪ್ಪತ್ತೈದು ವರ್ಷ ಮೀರಿರುವ ಹೆಂಗಸರು ಈ ವಿಧಾನವನ್ನು ಅನುಸರಿಸಿದರೆ ಚರ್ಮ ಮೃದುವಾಗಿಯೂ, ಕೋಮಲವಾಗಿಯೂ ಉಳಿಯುತ್ತದೆ. ಪ್ರತಿ ರಾತ್ರಿ ಮಲಗುವ ಮುನ್ನ ಒಂದು ಚಮಚ ಗಟ್ಟಿ ಹಾಲಿನ ಕೆನೆಗೆ ಎರಡು ತೊಟ್ಟು ಪನ್ನೀರನ್ನು, ಹಿಪ್ಪೆ ಎಣ್ಣೆಯಾಗಲಿ, ಬಾದಾಮಿ ಎಣ್ಣೆಯಾಗಲಿ ಬೆರೆಸಿ ಮುಖ, ಕೊರಳು, ಕೈಗಳಿಗೆ ಲೇಪಿಸಿ, ಬೆಳಿಗ್ಗೆ ಎದ್ದ ಕೂಡಲೇ ಬೆಚ್ಚಗಿನ ನೀರಿನಲ್ಲಿ ತೊಳೆದುಕೊಳ್ಳಿ, ಇದರಿಂದ ಚರ್ಮಕ್ಕೆ ಜಿಡ್ಡಿನಾಂಶ ದೊರೆತು ಚಳಿಗಾಲದಲ್ಲಿ ಚರ್ಮ ಒರಟಾಗುವುದಿಲ್ಲ. ಪ್ರತಿಬಾರಿಯೂ ಮುಖ ತೊಳೆದುಕೊಂಡ ಮೇಲೆ ಟವಲಿನಲ್ಲಿ ಒರೆಸಿಕೊಂಡ ನಂತರ ಚರ್ಮವನ್ನು ನೇರವಾಗಿ ಬಿಸಿಲಿಗೆ ಅಥವಾ ಗಾಳಿಗೆ ಒಡ್ಡಬೇಡಿ. ಹೊರಗೆ ಹೋಗುವಾಗ ನಯವಾಗಿ ಮುಖಕ್ಕೆ ಮಾಯಿಶ್ಚರೈಸಿಂಗ್ ಕ್ರೀಮ್ ಅಥವಾ ಲೋಶನ್ ಬಳಸಿ. ಈಗ ಪ್ರತಿಷ್ಠಿತ ಕಂಪೆನಿಗಳು ಇವುಗಳನ್ನು ತಯಾರಿಸುತ್ತಿವೆ. ಮಾರುಕಟ್ಟೆಗಳಲ್ಲಿ ಇವು ಸುಲಭವಾಗಿ ದೊರೆಯುತ್ತವೆ.

ಚಳಿಗಾಲದಲ್ಲಿ ಕೆಲವರಿಗೆ ಚರ್ಮ ಶುಷ್ಕವಾದುದರಿಂದ ಮೈಯೆಲ್ಲಾ ತುರಿಕೆಯಾಗಿ ಬಹಳ ಹಿಂಸೆಯಾಗುತ್ತದೆ. ಇದನ್ನು ತಡೆಗಟ್ಟಲು ಈ ಮೊದಲೇ ವೈದ್ಯರನ್ನು ಸಂಪರ್ಕಿಸಿ. ದಿನನಿತ್ಯ ಅನ್ನಾಂಗ 'ಎ' ಮಾತ್ರೆಗಳನ್ನು ತೆಗೆದುಕೊಳ್ಳಿ, ಇದನ್ನು ವೈದ್ಯರ ಸಲಹೆ ಪಡೆಯದೇ ಬಳಸಬಾರದೆಂಬ ಎಚ್ಚರಿಕೆ ನೆನಪಿರಲಿ.

ಅನ್ನಾಂಗ 'ಎ' ಚರ್ಮದ ಪದರದಲ್ಲಿ ಕೊಬ್ಬಿನಾಂಶದಲ್ಲಿ ಶೇಖರವಾಗಿ ಚಳಿಗಾಲದಲ್ಲಿ ಚರ್ಮವನ್ನು ಮೃದುವಾಗಿಡಲು ಸಹಕಾರಿಯಾಗುತ್ತದೆ.

ಚರ್ಮದ ತೊಂದರೆಗಳಿಗೆ ಮನೆಯಲ್ಲೇ ಸುಲಭದ ಚಿಕಿತ್ಸೆಗೂ ಅನುಕೂಲವಿದೆ. ಬಾದಾಮಿ ಎಣ್ಣೆ ಹಾಗೂ ಕೊಬ್ಬರಿ ಎಣ್ಣೆಯನ್ನು ಸಮ ಪ್ರಮಾಣದಲ್ಲಿ ಬೆರೆಸಿ ಮೈಗೆ ಲೇಪಿಸಿಕೊಳ್ಳುವುದರಿಂದಲೂ ತುರಿಕೆ ಕಡಿಮೆಯಾಗುತ್ತದೆ. ಸೌಂದರ್ಯರಾಣಿ ಕ್ಲಿಯೋಪಾತ್ರ ಕತ್ತೆಯ ಹಾಲಿನಲ್ಲಿ ಸ್ನಾನ ಮಾಡುತ್ತಿದ್ದುದೇ ಅವಳ ಚೆಲುವಿನ ರಹಸ್ಯವಾಗಿತ್ತು ಎಂಬುದನ್ನು ನಾವು ಕೇಳಿರಬಹುದು! ಮಧ್ಯಮವರ್ಗದವರಿಗೆ ದುಬಾರಿ ಎನಿಸುವ ಹಾಲನ್ನು ಸ್ನಾನ ಮಾಡಲು ಬಳಸುವುದಕ್ಕೆ ಎಲ್ಲರಿಗೂ ಸಾಧ್ಯವಾಗುವ ಸಂಗತಿಯಲ್ಲ. ಅನುಕೂಲವಿದ್ದರೆ ವಾರಕ್ಕೊಮ್ಮೆಯಾದರೂ ಸ್ನಾನ ಮಾಡುವ ನೀರಿನಲ್ಲಿ ೨೫೦ ಗ್ರಾಂನಷ್ಟು ಹಾಲಿನ ಪುಡಿ ಮಿಶ್ರಣ ಮಾಡಿಕೊಂಡು ಮೈ ತೊಳೆದುಕೊಳ್ಳಲು ಪ್ರಯತ್ನಿಸಿ ನೋಡಿ. ಆಗ ನಿಮ್ಮ ಚರ್ಮ ಹೊಳಪಾಗಿಯೂ, ಮೃದುವಾಗಿಯೂ ಉಳಿಯುತ್ತದೆ. ಚಳಿಗಾಲದಲ್ಲಿ ಬಿಸಿ ಹಿತವಾಗಿರುತ್ತದೆ ಎಂದು ಸುಡುವ ನೀರಿನಲ್ಲಿ ಎಂದೂ ಸ್ನಾನ ಮಾಡಬೇಡಿ. ಅತಿಯಾದ ಬಿಸಿನೀರು ಚರ್ಮಕ್ಕೆ ಹಾನಿಯುಂಟು ಮಾಡುತ್ತದೆ. ಸ್ನಾನ ಮಾಡುವ ಅರ್ಧ ಗಂಟೆಗೆ ಮುಂಚೆ ನಾಲ್ಕು ತೊಟ್ಟು ಬೆಚ್ಚಗೆ ಕಾಯಿಸಿದ ಹಿಪ್ಪೆ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ಮೈಗೆಲ್ಲಾ ಹಚ್ಚಿ ನಂತರ ಸ್ನಾನ ಮಾಡುವುದರಿಂದಲೂ ಚರ್ಮ ಮೃದುವಾಗುತ್ತದೆ. ಚಳಿಗಾಲದಲ್ಲಿ ಚರ್ಮಕ್ಕೆ ಹೆಚ್ಚಿನ ಜಿಡ್ಡಿನಾಂಶದ ಅಗತ್ಯವಿರುತ್ತದೆ. ಚರ್ಮಕ್ಕೆ ರಾಸಾಯನಿಕ ವಸ್ತುಗಳ ಬಳಕೆಗಿಂತ ನೈಸರ್ಗಿಕವಾದ ಚಿಕಿತ್ಸೆ ಉತ್ತಮ.

ಈ ಸಮಯದಲ್ಲಿ ಪಾದಗಳು ಬಿರುಕು ಬಿಟ್ಟು ಸೀಳಾಗುವುದಂತೂ ಸರ್ವೇ ಸಾಮಾನ್ಯ. ತಲೆಯಿಂದ ಕಾಲಿನವರೆಗೂ ಶಿಸ್ತಾಗಿ ಅಲಂಕರಿಸಿಕೊಂಡಾಗ ಪಾದಗಳ ಬಿರುಕು ಎದ್ದು ಕಾಣುವಂತಾದರೆ ನೋಡಲು ವಿಕಾರವಾಗಿರುತ್ತದೆ. ಇದಕ್ಕಾಗಿ ಚಳಿಗಾಲ ಪ್ರಾರಂಭವಾಗುವ ಮೊದಲೆ ನಿಮ್ಮ ಪಾದಗಳು ಬಿರುಕುರಹಿತವಾಗಿರಲು ಸಿದ್ಧ ಮಾಡಿಕೊಳ್ಳಿ.

ಪ್ರತಿದಿನ ಮನೆಯಲ್ಲಿ ನೀರಿನೊಡನೆ ನಿರಂತರವಾಗಿ ಕೆಲಸ ಮಾಡುವ ಗೃಹಿಣಿಯರಿಗಂತೂ ಇದು ತಲೆನೋವಿನ ಸಮಸ್ಯೆ. ಅದಕ್ಕಾಗಿ ನೀವು ದಿನನಿತ್ಯ ಸ್ನಾನ ಮಾಡುವಾಗ ನೊರಜುಗಲ್ಲಿನಿಂದ (Pumice stone) ಪಾದಗಳನ್ನು ಸೋಪಿನಿಂದ ಉಜ್ಜಿ ತೊಳೆಯಿರಿ. ಪಾದಗಳು ಬಣ್ಣಗೆಟ್ಟು ಕಪ್ಪಾಗಿದ್ದರೆ ಎರಡು ನಿಂಬೆ ಹೋಳುಗಳಿಂದ ಪ್ರತಿದಿನ ಉಜ್ಜಿಕೊಳ್ಳಿ, ಶುಭ್ರವಾಗಿ ಒರೆಸಿಕೊಂಡ ಪಾದಗಳಿಗೆ ನಂತರ

ಹಿಪ್ಪೆ ಎಣ್ಣೆಯನ್ನು ಹಚ್ಚಿ. ಎಣ್ಣೆ ಹಚ್ಚಿಕೊಂಡ ತಕ್ಷಣವೇ ಓಡಾಡಿದರೆ ಧೂಳು, ಕಸ ಸೇರಿಕೊಂಡು ಪಾದಗಳು ಮತ್ತೂ ಕೊಳೆಯಾಗುತ್ತವೆ. ಅದನ್ನು ತಪ್ಪಿಸುವ ಸಲುವಾಗಿ ಎಣ್ಣೆಹಚ್ಚಿಕೊಂಡ ಪಾದಗಳನ್ನು ಅರ್ಧ ಗಂಟೆ ನೆಲದ ಮೇಲಿಡಲು ಅವಕಾಶ ಕೊಡಬೇಡಿ.

ಒಂದು ದೊಡ್ಡ ಬಕೆಟ್‌ನಲ್ಲಿ ಉಗುರು ಬೆಚ್ಚಗಿರುವ ನೀರು ತುಂಬಿಸಿಕೊಂಡು ಪ್ರತಿ ರಾತ್ರಿ ಮಲಗುವ ಮುನ್ನ ಪಾದಗಳನ್ನು ಇಳಿಬಿಡಿ. ನೀರಿಗೆ ನಾಲ್ಕು ಚಮಚ ನಿಮಗೆ ಪ್ರಿಯವಾದ ಎಣ್ಣೆಯನ್ನೂ, ನಾಲ್ಕು ತೊಟ್ಟು ನಿಂಬೆರಸವನ್ನು ಹಾಕಿಕೊಂಡರೆ ಪಾದಗಳು ಬಿಳುಪಾಗಿ, ಮೃದುವಾಗಿರುತ್ತದೆ. ಅರ್ಧ ಗಂಟೆಯಾದ ಬಳಿಕ ಪಾದಗಳನ್ನು ಟವಲ್‌ನಲ್ಲಿ ಶುಭ್ರವಾಗಿ ಒರೆಸಿಕೊಳ್ಳಿ, ನಿಮಗೆ ಅನುಕೂಲವಾದರೆ ಮನೆಯಲ್ಲೇ ಓಡಾಡಲು ಹವಾಯ್ ಚಪ್ಪಲಿ ಧರಿಸುವುದು ಒಳ್ಳೆಯದು. ಅದು ಸಾಧ್ಯವಾಗದಿದ್ದರೆ ಮೇಲ್ಕಂಡ ವಿಧಾನವನ್ನು ಪ್ರತಿದಿನ ಅನುಸರಿಸಲೇಬೇಕು. ಪಾದಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳದೇ ಯಾವ ಬಗೆಯ ಕ್ರೀಂಗಳನ್ನಾಗಲಿ ಔಷಧಿಗಳನ್ನಾಗಲಿ ಬಳಸಿದರೂ ಪ್ರಯೋಜನವಾಗುವುದಿಲ್ಲ.

ಕೆಲವರಿಗೆ ತುಟಿಗಳು ಬಿರುಕು ಬಿಟ್ಟು ಅಸಹ್ಯವಾಗಿ ಕಾಣುತ್ತದೆ. ಅಂಥಹ ತೊಂದರೆಯಿಂದ ಬಳಲುವವರು ತಾತ್ಕಾಲಿಕವಾಗಿ ತುಟಿರಂಗನ್ನು ತ್ಯಜಿಸಿಬಿಡಿ. ಬದಲಾಗಿ ಹಾಲಿನ ಕೆನೆಯನ್ನು ತುಟಿಗೆ ನಯವಾಗಿ ಲೇಪಿಸಿಕೊಳ್ಳಿ, ಚಳಿಗಾಲ ಪ್ರಾರಂಭವಾದೊಡನೆ ನಿಮ್ಮ ತುಟಿಗಳ ಅಂದ ಕಾಪಾಡಿಕೊಳ್ಳಲು ನೀವು ಈ ವಿಧಾನ ಅನುಸರಿಸಿ. ಪನ್ನೀರನ್ನು ಸಮಪ್ರಮಾಣದಲ್ಲಿ ಗಟ್ಟಿಹಾಲಿನೊಡನೆ ಮಿಶ್ರಣ ಮಾಡಿ ಒಂದು ಡಬ್ಬದಲ್ಲಿ ಬಿಗಿಯಾಗಿ ಮುಚ್ಚಿಡಿ. ಮನೆಯಲ್ಲಿ ಫ್ರಿಡ್ಜ್ ಇದ್ದರೆ ಅದರಲ್ಲಿ ಶೇಖರಿಸಿಡುವುದೂ ಮತ್ತೂ ಉತ್ತಮ. ಈ ಮಿಶ್ರಣವನ್ನು ಪ್ರತಿದಿನ ಮೂರು, ನಾಲ್ಕು ಬಾರಿಯಾದರೂ ತುಟಿಗೆ ಲೇಪಿಸಿಕೊಂಡರೆ ನಿಮ್ಮ ಹವಳದಂಥಹ ಅಧರಕ್ಕೆ ಶೋಭೆ ತರುತ್ತದೆ.

ಸತತವಾಗಿ ಮನೆಕೆಲಸ ಮಾಡುವುದರಿಂದ ಚಳಿಗಾಲದಲ್ಲಿ ಕೈಗಳು ಒರಟಾಗಿ, ಬಣ್ಣಗೆಡುತ್ತದೆ. ಅದಕ್ಕಾಗಿ ಈ ಉಪಾಯಮಾಡಿ ನೋಡಿ. ನಿಮ್ಮ ಸಿಂಕಿನ ಬಳಿ ಒಂದು ಬಾಟಲ್‌ನಲ್ಲಿ ಪನ್ನೀರು, ಗ್ಲಿಸರಿನ್ ಹಾಗೂ ನಿಂಬೆರಸ ಮಿಶ್ರಣ ಮಾಡಿದ ದ್ರವವನ್ನು ಕೈಗೆಟಕುವಂತೆ ಇಡಿ. ನೀವು ಪ್ರತಿಬಾರಿ ಪಾತ್ರೆ ತೊಳೆದಾಗಲೂ ಅದನ್ನು ಕೈಗೆ ಹಚ್ಚಿಕೊಂಡು ತೊಳೆದುಕೊಳ್ಳಿ, ಇದರಿಂದ ಕೈಗಳು ಮೃದುವಾಗಿರುತ್ತದೆ. ಅನುಕೂಲವಿದ್ದರೆ ಒಂದು ಜೊತೆ 'ಗ್ಲೌಸ್' ಕೊಂಡು ದಿನನಿತ್ಯ ಕೆಲಸ ಮಾಡುವಾಗ ಬಳಸಬಹುದು. ಪ್ರತಿರಾತ್ರಿ ಮಲಗುವ ಮುನ್ನ ಕೈಗಳಿಗೆ ಹಿಪ್ಪೆ ಎಣ್ಣೆ, ಹಾಲಿನ ಕೆನೆಯನ್ನು ಸಮಪ್ರಮಾಣದಲ್ಲಿ ಬೆರೆಸಿ ಹಚ್ಚಿಕೊಂಡು ಮರುದಿನ ಬೆಳಿಗ್ಗೆ ಬೆಚ್ಚಗಿನ ನೀರಿನಲ್ಲಿ ತೊಳೆದುಕೊಳ್ಳಿ, ಇದರಿಂದ ಮನೆಗೆಲಸ ಮಾಡಿ ಒರಟಾಗಿರುವ ಕೈ ಬೆರಳುಗಳು ಮೃದುವಾಗುತ್ತದೆ. ಹಾಲಿನ ಪಾತ್ರೆಗಳನ್ನು ತೊಳೆಯುವಾಗ ಅದಕ್ಕೆ ಅಂಟಿಕೊಂಡಿರುವ ಕೆನೆಯನ್ನು ಎಸೆಯದೇ ಅದನ್ನು ಕೈಗಳಿಗೆ, ಮೊಣಕೈಗೆ ಹಚ್ಚಿಕೊಳ್ಳಿ, ಇದರಿಂದ ಕೈಗಳು ಬಣ್ಣಗೆಡದೇ ಬಿಳುಪಾಗಿರುತ್ತದೆ.

ಇನ್ನು ಕೆಲವರಿಗೆ ತಲೆಕೂದಲೊಂದು ಸಮಸ್ಯೆ. ಮಾಗಿಯ ಚಳಿ ತಡೆಯಲಾರದೆ ಕೂದಲು ಕಾಂತಿರಹಿತವಾಗಿ, ಶುಷ್ಕವಾಗುತ್ತದೆ. ಪ್ರತಿದಿನವೂ ಕೂದಲಿಗೆ ಎಣ್ಣೆಯಂಶ ಅಗತ್ಯ. ಅಂಗೈ ಮೇಲೆ ನಾಲ್ಕು ತೊಟ್ಟು ಬೆಚ್ಚಗೆ ಮಾಡಿದ ಕೊಬ್ಬರಿ ಎಣ್ಣೆ ತೆಗೆದುಕೊಂಡು ಪ್ರತಿದಿನವೂ ತಲೆಗೂದಲಿನ ಬುಡಕ್ಕೆ ವರ್ತುಲಾಕಾರವಾಗಿ ತಿಕ್ಕಿ * ತಲೆ ಬಾಚಿಕೊಳ್ಳಿ, ಈ ಋತುವಿನಲ್ಲಿ ವಾರಕ್ಕೊಮ್ಮೆ ಕೂದಲು ತೊಳೆದುಕೊಂಡರೆ ಸಾಕು, ನೀವು ಶಾಂಪೂ ಬಳಸುವಿರಾದರೆ ಆದಷ್ಟು ಲಘುವಾದ ಶಾಂಪೂ ಉಪಯೋಗಿಸಿ. ಸೀಗೇಕಾಯಿ, ಅಂಟುವಾಳದ ಕಾಯಿಗಳನ್ನು ಸಮಪ್ರಮಾಣದಲ್ಲಿ ಬೆರೆಸಿ ಕುದಿಸಿ ಶೋಧಿಸಿಕೊಳ್ಳಿ, ಮಿಶ್ರಣಕ್ಕೆ ಎರಡು ಚಮಚ ಹಿಪ್ಪೆ ಎಣ್ಣೆ, ಪನ್ನೀರು ಹಾಗೂ ನಾಲ್ಕು ಚಮಚ ಕಿತ್ತಳೆ ಸಿಪ್ಪೆಯ ಪುಡಿ (Orange peel powder) ಬೆರೆಸಿ ಮತ್ತೊಮ್ಮೆ ಕುದಿಸಿ. ಈ ದ್ರವವನ್ನು ಬಾಟಲಿಗೆ ಹಾಕಿ ಭದ್ರವಾಗಿ ಮುಚ್ಚಿಡಿ. ಪ್ರತಿವಾರ ಇದರಿಂದ ತಲೆ ತೊಳೆದುಕೊಳ್ಳುವುದರಿಂದ ಕೂದಲು ಸ್ವಚ್ಛವಾಗಿ, ಕಾಂತಿಯುತವಾಗಿರುತ್ತದೆ. ತಲೆಗೂದಲಿಗೆ ಒಂದು ಮೊಟ್ಟೆಯ ಹಳದಿ ಭಾಗ ತೆಗೆದು ಅದಕ್ಕೆ ನಾಲ್ಕು ತೊಟ್ಟು ನಿಂಬೆರಸ, ಗ್ಲಿಸರಿನ್, ಕೊಬ್ಬರಿ ಎಣ್ಣೆ ಬೆರೆಸಿ ತಲೆಬುಡಕ್ಕೆ ಹಚ್ಚಿಕೊಳ್ಳಿ, ಅರ್ಧ ಗಂಟೆ ನೆನೆದು ಸೀಗೇಕಾಯಿ ಮಿಶ್ರಣದಿಂದ ತಲೆ



ತೊಳೆದುಕೊಳ್ಳುವುದರಿಂದ ಕೂದಲಿಗೆ ಹೊಟ್ಟು ಬರುವುದಿಲ್ಲ. ತಲೆಗೂದಲನ್ನು ಬಾಚಿ ಇಳಿಬಿಡಬಹುದು. ಚಳಿಗಾಲದಲ್ಲಿ ನೀಳಕೂದಲು ಕಿವಿ, ಕೊರಳನ್ನು ಬೆಚ್ಚಗಿಡುತ್ತದೆ.

ಈ ಋತುವಿನಲ್ಲಿ ಆದಷ್ಟು ದಟ್ಟ ರಂಗಿನ ಬಟ್ಟೆಗಳನ್ನು ಧರಿಸಿ. ದಟ್ಟ ರಂಗು ದೇಹಕ್ಕೆ ಶಾಖ ನೀಡುತ್ತದೆ. ಚಳಿಗಾಲದಲ್ಲಿ ಕೊರೆತ ತಡೆಯಲು ಉಲ್ಲನ್ ಸ್ವೆಟರ್‌ಗಳನ್ನು ಧರಿಸುವುದು ಮಾಮೂಲು. ಚರ್ಮದ ತೊಂದರೆಗಳನ್ನು ತಡೆಗಟ್ಟಲು ಮೊದಲು ಕಾಟನ್ ಬಟ್ಟೆ ಧರಿಸಿ ನಂತರ ಅದರ ಮೇಲೆ ಸ್ವೆಟರ್ ಹಾಕಿಕೊಳ್ಳಿ, ಚರ್ಮವನ್ನು ನೇರವಾಗಿ ಉಲ್ಲನ್ ಮುಂತಾದ ಹರಿತ ಬಟ್ಟೆಗಳೊಡನೆ ಸಂಪರ್ಕಿಸಬೇಡಿ. ವಾರಕ್ಕೊಮ್ಮೆ ನಿಮ್ಮ ಬಟ್ಟೆಗಳೊಂದಿಗೆ ಸ್ವೆಟರ್, ಕಾಲು ಚೀಲಗಳನ್ನು ಒಗೆದುಕೊಳ್ಳಬೇಕು.

ನೀವು ಹೊರಗೆ ಹೋಗಲು ಸಿದ್ಧರಾದಾಗ ಮುಖಕ್ಕೆ ರಂಗು ಬರುವಂಥ ಮೇಕಪ್ ಬಳಸಿದರೆ ಒಳ್ಳೆಯದು. ಕೆನ್ನೆಗೆ ನಯವಾಗಿ ರಂಗು ಹಚ್ಚಿಕೊಳ್ಳುವುದನ್ನು ಮರೆಯಬೇಡಿ. ಚಳಿಗಾಲದಲ್ಲಿ ನಿಮ್ಮ ಮೇಕಪ್ ದಟ್ಟವಾಗಿದ್ದರೂ ನಡೆಯುತ್ತದೆ. ಆದಷ್ಟು ದಟ್ಟ ರಂಗಿನ ಬಟ್ಟೆಗಳನ್ನು ಧರಿಸಿ, ಒಂದು ಗುಲಾಬಿಯನ್ನೋ ಅಥವಾ ಒಳ್ಳೆಯ ವಾಸನೆಯುಳ್ಳ ಹೂವನ್ನೋ ಮುಡಿಯಿರಿ, ಇದರಿಂದ ಮಾಗಿಯ ನೀರಸ ವಾತಾವರಣದಲ್ಲಿ ನಿಮ್ಮ ಮುಖ ರಂಗೇರಿದಂತೆ, ಕಾಂತಿಯುತವಾಗಿ ಮಿಂಚುತ್ತದೆ. ■

ತಾರತಮ್ಯ

ಹೆಣ್ಣಿಗಾಗಿ ರಾವಣ
ಮಣ್ಣಿಗಾಗಿ ಕೌರವ
ಸತ್ತ ಸುದ್ದಿ ಹೊತ್ತು
ಸುತ್ತಿ ಸಾರಿರುವ
ರಾಮಾಯಣ, ಮಹಾಭಾರತ
ಸತ್ಯವಾಗಿ ಬಿತ್ತರಿಸಲಿಲ್ಲ ಏಕೆ
ರಾಮಕೃಷ್ಣರ ಅನೀತಿ ಅಧರ್ಮವನ್ನ?

-ಸಂಗಣ್ಣ ಹೋತಪೇಟ

ಈ ಲಕ್ಷಣ ಬೆಳೆಸಿಕೊಳ್ಳಿ

ಹೆಜ್ಜೆ - 12

■ 'ಕೃಶಾಂಗ'

ಅಪೇಕ್ಷಣೀಯವಾದ ವ್ಯಕ್ತಿತ್ವ ಸುಧಾರಣೆ ಸಾಧ್ಯವೂ ಅಹುದು ಎಂಬುದನ್ನು ಹಿಂದಿನ ಪಯಣದಲ್ಲಿ ವ್ಯಕ್ತಿತ್ವದ ದೈಹಿಕ ಲಕ್ಷಣಗಳಲ್ಲಿಯ ಕೊರತೆಗಳನ್ನು ನಿವಾರಿಸಿಕೊಳ್ಳುವ ಬಗೆಯನ್ನು ಚರ್ಚಿಸುವ ಮೂಲಕ ಕಂಡುಕೊಂಡಿದ್ದೇವೆ. ಉಳಿದ ಲಕ್ಷಣಗಳ ಬಗೆಗೆ ಈಗ ಮಾತನಾಡುತ್ತ ಸಾಗುವಾ, ಬನ್ನಿ.

ಮಾನಸಿಕ ಲಕ್ಷಣಗಳಲ್ಲಿ ಮೊದಲ ಸ್ಥಾನ, ಬುದ್ಧಿಮತ್ತೆ ಅಥವಾ ಕುಶಾಗ್ರಮತಿತ್ವಕ್ಕೆ. ಎರಡು ರೂಪಗಳಲ್ಲಿ ಅದು ಗೋಚರಿಸಬಹುದು. ನಿಸರ್ಗದತ್ತ ಕಲಿಕಾ ಸಾಮರ್ಥ್ಯ; ವ್ಯಕ್ತಿ ಸಂಗ್ರಹಿಸಿದ ಮಾಹಿತಿ. ಮೊದಲನೆಯದು ನರಜಾಲ ವ್ಯವಸ್ಥೆಯ ಕ್ರಿಯಾಶೀಲತೆಯ ಫಲವಾದರೆ, ಎರಡನೆಯದು ವ್ಯಕ್ತಿಯ ಪರಿಸರವನ್ನವಲಂಬಿಸಿರಬಹುದು. ಉತ್ತೇಜಿಸುವ ಮೂಲಕ ದೈವದತ್ತ ಸಾಮರ್ಥ್ಯ ನೇರವಾಗಿ ಕಾಣದಿರುವುದರಿಂದ ಆಕೆಯ ಜ್ಞಾನಸಂಗ್ರಹ ಇತ್ಯಾದಿಗಳಿಂದ ಅದನ್ನು ಅಳೆಯುತ್ತೇವೆ. ವ್ಯಕ್ತಿಯ ಜ್ಞಾನ ಸಾಮಾಜಿಕ ಮಹತ್ವ ಪಡೆದಿದೆ. ಆದುದರಿಂದ ವ್ಯಕ್ತಿತ್ವ ಸುಧಾರಣೆಯಲ್ಲಿ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಮಾನಸಿಕ ಚೂಟಿತನ ಸಾಂದರ್ಭಿಕವಾಗಿರುತ್ತದೆ. ಅಂದರೆ, ನಮಗೆ ಆಸಕ್ತಿಯಿದ್ದ ವಿಷಯಗಳಲ್ಲಿ ಹೆಚ್ಚು; ಉಳಿದವುಗಳಲ್ಲಿ ಕಡಿಮೆ. ಲಕ್ಷ್ಯ ಅನಗತ್ಯವಾದಲ್ಲಿ ಹರಿದು ಅಗತ್ಯವಾದಲ್ಲಿ ಹಿಂದುಳಿಯದಂತೆ ತರಬೇತಿ ನೀಡುವುದು ಸಾಧ್ಯ. ಯಾವ ವಿಷಯದಲ್ಲಾದರೂ ಗಾಢವಾಗಿ ಮತ್ತು ಆಳವಾಗಿ ನೋಡಲು ಸಮರ್ಥವಾದ ಮನಸ್ಸು ರೂಪುಗೊಳ್ಳಲು ಕಾರಣ: ಅನುವಂಶಿಕವಾಗಿ ಲಭ್ಯವಾದ ಮಿದುಳಿನ ಗುಣ; ಏಕಾಗ್ರತೆಯ ಮಟ್ಟ; ನಮ್ಮ ಜ್ಞಾನದ ದಾಸ್ತಾನು. ಕೊನೆಯ ಎರಡನ್ನೂ ನಾವು ಸುಧಾರಿಸಿಕೊಳ್ಳಬಹುದು. ಮನಸ್ಸಿನ ವ್ಯಾಪ್ತಿ ಎಂದರೆ? ನಾವು ಮುಕ್ತ ಅಥವಾ ಸಂಕುಚಿತ ಮನಸ್ಕರೋ ಎಂಬುದು; ನಾವು ಉದಾರಿಗಳೋ ಅಥವಾ ತೀರ ಸ್ವಾರ್ಥಿಗಳೋ ಎಂಬುದು. ಬೇರೆಯವರ ವಿಚಾರಗಳನ್ನು ಅರಿಯುವ ಇಚ್ಛೆ, ಆಗ ತೋರ್ಪಡಿಸಬೇಕಾದ ಸಹನೆ ನಮ್ಮ ಪರಿಸರವನ್ನರಿಯಲು ಸಹಾಯ ಮಾಡುತ್ತಿದ್ದರೆ ಇತರರ ವಿಚಾರಗಳ ಬಗೆಗಿನ ನಮ್ಮ ಸಹಿಷ್ಣುತೆ ದೊಡ್ಡ ಮನಸ್ಸನ್ನು ಸೂಚಿಸುತ್ತದೆ. ಎಲ್ಲ ವಿಷಯಗಳಿಗೂ ತಲೆಯಾಡಿಸುವುದನ್ನೇ ಮುಕ್ತ ಮನಸ್ಸೆಂದಾಗಲೀ ಸರ್ವಾಪರಾಧಗಳನ್ನೂ ಮನ್ನಿಸುವುದನ್ನೇ ದೊಡ್ಡ ಮನಸ್ಸೆಂದು ತಿಳಿಯುವುದು ಮಾತ್ರ ತಪ್ಪು. ನಮಗೆ ಮುನ್ನು ಗ'್ಗವ' ಮನಸ್ಸು

ಯಾವ ವಿಷಯದಲ್ಲಾದರೂ ಗಾಢವಾಗಿ ಮತ್ತು ಆಳವಾಗಿ ನೋಡಲು ಸಮರ್ಥವಾದ ಮನಸ್ಸು ರೂಪುಗೊಳ್ಳಲು ಕಾರಣ: ಅನುವಂಶಿಕವಾಗಿ ಲಭ್ಯವಾದ ಮಿದುಳಿನ ಗುಣ; ಏಕಾಗ್ರತೆಯ ಮಟ್ಟ; ನಮ್ಮ ಜ್ಞಾನದ ದಾಸ್ತಾನು.

ಏಕುಂಟಾಗುತ್ತದೆ? ಇದು ನಮಗೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಸೀಮಿತ


ವಿರಬೇಕು.ಇಂಥ ವಿಷಯಗಳಲ್ಲಿ ನಾವು ತಳೆಯುವ ಆಸಕ್ತಿಯ ಫಲವಿದು. ಈ ಆಸಕ್ತಿ ಏಕೆ ಹೆಚ್ಚಿತು? ಅನೇಕ ಕಾರಣಗಳಿವೆ; ಅಸಾಮಾನ್ಯ ಬುದ್ಧಿ ಮತ್ತೆ, ಸ್ವರಕ್ಷಣೆಯ ಕಾಳಜಿ, ಸಾಮಾಜಿಕ ಸೇವೆಯ ತುಡಿತ, ಸಶಕ್ತ ಮಾನಸಿಕ ಚಟುವಟಿಕೆಯ ಬಗೆಗಿನ ಪ್ರೀತಿ ಇತ್ಯಾದಿ. ಇವೆಲ್ಲವುಗಳನ್ನೂ ಸುಧಾರಿಸಿಕೊಳ್ಳಬಹುದು.

ಈಗ ಭಾವನೆಗಳ ಅಂಗಳಕ್ಕೆ ಕಾಲಿರಿಸೋಣ. ನಮ್ಮ ಭಾವನೆಗಳು ಸಮಾಜಕ್ಕೆ ತರುವ ಲಾಭಗಳ ಮುಖಾಂತರ ಮೌಲ್ಯೀಕರಣಕ್ಕೊಳಗಾಗುತ್ತವೆ.

ಯಾವುದೇ ವಿಷಯಕ್ಕೆ ನಾವು ತೋರುವ ಪ್ರತಿಕ್ರಿಯೆ ಬಹುಜನರ ಪ್ರತಿಕ್ರಿಯೆಯಂತೆಯೇ ಇರಬೇಕೆಂದು ಸಮಾಜ ಬಯಸುತ್ತದಲ್ಲವೇ? ಇದು ಸಹಜ. ಆದರೆ ನಾನೊಬ್ಬನೇ ಭಿನ್ನಾಭಿಪ್ರಾಯದವನಾದರೆ ಇತರರಿಗೆ 'ವಿಚಿತ್ರ ವ್ಯಕ್ತಿ'ಯಾಗಿ ಕಾಣಬಹುದು; ಅಥವಾ ಕಡಿಮೆ ಬುದ್ಧಿವಂತಿಕೆಯವನಾಗಿಯೂ ಕಾಣಬಹುದು. ಆದುದರಿಂದ ನಮ್ಮ ಭಾವನೆಗಳ ಗುಣಾತ್ಮಕತೆಯೂ ಅಷ್ಟೇ ಮುಖ್ಯ. ವ್ಯಕ್ತಿಯ ಸಾಮಾಜಿಕ ಸಂಬಂಧ ಯಾವ ಸ್ವರೂಪದ್ದು? ಆತ ಸಮಾಜದಲ್ಲಿ ಆಶಾವಾದವನ್ನು ಬಿತ್ತುತ್ತಿದ್ದಾನೆಯೇ? 'ಜೀವನ ಸುಖಕರ' ವೆಂಬ ಭಾವನೆಯನ್ನು ಇತರರಲ್ಲೂ ಮೂಡಿಸಲು ಆಕೆ ಸಮರ್ಥಳೇ? ಬದುಕಿನ ಜಟಕಾಬಂಡಿ ರಸ್ತೆಯ ಮಧ್ಯದಲ್ಲಿರುವಾಗಿನಿಗಿಂತ ರಸ್ತೆಯ ಬದಿಯಲ್ಲಿ ಮಗುಚುತ್ತಿದ್ದಾಗಲೂ ಆಕೆ ಅನಾವಶ್ಯಕವಾಗಿ ಆತಂಕಿತವಾಗದಿರಬಲ್ಲಳೇ? ಇವೂ ಸಹ ಮಹತ್ವದವಾದರೂ ಎಲ್ಲ ವಿಪತ್ತುಗಳಲ್ಲಿಯೂ 'ನಗುತ್ತಿರುವವರು' ಪೆದ್ದನ ಕತೆಯಲ್ಲಿಯ ಪೆದ್ದನ ಬಂಧುಗಳಾಗದಂತೆ ಎಚ್ಚರವಹಿಸುವುದೂ ಅವಶ್ಯ. ಒಟ್ಟಿನಲ್ಲಿ ಭಾವನೆಗಳ ಉಗಮದ ಮೇಲೆ ನಿಯಂತ್ರಣ ಮತ್ತು ಅವುಗಳ ತೋರ್ಪಡಿಕೆಯ ಮೇಲೆ ಹತೋಟಿ ಅಗತ್ಯ. ಭಾವನಾರಹಿತ ವ್ಯಕ್ತಿಯಾಗಿರುವುದರಷ್ಟೇ ಗಂಡಾಂತರಕಾರಿಯಾದದ್ದು ಭಾವನೆಗಳ ಆಧಿಕ್ಯ. ಅದರಂತೆಯೇ ಭಾವನೆಗಳ ತೋರ್ಪಡಿಕೆಯ ಅವಧಿಯೂ ಸಹ ಅವಶ್ಯಕತೆಗಿಂತ ದೀರ್ಘ ಕಾಲದ್ದು ಅಥವಾ ಅಲ್ಪಕಾಲದ್ದಾಗಿರುವುದು ಅಗ್ರಾಹ್ಯ. ಚಿಕ್ಕ ಪುಟ್ಟ ಮತ್ತು ಅಲಕ್ಷಿಸಬಹುದಾದ ಸಂದರ್ಭಗಳಲ್ಲಿ ಭಾವನೆಗಳ ಅಭಿವ್ಯಕ್ತಿ ನಗೆಗೇಡಾಗಬಹುದು. ಯಾವಾಗಲೂ ನಗುವ ತರುಣ, ಯಾವಾಗಲೂ ಅಳುವ ತರುಣಿ ಇವರನ್ನು ನಂಬಬಾರದಲ್ಲವೇ? ಭಾವನೆಗಳ ಅಭಿವ್ಯಕ್ತಿಯೊಡನೆ ಆ ವ್ಯಕ್ತಿಯ ಸಾಮಾಜಿಕ ಮೌಲ್ಯ ವೃದ್ಧಿಸಿದೆಯೇ ಅಥವಾ

ಕ್ಷೀಣಿಸಿದೆಯೇ ಎಂಬುದು ವ್ಯಕ್ತಿತ್ವದ ಒರೆಗಲ್ಲು. ಭಾವನೆಗಳಿಗೆ ಸಂಬಂಧಪಟ್ಟ ಈ ಎಲ್ಲ ಲಕ್ಷಣಗಳನ್ನು ಪ್ರಯತ್ನಪೂರ್ವಕ ಸುಧಾರಿಸಿಕೊಳ್ಳಬಹುದೆಂಬುದು ಇಲ್ಲಿ ಪ್ರಸ್ತುತ.

ವ್ಯಕ್ತಿಗೆ ಇರುವ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಲಕ್ಷಣಗಳ ಉತ್ತಮಿಕೆಯ ನಿಜವಾದ ಗುರಿ ಯಾವುದು? ಮೊದಲನೆಯದು, ಆಕೆ ಆ ಲಕ್ಷಣಗಳನ್ನು ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಹೇಗೆ ಉಪಯೋಗಿಸುತ್ತಾಳೆ ಎಂಬುದಾದರೆ, ಎರಡನೆಯದು ಆ ಲಕ್ಷಣಗಳಿಂದ ಆಕೆ ಎಂಥ ಸಾಮಾಜಿಕ ಪರಿಣಾಮ ಬೀರುತ್ತಾಳೆ ಎಂಬುದು. ವ್ಯಕ್ತಿಯು ತನ್ನ ಅನಿಸಿಕೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುತ್ತಿದ್ದರೆ ಅದು ಆತನ ಸಾಮಾಜಿಕ ಸ್ನೇಹಪರತೆಯ ಸಂಕೇತ. ಆ ಅಭಿವ್ಯಕ್ತಿ ಇತರರ ಅಭಿವ್ಯಕ್ತಿಯ ಮುಕ್ತತೆ ಮತ್ತು ವ್ಯಾಪ್ತಿಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಲು ಸಾಧ್ಯವಾಗಿದೆ ಎಂಬುದೂ ಮಹತ್ವದ್ದು. ಆದರೆ ಅಭಿವ್ಯಕ್ತಿ 'ಮಾತುಗಂಟತನ'ವಾಗಿ ವಿಸ್ತಾರಗೊಂಡರೆ ಅದು ದುಶ್ಚಟವಾಗಿ ಇತರರ ತಲೆನೋವಿಗೆ ಕಾರಣವಾಗಬಹುದು. ಅಭಿವ್ಯಕ್ತಿ 'ಮಾತುಗಂಟತನ' ವಾಗಬೇಕಾದರೆ ಆ ವ್ಯಕ್ತಿ ತನ್ನ ಸಂಪರ್ಕವಿರುವ ಗುಂಪಿನಿಂದ ಪ್ರೀತಿಸಲ್ಪಡಬೇಕು. ಇದಕ್ಕೇ ಸಾಮಾಜಿಕ ಸ್ನೇಹಪರತೆ ಎನ್ನುವುದು. ತನ್ನ ಸಾಮಾಜಿಕ ಬಳಗವನ್ನು ಪ್ರೀತಿಸುವವ ಮಿತಭಾಷಿ; ಆತನ ಮಾತು ಹಿತವಾದದ್ದು ಸಹ. ಆಕೆ ಇತರರ ಮಾತುಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಳು. ಇತರರ ಮಾತು ಮುಗಿಯುವ ತನಕ ಶಾಂತವಾಗಿರುವಳು; ಸುಮ್ಮನಿರುವಳು. ಇನ್ನು, ವಿಶಿಷ್ಟ ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ ಹೊಂದಾಣಿಕೆಯ ಮನೋಭಾವ ಹೊಂದಿರುವುದಕ್ಕೆ ಸಮಯೋಪಾಯ ಎನ್ನುತ್ತೇವೆ. ಉತ್ತಮ ಕೊಡಕೊಳ್ಳುವ ಗುಣ, ಪರರ ಸಹಕಾರವನ್ನು ಸ್ವಯಂಸ್ಫೂರ್ತಿಯಿಂದ ಪಡೆಯುವ ಸಾಮರ್ಥ್ಯ, ಅಭಿಪ್ರಾಯ ವೈಷಮ್ಯವನ್ನು ಅತ್ಯಂತ ಕಡಿಮೆ ಮಟ್ಟದಲ್ಲಿರಿಸುವ ಕಲೆಗಳ ಸಂಗಮ ಸಮಯೋಪಾಯ. ಆದರೆ ಅಂಜುಬುರುಕತನದ ಪರಿಣಾಮವಾಗಿರುವ ಅಥವಾ ಉದ್ದೇಶರಹಿತವಾದ ಶರಣಾಗತಿಗೂ, ಸಮಯೋಪಾಯದ ಕಾರಣದಿಂದುಂಟಾದ 'ಕೊಂಡುಕೊಳ್ಳುವಿಕೆಯ' ಮನೋಭಾವಕ್ಕೂ ಇರುವ ಅಂತರವನ್ನರಿಯುವುದು ಮುಖ್ಯ. ಸಾಮಾಜಿಕ ಜಯ ಸಾಧಿತವಾಗುವಂತಿದ್ದರೆ ವೈಯಕ್ತಿಕ ಸೋಲಿನೊಡನೆ ಒಪ್ಪಂದ ಮಾಡಿಕೊಳ್ಳಬಹುದು. ಇಂಥ ಗುಣವೇ ಔದಾರ್ಯ. ಸಾಮಾಜಿಕ ಔದಾರ್ಯವೆಂದರೆ ಪರರಲ್ಲಿಯ ಕಡ್ಡಿಯಂತಹ ತಪ್ಪುಗಳನ್ನು ಗುಡ್ಡಮಾಡಿ ತೋರಿಸದಿರುವುದು; ತನ್ನ ಕಡ್ಡಿಯಂಥ ಸಾಧನೆಯನ್ನು ಗುಡ್ಡದ ಗಾತ್ರಕ್ಕೇರಿಸಿ ಅದರ ತುತ್ತೂರಿಯನ್ನೂದದಿರುವುದು. ಉದಾರ ವ್ಯಕ್ತಿಯ ಸಂಭಾಷಣೆಯಲ್ಲಿ ಪರೋಕ್ಷವಾಗಿಯಾದರೂ ಆತನಿಗೆ ಉದಾರ 'ಅಹಂ' ಇದೆ ಎಂಬುದು ಇತರರಿಗೆ ತೋರದು. ಆಕೆ ಬೇರೆಯವರ ಭಾವನೆಗಳನ್ನು ಘಾಸಿಗೊಳಿಸುವುದಿಲ್ಲ; ಅವರನ್ನು ಹೀಗಳೆಯುವುದಿಲ್ಲ; ಪೇಚಿಗೆ ಸಿಕ್ಕಿಸುವುದಿಲ್ಲ. ಈ ಗುಣ ವಿಶೇಷತೆಗಳನ್ನೆಲ್ಲ ಪ್ರಯತ್ನ ಪೂರ್ವಕವಾಗಿ ರಕ್ತಗತವಾಗಿಸಿಕೊಳ್ಳುವ ಮೂಲಕ ನಮ್ಮ ವ್ಯಕ್ತಿತ್ವ ಸುಧಾರಣೆ ಮಾಡಿಕೊಳ್ಳಬಹುದೆಂಬ ವಿಚಾರ ನಿಜಕ್ಕೂ ತೃಪ್ತಿ ತರುವಂಥದು.



ನಮ್ಮ ಪಯಣದೆ ಈ ಕೊನೆಯ ಹಂತದಲ್ಲಿ ವ್ಯಕ್ತಿತ್ವ ವಿಶ್ಲೇಷಣೆಯ ಮೂಲಕ ವ್ಯಕ್ತಿಯ ಮೌಲ್ಯಾಂಕನ ಪದ್ಧತಿಯ ಅನಾನುಕೂಲ, ಅನುಕೂಲಗಳನ್ನರಿಯಲು ಪ್ರಶಸ್ತ ಸಮಯ. ಮೊದಲು ಅನುಕೂಲಗಳನ್ನು ನೆನೆಯೋಣ.

ಪರಿಪೂರ್ಣ ವ್ಯಕ್ತಿತ್ವದ ಅನುಕೂಲತೆಗಳನ್ನು ಮನದಟ್ಟು ಮಾಡಲು ಅದರ ನಾಲ್ಕು ಮುಖಗಳನ್ನು - ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ - ವೈಭವೀಕರಿಸಬೇಕಿಲ್ಲ. ಅವು ಸ್ವಯಂ ಸಿದ್ಧವಾಗಿದೆ. ಈ ಘಟಕಗಳನ್ನು ಅಥವಾ ಇವುಗಳಲ್ಲಿ ಯಾವುದನ್ನೂ ನಿರ್ಲಕ್ಷಿಸಲಾಗದು.

ವ್ಯಕ್ತಿತ್ವ ಮೌಲ್ಯೀಕರಣಕ್ಕೆ ಇಷ್ಟೇಕೆ ಒತ್ತು ನೀಡಲಾಗುತ್ತಿದೆಯೆಂದರೆ ಅದು ವ್ಯಕ್ತಿತ್ವ ಪೋಷಣೆಯತ್ತ ನಮ್ಮ ಗಮನವನ್ನು ಸೆಳೆಯುತ್ತದೆ.

ಮೌಲ್ಯೀಕರಣ ಎರಡು ವಿಧವಾಗಿರಬಹುದು. ನಮ್ಮ ವ್ಯಕ್ತಿತ್ವವನ್ನು ನಾವೇ ಮೌಲ್ಯೀಕರಿಸಿದಾಗ ಅದು ಸ್ವ-ಮೌಲ್ಯೀಕರಣ. ಇತರರೂ ನಮ್ಮ ವ್ಯಕ್ತಿತ್ವವನ್ನು ಮೌಲ್ಯೀಕರಿಸಬಹುದು. ಈ 'ಇತರರು' ನಮ್ಮ ಸ್ನೇಹಿತರೋ, ಸ್ನೇಹಿತೆಯರೋ, ಭಿನ್ನ-ಭಿನ್ನ ಜೀವನ ರಂಗಗಳಲ್ಲಿರುವ ಸ್ತ್ರೀ-ಪುರುಷರೋ- ಆಗಿರಬಹುದು. ಸ್ವಮೌಲ್ಯೀಕರಣದ ಅಂಕಗಳನ್ನು ಇತರ ಐವರ ಸರಾಸರಿ (.ಐದೂ ಅಂಕಗಳನ್ನು ಕೂಡಿ ಐದರಿಂದ ಭಾಗಿಸುವ ಮೂಲಕ ದೊರಕುವ) ಮೌಲ್ಯೀಕರಣ ಅಂಕಗಳೊಡನೆ ಹೋಲಿಸಬಹುದು. ಇಂಥ ತುಲನೆ ನಮ್ಮ ಬಗೆಗೆ ಬೇರೆಯವರ ದೃಷ್ಟಿಪಥವನ್ನರಿಯಲು ಸಹಾಯಕ. ನಮ್ಮ ವ್ಯಕ್ತಿತ್ವ ಸಮತೋಲನದ್ದಾಗುವಲ್ಲಿ ತೊಡಕಾದ, ಬಾಧಕವಾದ ಅಂಶ ಯಾವುದು - ಸ್ವಂತ ದೃಷ್ಟಿಯಲ್ಲಿ ಮತ್ತು ಇತರರು ಕಂಡಂತೆ ಎಂಬುದನ್ನು ಪತ್ತೆ ಹಚ್ಚಿ ಆ ಬಾಧಕ ಅಂಶಗಳನ್ನು ನಿವಾರಿಸುವ ಪ್ರಯತ್ನವನ್ನು ನಾವೀಗ ಮಾಡಬಹುದು. ಎರಡು ವಿಚಾರಗಳನ್ನು ನಾವು ನೆನಪಿಡಬೇಕು. ಎರಡೂ ಮೌಲ್ಯಾಂಕಗಳ ಹೋಲಿಕೆಯ ನಂತರ ದೊರಕುವ ಸರಾಸರಿ ಫಲಿತಾಂಶದಿಂದ ನಾವು ಬಲೂನಿನಂತೆ ಉಬ್ಬಿ ಕೊನೆಗೆ ಒಡೆಯಬೇಕಿಲ್ಲ; ಕುಗ್ಗಿ ಕೈ ಚೆಲ್ಲಿ ಕುಳಿತುಕೊಳ್ಳಬೇಕಿಲ್ಲವೆಂಬುದು, ಮೊದಲನೆಯದು. ಈ ತುಲನಾತ್ಮಕ ಅಭ್ಯಾಸ ಯಾವಾಗಲೋ ಒಮ್ಮೆ ಮಾಡಿ ಕೈ ತೊಳೆದುಕೊಳ್ಳುವುದಲ್ಲ. ಇದು ಜೀವಮಾನದುದ್ದಕ್ಕೂ ಆಗಾಗ ಜರುಗಿಸುತ್ತಿರಬೇಕಾದ ಪ್ರಕ್ರಿಯೆ ಎಂದು ತಿಳಿಯುವುದು, ಎರಡನೆಯದು.

ವಿಶ್ಲೇಷಣೆಯ ಮೂಲಕ ಕೈಕೊಳ್ಳಲಾಗುವ ಮೌಲ್ಯೀಕರಣ ನಮ್ಮ ವ್ಯಕ್ತಿತ್ವದ ಬಗೆಗಿನ ನಮ್ಮ ದೃಷ್ಟಿಕೋನವನ್ನು ಪರಿಪೂರ್ಣವೂ ಸಮತೋಲನದ್ದೂ - ಆಗುವುದಕ್ಕೆ ಸಹಾಯ ಮಾಡುತ್ತದೆ. ವ್ಯವಹಾರ ಚಾತುರ್ಯಕ್ಕಾಗಲೀ, ವೈಯಕ್ತಿಕ ಆಕರ್ಷಣೆಗಾಗಲೀ ಅತಿ ಒತ್ತು ನೀಡಿ ಇತರ ಘಟಕಗಳನ್ನು ಮರೆಯುವುದಾಗಲೀ, ನಿರ್ಲಕ್ಷಿಸುವುದಾಗಲೀ ಅಪಾಯಕರ ಎಂಬ ಅರಿವುಂಟಾಗುತ್ತದೆ. ಸುಧಾರಣೆ ಒಮ್ಮೊಮ್ಮೆ ಅಸಾಧ್ಯವಾಗಬಹುದು (ಉದಾ : ಕೆಲವರ್ಷಗಳ ನಂತರ ನಿಮ್ಮ ಬೆಳವಣಿಗೆ ನಿಂತುಹೋಗುತ್ತಧೆ); ಒಮ್ಮೊಮ್ಮೆ ಕ್ರಮೇಣ ಆಗಬಹುದು (ಉದಾ : ಭಾವನೆಗಳ ಸ್ಥಿರೀಕರಣ); ಒಮ್ಮೊಮ್ಮೆ ತಡವಿಲ್ಲದೆ

ಆಗಬಹುದು (ಉದಾ : ಪೋಷಾಕಿನ ಬದಲು) ಆದರೆ ವ್ಯಕ್ತಿತ್ವ ಸುಧಾರಣೆ ಅಸಾಧ್ಯ ಎಂಬ ಭಾವನೆಯನ್ನು ಈ ವಿಧಾನ ತೊಡೆದುಹಾಕುತ್ತದೆ ಎಂಬುದು ಮೆಚ್ಚತಕ್ಕ ಅಂಶ.

ಯಾವನೊಬ್ಬನನ್ನು ಹುದ್ದೆಯೊಂದಕ್ಕೆ ಶಿಫಾರಸು ಮಾಡುವಲ್ಲಿ ಅಥವಾ ಆತನ ವ್ಯಕ್ತಿತ್ವದಲ್ಲಿಯ ಮುಖ್ಯ ಗುಣಗಳನ್ನು ಎತ್ತಿತೋರಿಸಲು ಈ ಪದ್ಧತಿ ನೆರವು ನೀಡುತ್ತದೆ.

ಕೆಲವು ಅನಿವಾರ್ಯ ಅನಾನುಕೂಲಗಳಿಂದ ನಾವು ಎಚ್ಚರವಹಿಸಬೇಕು.

ಮೌಲ್ಯಾಂಕನ ಪಟ್ಟಿಯಲ್ಲಿಯ ಒಟ್ಟು ಗುಣಗಳಿಗೆ ಬೆಲೆಯಿಲ್ಲ; ವಿವಿಧ ಘಟಕಗಳು ಪಡೆಯುವ ಗುಣಗಳಿಗೆ ಬೆಲೆಯಿದೆ. ಉದಾಹರಣೆಗೆ ಬುದ್ಧಿಮತ್ತೆಯಲ್ಲಿ ಒಂದೇ ಗುಣ ಪಡೆದ ವ್ಯಕ್ತಿ ಒಟ್ಟು ಗುಣಗಳಾಧಾರದ ಮೇಲೆ ಸಾಮಾನ್ಯ ವ್ಯಕ್ತಿತ್ವದವನೆನಿಸಬಹುದು. ಆದರೆ ಬುದ್ಧಿಮತ್ತೆಯ ತೀರ ಕೆಳಮಟ್ಟದ ಕಾರಣ ಆ ವ್ಯಕ್ತಿತ್ವ ಕನಿಷ್ಠ ಪಾತಳಿಯದಾಗುವುದು ಸಹಜ-ಪಟ್ಟಿಯ ಒಟ್ಟು ಗುಣಾಂಕ ಇದನ್ನು ಪ್ರತಿಫಲಿಸುವುದಿಲ್ಲ; ತಪ್ಪುದಾರಿಗೆಳೆಯುತ್ತದೆ.

ಯಾರಾದರೂ ನಿಮ್ಮ ವ್ಯಕ್ತಿತ್ವವನ್ನಳೆಯುವಾಗ ಯಾವುದೊಂದು ಘಟಕಕ್ಕೆ ಕಡಿಮೆ ಅಂಕ ನೀಡುತ್ತಾರಾದರೆ ನಿಮ್ಮ ವ್ಯಕ್ತಿತ್ವ ನಿಜವಾಗಿ ದೋಷಪೂರ್ಣವಾಗಿರಬೇಕಿಲ್ಲ. ಮೌಲ್ಯಾಂಕನ ಮಾಡಿದ ವ್ಯಕ್ತಿಗೆ ನಿಮ್ಮ ವ್ಯಕ್ತಿತ್ವದ ಅಪೂರ್ಣ ಜ್ಞಾನವಿರಬಹುದು; ನಿಮ್ಮಲ್ಲಿ ಆ ಗುಣವನ್ನು ಸರಿಯಾಗಿ ಕಾಣುವ ಅವಕಾಶವಾಗದಿರಬಹುದು; ನೀವು ತಾತ್ಪೂರ್ತಿಕವಾಗಿ ಆ ಗುಣದಲ್ಲಿ ಹಿಂದೆ ಬಿದ್ದಿರಬಹುದು.

ನೀವು ಇತರರಿಂದ ಪಡೆಯುವ ಕಡಿಮೆ ಗುಣಗಳೂ ಅವರ ಪೂರ್ವಾಗ್ರಹ, ದೋಷ ಪೂರ್ಣ ನಿರೀಕ್ಷಣೆಯ ಫಲಗಳಾಗಿರಬಹುದು.

ನಿಮಗೆ 'ಶುಭರಾತ್ರಿ' ಹೇಳುವ ಮೊದಲು ನಿಮಗೆ ನೆನಪಿಸುವುದೇನೆಂದರೆ ಆ ಪದ್ಧತಿ ನಿಮ್ಮ ವ್ಯಕ್ತಿತ್ವದ ಬಗೆಗಿನ ನಿಖರ ಸತ್ಯವನ್ನು ಹೇಳುವುದಿಲ್ಲ. ಬೇರೆಯವರನ್ನು ನಾವು ಹೇಗೆ ಪ್ರಭಾವಿಸುತ್ತೇವೆ ಎಂಬುದರ ಕಲ್ಪನೆಯನ್ನು ಮಾತ್ರ ನೀಡುತ್ತವೆ. ಇತರರಿಗೆ ನಾನು ಇನ್ನೂ 'ಇಷ್ಟ' ವಾದ 'ಹೊಂದಿಕೊಳ್ಳುವ' ವ್ಯಕ್ತಿಯಾಗುವುದು ಹೇಗೆ ಎಂಬುದನ್ನು ಬಿಂಬಿಸುತ್ತವೆ ಮಾತ್ರ. ■

ಹಣದುಬ್ಬರ ಮತ್ತು ಬೆಲೆ ಹೆಚ್ಚಳ

ಹಣ ಒಳ್ಳೆಯ ಸೇವಕ, ಆದರೆ ಕೆಟ್ಟ ಮಾಲೀಕ. ಆ ಮಾಲೀಕನನ್ನು ನಿಯಂತ್ರಿಸದಿದ್ದರೆ ನಮ್ಮದು ತುಘಲಕ್ ರಾಜ್ಯವಾದೀತು!

■ **ಶಿವಯೋಗಿ ಕಬ್ಬಿಣಕಂತಿಮಠ**

ರಾಜಸ್ತಾನದ ಪೋಖ್ರಾನ್‌ದಲ್ಲಿ ಅಣು ಸ್ಫೋಟಣೆಯಾದರೆ, ಇತ್ತ ಅರ್ಥವ್ಯವಸ್ಥೆಯಲ್ಲಿ ಹಣ ಸ್ಫೋಟಣೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಹಣದುಬ್ಬರ ಅಥವಾ ಅತಿಪ್ರಸರಣದ ಬಗ್ಗೆ ಸಾಕಷ್ಟು ಚರ್ಚಿಸಲಾಗುತ್ತಿದೆ. ಹಣದುಬ್ಬರ ಪ್ರಮಾಣ ಪ್ರತಿವಾರ ಇಲ್ಲವೆ ಪ್ರತಿ ದಿನ ಹೆಚ್ಚಾಗುತ್ತಿದೆ.

ಹಣ ತನ್ನ ಮೌಲ್ಯವನ್ನು ಕಳೆದುಕೊಳ್ಳುವುದಕ್ಕೆ ಹಣದುಬ್ಬರ ಅಥವಾ ಅತಿಪ್ರಸರಣ ಎಂದು ಕರೆಯಲಾಗುತ್ತದೆ. ಅಂದರೆ ನಾವು ದಿನನಿತ್ಯ ಬಳಸಿಕೊಳ್ಳುವ ಅಥವಾ ವಿನಿಮಯಕ್ಕೆ ಸಹಾಯಕವಾಗುವ ನಮ್ಮ ಹಣ ತನ್ನ 'ಖರೀದಿ ಮಾಡುವ ಶಕ್ತಿ' (Purchasing Power) ಯನ್ನು ಕಳೆದುಕೊಳ್ಳುವುದು. ಅರ್ಥವ್ಯವಸ್ಥೆಯಲ್ಲಿ ಹೀಗೆ ಮೇಲಿಂದ ಮೇಲೆ ಸಂಭವಿಸುವುದುಂಟು. ಕಾರಣ, ಹಣದ ಪೂರೈಕೆ ಅದರ ಬೇಡಿಕೆಗಿಂತ ಹೆಚ್ಚಾಗುತ್ತಿದೆ. ಅರ್ಥವ್ಯವಸ್ಥೆಯಲ್ಲಿ ಅನೇಕ ಕಾರಣಗಳಿಂದ ವಿವಿಧ ರೀತಿಯ ಬ್ಯಾಂಕುಗಳು ಪೂರೈಸುವ ಅಗಾಧ ಮೊತ್ತದ ಸಾಲದಿಂದ, ನೌಕರರ (ಕೆಲಸಗಾರರ) ವೇತನ ಹಾಗೂ ನಿವೃತ್ತಿ ವೇತನಗಳ ಹೆಚ್ಚಳದಿಂದ, ಸರಕಾರಗಳು ದೊಡ್ಡ ರೀತಿಯಲ್ಲಿ ಮಾಡುವ (ದುಂದು) ವೆಚ್ಚದಿಂದ, ವಿದೇಶಿ ಸಾಲದಲ್ಲಿಯ ಹೆಚ್ಚಳದಿಂದ ಮುಂತಾದವುಗಳಿಂದ ಹಣದ ಪೂರೈಕೆ ಹೆಚ್ಚಾಗುತ್ತಿದೆ. ಇದಲ್ಲದೆ ಸರ್ಕಾರ ಹೊಸ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವುದು ಸಹ ಉರಿಯುವ ಬೆಂಕಿಯಲ್ಲಿ ಎಣ್ಣೆಯನ್ನು ಸುರಿದ ಹಾಗೆ ಆಗುತ್ತದೆ.

ಇನ್ನೊಂದು ರೀತಿಯಲ್ಲಿ ಹಣದುಬ್ಬರವನ್ನು ಅರ್ಥೈಸುವುದಾದರೆ, ಇದು 'ಸದಾ ಬೆಲೆಗಳು ಹೆಚ್ಚುತ್ತಿರುವ ಸ್ಥಿತಿ'. ಇದನ್ನು ದಿನ ನಿತ್ಯದ ಎಲ್ಲ ಮಾರುಕಟ್ಟೆಗಳ ಪ್ರತಿಯೊಂದು ಸರಕು ಮತ್ತು ಸೇವೆಗಳ ಬೆಲೆಗಳ ಸ್ಥಿತಿಯಿಂದ ತಿಳಿದುಕೊಳ್ಳಬಹುದಾಗಿದೆ. ಸದ್ಯದ ಆರ್ಥಿಕ ವಾತಾವರಣದಲ್ಲಿ ಎಲ್ಲಾ ವಸ್ತುಗಳ ಬೆಲೆಗಳ ಹೆಚ್ಚಳದಿಂದ ಜನಸಾಮಾನ್ಯರು ದಿನನಿತ್ಯದ ಜೀವನ ಸಾಗಿಸುವಲ್ಲಿ ಹೋರಾಡುವಂತಾಗಿದೆ. ಅದರಲ್ಲಿ ಅವರ ನೈತಿಕತೆ, ಪ್ರಾಮಾಣಿಕತನ, ಸಾಮಾಜಿಕ ನ್ಯಾಯ, ಸತ್ಯ ಮುಂತಾದ ಮಾನವೀಯ ಮೌಲ್ಯಗಳು ಸಹ ಸಾಕಷ್ಟು ಕುಸಿಯುತ್ತಿವೆ. ಒಟ್ಟಾರೆ ಬೆಲೆ ಏರಿಕೆಯು ಎಲ್ಲ ವರ್ಗಗಳ ಜನತೆಯನ್ನು ಶೋಷಿಸುತ್ತದೆ.

ಕೆಲವು ಸಂದರ್ಭಗಳಲ್ಲಿ ಉತ್ಪಾದನೆ ಕಡಿಮೆಯಾದಾಗ ಅಥವಾ ಸರಕು ಸೇವೆಗಳ ಪೂರೈಕೆ ಕೊರತೆಯಿಂದ ಕೂಡಿದಾಗ ಬೆಲೆಗಳು ಹೆಚ್ಚುವುದುಂಟು. ಇದಲ್ಲದೆ ನಾವು ಒಪ್ಪಿಕೊಂಡಂತಹ ಸಮಾಜದಲ್ಲಿ ಅನೇಕ ಹಬ್ಬಗಳನ್ನು ಆಚರಿಸುವುದರಿಂದ ವಿಶೇಷವಾಗಿ ಹಬ್ಬದ ದಿನಗಳಲ್ಲಿ, ಮದುವೆ - ಮುಂಜಿವೆಗಳನ್ನು ಆಚರಿಸುವ ದಿನಗಳಲ್ಲಿ ನಾವು ಸಲ್ಲಿಸುವ ಹೆಚ್ಚಿನ ಬೇಡಿಕೆಯಿಂದ ವಿವಿಧ ಸರಕು-ಸೇವೆಗಳ ಬೆಲೆಗಳು ಹೆಚ್ಚುವುದುಂಟು. ಹೀಗೆ ಅನೇಕ ಸಾಮಾಜಿಕ ಅಂಶಗಳು ಹಣದುಬ್ಬರಕ್ಕೆ ಕಾರಣಗಳಾಗಿವೆ.

ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರದ ಪ್ರಮಾಣ ಶೇಕಡಾ ಆರರ ಗಡಿಯನ್ನು ದಾಟಿದೆ. ಭವಿಷ್ಯದಲ್ಲಿ ಅದರ ಪ್ರಮಾಣ ಹೆಚ್ಚಾಗುವುದುಂಟು. ದೇಶದ ಒಟ್ಟಾರೆ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಹಣಕಾಸಿನ ಚಟುವಟಿಕೆಗಳನ್ನು ಯೋಜನಾಬದ್ಧವಾಗಿ ಸರಕಾರ ಹಾಗೂ ಬ್ಯಾಂಕಿಂಗ್ ವ್ಯವಸ್ಥೆ ನಿಭಾಯಿಸುವುದರಿಂದ ಹಣದುಬ್ಬರವನ್ನು ನಿಯಂತ್ರಿಸಬಹುದು. ಇಲ್ಲವಾದರೆ ನಮ್ಮದು ತುಘಲಕ್‌ನ ರಾಜ್ಯವಾಗುತ್ತದೆ! ಹಣ ಒಳ್ಳೆಯ ಸೇವಕ ಆದರೆ ಕೆಟ್ಟ ಮಾಲೀಕ! ■

ಕಾರುಬಾರು

'ಹೇಗಿದೆ ಸ್ವಾಮಿ
ತಮ್ಮ ಕಾರುಬಾರು?'
ಎಂದು ಕೇಳಿದರೆ
'ಕೊಂಡಿರುವೆ
ಕೆಂಪು ಕಾರು
ಇಟ್ಟಿರುವೆ
ಊರಲ್ಲೊಂದು ಬಾರು'
ಎಂದನವ

-ಗಾಯಿತ್ರಿ ಬಾಳ್ಕುದ್ರು

ಕ್ರೀಡೆ ಬಗ್ಗೆ ತಿಳಿಯಿರಿ

೧. ಕಾಮನ್‌ವೆಲ್ತ್ ಚೆಸ್ ಚಾಂಪಿಯನ್‌ಷಿಪ್ ಗೆದ್ದ ಮೊದಲ ಭಾರತೀಯ ಮಹಿಳೆ ಯಾರು?
೨. ಟೆಕ್ವಾಂಡೊ ಆತ್ಮರಕ್ಷಣೆ ಕಲೆಯನ್ನು ಯಾವ ದೇಶದಲ್ಲಿ ಕಂಡುಹಿಡಿಯಲಾಯಿತು?
೩. ಬೇಸ್ ಬಾಲ್ ಕ್ರೀಡಾ ನಿಯಮಗಳನ್ನು ರೂಪಿಸಿದವರು ಯಾರು?
೪. ವಾಟರ್ ಪೋಲೋ ಆಟವನ್ನು ಹಿಂದೆ ಏನೆಂದು ಕರೆಯುತ್ತಿದ್ದರು?
೫. ಈ ಶತಮಾನ ಆದಿಯಲ್ಲಿ ಕುದುರೆ ಸವಾರನಾಗಿ ಹೆಸರು ಗಳಿಸಿದ್ದವನಾರು?
೬. ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸಿಂಗಲ್ಸ್ ಗೆದ್ದ ಮೊದಲ ಏಷಿಯನ್ ಆಟಗಾರನಾರು?
೭. ೧೯೭೨ರ ಒಲಂಪಿಕ್ಸ್‌ನ ಬಾಸ್ಕೆಟ್‌ಬಾಲ್ ಫೈನಲ್ಸ್‌ನಲ್ಲಿ ಸಂಧಿಸಿದ್ದ ತಂಡಗಳಾವುವು?
೮. ಒಲಂಪಿಕ್ ಕ್ರೀಡಾಕೂಟ (೧೯೦೪)ದಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದ ಏಕಮಾತ್ರ ಬಾಕ್ಸರ್ ಯಾರು?
೯. ಮೊಟ್ಟಮೊದಲ ಸೈಕಲ್ ಸ್ಪರ್ಧೆಗಳು ಎಲ್ಲಿ ನಡೆದವು?
೧೦. ಜಗತ್ತಿನ ಅತಿ ಕಿರಿಯ ಚದುರಂಗ ಚಾಂಪಿಯನ್ ಯಾರು?
೧೧. ಒಂದೇ ಒಲಂಪಿಕ್ಸ್‌ನಲ್ಲಿ ಐದು ಚಿನ್ನದ ಪದಕಗಳನ್ನು ಗಳಿಸಿದ ಜಿಮ್ನಾಸ್ಟಿಕ್ ಪಟು ಯಾರು?
೧೨. ಗಾಲ್ಫ್ ಆಟಗಾರ ಜಾಕ್‌ನಿಕೋಲಸ್ ಎಷ್ಟುಬಾರಿ ಯು.ಎಸ್. ಓಪನ್ ಅಗ್ರಸ್ಥಾನ ಪಡೆದರು?
೧೩. ಮಹಿಳೆಯರ ಹ್ಯಾಂಡ್‌ಬಾಲ್ ಸ್ಪರ್ಧೆಯನ್ನು ಯಾವ ಒಲಂಪಿಕ್ಸ್‌ನಲ್ಲಿ ಸೇರಿಸಲಾಯಿತು?
೧೪. ೧೯೬೪ರ ಒಲಂಪಿಕ್ ಹಾಕಿ ಪ್ರಶಸ್ತಿ ಗೆದ್ದಾಗ ಭಾರತ ತಂಡದ ತರಬೇತುದಾರ ಯಾರಾಗಿದ್ದರು?
೧೫. ಆತ್ಮ ರಕ್ಷಣಾ ಕಲೆ 'ಜೂಡೊ'ವನ್ನು ಕಂಡು ಹಿಡಿದವರು ಯಾರು?
೧೬. ವಿಂಬಲ್ಡನ್ ಫೈನಲ್ ತಲುಪಿದ ಪ್ರಥಮ ರಶಿಯನ್ ಟೆನ್ನಿಸ್ ಆಟಗಾರನಾರು?
೧೭. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಷೂಟಿಂಗ್ ಸ್ಪರ್ಧೆಗಳನ್ನು ಯಾವ ವರ್ಷ ಸೇರಿಸಲಾಯಿತು?
೧೮. ಬ್ರಿಟಿಷ್ ಓಪನ್ ಚಾಂಪಿಯನ್‌ಷಿಪ್ ಗಳನ್ನು ಹೆಚ್ಚು ಬಾರಿ ಗೆದ್ದ ಮಹಿಳಾ ಸ್ಕ್ವಾಷ್ ಆಟಗಾರ್ತಿ ಯಾರು?
೧೯. ಆಧುನಿಕ ಒಲಂಪಿಕ್ಸ್ ಪಂದ್ಯಾವಳಿಗಳಲ್ಲಿ ಪ್ರಥಮ ಈಜು ಸ್ಪರ್ಧೆಯ ಚಿನ್ನದ ಪದಕ ಗಳಿಸಿದವರು ಯಾರು?
೨೦. ವಿಶ್ವಕಪ್ ಫುಟ್‌ಬಾಲ್ ಇತಿಹಾಸದಲ್ಲಿ ಮೊಟ್ಟಮೊದಲ ಗೋಲು ಪಡೆದವರಾರು?
೨೧. ಜಾಗತಿಕ ಕ್ರಿಕೆಟ್ ಇತಿಹಾಸದಲ್ಲಿ ೧೦೦ ಟೆಸ್ಟ್ ವಿಕೆಟ್ ಗಳಿಸಿದ ಮೊದಲ ಬೌಲರ್ ಯಾರು?
೨೨. ವಿಶ್ವ ವಾಲಿಬಾಲ್ ಕಪ್ ಪಂದ್ಯಾವಳಿಯು ಮೊಟ್ಟ ಮೊದಲಿಗೆ ಯಾವಾಗ ನಡೆಯಿತು? ಇದರಲ್ಲಿ ವಿಜೇತ ದೇಶ ಯಾವುದು?
೨೩. ಬಿಲ್ಲು ವಿದ್ಯೆಗಾಗಿ ಇರುವ ವಿಶ್ವ ಸಮಿತಿ ಯಾವಾಗ ಆರಂಭವಾಯಿತು?
೨೪. ಪ್ರಥಮ ಏಷ್ಯನ್ ಗೇಮ್ಸ್‌ನಲ್ಲಿ ಎರಡು ಚಿನ್ನದ ಪದಕ ಗಳಿಸಿದ ಅಥ್ಲೀಟ್ ಯಾರು?
೨೫. ಭಾರತೀಯ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗಳಿಸಿದ ಮೊದಲ ವಿದೇಶಿ ಆಟಗಾರನಾರು?

ಉತ್ತರಗಳು

೧. ಜಯಶ್ರೀ ಖಾಡಿಲ್ಕರ್
೨. ಕೊರಿಯಾ
೩. ನ್ಯೂಯಾರ್ಕಿನ ನಿಷರ್‌ಬೋಷ್‌ರ ಬೇಸ್‌ಬಾಲ್ ಕ್ಲಬ್ (೧೮೪೩)
೪. ನೀರೊಳಗಿನ ಫುಟ್‌ಬಾಲ್
೫. ಜಾಕಿ ಫ್ರೆಡ್ ಆರ್ಚರ್
೬. ಮಲೇಷ್ಯಾ ವಾಂಗ್‌ಪೆಂಗ್ ಸೂನ್
೭. ಯು.ಎಸ್.ಎ; ಕಾರೊಟಿಯಾ
೮. ಆಲಿವರ್ ಕಿರ್ಸ್ (ಅಮೆರಿಕಾ)
೯. ಪ್ಯಾರೆಸೆಂಟ್ ಕ್ಲೌಡ್ (ಪ್ಯಾರಿಸ್)
೧೦. ಗ್ಯಾರಿ ಕ್ಯಾಸ್ಪರೋವ್ (ರಷ್ಯಾ)
೧೧. ಆ್ಯಟಮ್‌ನ ಹಿಡಾ.
೧೨. ನಾಲ್ಕು ಬಾರಿ
೧೩. ಮಾಂಟ್ರಿಯಲ್ (೧೯೭೬)
೧೪. ಧರ್ಮಸಿಂಗ್
೧೫. ಡಾ. ಜಿಗಾರೋ ಕಾನೋ
೧೬. ಅಲೆಕ್ಸ್ ಮೆಟ್ರಿವೆಲ್ಲಿ (೧೯೭೩)
೧೭. ಜಮೈಕಾದ ಕಿಂಗ್‌ಸ್ಟನ್ (೧೯೬೬)
೧೮. ಆಸ್ಟ್ರೇಲಿಯದ ಹೆದರ್ ಮ್ಯಾಕ್ಸ್ (೧೬ ಸಲ)
೧೯. ಹಂಗರಿಯ ಆಲ್ಪರ್ಡ್ ಹಾಜೋಸ್
೨೦. ಫ್ರಾನ್ಸ್‌ನ ಲೂಯಿಸ್ ಲಾರೆಂಟ್ (೧೯೩೦)
೨೧. ಆಸ್ಟ್ರೇಲಿಯದ ಸಿ.ಟಿ.ಬಿ. ಟರ್ನರ್
೨೨. ೧೯೬೫; ಯು.ಎಸ್.ಎಸ್. ಆರ್. ತಂಡ
೨೩. ೧೯೩೧ರಲ್ಲಿ
೨೪. ಲಿವಿ ಪಿಂಟೋ
೨೫. ಮಲೇಷ್ಯಾದ ಚೀಯುಪೆಂಗ್.

■ **ಶಂಕರಗೌಡ ವೈ. ಪಾಟೀಲ,**
ಬಾದಾಮಿ

ಚಕ್ರ

ಕಾಲವೆಂಬ
ಅಂಗಣದ
ರಿಂಗಣದೊಳಗೆ
ನೆನಪೆಂಬ
ಸರಮಾಲೆಯ
ಹೊತ್ತು ಸಾಗುತಿಹ
ಚಕ್ರಕ್ಕೆ ಕೇಂದ್ರ
ಬಿಂದು ನಾವು

- ಪಾರ್ವತಿ ಗೌರಿಶಂಕರ


ಪದಕ-ಯದಕ?

ಪದವಿಗಳಲ್ಲಿ
ಓದಿ ಪಡೆದರೂ
ಚಿನ್ನದ ಪದಕ
ಕೊಡುತ್ತಿಲ್ಲ
ಜೀವನದಲ್ಲಿ ಇಂದು
'ಅನ್ನ ನೀಡುವ ಬದುಕ'
ಹಾಗಿದ್ದ ಮೇಲೆ
ಮತ್ತೇಕೆ ಬೇಕು ಪದಕ?

- ಸಿ.ಮ. ಗುರುಬಸವರಾಜ

ಪದಬಂಧ

ಪದಬಂಧ - ೬



ವಿಷಾದ

ಗಣಕ ಯಂತ್ರದಲ್ಲಿ ಉಂಟಾದ ತಾಂತ್ರಿಕ ದೋಷದಿಂದಾಗಿ ಕಳೆದ ತಿಂಗಳ ಪದಬಂಧದಲ್ಲಿ ವಿವರಣೆ ಹಾಗೂ ಚೌಕಾಖಾನೆಗಳ ನಡುವೆ ಹೊಂದಾಣಿಕೆಯಾಗದೆ ಅನೇಕ ಓದುಗರಿಗೆ ನಿರಾಶೆಯಾಗಿದೆ.

ಅದಕ್ಕಾಗಿ ವಿಷಾದಿಸುತ್ತಾ ಈಗ ಪದಬಂಧ-6ನ್ನು ಮತ್ತೆ ಮುದ್ರಿಸುತ್ತಿದ್ದೇವೆ.

-ಸಂ

ಎಡದಿಂದ ಬಲಕ್ಕೆ

೧. ಅಂದವಾದ ಹೂವಿನಿಂದ ದುಂಬಿ ಹೀರಿದ ಮಧುರವಾದ ರಸ .... (೪)
೪. ಮದುವೆಯಾಗಲು ಶೃಂಗಾರವಾಗಿರುವ ಸುಪುತ್ರ .... (೪)
೬. ಅವಿರತವಾಗಿ ಬೆಳಕು ನೀಡಲು ಬರುವ ಸೂರ್ಯ .... (೨)
೮. ಹಜಾರದಲ್ಲಿ ಕುಳಿತು ಪೂಜಿಸಿಕೊಂಡ ಶಿವ .... (೨)
೯. ಚಟ್, ಚಟ್ ಎಂದು ಸಪ್ಪಳ ಮಾಡುವ ಬಾರಕೋಲು .... (೨)
೧೦. ಮುಗಿಲು ಮುಟ್ಟುವಂತೆ ಕಾಣುವ ಅಂತಸ್ತಿನ ಮನೆ................ (೩)
೧೨. ಗಮನ ಸೆಳೆಯುವಂತಹ ಕೆಲಸ ಮಾಡಿದ ಪುತ್ರ........................(೨)
೧೫. ಮನ ನೊಂದಾಗಲೂ ಸಂತರಿಗಾದ ಅತೀ ಆನಂದ................. (೫)
೧೮. ರಿವಾಜು ಪ್ರಕಾರ ಮಾಡಿದ ಸಹಿ.......................... .... (೨)
೧೯. ಶ್ವಾಸ ಬಿಗಿಹಿಡಿದು ಬಹುಮಾನ ಗೆಲ್ಲಲು ಮಾಡಿದ ಪರಾಕ್ರಮ...... (೩)
೨೧. ಕಬ್ಬಿಣ ತೀಡುವ ಕಮ್ಮಾರ ಗಾಳಿ ತುಂಬಿದ ಚರ್ಮದ ಚೀಲ...... ... (೨)
೨೨. ಗರ್ವದಿಂದ ಬಂದು ಜಾರಿ ಬಿದ್ದ ಆನೆ ತಿರುಗಿದೆ.......... .... (೨)
೨೩. ಆಯುಷ್ಯದಲ್ಲಿ ಕಂಡ ಜಯ......... .... (೨)
೨೫. ಕಡ ಕೊಡದಿದ್ದಾಗ ಬಂದ ಅತೀ ಸಿಟ್ಟು..... .... (೪)
೨೬. ಮಧುರ ಜೀವನದ ಕನಸು ಕಾಣಲು ಹಸೆಮಣೆಯ ಮೇಲೆ ಕುಳಿತ ಹೆಣ್ಣು-ಗಂಡು........................ .... (೪)

ಮೇಲಿನಿಂದ ಕೆಳಕ್ಕೆ


೨. ಕಳೆದ ವರ್ಷ ಅಂತರಿಕ್ಷಯಾನ ಮಾಡಿದ ಭಾರತೀಯ ಪ್ರಥಮ ಮಹಿಳೆ.. (೫)
೩. ಆತುರದಿಂದ ಕೇಳಿದ ವಸ್ತುವಿನ ಬೆಲೆ................. .... (೨)
೪. ಅಜರಾಮರವಾಗಿ ಹೆಸರು ಉಳಿಸಿಕೊಳ್ಳಲು ವರ್ಷಕ್ಕೊಂದು ನೆಟ್ಟ ವೃಕ್ಷ.. (೨)
೫. ಮದುವೆ ಮುಹೂರ್ತಕ್ಕೆ ಸಿದ್ಧಳಾಗಿರುವ ವಧು.................... .. (೫)
೭. ರಾಮನ ಹೆಸರು ಜಪಿಸಲು ಸಿಕ್ಕ ವಿಶ್ರಾಂತಿಯ ಸಮಯ............. (೩)
೮. ಅಹವಾಲು ನೀಡಲು ಬಂದಿದ್ದು ರಾತ್ರಿಯಲ್ಲ- ದಿನದ ವೇಳೆ.........(೩)
೧೧. ಹಗರಣಕ್ಕೆ ಕಾರಣವಾದ ಜನರಿಂದ ವಸೂಲಾದ ಧನ ಸಂಚಯ.. (೫)
೧೩. ಮನಃಪೂರ್ವಕವಾಗಿ ಮಾಡಿದ ನಮಸ್ಕಾರ......... .... (೩)
೧೪. ವೇದಿಕೆಯ ಮೇಲೆ ಜನರನ್ನುದ್ದೇಶಿಸಿ ಮಾಡಿದ ಮಾತುಗಾರಿಕೆ..... (೩)
೧೬. ಮಡು ನೀರಿನಲ್ಲಿ ಮುಳುಗುವವರನ್ನು ಕಂಡು ಕನಿಕರ ಗೊಳ್ಳು.... (೫)
೧೭. ಆಧುನಿಕತೆಯಿಂದ ದೂರಾಗಿದ್ದ ಭೂಮಿಯ ಮೇಲಿನ ಮೂಲ ಮನುಷ್ಯ...... .... (೫)
೧೯. ಸಾಗರದಲ್ಲಿ ಈಜಲು ಹೆದರಿದ ಜಿಂಕೆ......... .... (೩)
೨೦. ಸಂಯಮದಿಂದ ಗತಿಸಿದ ವೇಳೆ.. (೩)
೨೨. ಜಳಕದ ನಂತರ, ತುಳಸಿ ಮಾಲೆ ಹಿಡಿದು, ಮಾಡಿದ ದೇವರ ಸ್ಮರಣೆ (೨)
೨೪. ಅಶ್ವದ ಮೇಲೆ ಮಲಗಿ ಬಂದ ಹೆಣ................ .... (೨)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ನೀವು ಕಥೆಗಾರರಾಗಬೇಕೆ?

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರುಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!



ಕಥೆ

ಶಿವಪುರದ ಶಾಲೆಯಲ್ಲಿ ಪಾರ್ವತಿಯೆಂದರೆ ಎಲ್ಲರಿಗೂ ಅಚ್ಚುಮೆಚ್ಚು. ಆಟಪಾಠಗಳಲ್ಲಿ ಸದಾ ಅವಳೇ ಮುಂದು. ಪ್ರತಿದಿನ ಎರಡು ಮೈಲು ದೂರದ ಹಳ್ಳಿಯಿಂದ ನಡೆದುಕೊಂಡು ಬರುತ್ತಿದ್ದರೂ ಅವಳು ಸದಾ ಉಲ್ಲಾಸದಿಂದಿರುತ್ತಿದ್ದಳು.

ಹೀಗಿರಲು ಒಂದು ದಿನ ತನ್ನ ಸಹಪಾಠಿ ರತ್ನಾ ಶಾಲೆಗೆ ಬಂದಿರಲಿಲ್ಲ. ದಿನಾಲೂ ತನ್ನೂರಿನಿಂದ ಶಾಲೆಗೆ ಬರಲು ಅವಳೇ ಜೊತೆಗಾತಿ. ಆದರೆ ಇಂದು ಶಾಲೆಯಿಂದ ಪಾರ್ವತಿ ಒಬ್ಬಂಟಿಯಾಗಿ ತನ್ನ ಹಳ್ಳಿಗೆ ಮರಳಿ ಹೋಗಬೇಕಾಯಿತು. ಕಾಡಿನ ಮಧ್ಯೆ ಕಾಲುಜಾಡು. ಮೋಡ ಕವಿದು ಮಸುಕಾಗಿದೆ. ಈ ದಿನವೇಕೆ ಹಾದಿಯಲ್ಲಿ ಒಂದು ನರಪಿಳ್ಳೆಯೂ ಇಲ್ಲವಲ್ಲ ಎಂದು ಅವಳು ಅಂಜುತ್ತಲೇ ನಡೆದಳು. ಮಳೆ ಬಿದ್ದರೆ ಹೇಗೆಂಬ ಧಾವಂತದಲ್ಲಿ ದಡಬಡ ಹೆಜ್ಜೆ ಹಾಕತೊಡಗಿದಳು... ಇದ್ದಕ್ಕಿದ್ದಂತೆ ಪಕ್ಕದ ಪೊದೆಯಲ್ಲಿ ಏನೋ ಮಿಸುಕಾಡಿದಂತಾಯಿತು!

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15.7.98

ಕಿಲ ಕಿಲ ಕೂಪನ್ – (ಜುಲೈ 98)

ಹೆಸರು..

ತರಗತಿ.............................. ವಯಸ್ಸು....................

ತಂದೆ..

ತಾಯಿ..

ವಿಳಾಸ..

....

....

....

ನಿಮ್ಮ ಹಗಲು – ಅವರ ಇರುಳು

ನೀವು ಇಲ್ಲಿ ಮಟಮಟ ಮಧ್ಯಾಹ್ನ ಬೆವರು ಸುರಿಸುತ್ತಿದ್ದರೆ, ಮೆಕ್ಸಿಕೋ ನಗರದ ಜನ ಗಡದ್ದಾಗಿ ಮಲಗಿ ಗೊರಕೆ ಹೊಡೆಯುತ್ತಿರುತ್ತಾರೆ! ಏಕೆ? ಈಗ ಅಲ್ಲಿ ಮಧ್ಯರಾತ್ರಿ! ನಿಮ್ಮ ಗಡಿಯಾರ ಮಧ್ಯಾಹ್ನ ಒಂದು ಗಂಟೆ ತೋರಿಸುತ್ತಿದ್ದರೆ ಅವರ ಗಡಿಯಾರದಲ್ಲಿ ರಾತ್ರಿ ಒಂದೂವರೆ ಗಂಟೆ!

ಈ ವಿಷಯ ಅರಿಯದವರಿಗೆ ಇದು ವಿಚಿತ್ರವಾಗಿ ತೋರಬಹುದು. ಆದರೂ ಸತ್ಯ. ಗೋಳಾಕಾರದ ಇಡೀ ಭೂಮಿಗೆ ಒಂದೇ ಸಮಯಕ್ಕೆ ಸೂರ್ಯೋದಯವಾಗುವುದು ಸಾಧ್ಯವಿಲ್ಲವಲ್ಲ? ಅದಕ್ಕಾಗಿಯೇ, ಭೂಮಿಯ ಚಲನೆಗೆ ಅನುಗುಣವಾಗಿ ವೇಳೆಯಲ್ಲೂ ಬದಲಾವಣೆಯಿರುತ್ತದೆ.

IST ಎಂದರೆ Indian Standard Time ಅದು ನಮ್ಮ ದೇಶದ ವೇಳೆ. ವೇಳಾ ಸೂಚಿಯಲ್ಲಿ ಮೆಕ್ಸಿಕೋ - 11 1/2 hrs' ಎಂದರೆ, ನಮ್ಮ ದೇಶದ (IST) ವೇಳೆಗಿಂತ 11 1/2 ತಾಸುಗಳಷ್ಟು ಮೆಕ್ಸಿಕೋ ನಗರದ ಗಡಿಯಾರಗಳು ಹಿಂದೆ ಉಳಿದಿರಬೇಕು ಎಂದರ್ಥ. 'ಚೀನಾ +2 1/2 hrs' ಎಂದರೆ ಭಾರತದ ವೇಳೆಗಿಂತ ಚೀನಾದ ಗಡಿಯಾರಗಳು 2 1/2 ತಾಸುಗಳಷ್ಟು ಮುಂದಿವೆ ಎಂದರ್ಥ.

ವಿಶ್ವ ವೇಳಾ ಸೂಚಿ (IST)

ಅಫ್ಘಾನಿಸ್ತಾನ	- 1 hr
ಅಲ್ಜೀರಿಯಾ	-4 ½ hr
ಅರ್ಜೆಂಟೈನಾ	-8 ½ hr
ಬಾಂಗ್ಲಾದೇಶ	+ ½ hr
ಬ್ರೆಜಿಲ್	-9 ½ hr
ಕೊಲಂಬಿಯಾ	- 10 ½ hr
ಇಟಲಿ	-4 ½ hr
ಜಪಾನ್	+3 ½ hr
ಪಾಕಿಸ್ತಾನ	- ½ hr
ಸೌದಿ ಅರೇಬಿಯಾ	-2 ½ hr
ಸಿಂಗಪುರ್	+1 hr
ದ. ಆಫ್ರಿಕಾ	+3 ½ hr
ಯು.ಎಸ್.ಎ. (ಪೆಸಿಫಿಕ್)	- 13 ½ hr

ಕಿಲಕಿಲ

ಚಟುವಟಿಕೆಗಳ ಆಗರ

ನನ್ನ ಶಾಲೆಯು ಹೆಚ್.ಪಿ.ಎಸ್. ನೆಹರೂನಗರ ಶಾಲೆ. ಈ ವರ್ಷ ನಾನು ಓದುತ್ತಿರುವ ಶಾಲೆಯು ತುಂಬಾ ಚೆನ್ನಾಗಿದೆ. ಶಾಲೆಯಲ್ಲಿ ಶಿಕ್ಷಕರು ಮತ್ತು ಶಿಕ್ಷಕಿಯರು ಬಹಳ ಒಳ್ಳೆಯವರು. ನಮ್ಮನ್ನು ಕಂಡರೆ ಅವರಿಗೆ ಅಚ್ಚು-ಮೆಚ್ಚು. ಅವರನ್ನು ಕಂಡರೆ ನಮ್ಮೆಲ್ಲರಿಗೂ ಗೌರವ. ನಮ್ಮ ಹಿಂದಿನ ಮುಖ್ಯೋಪಾಧ್ಯಾಯರಾದ ಎನ್.ಸಿ. ಹುಡೇದ್ ಸರ್ ಅವರಿಗೆ ತಾಲ್ಲೂಕು ಮಟ್ಟದ ಶಿಕ್ಷಕ ಪ್ರಶಸ್ತಿಯು ಬಂದಿದೆ.

ನಮ್ಮ ಶಾಲೆಯ ಮುಂದೆ ಚೊಕ್ಕವಾದ ಚಿಕ್ಕ ತೋಟವಿದೆ, ಆಟದ ಮೈದಾನವಿದೆ, ನೀರಿನ ಸೌಲಭ್ಯವಿದೆ. ನಮ್ಮ ಶಾಲೆಯಲ್ಲಿ ಗ್ರಂಥಾಲಯವಿದೆ, ಮಕ್ಕಳಿಗೆ ಬೇಕಾದಂತಹ ಪುಸ್ತಕಗಳು ಇವೆ. ಆಟದ ಉಪಕರಣಗಳು ಇವೆ. ಶಾಲೆಯ ಒಳಗೆ ಗೋಡೆಯ ಮೇಲೆ ವಿಜ್ಞಾನಕ್ಕೆ ಸಂಬಂಧ ಪಟ್ಟಂತಹ ಪ್ರಯೋಗದ ಚಿತ್ರಗಳ ಚಿತ್ರಪಟವಿದೆ. ಪ್ರಯೋಗಾಲಯವೂ ಇದೆ. ಇದರಿಂದ ಮಕ್ಕಳಿಗೆ ಕಲಿಯಲು ಬಹಳ ಉಪಯೋಗವಾಗುತ್ತಲಿದೆ. ನಮ್ಮ ಶಾಲೆಯಲ್ಲಿ ಅನೇಕ ರೀತಿಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ನಮ್ಮ ಶಾಲೆಯೂ ಬಹಳ ಚೆನ್ನಾಗಿದೆ.

-ಜಿ.ಸಂತೋಷಿನಿ ಹುಲಿಕಂತಿಮಠ
ಬ್ಯಾಡಗಿ

ಎಲ್ಲದರಂತಲ್ಲ

ನಾನೀಗ ಏಳನೇ ತರಗತಿಯನ್ನು 'ಮಂಡ್ಯ ಎಜುಕೇಶನ್ ಸೊಸೈಟಿ'ಯಲ್ಲಿ ಮುಗಿಸಿ, ಈಗ ಹೊಸ ಶಾಲೆ ' ಅಭಿನವ ಭಾರತಿ ವಿದ್ಯಾಕೇಂದ್ರ'ಕ್ಕೆ ಸೇರಿಕೊಂಡಿದ್ದೇನೆ.

ಈ ಶಾಲೆಯಲ್ಲಿ ಮೊದಲು ಅಸೆಂಬ್ಲಿಯು ಮುಗಿದ ನಂತರ ಆ ಶಾಲೆಯ ಸ್ಥಾಪಕರಾದ ಶ್ರೀ ಅನಂತಕುಮಾರ ಸ್ವಾಮೀಜಿಯವರು ಇಪ್ಪತ್ತು ನಿಮಿಷ ಧ್ಯಾನ ಮಾಡಿಸಿ ನಮ್ಮಲ್ಲಿ ನವ ಚೈತನ್ಯ ಮೂಡಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ನಡೆಸಿದಾಗ ಯಾವಾಗಲೂ ಮಾರ್ಚ್‌ಫಾಸ್ಟ್‌ನಲ್ಲಿ ಮೊದಲನೇ ಸ್ಥಾನ ನಮ್ಮ ಶಾಲೆಗೆ ಬರುತ್ತದೆ. ಮತ್ತು ಇಲ್ಲಿ ಮಲ್ಲಕಂಬವನ್ನೂ ಕೂಡ ಹೇಳಿಕೊಡುತ್ತಾರೆ.

ಯಾವಾಗಲೂ ಶನಿವಾರ ಸಂಜೆ 6.30ಯ ಹೊತ್ತಿಗೆ ಅನಂತಕುಮಾರ ಸ್ವಾಮೀಜಿಯವರು ಧ್ಯಾನ ಕ್ಲಾಸನ್ನು ನಡೆಸುತ್ತಾರೆ. ಮತ್ತು ಪ್ರಾಣಾಯಾಮ ಕ್ಲಾಸನ್ನೂ ನಡೆಸುತ್ತಾರೆ.

ಇಲ್ಲಿಯ ಶಿಕ್ಷಕರು ನಮಗೆ ಸರಿಯಾಗಿ ಅರ್ಥವಾಗುವಂತೆ ಚೆನ್ನಾಗಿ ಪಾಠಮಾಡುತ್ತಾರೆ. ಮತ್ತು ಚೆಸ್ ತರಬೇತಿ ನೀಡುತ್ತಾರೆ. ಗೋವಿಂದ ಸಭಾಂಗಣವಿದೆ. ಶ್ರೀರಾಮ ರಂಗಮಂಟಪ ಇದೆ.

ಇಲ್ಲಿ ಸೈಕಲ್ ತೆಗೆದುಕೊಂಡು ಹೋದವರಿಗೆ ನಿಲ್ಲಿಸಲು ಸೈಕಲ್‌ಸ್ಟ್ಯಾಂಡ್, ಪುಸ್ತಕ, ಬ್ಯಾಗನ್ನು ಇಡಲು ಬೆಂಚ್, ಡೆಸ್ಕ್ ಮತ್ತು ಆಟವಾಡಲು ಕೇರಂ, ವಾಲಿಬಾಲ್, ಫುಟ್‌ಬಾಲ್, ಕ್ರಿಕೆಟ್ ಮುಂತಾದ ಉಪಕರಣಗಳೂ ಇವೆ.

ಹೀಗೆ ನನಗೆ ನನ್ನ ಹೊಸ ಶಾಲೆ ತುಂಬಾ ಹಿಡಿಸಿತು.

- ವಿನಯಕೃಷ್ಣ
ಮಂಡ್ಯ

ಸುಂದರ - ಸುವ್ಯಸ್ಥಿತ

ನಾನು ಖುಷಿಯಿಂದಲೇ 9ನೇ ತರಗತಿಗೆ ಕಾಲಿಟ್ಟೆ. ರಜಾದಿನಗಳಲ್ಲಿ ಮನೆಯಲ್ಲಿದ್ದು ಬೇಸರವಾದ್ದರಿಂದ ಶಾಲೆಗೆ ಹೋಗಲು ಕಾತರದಿಂದಿದ್ದೆ. ಮೊದಲ ದಿನದಂದು ಶಾಲೆಯಲ್ಲಿ ಕೇವಲ ನಾಲ್ಕೈದು ಹುಡುಗರು. ದಿನೇ ದಿನೇ ಹುಡುಗರ ಸಂಖ್ಯೆ ಹೆಚ್ಚುತ್ತಾ ಬಂತು.

ನಮ್ಮ ಶಾಲೆ ಸುಂದರವಾಗಿದೆ. ಈ ವರ್ಷ ನಮ್ಮಶಾಲೆಗೆ 5ಜನ ಅಧ್ಯಾಪಕರ ವರ್ಗಾವಣೆಯಾಗಿ ಹೊಸ ಅಧ್ಯಾಪಕರು ಬಂದಿದ್ದಾರೆ. ಹೊಸ ಉಪನ್ಯಾಸಕರ ಉಪನ್ಯಾಸ ಬಹಳಷ್ಟು ಹಿಡಿಸಿತು. 'ಕಬ್ಬಿಣವನ್ನು ತನ್ನೆಡೆಗೆ ಸೆಳೆಯುವ ಆಯಸ್ಕಾಂತದಂತೆ' ತಮ್ಮ ಪಾಠದ ಮೂಲಕ ನಮ್ಮನ್ನೆಲ್ಲಾ ತಮ್ಮೆಡೆಗೆ ಸೆಳೆದುಕೊಂಡರು. ಆದರೆ ಆಟವಾಡಲು ಮಾತ್ರ ಸ್ವಲ್ಪ ದೂರ ಹೋಗಬೇಕು. ಕಾರಣ ನಮ್ಮ ಆಟದ ವೇಳೆಯಲ್ಲಿ ಇನ್ನಿತರ ತರಗತಿಗಳಿಗೆ ಪಾಠ ನಡೆಯುತ್ತಿರುವುದರಿಂದ ದೂರದ ಮೈದಾನಕ್ಕೆ ಹೋಗಬೇಕು ಪರವಾಗಿಲ್ಲ. ಹೊಸ ಹೊಸ ಆಟದ ಉಪಕರಣಗಳು ಬಂದಿವೆ. ಕಳೆದ ವರ್ಷ ಆಟದ ಉಪಕರಣ ಕಡಿಮೆಯಿತ್ತು.

ನಮ್ಮ ಶಾಲೆಯಲ್ಲಿ ಮಧ್ಯಮ ಮಟ್ಟದ ಗ್ರಂಥಾಲಯವಿದೆ. ಎಲ್ಲಾ ತರಹ ಪುಸ್ತಕಗಳು ಸಿಗುತ್ತವೆ. ಜೊತೆಗೆ ಒಳ್ಳೆ ಪ್ರಯೋಗಾಲಯವೂ ಇದೆ. ವಾರದಲ್ಲಿ 1 ಗಂಟೆ ಪ್ರಯೋಗಗಳ ಬಗ್ಗೆ ಪ್ರಾಯೋಗಿಕ ತರಗತಿ ಇರುತ್ತದೆ. ಆದರಲ್ಲಿ ಕಪ್ಪೆ, ಹಾವು, ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಒಟ್ಟಾರೆ ಎಲ್ಲಾ ದೃಷ್ಟಿಯಿಂದಲೂ ನಮ್ಮ ಶಾಲೆ ಸುಂದರ ಹಾಗೂ ಸುವ್ಯವಸ್ಥಿತವಾಗಿದೆ.

- ಕರಕಪ್ಪ ಡಿ. ಸಂಗನಾಳ,
ಯಲಬುರ್ಗಿ

ಹೊಸ ವಾತಾವರಣ

ಅಜ್ಜಿಯ ಊರಲ್ಲಿ ಆಟ ಊಟದೊಂದಿಗೆ ರಜೆಯನ್ನ ಕಳೆದದ್ದಾಯಿತು. 8ನೇ ತರಗತಿಯು ಆರಂಭವಾಯಿತು. ಓದಲು ಸ್ವಲ್ಪ ಬೇಸರವಾದರೂ ಹೊಸ ಶಾಲೆಗೆ ಹೋಗುವ ಖುಷಿ ಆ ಬೇಸರವನ್ನು ಮರೆಸಿತು. ಹೊಸ ಶಾಲೆ ಹೊಸ ಮುಖದ ಗುರುಗಳು ನನಗೆ ತುಂಬಾ ಹಿಡಿಸಿದ್ದಾರೆ. ಇನ್ನೂ ಪಾಠಗಳನ್ನು ಆರಂಭಿಸಿಲ್ಲ. ಆದರೆ ಆಟವಾಡಲು ಆಟದ ಸಾಮಗ್ರಿ ನೀಡಿ ಹೊಸ ಹುಡುಗರನ್ನು ತಮ್ಮೆಡೆಗೆ ಸೆಳೆಯುತ್ತಿದ್ದಾರೆ. ನಮ್ಮ ಹಳೇ ಶಾಲೆಯಲ್ಲಿದ್ದಾಗ ಈ ಹೊಸ ಶಾಲೆಯ ಬಗ್ಗೆ ನನ್ನ ಗುರುಗಳು ಹೆದರಿಕೆ ಹುಟ್ಟಿಸಿದ್ದರು. ಆದರೆ ಇಲ್ಲಿ ಅವರೇಳಿದಂತೆ ಸ್ವಲ್ಪವೂ ಇಲ್ಲ. ಇದು ಬಹಳ ಸಂತೋಷ ತಂದಿದೆ. ಇಲ್ಲಿರುವ ಗ್ರಂಥಾಲಯಕ್ಕಿಂತಲೂ ಪ್ರಯೋಗಾಲಯ ಬಹಳ ಚೆನ್ನಾಗಿದೆ. ನಮ್ಮ ಶಾಲೆ ಚಿಕ್ಕದಾದರೂ ಚೊಕ್ಕವಾಗಿ ಸುಂದರವಾಗಿದೆ.

- ಮಂಜುನಾಥ ಹಿರೇಮಠ
ಯಲಬುರ್ಗಿ

ಜ್ಞಾನದೇಗುಲ

ಐತಿಹಾಸಿಕ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ತ್ಯಾಗರಾಜ ನಗರದಲ್ಲಿರುವ 'ಮಂಜರಿ ಹಿರಿಯ ಪ್ರಾಥಮಿಕ ಶಾಲೆ' ನನ್ನ ಪ್ರೀತಿಯ ಶಾಲೆ. ೧ ರಿಂದ ೭ನೇ ತರಗತಿಯವರೆಗೆ ಇರುವ ನನ್ನ ಶಾಲೆಯಲ್ಲಿ ಪ್ರತಿಭಾವಂತ ಶಿಕ್ಷಕರ ತಂಡವೇ ಇದೆ.

ಇಂಗ್ಲೀಷ್ 'ಐ' ಅಕ್ಷರದ ಆಕಾರದಲ್ಲಿ ಸ್ವಂತ ಕಟ್ಟಡವಿದೆ.

ಗ್ರಂಥಾಲಯ ಸೌಲಭ್ಯವಿದ್ದು, ಸಾವಿರಾರು ಪುಸ್ತಕಗಳಿವೆ. ವಾರಕ್ಕೊಮ್ಮೆ ಪುಸ್ತಕಗಳನ್ನು ವಿತರಿಸುತ್ತಾರೆ. ನಾನು ಇದುವರೆಗೆ 'ಪುಣ್ಯಕೋಟಿ' 'ಮಕ್ಕಳ ಕಥೆಗಳು' ಓದಿದ್ದೇನೆ. ಆಟದ ಉಪಕರಣಗಳೂ ಸಾಕಷ್ಟು ಪ್ರಮಾಣದಲ್ಲಿದೆ. ದಿನಾಲೂ ಆಟ ಆಡಿಸುತ್ತಾರೆ. ಶನಿವಾರಕ್ಕೊಮ್ಮೆ ಸಾಮೂಹಿಕ ವ್ಯಾಯಾಮ ಮಾಡಿಸುತ್ತಾರೆ.

- ಹರೀಶಾನಂದ ಪಿ. ಕುದರಿ,
ಚಳ್ಳಕೆರೆ

ನೀವೂ ಚುಟುಕ ಬರೆಯಬಹುದು

ಭರ್‍ರನೆ ಬಂದಿತು ಶಾಲೆಯ ಬಸ್ಸು
ಸರ್‍ರನೆ ಹತ್ತಲು ಡುಮ್ಮನೆ ಮಿಸ್ಸು
ಬಸ್ಸಿನ ಟಯರು ಅಂದಿತು ಟುಸ್ಸು

ಈ ಮೂರು ಸಾಲುಗಳ ಕೊನೆಯ ಅಕ್ಷರ ಒಂದೇ ಆಗಿದೆಯಲ್ಲವೆ?
ಇದಕ್ಕೆ ಅಂತ್ಯಪ್ರಾಸವೆನ್ನುವರು. ಇದೇ ರೀತಿ ನೀವೂ ಬರೆಯಬಹುದಲ್ಲವೆ?

- ಏಳನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಚುಟುಕ ಬರೆದು ಕಳುಹಿಸಬೇಕು. ಅದು ಇತರರ ಸಹಾಯವಿಲ್ಲದೆ ಬರೆದ ನಿಮ್ಮ ಸ್ವಂತ ಚುಟುಕವಾಗಿರಬೇಕು.
- ಈ ತಿಂಗಳ ಚುಟುಕ ಮೂರುಸಾಲುಗಳಿದ್ದು, ಪ್ರತಿ ಸಾಲಿನ ಕೊನೆಯ ಅಕ್ಷರ 'ಕು' ಆಗಿರಬೇಕು.
- ಚುಟುಕವು ಕೇವಲ ಪ್ರಾಸಕ್ಕಾಗಿ ಹೆಣೆದಂತಿರಬಾರದು. ಅದು ಒಟ್ಟಾರೆ ಒಂದು ಚಿತ್ರಣ ನೀಡುವಂತಿರಲಿ ಅಥವಾ ಯಾವುದಾದರೊಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿರಲಿ. ಚುಟುಕಕ್ಕೆ ಒಂದು ಬಂಧ ಮುಖ್ಯ.
- ಆಯ್ದ ಮೂರು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿವೆ.
- ಚುಟುಕವನ್ನು ಪೋಸ್ಟ್‌ಕಾರ್ಡಿನಲ್ಲಿ ಮಾತ್ರ ಬರೆದು ಕಳಿಸಬೇಕು. ನಿಮ್ಮ ಹೆಸರು, ತರಗತಿ, ಶಾಲೆಯ ವಿಳಾಸ ಕಾರ್ಡಿನ ಹಿಂಬದಿಯಲ್ಲಿ ಸ್ಪಷ್ಟವಾಗಿರಲಿ.
- ನಿಮ್ಮ ಚುಟುಕ ನಮಗೆ ತಲುಪಲು ಕೊನೆಯ ದಿನಾಂಕ 15.7.98

ಪ್ರಾಸಪದ್ಯಗಳು

ಗಲ್ಲ-ಬೆಲ್ಲ

ಗಲ್ಲದ ಮೇಲೆ ಬೆಲ್ಲ
ಯಾರೂ ಹಚ್ಚೇ ಇಲ್ಲ
ಒಬ್ಬರ ನಂತರ ಒಬ್ಬರು
ಸವಿದರು ಪುಟ್ಟನ ಗಲ್ಲ.

ಗದ್ದೆಯಲ್ಲಿ

ಇದ್ದ ಒಂದು ಮರ
ಕಡಿದು ಬಿಟ್ಟನರ
ತಾಳೋದು ಹೇಗೆ?
ಬಿಸಿಲ ಧಗೆ?
ಕೆರೆದುಕೊಂಡ ಶಿರ
ಪರಾಪರ ಪರ.

ಹನುಮನಾದ ಮಲ್ಲ

ಅಡಿಗೆ ಕೋಣೆಗೆ ನುಗ್ಗಿ ಮೆಲ್ಲ
ಕದ್ದು ತಿಂದ ಬೆಲ್ಲ
ಗೊದ್ದ ಕಡಿದು
ಗಲ್ಲ ಕಡುಬು
ಹನುಮನಾದ ಮಲ್ಲ.

– ಎಚ್.ಎಸ್. ಸೋಮಶೇಖರ

ನಾನು ಯಾರು?

ಕಣ್ಣು ಮುಚ್ಚಿ ಹಾಲು ಕುಡಿವೆ
ಕದ್ದು ಬೆಣ್ಣೆ ನೆಕ್ಕಿ ಬಿಡುವೆ
ಮ್ಯಾವ್.... ಮ್ಯಾವ್.. ಎನ್ನುತ್ತಿರುವೆ
ನಾನು ಯಾರು? ಹೇಳುವೆಯಾ?।

ಡೊಂಕು ಬಾಲವ ಹೊಂದಿರುವೆ
ಮನೆಯನು ಕಾವಲು ಕಾಯುವೆ
ಬೌವ್...ಬೌವ್... ಎನ್ನುವೆ
ನಾನು ಯಾರು ಹೇಳುವೆಯಾ?।

ಗೂಡನು ಕಟ್ಟಿ ನಾನಿರುವೆ
ಗುಟುಕನು ಮರಿಗೆ ನಾನೀವೆ
ಚಿವ್..ಚಿವ್... ಎನ್ನುವೆ
ನಾನು ಯಾರು ಹೇಳುವೆಯಾ?।

ಮೈಯಲಿ ಹಸಿರು ಉಟ್ಟಿರುವೆ
ಕೆಂಪು ಮೂಗು ಪಡೆದಿರುವೆ
ಹಣ್ಣುಗಳನ್ನು ತಿನ್ನುವೆ
ನಾನು ಯಾರು ಹೇಳುವೆಯಾ?।

ಉತ್ತರ: ಬೆಕ್ಕು, ನಾಯಿ, ಗುಬ್ಬಿ, ಗಿಳಿ,

– ಅರುಣಾ ನರೇಂದ್ರ

ಪುಟಾಣಿ ಒಗಟುಗಳು

1
ಬಲು ದುಬಾರಿಯ
ಖನಿಜವೂ ನಾನು,
ಮಗುವಿಗೆ ಮುದ್ದು
ಹೆಸರೆನಿಸಿಹೆನು!

2
ಒಂದು ವೇಳೆ ಪಂಪನು
ಬದುಕಿದ್ದರೆ ಈಗ,
ಏತಕೆ ಪ್ರಸಿದ್ಧನು?
ಹೇಳು ನೀ ಬೇಗ.

3
ನೋಡಲು ನನಗೆ
ಕುತ್ತಿಗೆ ಉಂಟು,
ಆದರೆ ತಲೆಯು
ಹೋಗಿದೆ ಹೊಂಟು!

4
ನಿನ್ನ ಮೈ ಒಣಗಿಸಿ
ಒದ್ದೆಯಾಗ್ವೆ ನಾನು,
ನನ್ನ ಹೆಸರು ಏನು?
ಎಂದು ಹೇಳು ನೀನು

ಉತ್ತರಗಳು

1) ಚಿನ್ನ 2) ದೀರ್ಘ ಆಯಸ್ಸಿಗೆ
3) ಬಾಟಲು 4) ಟವೆಲ್ಲು

–ಗುರುರಾಜ ಬೆಣಕಲ್



ನಾಯಕರುಗಳ ಹೆಸರು ಕೇಳಿದ್ರೆ, 'ವೀರಪ್ಪನ್' ಅಂತ ಹೇಳ್ತೀಯಲ್ಲೋ!

ಧರೆ ಹತ್ತಿ ಉರಿದರೆ....



ಇಲ್ಲಿ ವಾರಕ್ಕೆ ಮೂರು ಚಿತ್ರ ತೆರೆಕಾಣುತ್ತಿದೆ, ಆದರೆ 15 ದಿನ ಯಾವುದೇ ಚಿತ್ರದ ಚಿತ್ರೀಕರಣವೇ ನಡೆಯಲಿಲ್ಲ. ಇದು ವರ್ಷಕ್ಕೆ ಸರಾಸರಿ 75 ಚಿತ್ರಗಳನ್ನು ಹೆರುವ ಕನ್ನಡ ಚಿತ್ರರಂಗದ ಪರಿಸ್ಥಿತಿ.

ಅಂಕಿಅಂಶ ಹೇಳುತ್ತದೆ, 97ರಲ್ಲಿ ಇಡೀ ಭಾರತೀಯ ಚಿತ್ರರಂಗದಲ್ಲಿ ತುಸುವಾದರೂ ಯಶಸ್ಸಿನ ರುಚಿ ಕಂಡಿದ್ದು ಕನ್ನಡ ಮಾತ್ರ. ಯಾಕೆಂದರೆ ಇಲ್ಲಿ 6 ಚಿತ್ರಗಳು ಹಿಟ್ ಆದವು. ಆದರೆ ನಿರ್ಮಾಪಕರ ಮುಖದಲ್ಲಿ ಜೀವಕಳೆಯಿಲ್ಲ. ಪ್ರತಿಯೊಬ್ಬರೂ ತಮ್ಮ ನಷ್ಟದ ಲೆಕ್ಕಾಚಾರ



ಒಪ್ಪಿಸುವುದರಲ್ಲಿ ಬಿಜಿಯಾಗಿದ್ದಾರೆ. ಈ ಮಧ್ಯೆ ಒಂದಿಷ್ಟು ಕ್ರಾಂತಿಕಾರಿ ಘಟನೆಗಳು ನಡೆದಿವೆ. ಸಬ್ಸಿಡಿ ಹಾಗೂ ಸಂಪೂರ್ಣ ತೆರಿಗೆ ವಿನಾಯಿತಿ ಸೌಲಭ್ಯವನ್ನು ವಾಪಸ್ ತೆಗೆದುಕೊಳ್ಳಲಾಗುವುದು ಎಂದು ಪದೇ ಪದೇ ಬೆದರಿಸುತ್ತಿದ್ದ ರಾಜ್ಯಸರ್ಕಾರ ಮೊನ್ನೆ ಬಜೆಟ್‌ನಲ್ಲಿ ಈ ಬಗ್ಗೆ ಮಾತಾಡಿಲ್ಲ. ಹಾಗಂತ ಚಿತ್ರೋದ್ಯಮ ನೆಮ್ಮದಿಯಿಂದ ನಿದ್ದೆ ಮಾಡುವುದಕ್ಕೂ ಬಿಡಲಿಲ್ಲ. ಪ್ರದರ್ಶನ ತೆರಿಗೆಯನ್ನು ಸಾವಿರ ಪಟ್ಟು ಏರಿಸಿತು. ಪ್ರದರ್ಶನವೊಂದಕ್ಕೆ 25 ರೂಪಾಯಿಯಿದ್ದ ತೆರಿಗೆ ಈಗ 300ಕ್ಕೆ ಏರಿದೆ. ಅಂದರೆ ದಿನಕ್ಕೆ 1200 ರೂಪಾಯಿ. ತೆರಿಗೆ ರೂಪದಲ್ಲೇ ಖಾಲಿಯಾಗುತ್ತಿದೆ. ಸರ್ಕಾರ ಇದಕ್ಕೆ ನೀಡಿದ ಕಾರಣ ಥಿಯೇಟರ್‌ನವರು ಟಿಕೆಟ್ ದರವನ್ನು ಯದ್ವಾತದ್ವಾ ಏರಿಸಿವೆ ಎನ್ನೋದು. ಆದರೆ ಈ ತೆರಿಗೆಯ ಹಣಭಾರ ಬೀಳುವುದು ನಿರ್ಮಾಪಕನ ತಲೆಮೇಲೆ ಎನ್ನೋದು ಎಲ್ಲರಿಗೂ ಗೊತ್ತು.


ಥಿಯೇಟರ್ ಸಲುವಾಗಿ ನಿರ್ಮಾಪಕರ ಹೋರಾಟ ಅವಿರತವಾಗಿ ನಡೆದೇ ಇದೆ. ಈ ಬಾರಿ ಫಾರ್ ಎ ಚೇಂಜ್ ಈ ಜಗಳ ಕನ್ನಡ ನಿರ್ಮಾಪಕರ ನಡುವೆಯೇ ನಡೆಯಿತು. ಉಪೇಂದ್ರರ 'ಎ' ಚಿತ್ರಕ್ಕೆ ನಾಲ್ಕು ಥಿಯೇಟರ್‌ಗಳಿಂದ ಎತ್ತಂಗಡಿಯಾದಾಗ ಅದರ ವಿತರಕರು ನ್ಯಾಯಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಿದರು. ಅಲ್ಲಿ ಗೆದ್ದರೂ ಕೂಡಾ. ಈಗ ಎ ಚಿತ್ರ ಬೆಂಗಳೂರಿನ ನಾಲ್ಕು ಚಿತ್ರಮಂದಿರಗಳಲ್ಲಿ ಶತದಿನೋತ್ಸವ ಆಚರಿಸುವುದು ಖಾತ್ರಿಯಾಗಿದೆ. ಕನ್ನಡದ ದೊಡ್ಡ ಮೀನುಗಳು ಸಣ್ಣಮೀನುಗಳನ್ನು ನುಂಗುವ ಸಂಭ್ರಮದಲ್ಲಿ ಪರಭಾಷಾ ತಿಮಿಂಗಿಲಗಳನ್ನು ಗಮನಿಸುತ್ತಿಲ್ಲ. ಉದಾಹರಣೆಗೆ ಕಾದಲಾ ಕಾದಲಾ ಹಾಗೂ ಭಾವುಗಾರು ಭಾಗುನ್ನಾರಾ ಎಂಬ ತಮಿಳು-ತೆಲುಗು ಚಿತ್ರಗಳು ರಾಜಧಾನಿಯಲ್ಲಿ ತಲಾ 22 ಥಿಯೇಟರ್‌ಗಳನ್ನು ಕಬಳಿಸಿವೆ. ಕನ್ನಡದ ಸ್ಟಾರ್ ಚಿತ್ರಕ್ಕೆ ಈ ಸೌಭಾಗ್ಯವಿಲ್ಲ. ಇವೆರಡು ಚಿತ್ರಗಳಲ್ಲದೆ 'ಟೈಟಾನಿಕ್' ಭದ್ರವಾಗಿ ಕುಳಿತಿದೆ. ಇಂಗ್ಲೀಷ್ ಬಾರದ ಪಡ್ಡೆಗಳೂ ಈ ಚಿತ್ರದತ್ತ ಧಾವಿಸುತ್ತಿದ್ದಾರೆ. ಹಾಗಿದ್ದಲ್ಲಿ ವಾರಕ್ಕೆ ಮೂರು ಕನ್ನಡ ಚಿತ್ರಗಳು ಹೊರಬರುತ್ತಿರುವ ಪುರುಷಾರ್ಥ ವೇನು?

ಬರಲಿಬಿಡಿ, ಯಾವ ಚಿತ್ರವೂ ಎರಡು ವಾರಕ್ಕಿಂತ ಹೆಚ್ಚುದಿನ ನಿಲ್ಲುವುದಿಲ್ಲ. ಹಾಗಾಗಿ ಎಲ್ಲಾ ಚಿತ್ರಗಳಿಗೂ ಥಿಯೇಟರ್ ಸಿಗುತ್ತದೆ ಎನ್ನೋದು ವ್ಯಂಗ್ಯವಾದರೂ ನಿಜ. ಕಳೆದ ಎರಡು ತಿಂಗಳಲ್ಲಿ ತೆರಕಂಡ ಚಿತ್ರಗಳ ಹೆಸರಾದರೂ ಪ್ರೇಕ್ಷಕರಿಗೆ ನೆನಪಿದೆಯೇ. ಸುಮ್ಮನೇ ಒಮ್ಮೆ ಈ ಪಟ್ಟಿಯತ್ತ ಕಣ್ಣುಹಾಯಿಸಿ.

ಹೈಕಮಾಂಡ್, ಜೈಹಿಂದ್, ಒನ್ ಮ್ಯಾನ್, ಆರ್ಮಿ, ಅಮರ್ ಅಕ್ಬರ್ ಆಂಥೋನಿ, ಸಾರಿ, ಲೇಡಿ ಟೈಗರ್, ಸಿಂಧೂ, ನಮ್ಮೂರ ಹುಡ್ಗ, ಕುರುಬನರಾಣಿ, ಯಾವುದೂ ಗೆಲ್ಲಲಿಲ್ಲ. ಸತತವಾಗಿ ನಾಲ್ಕು ಆ್ಯಕ್ಷನ್ ಚಿತ್ರಗಳನ್ನು ಪ್ರೇಕ್ಷಕನ ಮೇಲೆ ಹೇರಿದ ಚಿತ್ರೋದ್ಯಮ ಅದಕ್ಕೆ ತಕ್ಕ ಬೆಲೆಯನ್ನೂ ತೆರಬೇಕಾಯಿತು. ಇಷ್ಟಾದರೂ ಇನ್ನೂ 30 ಚಿತ್ರಗಳು ಡಬ್ಬದಲ್ಲೇ ಕುಳಿತಿವೆ. ಗಿರಾಕಿಗಾಗಿ ಕಾಯುತ್ತಿವೆ. ಆದರೆ ಗಾಂಧಿನಗರದಲ್ಲಿ ಚಿತ್ರಗಳನ್ನು ಖರೀದಿಸುವವರೇ ಇಲ್ಲ. ಬೆಂಗಳೂರು-ಕೋಲಾರ-ತುಮಕೂರು ಪ್ರಾಂತ್ಯಕ್ಕೆ ಚಿತ್ರವೊಂದು 50-60 ಲಕ್ಷವನ್ನು ಪಡೆಯುತ್ತಿದ್ದ ಕಾಲ ಹೊರಟುಹೋಯಿತು. ಈಗ ವಿತರಕರು ಕೈಕಟ್ಟಿ ಕುಳಿತಿದ್ದಾರೆ.

ಚಿತ್ರೀಕರಣ ಚಟುವಟಿಕೆಗಳು ಕಡಿಮೆಯಾಗಿರುವುದಕ್ಕೂ ಇದೇ ಕಾರಣ. ಯಾವ ಫೈನಾನ್ಸಿಯರ್ ಕೂಡಾ ಸಾಲ ನೀಡುತ್ತಿಲ್ಲ. ಸಾಲ ವಾಪಸಾಗುತ್ತದೆ ಎಂಬ ಗ್ಯಾರಂಟಿ ಅವರಿಗಿಲ್ಲ. ಶಿವರಾಜ್‌ಕುಮಾರ್, ರಮೇಶ್ ಹೊರತಾಗಿ ಯಾವ ಸ್ಟಾರ್‌ಗೂ ವ್ಯಾಲ್ಯೂ ಇಲ್ಲ. ಇವರಿಬ್ಬರ ಚಿತ್ರಗಳು ಕೂಡಾ ಇತ್ತೀಚೆಗೆ ಫ್ಲಾಪ್ ಆಗುತ್ತಿವೆ. ಆದರಲ್ಲೂ ಇತ್ತೀಚೆಗೆ ಶಿವರಾಜ್ ನಟಿಸಿದ ಮೂರು ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಢಮಾರ್ ಎಂದಿವೆ. ವಿಶ್ವನಾಥ್‌ರಂಥ ಬುದ್ಧಿವಂತ ನಿರ್ದೇಶಕನ 'ಅಂಡಮಾನ್'ಗೂ ಅದೇ ಗತಿ. ಅಲ್ಲಿಗೆ ನಿರ್ದೇಶಕನ ಮೇಲೂ ಉದ್ಯಮಕ್ಕೆ ಭರವಸೆ ಕಡಿಮೆಯಾದಂತಾಗಿದೆ. ದೇಸಾಯಿ, ಡಿ. ಬಾಬು ಅಥವಾ ವಿಶ್ವನಾಥ್ ಆಗಲಿ ನಿರ್ಮಾಪಕನ ಅಸಲು ವಾಪಸ್ ತರುವ ಬಗ್ಗೆ ಈಗ ಜಾಮೀನು ಕೊಡುವ ಸ್ಥಿತಿಯಲ್ಲಿಲ್ಲ.

'ತುತ್ತಾಮುತ್ತಾ'ದಂಥ ಸೇಫ್ ಚಿತ್ರದ ಸಾಧನೆಯನ್ನೇ ಗಮನಿಸಿ. ಗಾಂಧಿನಗರದ ವಿತರಕರು, ಪತ್ರಕರ್ತರು, ಎಲ್ಲರೂ ಕೊಂಡಾಡಿದ ಚಿತ್ರವಿದು. ಅತ್ತೆ, ಸೊಸೆ, ಜಗಳದಲ್ಲಿ ಮಗ ಹೈರಾಣಾಗುವ




ಜನಪ್ರಿಯ ಫಾರ್ಮುಲಾ ಕಥೆಯಿದು. ಯಾವುದೇ ಕಾಲ, ದೇಶಕ್ಕೂ ಅನ್ವಯವಾಗುವ ಕಥೆ. ಇಷ್ಟಾಗಿಯೂ ಈ ಚಿತ್ರ ಕುಂಟುತ್ತಾ ಸಾಗಿದೆ. ಕನ್ನಡ ಚಿತ್ರಗಳೆಂದರೆ ಪ್ರೇಕ್ಷಕನಿಗೆ ಅಲರ್ಜಿಯಾಗಿದೆ. ಹಾಗಾಗಿ ಯಾರೂ ಚಾನ್ಸೇ ತೆಗೆದುಕೊಳ್ಳುತ್ತಾ ಇಲ್ಲ. ಹತ್ತಾರು ಜನ ಚೆನ್ನಾಗಿದೆ ಎಂದು ಹೇಳಿದ ನಂತರವೇ ಇತರರು ಥಿಯೇಟರ್ ಕಡೆಗೆ ಬರುತ್ತಾರೆ. ಕಾಳಸಂತೆಯಲ್ಲಿ ಟಿಕೇಟ್ ಮಾರುವ ಮಂದಿಯ ಮುಖದಲ್ಲಿ ನಗುಕಾಣದೆ ತಿಂಗಳುಗಳೇ ಕಳೆದಿವೆ.

ಈ ಮಧ್ಯೆ ಕನ್ನಡದ ಜಾಣ ನಿರ್ದೇಶಕ ರಾಜೇಂದ್ರಸಿಂಗ್‌ಬಾಬು ಸದ್ದಿಲ್ಲದೆ ಹೈದಾರಾಬಾದ್‌ಗೆ ಹೋಗಿ ಶೂಟಿಂಗ್ ಮುಗಿಸಿಕೊಂಡು ಬರುತ್ತಾರೆ. ಪರರಾಜ್ಯದಲ್ಲಿ ಚಿತ್ರೀಕರಣ ನಡೆಸಿದ ಕನ್ನಡ ಚಿತ್ರಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ ಇಲ್ಲ ಎನ್ನುತ್ತದೆ ಸರ್ಕಾರದ ನಿಯಮಾವಳಿ. ಇದನ್ನು ಮೀರಿ ಗೆಲ್ಲುವ ತಂತ್ರ ನಡೆಸಿದ್ದಾರೆ ಬಾಬು. ಇವರೇನಾದರೂ ಗೆದ್ದಲ್ಲಿ ನಾಳೆಯೇ ಹೈದಾರಾಬಾದ್‌ಗೆ ಜಗಿಯಲು ಹತ್ತಾರು ನಿರ್ಮಾಪಕರು ಸಿದ್ಧವಾಗಿದ್ದಾರೆ.

ಈ ಎಲ್ಲಾ ಹತಾಶೆಯ ಕ್ಲೈಮಾಕ್ಸ್ ಎಂಬಂತೆ ಕನ್ನಡ ನಿರ್ಮಾಪಕರು ಸದ್ಯದಲ್ಲೇ ಚಿತ್ರೋದ್ಯಮ ಬಂದ್ ಆಚರಿಸುವ ಸಿದ್ಧತೆಯಲ್ಲಿದ್ದಾರೆ. ಕಾರ್ಮಿಕರ ಕಾಟ ಜಾಸ್ತಿಯಾಯಿತು ಎನ್ನೋದು ಇವರ ಆರೋಪ. ಸಿನಿಮಾ ಕಾರ್ಮಿಕರ ಸಂಘಟನೆ ಮೇಲೆ ನಿರ್ಮಾಪಕನಿಗೆ ಹತೋಟಿಯಿರಬೇಕು ಎನ್ನೋದು ಒಟ್ಟಾರೆ ಸಾರಾಂಶ. ಕನ್ನಡ ಚಿತ್ರಗಳು ಸಾಲೋಸಾಲಾಗಿ ಸೋಲುತ್ತಿರುವ ಈ ಸಂದರ್ಭದಲ್ಲಿ ಬಂದ್‌ನಂಥ ತಾತ್ಕಾಲಿಕ ವಿಶ್ರಾಂತಿ ಅನಿವಾರ್ಯ ಕೂಡಾ.

ಅಂದ ಹಾಗೆ ಈ ನಿರಾಶೆಯ ನಡುವೆಯೂ ಪ್ರೇಕ್ಷಕ ಕಾತರದಿಂದ ಕಾಯುತ್ತಿರುವ ಕೆಲವು ಚಿತ್ರಗಳು ಮೇ ತಿಂಗಳಲ್ಲಿ ಹೊರಬಂದಿವೆ. ಈ ಪೈಕಿ ಮೊದಲನೆಯದ್ದು 'ಯಾರೇ ನೀನು ಚೆಲುವೆ', ರವಿಚಂದ್ರನ್ ನಾಯಕತ್ವದ ಈ ಚಿತ್ರ ತಮಿಳಿನ ಕಾದಲ್‌ಕೋಟೈಯ ರೀಮೇಕ್ ಆದರೂ ಜನಪ್ರಿಯ ಹೀರೋಗಳು ಇದರಲ್ಲಿ ಅತಿಥಿ ಕಲಾವಿದರಾಗಿ ಕಾಣಿಸಿಕೊಳ್ಳಲಿದ್ದಾರೆ. ವಿಷ್ಣುವರ್ಧನ್, ಜಗ್ಗೇಶ್, ರಮೇಶ್, ಪ್ರಕಾಶ್ ರೈ, ಇವರಲ್ಲಿ ಪ್ರಮುಖರು. ಇವರ ಮುಖದರ್ಶನದ ಸಲುವಾಗಿ ಯಾದರೂ ಜನ ಚಿತ್ರರಂಗಕ್ಕೆ ಬರಬಹುದು ಎಂಬ ನಿರ್ಮಾಪಕರ ನಿರೀಕ್ಷೆ ಸುಳ್ಳಾಗಿದೆ. ಇದರ ಬೆನ್ನಿಗೇ ಬಂದ ಉಪೇಂದ್ರರ ಸ್ವಸ್ತಿಕ್ ಬಿದ್ದುಹೋಗಿದೆ. ರಾಘವೇಂದ್ರ ರಾಜ್‌ಕುಮಾರ್ ಕೆಲವು ವರ್ಷಗಳ ನಂತರ ನಟಿಸಿದ ಚಿತ್ರವಿದು. ಆದರೆ ಪ್ರೇಕ್ಷಕರಿಗೆ



ಉಪೇಂದ್ರರ ಆಕರ್ಷಣೆಯಿತ್ತು. ರಾಘವೇಂದ್ರರಿಗೆ ಹೊಸ ಇಮೇಜ್ ಸಿಗಬಹುದೆಂಬ ನಿರೀಕ್ಷೆ ಮೂಡಿಸಿರುವ ಸ್ವಸ್ತಿಕ್ ರಾಜ್ ಸಂಸ್ಥೆ ನಿರ್ಮಿಸಿದ ಅತ್ಯಂತ ಅದ್ದೂರಿ ಚಿತ್ರವಾದರೂ ಮನಗೆಲ್ಲುವಲ್ಲಿ ಸೋತಿತು.

ಕನ್ನಡ ಚಿತ್ರಗಳ ಹಣೆಬರಹವನ್ನು ನಿರ್ಧರಿಸುವವರು ಮಹಿಳಾ ಪ್ರೇಕ್ಷಕರು. ಈಗಾಗಲೇ ಈ ವರ್ಗದ ಅರ್ಧದಷ್ಟು ಜನ ಕಿರುತೆರೆಗೆ ಪಕ್ಷಾಂತರ ಮಾಡಿದ್ದಾರೆ. ಇದೀಗ ಅವರನ್ನು ಕಿರುತೆರೆಗೇ ಖಾಯಂ ಆಗಿ ಬಂಧಿಸುವುದಕ್ಕೆ ಎರಡು ಸೀರಿಯಲ್‌ಗಳು ಬರ್ತಾ ಇವೆ. ಈ ಸೀರಿಯಲ್ 'ಶಕ್ತಿ', ಸಿನಿಮಾ ನಟರೇ ನಟಿಸಿರುವ. ಈ ಸೀರಿಯಲ್ ಈಗಾಗಲೇ ತಮಿಳಿನ ಸನ್ ಟೀವಿಯಲ್ಲಿ ನೂರಾರು ಕಂತುಗಳಲ್ಲಿ ಬಂದು ಜನಪ್ರಿಯವಾಗಿದೆ. ಇದೇ ಥರ ಹೆಣ್ಣಿನ ಹಿರಿಮೆಯನ್ನು ಸಾರುವ ಇನ್ನೊಂದು ಧಾರಾವಾಹಿ 'ಜನನಿ' ಕಲ್ಕತ್ತ ದೂರದರ್ಶನದಲ್ಲಿ 260 ಕಂತುಗಳಲ್ಲಿ ಪ್ರಸಾರವಾಗಿರುವ ಈ ಬಂಗಾಲಿ ಧಾರಾವಾಹಿಯನ್ನು ಕನ್ನಡಕ್ಕೆ ಭಟ್ಟಿಯಿಳಿಸಿದ್ದಾರೆ ಹಿರಿಯ ನಿರ್ದೇಶಕ ಆರ್.ಎನ್. ಜಯಗೋಪಾಲ್. ಕಿರುತೆರೆಯೊಳಗೂ ರೀಮೇಕ್ ಸಂಸ್ಕೃತಿ ಬಂದಿರುವುದು ನಮ್ಮ ನಿರ್ದೇಶಕರ ಬುರುಡೆ ಖಾಲಿಯಾಗಿರುವುದಕ್ಕೆ ಸಂಕೇತವಾಗಿದ್ದರೂ, ಇದರಿಂದ ಕನ್ನಡ ಸಿನಿಮಾಗಳಿಗಂತೂ, ದೊಡ್ಡ ಪೆಟ್ಟು ಬೀಳೋದು ಗ್ಯಾರಂಟಿ.

ಚಿತ್ರರಂಗಕ್ಕೆ ಭವಿಷ್ಯವಿದೆಯೇ ಎಂಬ ಪ್ರಶ್ನೆ ಹಳೆಯದಾಗುವುದಿಲ್ಲ. ಚಿತ್ರ ಸೋತಾಗ ಹ್ಯಾಪ ಮೋರೆ ಹಾಕಿಕೊಂಡು ಕೂರುವ ಮಂದಿಯೇ ಗೆದ್ದರೆ ವಿಜಯೋತ್ಸವ ಆಚರಿಸುತ್ತಾರೆ. ಈ ನಡುವೆ ನಿರ್ಲಿಪ್ತರಂತೆ ಇರುವವರೆಂದರೆ ಇಂದಿನ ಪ್ರೇಕ್ಷಕರು, ಅವರಿಗಿರುವಷ್ಟು ಆಯ್ಕೆ ಇನ್ನಾರಿಗೂ ಇಲ್ಲ. ದುರಂತವೆಂದರೆ, ದಿನದಿಂದ ದಿನಕ್ಕೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿರುವುದು.

ಇವೆಲ್ಲದರ ನಡುವೆ ಒಕ್ಕೂಟಕ್ಕೆ ಅಶೋಕ್ ರಾಜೀನಾಮೆ ಕೊಟ್ಟಿದ್ದಾರೆ. ಇದು ಇನ್ನೊಂದು ವಿವಾದಕ್ಕೆ ಗ್ರಾಸವಾಗದಿದ್ದರೂ, ರುಚಿರುಚಿಯಾದ ಸುದ್ದಿಗೆ ಕೊರತೆಯಿಲ್ಲ. ಶ್ರುತಿ ಮಹೇಂದರ್ ಮದುವೆಯಾಗುತ್ತಿದ್ದಾರೆ ಎಂಬ ಸುದ್ದಿಯಿಂದ ಹಿಡಿದು, ಪ್ರಭಾಕರ್ ಹೆಂಡತಿಯಿಲ್ಲದೇ ಹಾಸಿಗೆ ಹಿಡಿದಿದ್ದಾರೆ, ನಿವೇದಿತಾ ಜಾರಿ ಬಿದ್ದದ್ದು ಸಹಜವೇನಲ್ಲ ಅನ್ನುವ ತನಕ ಗಾಸಿಪ್ಪುಗಳು.

ಅಂದ ಹಾಗೆ ಹೀಗೆ ಸುದ್ದಿಗೆ ಗುದ್ದಿ ಮೈ ನೋಯಿಸಿಕೊಳ್ಳುತ್ತೀರೋ ಅಥವಾ ಅರ್ಥಪೂರ್ಣವಾದದ್ದನ್ನು ಮಾಡಿ ಗೆಲ್ಲುತೀರೋ?

ನಿರ್ಧರಿಸಬೇಕಾದವರು ನೀವೇ!

■ ಕೇಶವ ನಾಡಕರ್ಣಿ

ಪ್ರಿಯಾ

ಪ್ರಿಯಾ
ನೀ ನನಗಾಗಿ
ತಾಜಮಹಲ್
ಕಟ್ಟುವುದು ಬೇಡ
ಏಕೆಂದರೆ
ನಮ್ಮಿಬ್ಬರ ಪ್ರೀತಿ
ಚರಿತ್ರೆಯಲ್ಲಿ
ನರಳುವುದು
ನನಗಿಷ್ಟವಿಲ್ಲ

-ಎನ್. ಎಫ್. ಬಡ್ನಿ



ರಾಶಿ ಫಲ
ಎ.N.ಪೋಲೀಶಿ
ನಮ್ಮೆಜಮಾನ್ರು ನಿತ್ಯಭವಿಷ್ಯ ನೋಡಿ-ಯೇ ಆಫೀಸಿಗೆ ಹೋಗೋದು - ಈ ದಿನ ಪತ್ರಿಕೆ ಬಂದಿಲ್ಲ ನೋಡಿ - ಅದಕ್ಕೆ ಮನೆಯಲ್ಲಿದ್ದಾರೆ
ರೀ ಸ್ವಾಮಿ.. ನನ್ನ ಭವಿಷ್ಯದಲ್ಲಿ ಕಾಕ ದೃಷ್ಟಿ ಅಂತಿದ್ರಲ್ಲ - - ಆ ಕಾಕ ದೃಷ್ಟಿ ನಿಮ್ಮ ಮೇಲೆಯೇ ಬಿದ್ದಿದೆ ನೋಡಿ..
ನನಗೆ ಧನಹಾನಿ ಆಗುತ್ತೆ ಅಂತ ಭವಿಷ್ಯ ನುಡಿದದ್ದು ಸುಳ್ಳು ಸ್ವಾಮಿ ಈಗ ಧನ ಲಾಭವಾಗತಾ ಇದೆ ನೋಡಿ - -
ಅವರು ತಮ್ಮ ಭವಿಷ್ಯದಲ್ಲಿ ಮಾನಹಾನಿ ಇದೆ ಅಂತ ಇಂದಿನ ಭಾಷಣ ಕಾರ್ಯಕ್ರಮ ರದ್ದುಪಡಿಸಿದ್ದಾರೆ.. ಅವರಿಗೆ ಮಾನ ಇದ್ದರೆ ತಾನೆ

BISILA BADUKU Kannada Monthly JULY 1998 RNI No. 67406 / 97 Regd. BGW / 394